ಚರಿತ್ರೆ ಲೇಖನಶಾಸ್ತ್ರ : ಕೋಲಾರ ಪ್ರದೇಶದ ಅಧ್ಯಯನ

(ಕನ್ನಡ ವಿಶ್ವವಿದ್ಯಾನಿಲಯಕ್ಕೆ ಸಾದರ ಪಡಿಸಿದ ಎಂ.ಫಿಲ್ ನಿಬಂಧ)

ಸಂಶೋಧಕ

ಜಿ.ಎಂ. ವೆಂಕಟೇಶ

ಮಾರ್ಗದರ್ಶಕರು

ಡಾ. ಟಿ. ವಿಜಯ್ ಪೂಣಚ್ಚ

ಪ್ರಾಧ್ಯಾಪಕರು, ಚರಿತ್ರೆ ವಿಭಾಗ

ಚರಿತ್ರೆ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ - ೫೮೩ ೨೭೬

೨೦೦೪ - ೦೫.

99 A

ಚರಿತ್ರೆ ಲೇಖನಶಾಸ್ತ್ರ: ಕೋಲಾರ ಪ್ರದೇಶದ ಅಧ್ಯಯನ

[ಕನ್ನಡ ವಿಶ್ವವಿದ್ಯಾನಿಲಯಕ್ಕೆ ಸಾದರ ಪಡಿಸಿದ ಎಂ.ಫಿಲ್ ನಿಬಂಧ]

ಜಿ.ಎಂ. ವೆಂಕಟೇಶ

ಮಾರ್ಗದರ್ಶಕರು
ಡಾ. ಟಿ. ವಿಜಯ್ ಪೂಣಚ್ಚ
ಪ್ರಾಧ್ಯಾಪಕರು, ಚರಿತ್ರೆ ವಿಭಾಗ

ಚರಿತ್ರೆ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಏಪ್ರಿಲ್ ೨೦೦೫

ಮಾರ್ಗದರ್ಶಕರ ಪ್ರಮಾಣ ಪತ್ರ

ಚರಿತ್ರೆ ಲೇಖನಶಾಸ್ತ್ರ : ಕೋಲಾರ ಪ್ರದೇಶದ ಒಂದು ಅಧ್ಯಯನ ಎಂಬ ನಿಬಂಧವನ್ನು ಕನ್ನಡ ವಿಶ್ವವಿದ್ಯಾಲಯ ಎಂ.ಫಿಲ್ ಪದವಿಗಾಗಿ ಜಿ.ಎಂ. ವೆಂಕಟೇಶ ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ನಿಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ
ದಿನಾಂಕ : 21.04.05

ಡಾ. ಟಿ. ವಿಜಯ್ ಪೂಣಚ್ಚ
ಮಾರ್ಗದರ್ಶಕರು
ಚರಿತ್ರೆ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸಂಶೋಧಕನ ಪ್ರಮಾಣ ಪತ್ರ

ಚರಿತ್ರ ಲೇಖನಶಾಸ್ತ್ರ : ಕೋಲಾರ ಪ್ರದೇಶದ ಒಂದು ಅಧ್ಯಯನ ಎಂಬ ನಿಬಂಧವನ್ನು ಡಾ. ಟಿ. ವಿಜಯ್ ಪೂಣಚ್ಚ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಎಂ.ಫಿಲ್ ಪದವಿಗಾಗಿ ಸಮಾಜ ವಿಜ್ಞಾನಗಳ ನಿಕಾಯದ ಚರಿತ್ರೆ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ನಿಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲ ಎಂದು ಪ್ರಮಾಣೀಕರಿಸುತ್ತೇನೆ.

G.M. Venkatesha

ಸ್ಥಳ : ವಿದ್ಯಾರಣ್ಯ
ದಿನಾಂಕ : 29-04-05

ಜಿ.ಎಂ. ವೆಂಕಟೇಶ
ಸಂಶೋಧಕ, ಚರಿತ್ರೆ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಕೃತಜ್ಞತೆಗಳು

ಚರಿತ್ರೆ ಲೇಖನಶಾಸ್ತ್ರ : ಕೋಲಾರ ಪ್ರದೇಶದ ಅಧ್ಯಯನ ಎಂಬ ನಿಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್ ಪದವಿಗಾಗಿ ಒಪ್ಪಿಸಲು ಅವಕಾಶ ಕಲ್ಪಿಸಿಕೊಟ್ಟ ಮಾನ್ಯ ಕುಲಪತಿಗಳಾದ ಡಾ. ಬಿ.ಎ. ವಿವೇಕ ರೈ ಮಾನ್ಯ ಕುಲಸಚಿವರಾದ ಡಾ. ಕರೀಗೌಡ ಬೀಚನಹಳ್ಳಿ ಹಾಗೂ ಅಧ್ಯಯನಾಂಗದ ನಿರ್ದೇಶಕರಾದ ಡಾ. ಟಿ.ಆರ್. ಚಂದ್ರಶೇಖರ ಅವರಿಗೆ,

ನಿಬಂಧದ ವಿಷಯವನ್ನು ಸೂಚಿಸಿ ತಾಳ್ಮೆ ಮತ್ತು ಅಕ್ಕರೆಯಿಂದ ಸೂಕ್ತಸಲಹೆಗಳೊಂದಿಗೆ ಮಾರ್ಗದರ್ಶನ ನೀಡಿದ ಡಾ. ಟಿ.ವಿಜಯ ಪೂಣಚ್ಚ ಅವರಿಗೆ, ಅಧ್ಯಯನ ಅವಧಿಯಲ್ಲಿ ಚರಿತ್ರೆಯ ವಿವಿಧ ಆಯಾಮಗಳನ್ನು ಬೋಧಿಸಿದ ಚರಿತ್ರೆ ವಿಭಾಗದ ಮುಖ್ಯಸ್ಥರಾದ ಡಾ. ಸಿ ಆರ್ ಗೋವಿಂದರಾಜು, ಪ್ರೊ. ಲಕ್ಷ್ಮಣ್ ತೆಲಗಾವಿ, ಡಾ ವಿರೂಪಾಕ್ಷಿ ಪೂಜಾರಹಳ್ಳಿ, ಡಾ. ಎಸ್. ಚಿನ್ನಸ್ವಾಮಿ ಸೋಸಲೆ, ಡಾ. ಮೋಹನ ಕೃಷ್ಣರೈ ಅವರಿಗೆ,

ಈ ಅಧ್ಯಯನಕ್ಕೆ ಪ್ರೋತ್ಸಾಹ ಮತ್ತು ಸಲಹೆಗಳನ್ನು ನೀಡಿದ ಪ್ರೊ ಎಸ್. ಚಂದ್ರಶೇಖರ, ಡಾ. ಎಂ.ವಿ. ಉಷಾದೇವಿ, ಡಾ. ಎ. ಅಶ್ವಥ ನಾರಾಯಣ, ಡಾ. ಎಂ. ಜಮುನಾ, ಡಾ. ಎಸ್. ಷೇಕ್ ಮುಸ್ತಾನ, ಡಾ. ಷಡಾಕ್ಷರಯ್ಯ, ಡಾ. ಎಂ. ಮುನಿರಾಜಪ್ಪ, ಡಾ. ಕೆ.ಎಸ್. ವಿಜಯಲಕ್ಷ್ಮಿ ಮತ್ತು ಹಿರಿಯ ಉಪನ್ಯಾಸಕ ವೆಂಕಟರಾಮಯ್ಯಶೆಟ್ಟಿ ಅವರುಗಳಿಗೆ,

ಅಧ್ಯಯನದ ಆರಂಭದಿಂದ ಅಂತ್ಯದವರೆಗೆ ಜೊತೆಯಲ್ಲಿದ್ದ ಸಲಹೆಸೂಚನೆಗಳನ್ನು ನೀಡಿದ ಸ್ನೇಹಿತರಾದ ಹನುಮಂತ್ರಾಯ, ಹೋಳಿಬಸಪ್ಪ, ರಾಮಕೃಷ್ಣ, ದೇವರಾಜು, ಶಿವಾನಂದ, ಸತೀಶ್ ಅವರುಗಳಿಗೆ,

ಕ್ಷೇತ್ರಕಾರ್ಯದಲ್ಲಿ ಸಹಾಯ ಸಲಹೆಗಳು ನೀಡಿದ ಎಸ್. ಜಗನ್ನಾಥ ಪ್ರಕಾಶ್, ಕೆ. ಪ್ರಹ್ಲಾದರಾವ್, ಮುನಿರಾಜು, ಉತ್ತನೂರು ರಾಜನು ಕಟ್ಟಿ, ನಾರಾಯಣಸ್ವಾಮಿ, ನರಸಿಂಹನ್, ಎಂ.ಎಸ್. ರಾಘು, ಜಿ.ವಿ. ಕವಿತಾ, ಶಿವಾನಂದ, ನಾಗೇಶ, ಮುನಿರಾಜು, ವೆಂಕಟಾಚಲಯ್ಯ, ಆನಂದ, ಮುನಿಯಪ್ಪ, ಶಿವಪ್ಪ ಅವರಿಗೆ, ಗ್ರಂಥಾಲಯದಿಂದ ಅನೇಕ ಸೌಲಭ್ಯ ಒದಗಿಸಿ ಹೆಚ್ಚು ವಿಶ್ವವಿದ್ಯಾಲಯದ ಗ್ರಂಥಾಲಯ ಡಾ. ರಾಧಾಕೃಷ್ಣ, ಡಾ. ನಾಗವೇಣಿ, ಶ್ರೀ ಶಿವ ಹಾಗೂ ಚರಿತ್ರೆ ವಿಭಾಗದ ಬೋಧಕೇತರ ಸಿಬ್ಬಂಧಿಗಳಾದ ಗಂಗಾಧರ, ಗಾದಿಲಿಂಗಪ್ಪ, ಸೋಮಶೇಖರ್ ಎಸ್. ಕಣವಿ ಅವರಿಗೆ,

ಸದಾ ಮಗನ ಏಳ್ಗೆಯನ್ನು ಬಯಸುವ ತಂದೆತಾಯಿಗಳಾದ ಮುನಿವೆಂಕಟಪ್ಪ ಮತ್ತು ಪಿಳ್ಳ ವೆಂಕಟಮ್ಮ ಹಾಗೂ ಸಹೋದರರಾದ ಜಿ.ಎಂ. ರಮೇಶ್, ಜಿ.ಎಂ. ವೆಂಕಟರಾಜು, ಪ್ರೀತಿಯ ತಂಗಿ ಶೈಲ, ಅವರಿಗೆ, ನಮ್ಮ ತಂದೆಯ ಸ್ನೇಹಿತರಾದ ಮತ್ತು ನನ್ನ ವ್ಯಾಸಾಂಗಕ್ಕೆ ಸಹಾಯರಾದ ವೆಂಕಟರೆಡ್ಡಿ, ಜಿ.ಎಸ್. ಅಶ್ವಥಪ್ಪ ಅವರಿಗೆ,

ಅಕ್ಕರೆಯಿಂದ ಅಕ್ಷರ ಸಂಯೋಜನೆ ಮಾಡಿಕೊಟ್ಟ ನಾಗವೇಣಿ ಮತ್ತು ಶರಣಬಸವ ವೈ.ಎಂ. ಅವರಿಗೆ ಕೃತಜ್ಞತೆಗಳು

ಜಿ.ಎಂ. ವೆಂಕಟೇಶ

ಪರಿವಿಡಿ

ಅಧ್ಯಾಯ ಒಂದು

ಪ್ರಸ್ತಾವನೆ

ಅ. ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ

ಆ. ಚರಿತ್ರೆ ಲೇಖನಶಾಸ್ತ್ರದ ವಿವಿಧ ಆಯಾಮಗಳ ವಿಶ್ಲೇಷಣೆ

ರಾಷ್ಟ್ರೀಯ ನೆಲೆಗಟ್ಟಿನಲ್ಲೇ ಚರಿತ್ರೆಯನ್ನು ನೋಡಬೇಕೆನ್ನುವ ಬರವಣಿಗೆಯ ಮಾದರಿಗಳಲ್ಲಿ ಬಹಳಷ್ಟು ಬದಲಾವಣೆಗಳಿವೆ. ಮಾರ್ಕ್ಸ್‌ವಾದಿ ದೃಷ್ಟಿಕೋನದಿಂದ ನೋಡುವಂತಹ ಮಾದರಿಯು ರಾಷ್ಟ್ರೀಯವಾದಿ ನೆಲೆಗಟ್ಟಿನಿಂದ ಚರಿತ್ರೆಯನ್ನು ನೋಡುವ ಕ್ರಮವನ್ನು ಪ್ರಶ್ನಿಸಿದರೂ, ಬಹುತೇಕವಾಗಿ ರಾಷ್ಟ್ರೀಯವಾದಿ ಚರಿತ್ರೆ ಬರವಣಿಗೆ ಹಾಕಿಕೊಟ್ಟ ಚೌಕಟ್ಟಿನೊಳಗೆ ಚರ್ಚೆಗಳಾದವು. ಮಾರ್ಕ್ಸ್‌ವಾದಿ ಚರಿತ್ರೆಯ "ಯೂನಿವರ್ಸಲ್" ಮಾದರಿಗಳನ್ನು ನವ ಮಾರ್ಕ್ಸ್‌ವಾದಿಗಳು ಪ್ರಶ್ನಿಸುವುದರೊಂದಿಗೆ ಹುಟ್ಟಿದಂತಹದು ನವ ಇತಿಹಾಸ ಬರವಣಿಗೆ ಮಾದರಿಗಳು. ಇವುಗಳಲ್ಲಿ ಬಹಳ ಮುಖ್ಯವಾದದ್ದು ಸಬಾಲ್ಟ್ರನ್ ಚರಿತ್ರೆ ಬರವಣಿಗೆ ಕ್ರಮಗಳು. ಭಾರತ ಉಪಖಂಡದಲ್ಲಿ ಕಳೆದ ಎರಡೂವರೆ ದಶಕಗಳಿಂದ ಸಬಾಲ್ಟ್ರನ್ ಅಧ್ಯಯನ ಮಾದರಿಗಳು ಮತ್ತು ಚಿಂತನೆಗಳು ಪ್ರಚಲಿತವಿರುವುದನ್ನು ನಾವು ಕಾಣಲಾಗುತ್ತದೆ. ಕರ್ನಾಟಕದ ಮಟ್ಟಿಗೆ ಅಲ್ಲಲ್ಲಿ ಆ ಬಗೆಯ ಬರವಣಿಗೆಗಳು ಇತ್ತೀಚೆಗೆ ಕಂಡುಬಂದಿವೆ. ಸ್ಥಳೀಯ ಮತ್ತು ಮೌಖಿಕ ಚರಿತ್ರೆಗಳು ಈ ದೃಷ್ಟಿಯಿಂದಲೇ ಸಂಶೋಧಕರಿಗೆ ಮುಖ್ಯವಾಗಿದೆ.

ಪ್ರಸ್ತುತ ಅಧ್ಯಯನವು ಕೋಲಾರ ಪ್ರದೇಶದ ಚರಿತ್ರೆ ಬರವಣಿಗೆಯ ಮಾದರಿಗಳನ್ನು ಅಭ್ಯಸಿಸುವ ಉದ್ದೇಶವನ್ನು ಹೊಂದಿದೆ. ಈ ಬಗೆಯ ಉದ್ದೇಶದಿಂದ ಸ್ಥಳೀಯವಾಗಿ ಚರಿತ್ರೆಯನ್ನು ನೋಡಿದ ಕ್ರಮಗಳನ್ನು ಅಭ್ಯಾಸ ಮಾಡುವಂತಾಗಿದೆ. ಇಲ್ಲಿ ಪಿರಿಯಾಡೈಸೇಶನ್‌ಗಳಿಂದ ರಾಜಮನೆತನಗಳು ಆಳಿದ ಕ್ರಮಗಳ ಬಗ್ಗೆ ಸ್ಪಷ್ಟವಾದ ವಿವರಗಳಿರುವುದು. ಭಾರತದ ಅಥವಾ ಕರ್ನಾಟಕದ ಬೃಹತ್ ಚರಿತ್ರೆಗಳೊಳಗೆ ಇವು ಕಳೆದುಹೋಗದ ಅಪಾಯಗಳನ್ನು ಇಲ್ಲಿ ಮೀರಲು ಪ್ರಯತ್ನಿಸಲಾಗಿದೆ. ಶಿಲಾಯುಗದ ಚರಿತ್ರೆ, ಸೂಕ್ಷ್ಮಶಿಲಾಯುಗ, ಕಬ್ಬಿಣಯುಗದಂತಹ ಪ್ರಾಕ್ತಾನ ಶಾಸ್ತ್ರಕ್ಕೆ ಸಂಬಂಧಿಸಿದ ವಿವರಗಳಿಂದ ಹಿಡಿದು ವಸಾಹತುಕಾಲ ಚರಿತ್ರೆ, ಏಕೀರಣೋತ್ತರ ಕರ್ನಾಟಕ ಚರಿತ್ರೆಯವರೆಗೆ ಕೋಲಾರ ಪ್ರದೇಶಕ್ಕೆ ಸಂಬಂಧಿಸಿದ ಮಾಹಿತಿಗಳನ್ನು ಒಂದೆಡೆ ತರಲು ಪ್ರಯತ್ನಿಸಲಾಗಿದೆ.

ಇಂತಹ ಪ್ರಯತ್ನಗಳಲ್ಲಿ ಕಂಡುಬರುವ ಬರವಣಿಗೆಗಳು ಸೂಕ್ಷ್ಮಗಳನ್ನು ದಾಖಲು ಮಾಡುವ ಉದ್ದೇಶ ಪ್ರಸ್ತುತ ಅಧ್ಯಯನದ್ದಾಗಿದೆ. ಬಹುತೇಕವಾದ ಇಂತಹ ಬರವಣಿಗೆಗಳನ್ನು ತಾಂತ್ರಿಕವಾಗಿ ಪರಿಣಿತಿ ಹೊಂದದ ವಿದ್ವಾಂಸರೇ ಬರೆದಿರುವುದನ್ನು ನಾವು ನೋಡುವಂತಹುದಾಗಿದೆ. ಇವರ ಬರವಣಿಗೆಯಲ್ಲಿ ತಾಂತ್ರಿಕ ಪರಿಣಿತಿಯಿಲ್ಲದಿದ್ದರೂ, ವಿವರಗಳನ್ನು ಒಂದೆಡೆ ಕಲೆ ಹಾಕಿ, ಚರಿತ್ರೆಯನ್ನು ಕಟ್ಟಿಕೊಡುವ ಪರಿಣಿತಿಯನ್ನು ಗಮನಿಸಲಾಗಿದೆ. ಆದರೆ, ಕೋಲಾರ ಪ್ರದೇಶಕ್ಕೆ ಸಂಬಂಧಿಸಿದ ಅನೇಕ ವಿವರಗಳನ್ನು ತಾಂತ್ರಿಕವಾಗಿ ಪರಿಣಿತಿ ಹೊಂದಿದ ಚರಿತ್ರೆಕಾರರು ಕಲೆಹಾಕಿ, ವಿಮರ್ಶಿಸಿರುವುದನ್ನು ನೋಡುವಂತಹುದಾಗಿದೆ. ಕೋಲಾರದ ಚರಿತ್ರೆ ಬರವಣಿಗೆಯಲ್ಲಿ ವಿವಿಧ ಮಜಲುಗಳನ್ನು ಅರ್ಥ ಮಾಡಿಕೊಳ್ಳಲು ಇದರಿಂದ ಸಹಾಯವಾಗುವುದು.

ವಸಾಹತುಕಾಲ ಹಾಗೂ ಕರ್ನಾಟಕ ಏಕೀಕರಣೋತ್ತರ ಕಾಲಘಟ್ಟದ ಭಾಗಗಳನ್ನು ಅಧ್ಯಯನ ಮಾಡಿದಾಗ ಬಹುತೇಕವಾಗಿ ಬಹಳ ನೇರವಾಗಿ ತಾವು ನಂಬಿದ ನಂಬಿಕೆಗಳನ್ನು ಪ್ರತಿನಿಧಿಸುವ ಸಂಘಟನೆಗಳ ನಾಯಕರು. ಉದಾಹರಣೆಗೆ ದಲಿತ ಅಥವಾ ಕಮ್ಯುನಿಸ್ಟ್ ನಾಯಕರು ತಮ್ಮ ಐಡಿಯಾಲಾಜಿಕಲ್ ನಿಲುವುಗಳನ್ನು ಕೋಲಾರ ಚರಿತ್ರೆ ಬರವಣಿಗೆಯಲ್ಲಿ ತೊಡಗಿಸಿದ್ದನ್ನು ಕಾಣಲಾಗುತ್ತದೆ. "ಸ್ಥಳೀಯ ಚರಿತ್ರೆ" ಎಂದು ಸ್ಥಳೀಯವಾಗಿಯೇ ಇರುವ ಮಿತಿಯನ್ನು ಹೊಂದುವ ಅಂಶಗಳನ್ನು ಇಲ್ಲಿ ಮೀರಲು ಪ್ರಯತ್ನಿಸಲಾಗಿದೆ. ಸ್ಥಳೀಯವಾದುದ್ದನ್ನು ಓದುತ್ತಿದ್ದೇವೆ, ಬರೆಯುತ್ತೇವೆ ಅಥವಾ ದಾಖಲು ಮಾಡುತ್ತಿದ್ದೇವೆ ಎನ್ನುವ ನಿಲುವುಗಳು ಸಾಧ್ಯವಾಗುವುದಿಲ್ಲ. ಏಕೆಂದರೆ ಚರಿತ್ರೆ ಬರವಣಿಗೆಯು ಒಂದಲ್ಲ ಒಂದು ಬಗೆಯಲ್ಲಿ ಉಳಿದ ಪ್ರದೇಶಗಳ ಚರಿತ್ರೆ ಬರವಣಿಗೆಯ ಮಾದರಿಗಳಿಂದ ಒಂದೋ ಪ್ರಭಾವಕ್ಕೆ ಒಳಪಟ್ಟಿರುತ್ತದೆ ಅಥವಾ ಅದೇ ಮಾದರಿಗಳನ್ನು ಕೋಲಾರದಂತ ಪ್ರದೇಶಗಳ ಅಧ್ಯಯನದಲ್ಲಿ ಬಳಸಲ್ಪಟ್ಟಿರುವುದನ್ನು ನಾವು ಕಾಣುವಂತಾಗಿದೆ.

ಕೋಲಾರ ಪ್ರದೇಶದ ಚರಿತ್ರೆ ಲೇಖನ ಶಾಸ್ತ್ರವನ್ನು ಅವಲೋಕಿಸುವಾಗ ಅನೇಕ ವಿದ್ವಾಂಸರು ಕೋಲಾರ ಪ್ರದೇಶದಲ್ಲಿರುವ ಚಾರಿತ್ರಿಕ ಅಂಶಗಳನ್ನು ಹಲವು ಬಗೆಯಲ್ಲಿ ಗುರುತಿಸಿದ್ದಾರೆ. ಪ್ರಸ್ತುತ ಅಧ್ಯಯನವು ಅಂತಹ ಚಾರಿತ್ರಿಕ ದಾಖಲೆಗಳು ಕೃತಿಗಳನ್ನು ಅವಲೋಕಿಸುವುದರ ಮೂಲಕ ಕೋಲಾರ ಪ್ರದೇಶ ಚರಿತ್ರೆಯ ಬೆಳವಣಿಗೆಯನ್ನು ಸೈದ್ಧಾಂತಿಕವಾಗಿ ವಿವರಿಸುವ ಕಿರು ಪ್ರಯತ್ನವನ್ನು ಮಾಡಲಾಗಿದೆ.

ಪ್ರಸ್ತುತ ಅಧ್ಯಯನವು ಕೋಲಾರ ಪ್ರದೇಶದ ವಸಾಹತುಪೂರ್ವ ಚರಿತ್ರೆ, ವಸಾಹತು ಹಾಗೂ ವಸಾಹತೋತ್ತರ ಚರಿತ್ರೆ ಎಂಬ ವಿನ್ಯಾಸಗಳಲ್ಲಿ ಮುಂದುವರಿಯುವುದು. ವಿಷಯವನ್ನು ಸರಳಗೊಳಿಸುವ ಸಲುವಾಗಿ ಅಧ್ಯಾಯ ಎರಡನ್ನು ಪ್ರಾಚೀನ ಚರಿತ್ರೆ ಮತ್ತು ಮಧ್ಯಕಾಲೀನ ಚರಿತ್ರೆ ಎಂಬುದಾಗಿ ವಿಭಾಗಿಸಲಾಗಿದೆ. ಅಧ್ಯಾಯ ಮೂರರಲ್ಲಿ ಪ್ರಮುಖವಾಗಿ ವಸಾಹತು ಆಡಳಿತ ಮತ್ತು ಕೋಲಾರ ಪ್ರದೇಶದಲ್ಲಿ ನಡೆದ ಸ್ವಾತಂತ್ರ್ಯ ಹೋರಾಟದ ಘಟನೆಗಳನ್ನು ವಿಭಾಗಿಸಿ ಅಧ್ಯಯನ ಮಾಡಲಾಗಿದೆ. ಕೆಳವರ್ಗದವರ ಚರಿತ್ರೆ ಹಾಗೂ ದಮನಿತರ ಹೋರಾಟಗಳ ವಿವರಗಳನ್ನು ಇಲ್ಲಿ ಅಭ್ಯಸಿಸಲು ಪ್ರಯತ್ನಿಸಲಾಗಿದೆ. ಸ್ವಾತಂತ್ರ್ಯೋತ್ತರ ಕಾಲಘಟ್ಟದಲ್ಲಿ ಪ್ರಮುಖವಾಗಿ ಏಕೀಕರಣವನ್ನು ಕರ್ನಾಟಕ ಹೊಂದಿಕೊಂಡ ವಿವರಗಳಿಗೆ ಸಂಬಂಧಿಸಿದ ಬರವಣಿಗೆಗಳನ್ನು ಅಧ್ಯಾಯ ನಾಲ್ಕರಲ್ಲಿ ಗುರುತಿಸಲು ಪ್ರಯತ್ನಿಸಲಾಗಿದೆ. ಈ ಅಧ್ಯಾಯದ ದ್ವಿತೀಯ ಭಾಗದಲ್ಲಿ ವಸಾಹತೋತ್ತರ ಕಾಲದ ಚರಿತ್ರೆಗೆ ಸಂಬಂಧಿಸಿದ ವಿವರಗಳನ್ನು ಇಲ್ಲಿ ಅಭ್ಯಸಿಸಲು ಪ್ರಯತ್ನಿಸಲಾಗಿದೆ.

ಭಾರತದಲ್ಲಿ ಇತ್ತೀಚೆಗೆ ಬಹುಮಟ್ಟಿಗೆ ಚರ್ಚಿಸಲಾಗುತ್ತಿರುವ ವಿಚಾರವೆಂದರೆ ಇತಿಹಾಸ ಬರವಣಿಗೆಯ ವಿವಿಧ ಮಾದರಿಗಳು. ಕರ್ನಾಟಕದಲ್ಲಿ ಈ ಬಗೆಯ ಚರ್ಚೆಗಳು ಇತ್ತೀಚೆಗೆ ಪ್ರಚಲಿತದಲ್ಲಿವೆ. ಮನದಟ್ಟು ಆಗುವ ಹಾಗೆ ಕರ್ನಾಟಕದಲ್ಲಿ ಉಳಿದ ಕಡೆಗಳಲ್ಲಿ ಕಂಡುಬರುವಂತೆ ರಾಷ್ಟ್ರೀಯವಾದಿ, ಮಾರ್ಕ್ಸ್‌ವಾದಿ ಅಥವಾ ಸಬಾಲ್ಟರ್ನ್ ಮಾದರಿಯ ಅಧ್ಯಯನಗಳು ಬಹಳ ಕಡಿಮೆ. ಆದರೆ, ಈ ಸೈದ್ಧಾಂತಿಕತೆಯ ವಿವಿಧ ಧಾರೆಗಳಿಂದ ಪ್ರಭಾವಗೊಂಡು ಚರಿತ್ರೆಯನ್ನು ಬರೆಯಲು ಪ್ರಯತ್ನಿಸಿರುವುದನ್ನು ನಾವು ನೋಡುವಂತಾಗಿದೆ.[7] ಪ್ರಸ್ತುತ ಅಧ್ಯಯನಕ್ಕೆ ಈ ಉದ್ದೇಶಕ್ಕಾಗಿ ಕೋಲಾರ ಪ್ರದೇಶವನ್ನು ಆಯ್ಕೆ ಮಾಡಲಾಗಿದೆ.

ಕೋಲಾರ ಪ್ರದೇಶದ ಚರಿತ್ರೆ ಬೆಳವಣಿಗೆಗೆ ಸಂಬಂಧಿಸಿದ ಚಾರಿತ್ರಿಕ ಕೃತಿಗಳನ್ನು ಮೂರು ವರ್ಗಗಳಾಗಿ ಮಾಡಿದೆ. ವಸಾಹತು ಕಾಲದಲ್ಲಿ ಬ್ರಿಟೀಷರು ಮತ್ತು ಯುರೋಪಿಯನ್ನರು ರಚಿಸಿದ ವಿವಿದ ಕೃತಿಗಳು. ಮೊದಲನೆ ವರ್ಗಕ್ಕೆ ಸೇರಿಸಲಾಗಿದೆ. ಅದೇ ಕಾಲದಲ್ಲಿ ರಾಷ್ಟ್ರೀಯವಾದಿ ಚರಿತ್ರಕಾರರು ಬರೆದ ಕೃತಿಗಳನ್ನು ಎರಡನೇ ವರ್ಗಕ್ಕೆ ಸೇರಿಸಲಾಗಿದೆ. ನಂತರ ಕಾಲದಲ್ಲಿ ಹೊರಬಂದ ಕೃತಿಗಳನ್ನು ೩ನೇ ವರ್ಗಕ್ಕೆ ಸೇರಿಸಿದ್ದು ಅವು ಭಾರತೀಯ ವಿದ್ವಾಂಸರು ದಾಖಲೆಗಳ ಆಧಾರಗಳಿಂದ ರಚಿಸಿರುವುದು ಗುರುತಿಸಲಾಗಿದೆ. ಅಲ್ಲದೆ ಅವುಗಳಲ್ಲಿ ಮೌಖಿಕ ದಾಖಲೆಗಳನ್ನು ಬಳಸಿಕೊಂಡು ಕೋಲಾರ ಪ್ರದೇಶಕ್ಕೆ ಸಂಬಂಧಿಸಿದ ಚರಿತ್ರೆಯನ್ನು ಪುನರಚಿಸಲು ಬೇಕಾದ ಮಾನದಂಡನೆಗಳನ್ನು ಅಳವಡಿಸಿರುವುದನ್ನು ವ್ಯಕ್ತಪಡಿಸಲಾಗಿದೆ ಮತ್ತು ೧೯೭೦ರ ದಶಕದ ನಂತರದಲ್ಲಿ ಚರಿತ್ರೆಯಲ್ಲಿ ಕಂಡುಬರುವ ವಿವಿದ ಆಯಾಮಗಳಲ್ಲಿ ನಡೆದ ತೀವ್ರತರ ಬೆಳವಣಿಗೆಯನ್ನು ಸೈದ್ಧಾಂತಿಕವಾಗಿ ಗುರುತಿಸಲು ಯತ್ನಿಸಲಾಗಿದೆ. ಅಂತಿಮವಾಗಿ ಕೋಲಾರ ಪ್ರದೇಶದ ಚರಿತ್ರೆಯಲ್ಲಿ ಪ್ರಾಚೀನ ಕಾಲದಿಂದ ಹಿಡಿದು ಪ್ರಸ್ತುತ ಸಂದರ್ಭದವರೆಗೆ ಚರಿತ್ರೆ ಬೆಳವಣಿಗೆಯಲ್ಲಿ ಸೈದ್ಧಾಂತಿಕ ದೃಷ್ಟಿಯನ್ನು ಹೊಂದಿರುವುದು, ಚರಿತ್ರೆಯ ರಚನೆಯ ಬೆಳವಣಿಗೆಯಲ್ಲಿನ ವಿವಿಧ ಆಯಾಮಗಳು ವಿನ್ಯಾಸಗಳನ್ನು ಗುರುತಿಸುವುದರ ಮೂಲಕ ವಿವರಿಸಲು ಯತ್ನಿಸಲಾಗಿದೆ.

೧.೧. ಅಧ್ಯಯನದ ಉದ್ದೇಶ

ಆಧುನಿಕ ಯುಗದಲ್ಲಿ ಚರಿತ್ರೆ ಬೃಹತ್ ರಾಜ್ಯಗಳನ್ನು ಕುರಿತಾಗಿ ಅಧ್ಯಯನ ಮಾಡುವುದರ ಜೊತೆಗೆ ಸ್ಥಳೀಯ ಪ್ರದೇಶಗಳ ಚರಿತ್ರೆಯನ್ನು ಗುರುತಿಸುವ ಕಾರ್ಯ ನಡೆಯುತ್ತಿದೆ. ಇದನ್ನು ಸಾಮಾನ್ಯವಾಗಿ ಸ್ಥಳೀಯ ಚರಿತ್ರೆಯ ಅಧ್ಯಯನ ಎಂದು ಕರೆಯಲಾಗುತ್ತದೆ. ಇಂತಹ ಚರಿತ್ರೆ ಜನಪ್ರಿಯತೆ ಪಡೆಯುತ್ತಿರುವುದಲ್ಲದೆ, ಅನೇಕ ಬಗೆಯ ಸಿದ್ಧಾಂತಗಳು ಮತ್ತು ವಾದಗಳ ಮೂಲಕವೂ ಅಧ್ಯಯನ ಮಾಡುವ ಮಾದರಿಗಳಲ್ಲಿ ಸ್ಥಳೀಯ ಚರಿತ್ರೆಯು ಒಂದಾಗಿದೆ.[೨] ಹಾಗೂ ಪ್ರತಿಯೊಂದು ವಿಷಯಕ್ಕೂ, ಪ್ರದೇಶಕ್ಕೂ ತನ್ನದೇ ಆದಂತಹ ಚರಿತ್ರೆ ಇದ್ದೇ ಇರುತ್ತದೆ. ಅದನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ ಉತ್ತಮ ಫಲಿತಾಂಶ ವ್ಯಕ್ತವಾಗುವುದಲ್ಲದೆ ಬೃಹತ್ ರಾಜ್ಯಗಳ ಸಾಂಸ್ಕೃತಿಕ, ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಚಟುವಟಿಕೆಗಳೊಂದಿಗೆ ಸಂಯೋಜನೆಗೊಂಡಿರುವುದು ಕಂಡುಬರುತ್ತದೆ.[೩] ಈ ಒಂದು ಹಿನ್ನೆಲೆಯಲ್ಲೂ ಪ್ರಸ್ತುತ ಅಧ್ಯಯನವು ಕೈಗೊಂಡಿದೆ.

ಕೋಲಾರ ಪ್ರದೇಶ ಹೊರನಾಡಿನ ಸಂಪರ್ಕ ಹೊಂದಿದ್ದು ಚರಿತ್ರೆ ಪ್ರಾರಂಭ ಹಂತದಲ್ಲಿ ಪ್ರಖ್ಯಾತ ರಾಜವಂಶವಾದ ಗಂಗರಾಜರ ರಾಜಧಾನಿಯಾಗಿದ್ದು ನಂತರ ಹಲವಾರು ಸ್ವತಂತ್ರ ರಾಜರ ಆಡಳಿತವನ್ನು ಹೊಂದಿದ್ದರು. ಆದರೆ ಚರಿತ್ರೆ ರಚನೆಯಲ್ಲಿ ಇದು ನಿರ್ಲಕ್ಷಿತ ಮಾಡಿದೆ. ಮಧ್ಯಕಾಲದ ವಿಜಯನಗರ ಆಡಳಿತ ಸಂಬಂಧಿಸಿದಂತೆ ಅಧ್ಯಯನ ಮಾಡಿದ್ದರೂ ಸಂಪೂರ್ಣವಾಗಿ ವಿವರಿಸಲು ವಿಫಲವಾಗಿದೆ. ಗೆಜೆಟಿಯರ್‌ಗಳಲ್ಲಿ ಈ ಕುರಿತಾಗಿ ಕೇವಲ ದಾಖಲಾತಿ ರೂಪದಲ್ಲಿ ತಿಳಿಸುವ ಮಟ್ಟಿಗೆ ವಿವರಿಸಲಿದೆ. ಸ್ವಾತಂತ್ರ್ಯ ಹೋರಾಟ ಹಾಗೂ ಹೋರಾಟದ ನಂತರ ಕೋಲಾರ ಚರಿತ್ರೆಯನ್ನು ಸಂಪೂರ್ಣವಾಗಿ ತಿಳಿಸುವ

ಕೃತಿಗಳೇ ಬೆಳಕಿಗೆ ಬಂದಿಲ್ಲ. ಇಂತಹ ನಿರ್ಲಕ್ಷ್ಯತಗೊಂಡ ಕೋಲಾರ ಪ್ರದೇಶದ ಚರಿತ್ರೆ ಸೈದ್ಧಾಂತಿಕ ದೃಷ್ಟಿಯನ್ನು ತಿಳಿಸುವುದು ಅಗತ್ಯವಾಗಿದೆ.

ಕರ್ನಾಟಕದ ಏಕೀಕರಣ ನಂತರ ದಲಿತರು ಕೆಳವರ್ಗದವರು, ಮಹಿಳೆಯರು ಹಾಗೂ ರೈತರು ಕಾರ್ಮಿಕರು ಶೋಷಣೆಗೆ ಒಳಗಾಗಿ, ಅವರ ಬದುಕು ಹೋರಾಟಗಳು ಸಾಕಷ್ಟು ನಡೆದರೂ, ಚರಿತ್ರೆಯಲ್ಲಿ ಅವುಗಳು ದಾಖಲೆಗಳು ನಿರ್ಲಕ್ಷ್ಯಕ್ಕೆ ಒಳಗಾಗಿದೆ. ಅದರಲ್ಲಿಯೂ ಹಿಂದುಳಿದ ಪ್ರದೇಶವಾದ ಕೋಲಾರದಲ್ಲಿ ಜಾತಿ ಪದ್ಧತಿ, ವರ್ಣ ವ್ಯವಸ್ಥೆಗಳಗಳಿಂದ ಹಲವು ಸಮುದಾಯಗಳು ಹೊಂದಿದೆ. ಇದರಿಂದ ಚರಿತ್ರೆ ಸೈದ್ಧಾಂತಿಕ ನಿಲುವನ್ನಾದರೂ ಕಂಡುಕೊಳ್ಳುವುದು ಒಳಿತಾಗಿದೆ.

ದೇಶಕ್ಕೆಲ್ಲಾ ಹೊನ್ನನ್ನು ಒದಗಿಸುವ ಭೂಮಿಯಲ್ಲಿ ಶ್ರಮಿಕರು, ಅಧಿಕ ರೈತರನ್ನು ಹೊಂದಿರುವ ಈ ಪ್ರದೇಶದಲ್ಲಿ ಅವರ ಶೋಷಣೆ ಮತ್ತು ಸಮಸ್ಯೆಗಳ ವಿರುದ್ಧ ಹೋರಾಟದ ಬದುಕನ್ನು ವಿವರಿಸಲು ಸಹ ಚರಿತ್ರೆಯ ಅಧ್ಯಯನದಲ್ಲಿ ನಿರ್ಲಕ್ಷಿತವಾಗಿದೆ. ಸಾಮ್ರಾಜ್ಯಶಾಹಿ, ಭೂಮಾಲಿಕತ್ವ, ಜೀತಗಾರಿಕೆಗಳಿದ್ದು ಅವುಗಳ ವಿವರಣೆ ಕೊಡಲು ಪ್ರಯತ್ನಿಸಲಾಗಿದೆ. ಏಕೀಕರಣೋತ್ತರ ಕಾಲದಲ್ಲಿ ಅಂತಹದೆ ಸ್ಥಿತಿಗಳ ವಿರುದ್ಧ ಹಲವಾರು ಸಂಘಟನೆ ಬೆಳಕಿಗೆ ಬಂದು, ಹೋರಾಟಗಳನ್ನು ಮಾಡಿದರು. ಚರಿತ್ರೆಯಿಂದ ನಿರ್ಲಕ್ಷಿತವಾಗಿದೆ. ಇದರಿಂದಾಗಿ ಪ್ರಸ್ತುತ ಅಧ್ಯಯನವು ಸೈದ್ಧಾಂತಿಕವಾದರೂ ವ್ಯಕ್ತಪಡಿಸುವುದು ಮುಖ್ಯವೆನಿಸಿದೆ. ಹೀಗೆ ಹಲವಾರು ಉದ್ದೇಶಗಳ ಹಿನ್ನೆಲೆಯಲ್ಲಿ ಈ ಒಂದು ಅಧ್ಯಯನವನ್ನು ಮಾಡಲು ಕಿರುಪ್ರಯತ್ನ ಮಾಡಲಾಗಿದೆ.

೧.೨. ವ್ಯಾಪ್ತಿ

ಪ್ರತಿಯೊಂದು ಅಧ್ಯಯನಕ್ಕೆ ಅದರದೇ ಆದ ವ್ಯಾಪ್ತಿ, ಎಲ್ಲೆ, ಮೇರೆಗಳಿರುತ್ತವೆ. ಇದರಿಂದ ವಿಷಯವನ್ನು ವಿವರಿಸಲು ಮತ್ತು ವಿವರಿಸುವಲ್ಲಿ ಅರ್ಥೈಸಲು ಸರಳವಾಗುತ್ತದೆ. ಹೀಗಾಗಿ ಪ್ರಸ್ತುತ ಅಧ್ಯಯನವು ಅದರದೇಯಾದ ಅಧ್ಯಯನದ ವ್ಯಾಪ್ತಿಯನ್ನು ಹೊಂದಿರುವುದು, ಈ ಕೆಳಕಂಡಂತೆ ಸಂಕ್ಷಿಪ್ತವಾಗಿ ವಿವರಿಸಲಾಗಿದೆ.

ಕೋಲಾರ ಪ್ರದೇಶ ಕರ್ನಾಟಕ ರಾಜ್ಯದ ೨೭ ಜಿಲ್ಲೆಗಳಲ್ಲಿ ಒಂದಾಗಿದೆ. ಕೋಲಾರ, ಚಿಕ್ಕಬಳ್ಳಾಪುರ, ಶಿಡ್ಲಘಟ್ಟ, ಚಿಂತಾಮಣಿ, ಗೌರಿಬಿದನೂರು, ಬಾಗೇಪಲ್ಲಿ, ಶ್ರೀನಿವಾಸಪುರ, ಮಾಲೂರು, ಬಂಗಾರಪೇಟೆ, ಮುಳಬಾಗಿಲು, ಗುಡಿಬಂಡೆ, ತಾಲ್ಲೂಕುಗಳನ್ನು ಈ ಜಿಲ್ಲೆಯು ಒಳಗೊಂಡಿದೆ.[೪] ಇದರ ವಿಸ್ತೀರ್ಣ ೧೯೮೨೨೩೬.೫ ಚ.ಕಿ.ಮೀ ಅಥವಾ ೩೧೭೫.೧೮ ಚದರ ಮೈಲಿಗಳಷ್ಟು ಇದೆ. ಕರ್ನಾಟಕದ ರಾಜ್ಯಗಳಲ್ಲಿ ೧/೨೩ ಭಾಗದಷ್ಟು ಇದ್ದು, ಕರ್ನಾಟಕ ರಾಜ್ಯದ ಜಿಲ್ಲಾವಾರು ವಿಸ್ತೀರ್ಣದಲ್ಲಿ ೧೩ನೇ ಸ್ಥಾನ ಪಡೆದಿದೆ. ೧೯೯೧ರ ಜನಗಣನೆಯ ಪ್ರಕಾರ ೫೩ ಹೋಬಳಿಗಳನ್ನು ಹೊಂದಿದ್ದು ೨೨೧೬.೮೯ ರಷ್ಟು ಜನಸಾಂದ್ರತೆಯನ್ನು ಹೊಂದಿದೆ. ಈ ಜಿಲ್ಲೆ ೧೨.೪೬ ಮತ್ತು ೧೩.೫೮ ಡಿಗ್ರಿಗಳ ಉತ್ತರ ಅಕ್ಷಾಂಶದ

ಮಧ್ಯದಲ್ಲಿಯೂ ೭೭.೨೧ ಮತ್ತು ೭೮.೨೫ ಡಿಗ್ರಿಗಳ ಪೂರ್ವ ರೇಖಾಂಶಗಳ ಮಧ್ಯದಲ್ಲಿಯೂ ಇರುತ್ತದೆ. ಉತ್ತರ ದಕ್ಷಿಣವಾಗಿ ೮೫ ಮೈಲುಗಳು (೧೩೭ ಕಿಲೋ ಮೀಟರ್‌ಗಳು) ಇದ್ದು, ಪೂರ್ವಪಶ್ಚಿಮವಾಗಿ ಸ್ವಲ್ಪ ಹೆಚ್ಚು ಕಡಿಮೆ ಅಷ್ಟೇ ವ್ಯಾಪ್ತಿಯನ್ನು ಹೊಂದಿದೆ. ಈ ಜಿಲ್ಲೆಯಲ್ಲಿ ಪಶ್ಚಿಮದಲ್ಲಿ ಬೆಂಗಳೂರು ಹಾಗೂ ತುಮಕೂರು ಜಿಲ್ಲೆಗಳು, ಉತ್ತರ ಮತ್ತು ಪೂರ್ವದಲ್ಲಿ ಆಂಧ್ರಪ್ರದೇಶವು (ಚಿತ್ತೂರು ಹಾಗೂ ಅನಂತಪುರ ಜಿಲ್ಲೆಗಳು) ದಕ್ಷಿಣದಲ್ಲಿ ತಮಿಳುನಾಡು (ಉತ್ತರ ಆರ್ಕಾಟ್ ಹಾಗೂ ಧರ್ಮಪುರಿ ಜಿಲ್ಲೆಗಳು) ರಾಜ್ಯಗಳು ಇವೆ.

ಇಂತಹ ಕೋಲಾರ ಪ್ರದೇಶ ಮತ್ತು ಅದರ ಚಾರಿತ್ರಿಕ ಅನ್ವಯ ದಾಖಲೆಗಳನ್ನು ಅಧ್ಯಯನ ಮಾಡುವುದರ ಮೂಲಕ, ಅದರ ತಾಲ್ಲೂಕು ಪ್ರದೇಶಗಳನ್ನು ಅಧ್ಯಯನದ ವ್ಯಾಪ್ತಿಗೆ ಎಳೆದು, ಪ್ರಾಚೀನ ಕಾಲದಿಂದ ಆಧುನಿಕಯುಗದವರೆಗೆ ಅಂದರೆ ಕರ್ನಾಟಕದ ಏಕೀಕರಣೋತ್ತರದವರೆಗೆ ಹಂತ ಹಂತವಾಗಿ ವಿವರಿಸುವುದಾಗಿದೆ. ಪ್ರತಿಯೊಂದು ಹಂತದಲ್ಲಿಯು ವಿವಿಧ ಕೃತಿಗಳು, ಲೇಖನಿಗಳನ್ನು ಅವಲೋಕಿಸುವುದರ ಮೂಲಕ ಸೈದ್ಧಾಂತಿಕವಾಗಿ ವಿವರಿಸಲು ಕಿರುಪ್ರಯತ್ನ ಮಾಡಲಾಗಿದೆ.

೧.೩. ಅಧ್ಯಯನದ ವಿಧಾನ/ಸ್ವರೂಪ

ಕೋಲಾರ ಪ್ರದೇಶದ ಚರಿತ್ರೆಯನ್ನು ಅಧ್ಯಯನ ಮಾಡುವಾಗ ಪ್ರಾಚೀನ ಶಿಲಾಯುಗದಿಂದ ಹಿಡಿದು ಕ್ರಿ.ಶ. ೨೦೦೪ರವರೆಗೆ ವಿವಿದ ಹಂತಗಳಲ್ಲಿ ಅದರ ಚರಿತ್ರೆ ಸೈದ್ಧಾಂತಿಕ ಬೆಳವಣಿಗೆ ಹೊಂದಿರುವುದು ವ್ಯಕ್ತಪಡಿಸುವುದಾಗಿದೆ. ಅದಕ್ಕೆ ಸಂಬಂಧಿಸಿದಂತೆ ಹಲವಾರು ವಿದ್ವಾಂಸರು ಆಯಾಯ ಕಾಲಕ್ಕೆ ಸಂಬಂಧಿಸಿದಂತೆ ಬರೆದಿರುವ ಕೃತಿಗಳನ್ನು ಅವಲೋಕನ ಮಾಡುವುದರ ಮೂಲಕ ಸೈದ್ಧಾಂತಿಕವಾಗಿ ಚರಿತ್ರ ಲೇಖನಶಾಸ್ತ್ರವನ್ನು ವಿವರಿಸಲಾಗಿದೆ.

ಕೋಲಾರ ಚರಿತ್ರೆಯ ಪ್ರಾಥಮಿಕ ಹಂತ ಶಿಲಾಯುಗವಾಗಿದೆ. ಈ ಕುರಿತಾಗಿ ಹಲವಾರು ಸಂಶೋಧಕರು ಶ್ರಮಿಸಿ ವಿವರಿಸಿದ್ದಾರೆ; ಕ್ರಿ.ಶ. ೧೮೭೩ರಲ್ಲಿ 'ಆರ್.ಎ. ಕೋಲ್' ಎಂಬ ಆಂಗ್ಲ ಸಂಶೋಧಕಾರನು ಕೋಲಾರ, ಶ್ರೀನಿವಾಸಪುರ, ಬಂಗಾರಪೇಟೆ, ಗುಡಿಬಂಡೆ, ಚಿಂತಾಮಣಿ ಮುಂತಾದ ತಾಲ್ಲೂಕು ಪ್ರದೇಶಗಳಲ್ಲಿ ಸಂಶೋಧನೆ ಮಾಡಿ 'ಇಂಡಿಯನ್ ಆಂಟಿಕ್ವೇರಿ' ಎಂಬ ನಿಯತಕಾಲಿಕೆಯಲ್ಲಿ ಪ್ರಕಟಿಸಿದರು.[೫] ೧೯೧೪ರಲ್ಲಿ ಮತ್ತೊಬ್ಬ ಆಂಗ್ಲ ಸಂಶೋಧನಕಾರನಾದ 'ಕೊಕ್' ಎಂಬುವರು ಗುರುಡನಹಳ್ಳಿಂದ ಕೆಲವು ಕಲ್ಗೋರಿಗಳನ್ನು ಶೋಧನೆ ಮಾಡಿದರು. ೧೯೪೩ ಮತ್ತು ೧೯೫೫ರಲ್ಲಿ ಪುರಾತತ್ವ ಪ್ರಾಚ್ಯವಸ್ತು ಇಲಾಖೆಯ ನಿರ್ದೇಶಕರಾಗಿದ್ದ ಮೈಸೂರು ವಿಶ್ವವಿದ್ಯಾಲಯದ 'ಎಂ. ಶೇಷಾದ್ರಿ'ಯವರು ಕೊಂಗಾರಾಜನಹಳ್ಳಿ, ಬೆಟ್ಟದಪುರ ಹತ್ತಿರ, ಸಿತಗುಡ್ಡದಲ್ಲಿ ನೂರಾರು ಕಲ್ಗೋರಿಗಳನ್ನು ಶೋಧಿಸಿದರು. ೧೯೬೦ರಲ್ಲಿ ಕೇಂದ್ರಸರ್ಕಾರದ ಪುರಾತತ್ವ ಸರ್ವೇಶಿಕ್ಷಣ ಇಲಾಖೆಯು ಈ ಜಿಲ್ಲೆಯ ಪ್ರತಿಯೊಂದು ಹಳ್ಳಿಯಲ್ಲಿ ಪುರಾತತ್ವ ಅನ್ವೇಷಣೆಯನ್ನು ನಡೆಸಿ ೧೨೦ ನೆಲೆಗಳನ್ನು ಶೋಧಿಸಿದ್ದಾರೆ. ೧೯೮೩-೮೪ರಿಂದ ೧೯೮೬-೮೭ರವರೆಗೆ ಕೋಲಾರ ಪ್ರದೇಶದ ಬೃಹತ್ ನೂತನ ಶಿಲಾಯುಗದ ನೆಲೆಗಳನ್ನು 'ಬಿ. ನರಸಿಂಹಯ್ಯ'ನವರು ಶೋಧಿಸಿದ್ದಾರೆ.

ಹಳೆಯ ಶಿಲಾಯುಗದ ಚರಿತ್ರೆಯ ಬಗ್ಗೆ ಹೆಚ್ಚಿನ ಮಾಹಿತಿಗಳು ದೊರೆತಿಲ್ಲ. ಆದರೂ ಆರ್.ಆರ್. ದಿವಾಕರ, 'ಕೆ.ಬಿ.ಶಿವತಾರಕ' ಮುಂತಾದವರು ಕೋಲಾರ ಪ್ರದೇಶದ ಪಾಲಾರ ಮತ್ತು ಪನ್ನಾರ್ ನದಿಪಾತ್ರಗಳಲ್ಲಿ ಈ ಯುಗದ ಕುರುಹುಗಳು ಇರಲು ಸಾಧ್ಯವೆಂದಿದ್ದಾರೆ.[೬] ಇದೇ ರೀತಿ ಮಧ್ಯ ಶಿಲಾಯುಗದ ಬಗ್ಗೆ ಹೆಚ್ಚಿನ ಮಾಹಿತಿಗಳು ಇಲ್ಲ. ಆದರೆ ನೂತನ ಶಿಲಾಯುಗಕ್ಕೆ ಸಂಬಂಧಿಸಿದಂತೆ ಹೆಚ್ಚು ಮಾಹಿತಿಗಳು ದೊರೆತಿದ್ದು, ಅಧ್ಯಯನಕ್ಕೆ ಒಳಪಟ್ಟಿವೆ.'ರಾಬರ್ಟ್ ಬ್ರೂಫುಟ್'ಈ ಕುರಿತಾಗಿ ಶ್ರೀನಿವಾಸಪುರ ಬೀರಮಂಗಲ ಮುಂತಾದ ಕಡೆ ಶೋಧಿಸಿ ತಿಳಿಸಿದ್ದಾರೆ. 'ಬಿ. ನರಸಿಂಹಯ್ಯ'ನವರು 'ಬಾನಹಳ್ಳಿ' ಎಂಬಲ್ಲಿ ನೂತನ ಶಿಲಾಯುಗದ ಕುರುಹುಗಳನ್ನು ಪತ್ತೆ ಮಾಡಿದ್ದಾರೆ. ಅದರಂತೆ ಅಭಿಕೋತ್ತನೂರು, ಕಡೆಗಟ್ಟೂರು, ಕೆಂದಟ್ಟಿ, ಗುಟ್ಟಹಳ್ಳಿ, ಗೊನಕನಹಳ್ಳಿ, ನೊಲಕುಂಟೆ, ನಾಗಸಂದ್ರ, ಬನಹಳ್ಳಿ, ಬೂದಿಕೋಟೆ, ಶ್ರೀನಿವಾಸಪುರ ಮುಂತಾದ ಕಡೆಗಳಲ್ಲಿ ದೊರೆತ ನೂತನ ಶಿಲಾಯುಗದ ಅವಶೇಷಗಳನ್ನು . ಕೆ.ಬಿ. ಶಿವತಾರಕರವರು ಪಟ್ಟಿ ಮಾಡಿದ್ದಾರೆ. ನಂತರದ ಸೂಕ್ಷ್ಮ ಶಿಲಾಯುಗ ಅಥವಾ ಲೋಹ ಯುಗದಲ್ಲಿ ಆದಿಮಾನವ ಸಂಸ್ಕೃತಿ ನಾಗರಿಕತೆಯತ್ತ ಸಾಗಿರುವುದು ಅವರು ಬಳಸುವ ಬಟ್ಟಲು, ಪಾತ್ರೆಗಳು, ಕುಂಭಗಳು ಮುಂತಾದವುಗಳಿಂದ ನಿರ್ಧರಿಸಲಾಗಿದೆ ಎಂದು ಆರ್.ಆರ್. ದಿವಾಕರರವರು ಹೇಳಿದ್ದಾರೆ.[೭] ನಂತರದ ಬೃಹತ್ ಶಿಲಾಯುಗದ ಅವಶೇಷತಗಳನ್ನು ಅ. ಸುಂದರು, ಬಿ. ನರಸಿಂಹಯ್ಯ, ಎಂ. ಶೇಷಾದ್ರಿಯವರು ಶೋಧಿಸಿದ್ದಾರೆ. ಇದರಿಂದ ಉಡಪನಹಳ್ಳಿ, ಕುರುಗಲ್ಲು, ಕೀಲುಕೋಟೆ, ಕೆಂದಟ್ಟಿ, ಕೂತ್ತಕಪಾಳು, ಕೊಂಡರಾಜಹಳ್ಳಿ, ಕೊಂಗರಾಜಹಳ್ಳಿ, ಕೋಲಾರ ಗುಟ್ಟಹಳ್ಳಿ ಮುಂತಾದ ಕಡೆ ಬೃಹತ್ ಕಟ್ಟಡ ಶಿಲಾಯುಗದ ಅವಶೇಷಗಳು ಬೆಳಕಿಗೆ ಬಂದಿವೆ. ಈ ಯುಗದಲ್ಲಿ ಲೋಹದ ಬಳಕೆ ಹೆಚ್ಚಾಗಿದ್ದು, ಅದರ ಜ್ಞಾನದಿಂದ ನೂತನ ಸಂಸ್ಕೃತಿಯನ್ನು ರೂಢಿಸಿದ್ದಾರೆ. ಈ ಯುಗವು ಸುಮಾರು ಕ್ರಿ.ಪೂ. ೧೨೦೦ವರೆಗೆ ಇದ್ದಿತು ಎಂದು ಆ ಸುಂದರ ಅವರು ಹೇಳಿದ್ದಾರೆ.[೮]

ಕೋಲಾರ ಪ್ರದೇಶದ ಶಿಲಾಯುಗದ ಚರಿತ್ರೆಯ ಹಿನ್ನೆಲೆಯಲ್ಲಿ ಐತಿಹ್ಯಗಳು ಪ್ರಾಮುಖ್ಯತೆ ಪಡೆದಿದೆ. ಚರಿತ್ರೆ ಪ್ರಾರಂಭವಾಗುವ ಮುನ್ನ ಹೆಚ್ಚಾಗಿ ಸ್ಥಳ ಪುರಾಣಗಳು ಕಂಡುಬರುತ್ತವೆ. ಕೈವಾರ, ಕೋಲಾರ ಕುರುಡುಮಲೈ, ವಿದುರಾಶ್ವಥ ಮುಂತಾದ ಸ್ಥಳಗಳು ಐತಿಹ್ಯ ಚರಿತ್ರೆಯನ್ನು ಹೇಳುತ್ತವೆ. ಕೋಲಾರ ವಂತು, ಅದರ ಹೆಸರನ್ನು ವಿವೇಚಿಸುವಾಗ ಪ್ರಾರಂಭದಲ್ಲಿ ಅದನ್ನು ಕೋಲಾಹಲ, ಕೋಲಾಹಲ ಎಂದು ಕರೆಯುತ್ತಿದ್ದರು. ಪರಶುರಾಮನ ಚರಿತ್ರೆ, ರೇಣುಕಾ ಚರಿತ್ರೆ ಅಲ್ಲಿ ಕೇಂದ್ರೀಕೃತವಾಗುವುದು ಅಲ್ಲದೆ, ಚೋಳರ ಆಡಳಿತದಿಂದ ಅದೇ ರೀತಿ ಹೆಸರಿಸಿಕೊಂಡಿದೆ. ಈ ಕುರಿತಾಗಿ ಜ್ಯೋತಿಬಾಯಿ. ಪಿ.ವಿ. ಕೃಷ್ಣಮೂರ್ತಿರ ಲೇಖನಿಗಳಿಂದ ವ್ಯಕ್ತವಾಗುತ್ತದೆ.[೯]

ಕೋಲಾರ ಪ್ರದೇಶದಲ್ಲಿ ಬಾಣ ಅರಸರ ಆಡಳಿತದಿಂದ ರಾಜಕೀಯ ಚರಿತ್ರೆ ಪ್ರಾರಂಭವಾಗಿದೆ. ಬಿ.ಎಲ್.ರೈಸ್, ಎಂ. ಶೇಷಾದ್ರಿಯವರು ಇವರ ಶಾಸನಗಳನ್ನು ಪತ್ತೆಮಾಡಿ ಅಧ್ಯಯನ ಮಾಡಿದ್ದಾರೆ. ೧೨೦೦೦ ಗ್ರಾಮಗಳನ್ನು ಒಳಗೊಂಡ ಇವರ ರಾಜ್ಯಕ್ಕೆ ಆಂದ್ರಮಂಡಲವೆಂದು ಕರೆಯಲಾಗಿದೆ. ಪೂರ್ವ ಭಾಗದಿಂದ ಕೋಲಾರ ಪ್ರದೇಶದವರೆಗೆ ರಾಜ್ಯ ವಿಸ್ತಾರ ಮಾಡಿದ ಇವರು ಸಂಸ್ಕೃತಿ ಕಾರ್ಯಗಳು

ಮಾಡಿರುವುದು ಕಂಡುಬರುತ್ತವೆ.[೧೦] ಕ್ರಿ.ಶ. ೪ನೇ ಶತಮಾನದ ಹೊತ್ತಿಗೆ ಗಂಗರ ಅರಸರು ಪ್ರಬಲತೆಗೊಂಡು ಕೋಲಾರವನ್ನು ತಮ್ಮ ಪ್ರಾಥಮಿಕ ರಾಜಧಾನಿಯಾಗಿ ಮಾಡಿಕೊಂಡಿದ್ದಾರೆ.[೧೧] ಇದರಿಂದ ಕೋಲಾರ ಪ್ರದೇಶದ ಚರಿತ್ರೆಯಲ್ಲಿ ಹೊಸ ಆಯಾಮವನ್ನುಂಟು ಮಾಡಿತು. ಇವರ ಸಮಕಾಲೀನಲ್ಲಿಯ ರಾಷ್ಟ್ರಕೂಟರ ಪ್ರಬಲರಾಗಿದ್ದು, ೮ನೇ ಶತಮಾನದ ಹೊತ್ತಿಗೆ ಗಂಗರನ್ನು ಸೋಲಿಸುವುದರ ಮೂಲಕ ಕೋಲಾರ ಪ್ರದೇಶವಲ್ಲಿ ಆಡಳಿತ ನಡೆಸಿದ್ದಾರೆ.[೧೨] ಚಾಲುಕ್ಯರು ಪೂರ್ವ ಭಾಗದಿಂದ ಇದೇ ವೇಳೆಗೆ ಅಧಿಕಾರ ವಿಸ್ತರಣೆ ಮಾಡಿ, ರಾಷ್ಟ್ರಕೂಟರೊಂದಿಗೆ ಕಾದಾಡುವುದರ ಮೂಲಕ ಕೋಲಾರ ಪ್ರದೇಶದಲ್ಲಿ ತಮ್ಮ ಸ್ಥಾನವನ್ನು ಉಳಿಸಿಕೊಂಡಿದ್ದಾರೆ.[೧೩] ಮುಂದೆ ಇವರ ಸಾಮಂತರನ್ನು ಪಲ್ಲವರು ಸೋಲಿಸುವುದರ ಮೂಲಕ ಕೆಲವು ಕಾಲ ಕೋಲಾರದಲ್ಲಿ ಆಡಳಿತ ಆಡಿದ್ದಾರೆ.[೧೪] ಇದೇ ಹಾದಿಯಲ್ಲಿ ವೈಡುಂಬರು ನೊಳಂಬರ ತಮ್ಮ ಪ್ರಭುತ್ವ ಹಕ್ಕನ್ನು ಸಾದಿಸಿದ್ದಾರೆ. ಕ್ರಿ.ಶ. ೧೧ನೇ ಶತಮಾನದ ಹೊತ್ತಿಗೆ ತಮಿಳುನಾಡಿನ ಚೋಳರು ಪ್ರಬಲರಾಗಿ ಎಲ್ಲಾ ಸಣ್ಣಪುಟ್ಟ ರಾಜರನ್ನು ಸೋಲಿಸುವುದರ ಮೂಲಕ ಕೋಲಾರವನ್ನು ಪಡೆದರು. ಅಲ್ಲದೆ, ಹಲವಾರು ಆಡಳಿತ ಘಟಕಗಳಾಗಿ ಮಾಡಿದರು. ಇದರಿಂದ ಕೋಲಾರ ಚರಿತ್ರೆಯ ಹೊಸ ತಿರುವು ಕಾಣುವಂತಾಯಿತು.[೧೫] ಇದರೊಂದಿಗೆ ಕೋಲಾರ ಪ್ರದೇಶದ ಪ್ರಾಚೀನ ಚರಿತ್ರೆ ಮುಕ್ತಾಯಗೊಂಡಿದೆ.

ಕ್ರಿ.ಶ. ೧೨ನೇ ಶತಮಾನದಲ್ಲಿ ಹೊಯ್ಸಳರು ಪ್ರಬಲರಾಗಿ, ಕೋಲಾರ ಪ್ರದೇಶವನ್ನು ಆಡಳಿತ ಮಾಡುತ್ತಿದ್ದ ಚೋಳರನ್ನು ಸೋಲಿಸುತ್ತಾರೆ. ಇದರೊಂದಿಗೆ ಕೋಲಾರ ಪ್ರದೇಶ ಮಧ್ಯಕಾಲೀನ ಚರಿತ್ರೆ ಪ್ರಾರಂಭವಾಗುತ್ತದೆ. ಹೊಯ್ಸಳರ ಸಂಸ್ಕೃತಿ ಹಾಗೂ ಆಡಳಿತದಿಂದ ಕೋಲಾರ ಚರಿತ್ರೆಯಲ್ಲಿ ಸ್ಥಿರ ನೆಲೆಗಳು ಕಂಡುಬರುತ್ತದೆ. ಈ ಮನೆತನದವರ ಪ್ರಸಿದ್ಧ ದೊರೆ ವಿಷ್ಣುವರ್ಧನನು ಕೋಲಾರವನ್ನು ಜಯಿಸಿ ವೆಲ್ಲೂರಿನನವರೆಗೆ ರಾಜ್ಯ ವಿಸ್ತರಿಸಿದ. ಇವರ ೧೦೦ಕ್ಕೂ ಹೆಚ್ಚು ಶಾಸನಗಳು ಇಲ್ಲಿ ಸಿಕ್ಕಿವೆ.[೧೬] ಇವರ ಆಡಳಿತ ೧೪ನೇ ಶತಮಾನದವರೆಗೆ ಪ್ರಬಲವಾಗಿ ಮುಂದುವರಿಯಿತು. ಅನಂತರ ವಿಜಯನಗರ ಅರಸರು ತಮ್ಮ ರಾಜ್ಯವನ್ನು ವಿಸ್ತೀರ್ಣ ಮಾಡಿದಂತೆ, ಮುಳುಬಾಗಿಲನ್ನು ದಕ್ಷಿಣದ ೨ನೇ ರಾಜಧಾನಿ ಎಂಬುದಾಗಿ ಮಾಡಿಕೊಂಡಿದ್ದಾರೆ. ಆದರೂ, ವಿಜಯನಗರ ಕಾಲದ ಬೃಹತ್ ಆಡಳಿತ ವ್ಯವಸ್ಥೆಯನ್ನು ನಿರ್ಲಕ್ಷ್ಯತನ ಧೋರಣೆಯನ್ನು ಇದರಿಂದ ತಿಳಿದುಕೊಳ್ಳಲು ಸಾಧ್ಯವಾಗಿದೆ ಎಂದು ಕೆ.ಎಲ್. ರಾಜಶೇಖರರವರ ಲೇಖನಿಯಲ್ಲಿ ಹೇಳಿದ್ದಾರೆ.[೧೭] ಕ್ರಿ.ಶ. ೧೬ನೇ ಶತಮಾನದವರೆಗೆ ಈ ರಾಜವಂಶದ ಆಡಳಿತ ಮುಂದುವರೆದು ಅದರ ಅಧೀನದಲ್ಲಿದ್ದ ಸಾಮಂತ ರಾಜರು ಅನಂತರ ಪ್ರಬಲತೆಗೆ ಬರುತ್ತಾರೆ. ಆದರೆ, ಈ ವೇಳೆಗೆ ಬಿಜಾಪುರದ ಆದಿಲ್‌ಷಾಹಿಗಳು, ಮೊಗಲರು ತಮ್ಮ ಆಡಳಿತ ವಿಸ್ತರಣೆಗೊಂಡು ಸಾಮಂತರ ಪ್ರಬಲತೆ ಮುರಿದರು. ೧೭ನೇ ಶತಮಾನದಲ್ಲಿ ಮರಾಠರ ಷಾಹಜಿ ಶಿವಾಜಿ ಹಾಗೂ ಏಕೋಜಿರವರ ಆಡಳಿತ ಮುಂದುವರೆಯುತ್ತದೆ. ಇಲ್ಲಿಗೆ ಮಧ್ಯಕಾಲದ ಚರಿತ್ರೆ ಮುಕ್ತಾಯಗೊಳ್ಳುತ್ತದೆ.

೧೮ನೇ ಶತಮಾನದ ಹೊತ್ತಿಗೆ ವಸಾಹತುಶಾಹಿಗಳಲ್ಲಿಯೆ ಪ್ರಬಲರಾಗಿದ್ದ ಬ್ರಿಟೀಷರು ಮೈಸೂರು ರಾಜ್ಯದ ಹೈದರಾಲಿ ಮತ್ತು ಟಿಪ್ಪುವಿನ ವಿರುದ್ಧ ಸ್ಥಳೀಯರನ್ನು ಎತ್ತಿ ಕಟ್ಟಿ ಸೆಣಾಡಿದರು. ೧೭೯೧ರಲ್ಲಿ

ನಡೆಯುತ್ತಿದ್ದ ೩ನೇ ಆಂಗ್ಲೋ ಮೈಸೂರು ಯುದ್ಧದಲ್ಲಿ ಲಾರ್ಡ್ ಕಾರ್ನ್‌ವಾಲೀಸ್‌ನು ಕೋಲಾರವನ್ನು ಗೆದ್ದನು. ೧೭೯೨ರಲ್ಲಿ ನಡೆದ ಶ್ರೀರಂಗಪಟ್ಟಣದ ಒಪ್ಪಂದದಂತೆ ಕೋಲಾರ ಮೈಸೂರು ರಾಜ್ಯದ ಒಂದು ಭಾಗವಾಯಿತು.[೧೮] ಇದರಿಂದ ಕೋಲಾರ ಚರಿತ್ರೆಯಲ್ಲಿ ಹೊಸ ತಿರುವು ಉಂಟಾಯಿತಕು. ೧೯೪೭ರವರೆಗೆ ಬ್ರಿಟೀಷರ ಆಡಳಿತ ಮುಂದುವರೆದು ಕೋಲಾರ ಚಿನ್ನದ ಗಣಿ ಅಭಿವೃದ್ಧಿ, ರಸ್ತೆಗಳ ಅಭಿವೃದ್ಧಿ, ರೈಲ್ವೆಗಳು ಅಭಿವೃದ್ಧಿ, ಮಾರುಕಟ್ಟೆಗಳ ಅಭಿವೃದ್ಧಿ ಮಾಡಿರುವುದು ಕಂಡುಬರುತ್ತವೆ. ೧೯೨೦ರ ನಂತರ ಕೋಲಾರ ಪ್ರದೇಶದಲ್ಲಿ ಸ್ವಾತಂತ್ರ್ಯ ಹೋರಾಟಗಳು ಪ್ರಾರಂಭವಾಗುತ್ತದೆ. ಇದಕ್ಕೆ ಪ್ರಮುಖ ಕಾರಣ ಮಹಾತ್ಮ ಗಾಂಧೀಜಿಯವರು ಕೋಲಾರ ಪ್ರದೇಶದ ನಂದಿಗಿರಿಧಾಮಕ್ಕೆ ಭೇಟಿಕೊಟ್ಟರು (೧೯೧೫)ದ್ದು ಮತ್ತೆ ೨ನೇ ಬಾರಿಗೆ (೧೯೩೬) ಇದೇ ರೀತಿ ಭೇಟಿ ಕೊಡುವುದರ ಮೂಲಕ ಜಿಲ್ಲಾದ್ಯಂತ ಪ್ರವಾಸ ಮಾಡಿ ಖಾದಿ ಪ್ರಚಾರ, ಹರಿಜನ ಕಲ್ಯಾಣ ಕಾರ್ಯಕ್ರಮ ಮುಂತಾದವುಗಳನ್ನು ಮಾಡಿದರು.[೧೯] ಈ ಸ್ವಾತಂತ್ರ್ಯ ಹೋರಾಟದ ಅವದಿಯಲ್ಲಿ ಗೌರಿಬಿದನೂರಿನ ಸಮೀಪ ಯಾತ್ರಾಸ್ಥಳವಾದ ವಿದುರಾಶ್ವಥದಲ್ಲಿ ನಡೆದು ಧ್ವಜ ಸತ್ಯಾಗ್ರಹ ಮತ್ತು ಗೋಲಿಬಾರ ಘಟನೆ ನಡೆದು, ಯಾತ್ರಾದಿಗಳ ಸಾವು ಉಂಟಾಗಿ ಸ್ವಾತಂತ್ರ್ಯ ಸಮರದಲ್ಲಿ ತಮ್ಮದೆ ಆದ ಸ್ಥಾನವನ್ನು ಪಡೆದಿದೆ. ಇದು ಡಿ. ಲಿಂಗಯ್ಯ, ಎಂ.ಸಿ. ಮಹಾಬಳೇಶ್ವರ, ಎಸ್. ಚಂದ್ರಶೇಖರ, ಎಂ. ಜಮುನಾ ಮುಂತಾದವರ ಲೇಖನಗಳಲ್ಲಿ ಕಂಡುಬರುತ್ತದೆ.[೨೦] ಇದಾದನಂತರ ಕೆ.ಜಿ.ಎಫ್.ದ ಚಿನ್ನದ ಗಣಿ ಸತ್ಯಾಗ್ರಹ. ಶಿದ್ಲಘಟ್ಟದಲ್ಲಿ ನಡರ ಧ್ವಜ ಸತ್ಯಾಗ್ರಹ, ಕ್ವಿಟ್ ಇಂಡಿಯಾ ಚಳುವಳಿ ಹಾಗೂ ಮೈಸೂರು ಚಲೋ ಚಳುವಳಿಗಳು ಕೋಲಾರ ಸ್ವಾತಂತ್ರ್ಯ ಹೋರಾಟ ಘಟ್ಟದ ಚರಿತ್ರೆಗೆ ಹೊಸ ಆಯಾಮ ಒದಗಿದಂತಾಗಿದೆ. ಸಾವಿರಾರು ಜನ ಜೈಲುವಾಸ, ಪ್ರಾಣಾರ್ಪಣೆ ನೀಡಿಕೆ ಆಸ್ತಿಪಾಸ್ತಿಗಳ ಜಪ್ತಿ ಮುಂತಾದ ಘಟನೆಗಳಿಂದ ಚರಿತ್ರೆ ವಿಸ್ತಾರಗೊಂಡಿದೆ.

ಇದೇ ಸ್ವಾತಂತ್ರ್ಯ ಹೋರಾಟ ಘಟ್ಟದಲ್ಲಿ ವಿವಿದ ದಮನಿತರ ಜನಸಮುದಾಯಗಳು ಪಾಲ್ಗೊಂಡಿದ್ದು ಅವರ ಚರಿತ್ರೆಯ ಹಿನ್ನೆಲೆಯನ್ನು ಕಾಣವಂತಾಗಿದೆ. ಅಂದರೆ ದಲಿತರ ಚರಿತ್ರೆ, ಮಹಿಳಾ ಚರಿತ್ರೆ, ರೈತರು, ಕಾರ್ಮಿಕರ ಚರಿತ್ರೆ ಎಂಬುದಾಗಿ ಕಂಡುಬರುತ್ತವೆ. ಇವುಗಳ ಸಂಘಟನೆಗಳು ಮತ್ತು ಹೋರಾಟಗಳನ್ನು ತಿಳಿಯುವ ಹಿನ್ನಲೆಯಲ್ಲಿ ಅವುಗಳ ಚರಿತ್ರೆಯು ಪ್ರಾಮುಖ್ಯತೆ ಮತ್ತು ವೈಶಿಷ್ಟ್ಯತೆಯನ್ನು ಪಡೆದಿವೆ ಎಂಬುದು ಗುರುತಿಸುವಂತಾಗಿದೆ. ಅಲ್ಲದೆ ಚರಿತ್ರೆ ಲೇಖನಶಾಸ್ತ್ರವು ಈ ಘಟ್ಟದಲ್ಲಿ ಹೊಸ ದೃಷ್ಟಿಕೋನ ಮತ್ತು ಆಯಾಮಗಳಲ್ಲಿ ಅಧ್ಯಾಯ ಮಾಡಲಾರಂಭಿಸಿದೆ ಮತ್ತು ಜನ ಸಮುದಾಯಗಳಲ್ಲಿನ ಪ್ರತಿಯೊಂದು ಗುಂಪಿನವರ ಸ್ಥಿತಿಗತಿಗಳು ಸುಧಾರಣೆಗಳು ಮತ್ತು ಪ್ರಾಮುಖ್ಯತೆಯ ಬಗ್ಗೆ ವಿವರಿಸುವುದಾಗಿದೆ. ಅದೇ ರೀತಿ, ಕರ್ನಾಟಕ ಏಕೀಕರಣೋತ್ತರ ನಂತರ ದಲಿತರು, ಕೆಳವರ್ಗದವರ ಚರಿತ್ರೆ, ಮಹಿಳಾ ಚರಿತ್ರೆ ಹಾಗೂ ರೈತರು ಕಾರ್ಮಿಕರು ಚರಿತ್ರೆಗಳ ಬಗ್ಗೆ ಬರೆದಿರುವ ಕೃತಿಗಳು ಅವಲೋಕಿಸುವುದಾಗಿದೆ. ಕರ್ನಾಟಕದ ಏಕೀಕರಣದ ಕಾಲದಲ್ಲಿ ಕೋಲಾರ ಪ್ರದೇಶವು ಹೆಚ್ಚಿನ ಸಂಘರ್ಷವಿಲ್ಲದೆ ಮೊದಲಿನಂತೆ ಕರ್ನಾಟಕ ರಾಜ್ಯದಲ್ಲಿ ವಿಲೀನಗೊಂಡಿತು. ಕೇಂದ್ರ ಮತ್ತು ರಾಜ್ಯ ಸರ್ಕಾರಗಳಲ್ಲಿನ ಕಾನೂನುಗಳ ಅನ್ವಯದಲ್ಲಿ ಸ್ಥಳೀಯ ಸರ್ಕಾರಗಳು ರಚನೆಗೊಂಡು ಆಡಳಿತ ಮುಂದುವರಿಯಿತು.

ನಂತರ ಕಾಲದಲ್ಲಿ ಆಂತರಿಕವಾಗಿ ಹಲವು ಸಮಸ್ಯೆಗಳು ಕಂಡುಬಂದು ಪ್ರತಿಯೊಂದು ಜನಸಮುದಾಯಗಳ ನಡುವೆ (ದಲಿತರು, ಮಹಿಳೆಯರು ಹಾಗೂ ರೈತರು, ಕಾರ್ಮಿಕರು) ಸಂಘಟನೆಗಳು ಬೆಳವಣಿಗೆಗೊಂಡವು ಮತ್ತು ಹೋರಾಟಗಳು ಮತ್ತಷ್ಟು ತೀವ್ರಗೊಂಡು, ಪ್ರಜಾಪ್ರಭುತ್ವದ ಹಿನ್ನೆಲೆಯಲ್ಲಿ ಸ್ವಾಭಿಮಾನ ಸ್ವಾತಂತ್ರ್ಯಕ್ಕೆ ಆದ್ಯತೆ ನೀಡುವಂತಾಯಿತು. ಅಲ್ಲದೆ ಆರ್ಥಿಕ ಸಾಮಾಜಿಕ ಸವಲತ್ತುಗಳಿಗೆ ಹೆಚ್ಚು ಒತ್ತು ನೀಡುವಂತಾಯಿತು. ಸಾಮಾನ್ಯವಾಗಿ ಇವೆಲ್ಲವುಗಳ ಚರಿತ್ರೆಗಳ ಒಂದೇ ರೀತಿಯ ಸಂಘರ್ಷಾತ್ಮಕವಾಗಿ ಕಂಡುಬಂದಿದೆ. ಇದರಂತೆ ಗಂಗಾಧರಮೂರ್ತಿರವರ ನಾಗಸಂದ್ರ ಭೂಹೋರಾಟ, ಹೆಚ್.ಎಂ. ರಾಮಚಂದ್ರರವರು ದಲಿತ ಸಂಘರ್ಷ ಸಮಿತಿ ಸಮ್ಮೇಳನ ಸ್ಮರಣ ಸಂಚಿಕೆ, ಎಚ್.ವಿ. ಸೋಮಶೇಖರ್‌ರವರ ಕೋಲಾರ ಜಿಲ್ಲೆಯ ಕಮ್ಯುನಿಸ್ಟರು, ಲಕ್ಷ್ಮೀಪತಿ ರವರ ಮರನಪಲ್ಲಿ ದಲಿತ ಹೋರಾಟ ಮುಂತಾದ ಕೃತಿಗಳನ್ನು ಬರೆದಿದ್ದಾರೆ. ಇವುಗಳ ಅಧ್ಯಯನ ಅವಲೋಕನ ಮಾಡುವುದರ ಮೂಲಕ ಪ್ರಸ್ತುತ ಅಧ್ಯಯನವನ್ನು ಸೈದ್ಧಾಂತಿಕವಾಗಿ ವಿವರಿಸಲಾಗಿದೆ.

೧.ಆ. ಚರಿತ್ರೆ ಲೇಖನಾಶಾಸ್ತ್ರದ ವಿವಿಧ ಆಯಾಮಗಳ ವಿಶ್ಲೇಷಣೆ

೨೦ ಮತ್ತು ೨೧ನೇ ಶತಮಾನದಲ್ಲಿ ಚರಿತ್ರೆಯನ್ನು ಕೇವಲ ಒಂದೇ ದೃಷ್ಟಿಕೋನವಾಗಿರದೆ, ಹಲವು ವಿಧಾನಗಳು, ವಿವಿದ ಆಯಾಮಗಳಲ್ಲಿ ಅಧ್ಯಯನ ಮಾಡಲಾಗಿದೆ. ಪ್ರಾಚೀನ ಕಾಲದಿಂದ ಆಧುನಿಕ ಕಾಲದವರೆಗೆ ಅಂದರೆ ವಸಾಹತುಶಾಹಿಯ ಕಾಲದವರೆಗೆ ಚರಿತ್ರೆಯನ್ನು ಪ್ರಬಲ ರಾಜವಂಶಗಳು ಅವರ ಆಡಳಿತ ಬೆಳವಣಿಗೆ ಮತ್ತು ಅವುಗಳ ಅವನತಿಯನ್ನು ಗಣನೆಗೆ ತಗೆದುಕೊಂಡು ಅಧ್ಯಯನ ಮಾಡಲಾಗಿತ್ತು. ವಸಾಹತುಕಾಲದಲ್ಲಿ ಬ್ರಿಟೀಷ್ ವಿದ್ವಾಂಸರು ಸಹ ಇದೇ ಧೋರಣೆ ಹೊದಿದ್ದು, ಚರಿತ್ರೆ ದಾಖಲೆಗಳನ್ನು ಮಾಡಲು ಪ್ರಯತ್ನಿಸಿದರು. ಆದರೆ, ಅವರ ಉದ್ದೇಶ ಅವರ ವಸಾಹತುಶಾಹಿ ಸ್ಥಿರಗೊಳಿಸುವುದಾಗಿತ್ತು. ಇದರಂತೆ ಕೃತಿಗಳಲ್ಲಿ ಜನರ ಮನಸ್ಸು ಗೆಲ್ಲುವಂತಹ ವಿವರಗಳು ಕಂಡುಬಂದವು. ಆದರೆ ಇದೇ ಕಾಲಕ್ಕೆ ರಾಷ್ಟ್ರೀಯತೆಯ ಪ್ರಾರಂಭವಾಗಿ ವಸಾಹತುಶಾಹಿ ನಿಲುವನ್ನು ಪ್ರತಿಭಟಿಸಿತು. ಕೃತಿಗಳಲ್ಲಿಯೂ ಸಹ ಕೋಮುವಾದ ರಾಷ್ಟ್ರೀಯತೆಯ ವಾದಗಳು ಕಂಡುಬಂದವು. ವಸಾಹತುಶಾಹಿಯ ಆಡಳಿತದ ಅಂತಿಮದ ಹೊತ್ತಿಗೆ ಪ್ರಜಾಪ್ರಭುತ್ವ, ಸಮಾಜವಾದ, ಸಮಾತವಾದ, ಸಿದ್ಧಾಂತಗಳು ರಾಷ್ಟ್ರೀಯತೆಯೊಂದಿಗೆ ಬಹುತೇಕವಾಗಿ ಕಂಡುಬಂದವು.[೨೨] ಇವುಗಳ ಪ್ರತಿಫಲವಾಗಿ ಚರಿತ್ರೆಯ ಅಧ್ಯಯನವು ಕೆಳಸ್ತರದವರೆಗೂ ವಿಸ್ತಾರಗೊಂಡಿತು. ಇಲ್ಲಿ ಕೇವಲ ಪ್ರಬಲ ರಾಜವಂಶಗಳಲ್ಲದೆ ಜನರ ನಡುವಿನ ವಿವಿಧ ಜಾತಿಗಳು, ವರ್ಗಗಳು ಮತ್ತು ಅವುಗಳ ಸಂಘಗಳು ಉದಯಗೊಂಡಿದ್ದವು. ಅವುಗಳ ಸಂಸ್ಕೃತಿ, ಆರ್ಥಿಕತೆ, ಸಾಮಾಜಿಕತೆ ಹಾಗೂ ಸಮಾಜದಲ್ಲಿ ಅವರ ಸ್ಥಾನಮಾನ ಮುಂತಾದವುಗಳನ್ನು ಅಧ್ಯಯನಗಳಾದವು. ಹೀಗಾಗಿ ಚರಿತ್ರೆಯು ವಿವಿಧ ಆಯಾಮಗಳಲ್ಲಿ ಸ್ಥಳೀಯ ಚರಿತ್ರೆ, ಕೆಳವರ್ಗದ ಚರಿತ್ರೆ, ದಲಿತರ ಚರಿತ್ರೆ, ಮಹಿಳಾ ಚರಿತ್ರೆ, ರೈತರ ಚರಿತ್ರೆ, ಕಾರ್ಮಿಕರ ಚರಿತ್ರೆ ಮುಂತಾಗಿ ಅಧ್ಯಯನಗಳಾದವು. ಇವೆಲ್ಲವು ೨೦ನೇ ಶತಮಾನದಲ್ಲಿ ಕಂಡುಬಂದು ಚರಿತ್ರೆಯಲ್ಲಿನ ಬದಲಾವಣೆಗೆಯೊಂದಿಗೆ ರಚನಶಾಸ್ತ್ರದಲ್ಲಿ ಅಳವಡಿಕೆಗೊಂಡವು. ಇದಕ್ಕೆ ಮತ್ತೊಂದು ವಿವಿಧ ಸ್ವರೂಪ

ನಾಗರೀಕತೆ, ಆಧುನಿಕರಣ ಅಂಶಗಳು ಪ್ರಭಾವಗಳು ಇದಕ್ಕ ಪ್ರಮುಖ ಕಾರಣವಾಗಿವೆ ಎನ್ನಲಾಗುತ್ತದೆ. ಇವು ಕೇವಲ ವಿಶೇಷತೆಗಳಲ್ಲದೆ, ಇಂದಿನ ಯುಗದಲ್ಲಿ ಪ್ರಾಮುಖ್ಯ ಪಡೆದುಕೊಂಡಿವೆ. ಪ್ರತಿಯೊಂದು ಸಂಘಟನೆಗಳು, ಉದ್ದೇಶ, ಗುರಿಸಾಧನೆಗಳು ಹೊಂದಿನೆ. ಅಲ್ಲದೆ ಪ್ರಸ್ತುತದಲ್ಲಿ ಚರಿತ್ರೆಯ ವಾಸ್ತವಿಕ ಅಂಶಗಳನ್ನು ವ್ಯಕ್ತ ಪಡಿಸಬೇಕಾದರೆ ಇವುಗಳ ಜ್ಞಾನವು ಅಗತ್ಯವೆಂಬುದು ಚರಿತ್ರೆ ಲೇಖನಶಾಸ್ತ್ರದಿಂದಲೇ ವ್ಯಕ್ತವಾಗುತ್ತದೆ. ಇವುಗಳಲ್ಲಿ ಬಹುತೇಕವಾಗಿ ಶೋಷಣೆ, ಘರ್ಷಣೆಗಳ ಹಿನ್ನೆಲೆಯಲ್ಲಿ ತಿಳಿಸುವಂತವು ಆಗಿದೆ.

* * *

ಸ್ವಾತಂತ್ರ್ಯ ಹೋರಾಟ ಘಟ್ಟದಲ್ಲಿಯ ಹಲವಾರು ಹೊಸ ವರ್ಗಗಳು, ಸಿದ್ಧಾಂತಗಳ ಉದಯಗೊಂಡು ವಸಾಹತುಶಾಹಿಗಳ ವಿರುದ್ಧ ಸೆಣಸಾಡಿದವು. ಅಂತಹ ವರ್ಗ ಸಮುದಾಯಗಳಲ್ಲಿ ರೈತರು, ಕಾರ್ಮಿಕರು, ಮಹಿಳೆಯರು, ದಲಿತರು, ಕಳವರ್ಗದ ಜನರು ಎದ್ದು ಕಾಣುವುದು ಕಂಡುಬರುತ್ತದೆ. ಇದರ ಚರಿತ್ರೆಯು ಅದೇ ಗಳಿಗೆಯಲ್ಲಿ ನಿರ್ಮಿತಗೊಂಡಿದೆ ಎಂದರೆ ತಪ್ಪಾಗಲಾರದು. ಇಷ್ಟೇ ಅಲ್ಲದೆ, ಸ್ವತಂತ್ರ್ಯ ಹೋರಾಟದ ನಂತರ ಇತಿಹಾಸದಲ್ಲಿ ಅವುಗಳಲ್ಲಿ ಮತ್ತಷ್ಟು ಪ್ರಾಮುಖ್ಯತೆ ಗಳಿಸಿಕೊಂಡವು. ಇದರಿಂದ ಚರಿತ್ರೆ ಲೇಖನಶಾಸ್ತ್ರದಲ್ಲಿ ವಿವಿಧ ವಿದ್ವಾಂಸರು ಲೇಖಕರು ಇವುಗಳ ಬಗ್ಗೆ ಚಿಂತನೆ ಮಾಡಲಾರಂಭಿಸಿದರು. ಚರಿತ್ರೆ ಬರಹಗಳು ಕಂಡುಬಂದವು. ಕೋಲಾರ ಪ್ರದೇಶದ ಚರಿತ್ರೆ ಲೇಖನ ಶಾಸ್ತ್ರಕ್ಕೆ ಹೊಸ ಆಯಾಮವನ್ನುಂಟು ಮಾಡಿದ್ದಾರೆ.[೨೨]

೧೯೫೦-೬೦ರಲ್ಲಿ ರಾಷ್ಟ್ರೀಯ ಸಂಘಟನೆಯಂತೆ ಪ್ರಾಥಮಿಕವಾಗಿ ಜಾತಿಯಿಂದ ಅಸಮಾನತೆ ಹೆಚ್ಚಾಗಿ ದಲಿತ ಸಂಘಟನೆ ಪ್ರಾರಂಭವಾಯಿತು. ಅದು ಹಂತಹಂತವಾಗಿ ಬೆಳೆದು ದಲಿತ ಚರಿತ್ರೆಯನ್ನು ನಿರ್ಮಿಸಿತು. ಇದರಂತೆ ಹೆಚ್ಚು ನಿರ್ಲಕ್ಷಗೊಂಡ ಮಹಿಳಾ ಚರಿತ್ರೆಯು ಒಂದಾಗಿ, ಅದು ವಸಾಹತು ಆಡಳಿತದ ಸಾಮಾಜಿಕ ಸುಧಾರಣಾ ಹಿನ್ನೆಲೆಯಲ್ಲಿ ಗಮನಿಸುವಂತಾಯಿತು. ಅಲ್ಲದೆ ಚರಿತ್ರೆಯಲ್ಲಿಯೇ ದೊಡ್ಡ ಸಮುದಾಯ ಎನಿಸಿದ ರೈತರು, ಕಾರ್ಮಿಕರ ಚರಿತ್ರೆ ಈ ಹಿನ್ನೆಲೆಯಲ್ಲಿ ಕಾಣುವಂತಾಯಿತು. ಸ್ವಾತಂತ್ರ್ಯ ನಂತರವು ದಲಿತ ಸಂಘಟನೆಗಳೊಂದಿಗೆ ಬಡ ರೈತ ಸಮುದಾಯಗಳು ಸೇರಿಕೊಂಡರು. ಇವರಿಗೆ ಕಮ್ಯುನಿಸ್ಟರ ಪ್ರಭಾವ ಬೀರಿತು. ಪರಿಣಾಮವಾಗಿ ಜೋಡಿದಾರಿ, ಇನಾಂ ಪದ್ಧತಿಗಳಿಂದ ಮುಕ್ತಗೊಳಿಸಿ ರೈತರಿಗೆ ಭೂಮಿಗಳು ನೀಡಲಾಯಿತು. ದೊಡ್ಡ ಕೈಗಾರಿಕೆಗಳಾದ ಚಿನ್ನದ ಗಣಿ ಉದ್ಯಮದ ಕಾರ್ಮಿಕರು, ಬೇಮಲ್ ಕಾರ್ಖಾನೆ ಮುಂತಾದ ಉದ್ಯಮಗ‍ ಕಾರ್ಮಿಕರು ಸ್ವಾತಂತ್ರ್ಯ ಹೋರಾಟ ಕಾಲದಿಂದಲೂ ತಮ್ಮ ಹೋರಾಟದ ಹಕ್ಕು ಬಾಧ್ಯತೆಗಳಿಗೆ ಸೌಲಭ್ಯಗಳಿಗಾಗಿ ಹೋರಾಟ ಮಾಡಿರುವುದು ಚರಿತ್ರೆಯಲ್ಲಿ ಗುರುತಿಸಲ್ಪಡಲಾಗಿದೆ.

ಈ ಅಧ್ಯಯನದಲ್ಲಿ ಕೆ. ಅಭಿಶಂಕರರವರ 'ಕೋಲಾರ ಜಿಲ್ಲೆಯ ಗೆಜೆಟಿಯರ್ ೧೯೬೮', ಸಿ. ಚಂದ್ರಶೇಖರರವರ 'ಆಧುನಿಕ ಕರ್ನಾಟಕ ಆಂದೋಲನಗಳು ೨೦೦೨', ಬಿ. ಷೇಕ್ ಅಲಿಯವರ 'ಕರ್ನಾಟಕ

ಚರಿತ್ರೆ ಸಂಪುಟಗಳು', ಆರ್.ಆರ್. ದಿವಾಕರ ಅವರ 'ಕರ್ನಾಟಕ ಏಕೀಕರಣ ಕಥೆ', ಅರಳು ಗಂಗಾಧರ ರಾವರವರ 'ಬಂಗಾರಪೇಟೆ ದರ್ಶನ', ಎಚ್.ಎಸ್. ಗೋಪಾಲರಾವ್‌ರವರ 'ಕರ್ನಾಟಕ ಏಕೀಕರಣ ಇತಿಹಾಸ', ವೇಮಗಲ್ ಸೋಮಶೇಖರ್‌ರವರ 'ನಂದಿ ಗಿರಿಧಾಮದಲ್ಲಿ ಗಾಂಧಿ', ಸೂರ್ಯನಾಥ ಕಾಮತ್‌ರವರ 'ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು', ಜಾನಕಿ ನಾಯರ್‌ರವರ 'ಮಿನಾರ್ಸ್ ಅಂಡ್ ಮಿಲ್ ಹ್ಯಾಂಡ್ಸ್', ಸಿದ್ದವ್ವನಹಳ್ಳಿ ಕೃಷ್ಣಶರ್ಮರವರ 'ಗಾಂಧಿ ಮತ್ತು ಕರ್ನಾಟಕ', ಆರ್. ಗೋಪಾಲರವರು 'ಕೋಲಾರ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ', ಶಿವತಾರಕ ಕೆ.ಬಿ. ಅವರ 'ಕರ್ನಾಟಕ ಪುರಾತತ್ವ ನೆಲೆಗಳು', ಫ್ರಾನ್ಸಿಸ್ ಬುಕನನ್‌ರವರ 'ಪ್ರವಾಸಿ ದಾಖಲೆ ಸಂಪುಟಗಳು', ಎಸ್.ಎಲ್. ರಾಯಿಸ್‌ರವರ 'ಕೋಲಾರ ಜಿಲ್ಲಾ ಶಾಸನ ಸಂಪುಟ', ಎಂ. ಶೇಷಾದ್ರಿರವರ 'ಕೋಲಾರ ಜಿಲ್ಲಾ ಶಾಸನ ಸಂಪುಟ', 'ಕೋಲಾರ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ ಸಂಪುಟಗಳು', 'ಹೊಂಗಿರಣ', 'ಹೊಸಪಥ', ಎಂ.ವಿ.ಕೃಷ್ಣರಾಯ ಮತ್ತು ಎಂ. ಕೇಶವಭಟ್ಟರವರ 'ಕರ್ನಾಟಕ ಇತಿಹಾಸದರ್ಶನ', ಎಸ್. ಲಕ್ಷ್ಮೀನಾರಾಯಣ ರಾಯ್‌ರವರ 'ಕರ್ನಾಟಕ ಇತಿಹಾಸ ದರ್ಶನ', ಎಸ್. ಲಕ್ಷ್ಮೀನಾರಾಯಣ ರಾಯ್‌ರವರ 'ಕರ್ನಾಟಕ ಅರಸು ಮನೆತನಗಳು', ಶ್ರೀಪಾದ ರಾಮಚಂದ್ರ ದೇಶಪಾಂಡೆ ಅವರ 'ಕರ್ನಾಟಕ ಸಾಮ್ರಾಜ್ಯ', ಎಂ.ವಿ. ವಸುರವರ 'ದಕ್ಷಿಣ ಕರ್ನಾಟಕದ ಅರಸು ಮನೆತನಗಳು' ಮುಂತಾದ ಕೃತಿಗಳು ಬಹುಮುಖ ದೃಷ್ಟಿಕೋನ ಹೊಂದಿದ್ದು ಈ ಮೇಲ್ಕಂಡಂತೆ ಅಧ್ಯಯನದ ಅವಲೋಕನಕ್ಕೆ ನೆರವಾಗಿವೆ ಮತ್ತು ಕೋಲಾರ ಪ್ರದೇಶದ ಚರಿತ್ರೆಯನ್ನು ವಿವರಿಸಲು ಸಾಧ್ಯವಾಗಿವೆ.

ಟಿಪ್ಪಣಿಗಳು

೧. ವೆಂಕಟರತ್ನಂ ಎ.ವಿ. ಮತ್ತು ಪದ್ಮ ಎಂ.ವಿ., **ಇತಿಹಾಸ ಸಂಶೋಧನ ಮಾರ್ಗ**, ಬೆಂಗಳೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್, ಬೆಂಗಳೂರು, ೧೯೮೫, ಪು.೨೮೮

೨. ಲಕ್ಷ್ಮಣ್ ತೆಲಗಾವಿ, **ಸ್ಥಳೀಯ ಚರಿತ್ರೆ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೩, ಪು. ೪೯

೩. ಅದೇ.... ಕೃತಿ. ಪು.೫೫

೪. ಜಗನ್ನಾಥ ಪ್ರಕಾಶ ಎನ್., **ಕೋಲಾರ ಸಿರಿ ಸಂಪುಟ**, ಅಂತರಗಂಗೆ ಪ್ರಕಾಶನ, ಬೆಂಗಳೂರು, ೨೦೦೦, ಪು. ೨

೫. ಗೋಪಾಲ ಆರ್., **ಕೋಲಾರ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ** ಪ್ರಾಚ್ಯವಸ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಹೊಸಪೇಟೆ, ೨೦೦೪, ಪು.೧೮, ೧೯

೬. ದಿವಾಕರ ಆರ್.ಆರ್., **ಕರ್ನಾಟಕ ಪರಂಪರೆ ಸಂಪುಟ** ೧, ಸಾಹಿತ್ಯ ಸಂಸ್ಕೃತಿ ಇಲಾಖೆ, ಮೈಸೂರು, ೧೯೭೦, ಪು.೧೦

೭. ಅದೇ.... ಪು.೧೦೮

೮. ಗೋಪಾಲ ಆರ್., **ಕೋಲಾರ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ**, ಪೂರ್ವೋಕ್ತಿ, ಪು.೨೦

೯. ಅದೇ.... ಪು.೩೫

೧೦. ಶ್ರೀಪಾದ ರಾಮಚಂದ್ರ ದೇಶಪಾಂಡೆ, **ಕರ್ನಾಟಕ ಸಾಮ್ರಾಜ್ಯ**, ಕನ್ನಡ ಅಧ್ಯಯನ ಕೇಂದ್ರ, ಧಾರವಾಡ, ಪು.೬೨

೧೧. ಬಸವರಾಜು ಎ.ಬಿ., ಸಂ., **ಹೊಂಗಿರಣ**, ಕೋಲಾರ ಜಿಲ್ಲಾ ಸಾಹಿತ್ಯ ಸಮ್ಮೇಳನ, ಚಿಕ್ಕಬಳ್ಳಾಪುರ, ೧೯೯೨, ಪು.೨

೧೨. ಕೃಷ್ಣರಾವ ಎಂ.ವಿ. ಮತ್ತು ಎಂ. ಕೇಶವಭಟ್ಟ, **ಕರ್ನಾಟಕ ಇತಿಹಾಸ ದರ್ಶನ, ಸಂಪುಟ** ೧, ೧೯೭೦, ಪು.೧೦೧, ೧೧೦

೧೩. ಅದೇ.... ಪು.೬೭

೧೪. ಅಭಿಶಂಕರ ಕೆ., **ಕೋಲಾರ ಜಿಲ್ಲಾ ಗೆಜೆಟಿಯರ್**, ಸರ್ಕಾರಿ ಮುದ್ರಣ ಬೆಂಗಳೂರು, ೧೯೬೮, ಪು.೪೩

೧೫. ಗೋಪಾಲ ಆರ್., **ಕೋಲಾರ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ**, ಪೂರ್ವೋಕ್ತಿ, ಪು. ೨೦೦

೧೬. ಕೃಷ್ಣರಾವ್ ಎಂ.ವಿ., ಮತ್ತು ಕೇಶವಭಟ್ಟ, ಪೂರ್ವೋಕ್ತಿ, ಪು.೨೧೮

೧೭. ತಿಪ್ಪೇಸ್ವಾಮಿ ಜಿ.ಆರ್., (ಸಂ.), **ಹೊಂಗಿರಣ**, ಚಿಕ್ಕಬಳ್ಳಾಪುರ, ೧೯೯೨, ಪು.೮೩

೧೮. ನಾಯಕ ಎಚ್.ಎಂ., **ಕನ್ನಡ ವಿಶ್ವಕೋಶ ಸಂಪುಟ** ೫, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ೧೯೭೨, ಪು.೪೨೮

೧೯. ವೇಮಗಲ್ ಸೋಮಶೇಖರ, **ಕೋಲಾರ ಜಿಲ್ಲೆಯಲ್ಲಿ ಮಹಾತ್ಮ ಗಾಂಧಿ**, ನೇಸರ ಸಮೂಹ ಬೆಂಗಳೂರು, ೨೦೦೪, ಪು.೨೯

೨೦. ದೇವರಾಜಯ್ಯ (ಸಂ.), ಸಿರಿನಂದಿ, ನಂದಿ ಉತ್ಸವ, ಸ್ಮರಣ ಸಂಚಿಕೆ, ಚಿಕ್ಕಬಳ್ಳಾಪುರ, ೧೯೯೯, ಪು.೮೩

೨೧. ಶ್ರೀನಿವಾಸಮೂರ್ತಿ ಎ., **ಇತಿಹಾಸ ಪರಿಶೋಧನಾ ವಿಧಾನ ಮತ್ತು ಇತಿಹಾಸ ಲೇಖನ ಕಲೆ**, ಕೈಲಾಸ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್, ಬೆಂಗಳೂರು, ೧೯೮೨, ಪು.೨೦೧-೨೦೨

೨೨. ಪ್ರಹ್ಲಾದರಾವ್ ಕೆ., **೫೦ ಸ್ವರ್ಣ ಸ್ವಾತಂತ್ರ್ಯ**, ಕೋಲಾರ ಪತ್ರಿಕೆ ಪ್ರಕಾಶನ, ಕೋಲಾರ, ೧೯೯೭, ಪು.೫೯

ಅಧ್ಯಾಯ ಎರಡು

ವಸಾಹತುಪೂರ್ವ ಚಾರಿತ್ರಿಕ ಕೃತಿಗಳ ಅವಲೋಕನ

ಅ. ಪ್ರಾಚೀನ ಚರಿತ್ರೆ

ಆ. ಮಧ್ಯಕಾಲೀನ ಚರಿತ್ರೆ

ಚರಿತ್ರೆ ಲೇಖನಶಾಸ್ತ್ರವು ಆಧುನಿಕ ಯುಗದಲ್ಲಿ ಹೆಚ್ಚು ಪ್ರಾಮುಖ್ಯತೆ ಗಳಿಸಿದೆ. ಅದರ ವಿವಿಧ ಆಯಾಮಗಳು ಮತ್ತು ಅವುಗಳ ವೈಶಿಷ್ಟ್ಯಗಳು ಬೆಳವಣಿಗೆಯಾಗಲು ವಸಾಹತುಕಾಲ ಸೂಕ್ತ ಅವಕಾಶಗಳನ್ನು ಹಾಗೂ ಚಿಂತಕರಲ್ಲಿ ಪ್ರೇರಣೆಯನ್ನು ಒದಗಿಸಿಕೊಟ್ಟಿತು. ಇದರ ಹಿನ್ನೆಲೆಯಲ್ಲಿಯೇ ಪ್ರಾಚೀನ ಚರಿತ್ರೆಯು ಮತ್ತು ಮಧ್ಯಕಾಲೀನ ಚರಿತ್ರೆಗಳು ಅವಲೋಕನಕ್ಕೆ ಒಳಗಾದವು. ಹಾಗೆಯೇ ಈ ಸೈದ್ಧಾಂತಿಕ ವಿಶ್ಲೇಷಣೆಯು ವಸಾಹತು ಕಾಲದ ಪೂರ್ವ ಹಿನ್ನೆಲೆಯನ್ನು ಹೊಂದಿರುವುದರಿಂದ ಅದಕ್ಕೆ ವಸಾಹತು ಪೂರ್ವ ಚರಿತ್ರೆ ಎಂಬುದಾಗಿ ಕರೆಯಲಾಗಿದೆ. ಇದಕ್ಕೆ ಸಂಬಂಧಿಸಿದ ಕೃತಿಗಳನ್ನು ಅವಲೋಕಿಸಿ ಅಧ್ಯಯನ ಸುಲಭವಾಗಿಸಿಕೊಳ್ಳಲು ಪ್ರಾಚೀನ ಚರಿತ್ರೆ ಎಂದಾಗಿ ವಿಂಗಡಿಸಿ ಅದರಲ್ಲಿ ಶಿಲಾಯುಗದ ಚರಿತ್ರೆ, ಐತಿಹ್ಯ ಹಾಗು ಸ್ಥಳನಾಮ ವಿವೇಚನೆ ಮಾಡಿದ ನಂತರ ರಾಜಕೀಯ ಚರಿತ್ರೆಯ ಬೆಳವಣಿಗೆಯನ್ನು ಬಾಣರ ಆಡಳಿತದಿಂದ ಚೋಳರ ಆಡಳಿತದವರೆಗೆ ವಿವರಿಸಿ ಅದನ್ನು ಪ್ರಾಚೀನ ಚರಿತ್ರೆ ಎಂದಾಗಿ ಮಾಡಲಾಗಿದೆ. ಇದನ್ನು 'ಅ' ಭಾಗದಲ್ಲಿ ಚರ್ಚಿಸಲಾಗಿದೆ. ನಂತರ ಹೊಯ್ಸಳರ ಆಡಳಿತದಿಂದ ಪಾಳೆಯಗಾರರವರೆಗೆ ವಿವರಿಸಿ ಅದನ್ನು ಮಧ್ಯಕಾಲೀನ ಚರಿತ್ರೆ ಎಂದಾಗಿ ವಿಂಗಂಡಿಸಲಾಗಿದೆ. ಇದನ್ನು 'ಆ' ಭಾಗದಲ್ಲಿ ಚರ್ಚೆ ಮಾಡುವ ಪ್ರಯತ್ನವನ್ನು ಮಾಡಲಾಗಿದೆ.

ಹೀಗಾಗಿ ವಸಾಹತು ಪೂರ್ವ ಚರಿತ್ರೆಗೆ ಸಂಬಂಧಿಸಿದಂತೆ ಆಯಾಯ ರಾಜ ವಂಶಾವಳಿಗಳು ಆಡಳಿತಕ್ಕೆ ಸಂಬಂಧಿಸಿದ ಕೃತಿಗಳನ್ನು ಮತ್ತು ಲೇಖನಗಳನ್ನು ಅಧ್ಯಯನ ಮಾಡಿ ಈ ಕೆಳಕಂಡಂತೆ ಸೈದ್ಧಾಂತಿಕವಾಗಿ ವಿವೇಚಿಸಲು ಕಿರುಪ್ರಯತ್ನ ಮಾಡಲಾಗಿದೆ.

ಅ

ಪ್ರಾಚೀನ ಚರಿತ್ರೆ

ಕೋಲಾರ ಪ್ರದೇಶದ ಪ್ರಾಚೀನ ಚರಿತ್ರೆಯು ಕರ್ನಾಟಕ ಚರಿತ್ರೆಯಲ್ಲಿ ಹಾಗು ದಕ್ಷಿಣ ಭಾರತದ ಚರಿತ್ರೆಯಲ್ಲಿ ವಿಶಿಷ್ಟ ಸ್ಥಾನ ಗಳಿಸಿದೆ. ಇದರಲ್ಲಿ ಶಿಲಾಯುಗದಿಂದ ಮಧ್ಯಕಾಲದವರೆಗೆ ಹಲವಾರು ರಾಜವಂಶಗಳ ರಾಜಕೀಯ ಚಟುವಟಿಕೆಗಳು ನಡೆದು, ಆಂಧ್ರಪ್ರದೇಶ, ತಮಿಳುನಾಡಿನ ರಾಜವಂಶಗಳನ್ನು ತನ್ನತ್ತ (ಅದರತ್ತ) ಸೆಳೆಯುವುದರ ಮೂಲಕ ಕನ್ನಡ ಕರ್ನಾಟಕದೊಳಗೆ ಸಂಪರ್ಕ ಕಲ್ಪಿಸಿದೆ. ಇದರಿಂದಾಗಿ ಈ ಎರಡು ರಾಜ್ಯಗಳ ರಾಜಕೀಯ, ಸಂಸ್ಕೃತಿಯ ಲಕ್ಷಣಗಳು ಕೋಲಾರ ಪ್ರದೇಶದಲ್ಲಿ ಮಿಶ್ರಣಗೊಂಡಿದೆ. ಇಂತಹ ಪ್ರದೇಶದಲ್ಲಿನ ಚರಿತ್ರೆ ಅಧ್ಯಯನ ಮಾಡುವಾಗ, ಅಧ್ಯಯನ ಸರಾಗಗೊಳಿಸುವ ಸಲುವಾಗಿ ಮೂರು ಭಾಗಗಳಾಗಿ ಮಾಡಲಾಗಿದೆ. ಪ್ರಥಮ ಭಾಗದಲ್ಲಿ ಕೋಲಾರ ಪ್ರದೇಶದ ಚರಿತ್ರೆಯನ್ನು ಶಿಲಾಯುಗದಿಂದ ಪ್ರಾರಂಭಿಸಿದ್ದು, ಶಿಲಾಯುಗದ ನೆಲೆಗಳು ಹಾಗೂ ಜನರ ಜೀವನದ ಕುರಿತಾಗಿ

ಚರ್ಚಿಸಲಾಗಿದೆ. ಎರಡನೇ ಅಧ್ಯಯನದ ಭಾಗದಲ್ಲಿ ಕೋಲಾರ ಪ್ರದೇಶದ ಸ್ಥಳನಾಮದ ವಿಶಿಷ್ಟತೆ ಹಾಗೂ ಅದರ ಬೆಳವಣಿಗೆ ಕುರಿತು ಚರ್ಚಿಸಲಾಗಿದೆ. ಹಾಗೂ ಮೂರನೇ ಭಾಗದಲ್ಲಿ ಕೋಲಾರ ಪ್ರದೇಶದ ರಾಜಕೀಯ ಚರಿತ್ರೆ ಬೆಳವಣಿಗೆಯನ್ನು ಚರ್ಚಿಸಲಾಗಿದೆ. ಇದು ಬಾಣ ರಾಜರಿಂದ ಪ್ರಾರಂಭವಾಗಿದ್ದು, ಗಂಗ ರಾಜವಂಶರಿಂದ ರಾಜಧಾನಿಯಾಗಿ, ಚಾಲುಕ್ಯ, ಪಲ್ಲವ, ನೊಳಂಬ, ವೈಡುಂಬ ಹಾಗೂ ಚೋಳರಾಜರ ರಾಜಕೀಯ ಚಟುವಟಿಕೆಗಳ ಬೆಳವಣಿಗೆಯನ್ನು ಒಳಗೊಂಡಿದೆ. ಇದರಿಂದ ವಿವಿಧ ಕೃತಿಗಳು, ಲೇಖನಿಗಳನ್ನು ಅಧ್ಯಯನ ಮಾಡುವುದರ ಮೂಲಕ ಸೈದ್ಧಾಂತಿಕವಾಗಿ ಕಿರುಪ್ರಯತ್ನದಲ್ಲಿ ಈ ಕೆಳಕಂಡಂತೆ ವಿವೇಚಿಸಲಾಗಿದೆ.

೨.೧. ಶಿಲಾಯುಗ

ಯಾವುದೇ ಪ್ರದೇಶದ ಚರಿತ್ರೆ ಆರಂಭವಾಗುವ ಮುನ್ನ ಆ ಪ್ರದೇಶದಲ್ಲಿ ಶಿಲಾಯುಗದ ಕುರುಹುಗಳು ಕಂಡುಬರುವುದು ಸಹಜ. ಅಂತಹ ಪ್ರದೇಶಗಳು ಜನವಸತಿಗೆ ಯೋಗ್ಯವಾಗಿದ್ದು ಕ್ರಮೇಣ ಅಲ್ಲಿಯೇ ಚರಿತ್ರೆ ಪ್ರಾರಂಭವಾಗುತ್ತದೆ. ಇದು ಎಲ್ಲರಿಗೂ ತಿಳಿದ ವಿಷಯ. ಹೀಗಾಗಿ ಕೋಲಾರ ಪ್ರದೇಶದ ಚರಿತ್ರೆ ಪ್ರಾರಂಭವಾಗುವ ಮುನ್ನ ಆ ಪ್ರದೇಶದಲ್ಲಿ ಶಿಲಾಯುಗದ ಪುರಾವೆಗಳನ್ನು ವಿವೇಚಿಸುವುದಾಗಿದೆ. ಆದರೆ ಪ್ರಾಚೀನ ಹಾಗೂ ಮಧ್ಯಶಿಲಾಯುಗದ ಚರಿತ್ರೆಗೆ ಸಂಬಂಧಿಸಿದಂತೆ ಹೆಚ್ಚಿನ ಪುರಾವೆಗಳು ದೊರೆತಿಲ್ಲ, ಇದರಿಂದಾಗಿ ಪ್ರಾಚೀನ ಹಾಗೂ ಮಧ್ಯ ಶಿಲಾಯುಗದ ಚರಿತ್ರೆಯನ್ನು ಅಲ್ಪವಾಗಿ ವಿವರಿಸಲಾಗಿದೆ ಹಾಗೂ ಶಿಲಾಯುಗದ ಚರಿತ್ರೆಯನ್ನು ಒಟ್ಟಾರೆಯಾಗಿ ಹಳೆ ಶಿಲಾಯುಗ, ಮಧ್ಯಶಿಲಾಯುಗ, ನೂತನ ಶಿಲಾಯುಗ, ಸೂಕ್ಷ್ಮ ಶಿಲಾಯುಗ ಅಥವಾ ಲೋಹ ಶಿಲಾಯುಗ, ಬೃಹತ್ ಕಬ್ಬಿಣ ಶಿಲಾಯುಗ ಎಂಬುದಾಗಿ ವಿಂಗಡಿಸಿ ಚರ್ಚಿಸಿದೆ,

ಕ್ರಿ.ಶ. ೧೯೫೬-೫೭ರಿಂದ ಕೇಂದ್ರ ಸರ್ಕಾರ ಪುರಾತತ್ವ ಇಲಾಖೆಯ ದೆಸೆಯಿಂದ ಪ್ರತಿಯೊಂದು ಹಳ್ಳಿಯಲ್ಲಿ ಇರುವಂತಹ ಎಲ್ಲಾ ಶಿಲಾಯುಗದ ಪ್ರಕಾರಗಳನ್ನು ಸಂಶೋಧನೆಗೆ ಒಳಪಡಿಸಿದೆ.[1] ಇದರಿಂದಾಗಿ ಕೋಲಾರ ಪ್ರದೇಶದ ಶಿಲಾಯುಗದ ವಿವರಗಳ ತಿಳಿಯಲು ಅನುಕೂಲವಾಯಿತು. ಈ ಹಿಂದೆ ಇಂತಹ ಪ್ರಯತ್ನಗಳು ನಡೆದರು, ಹೆಚ್ಚಿನ ವಿವರಣೆಗಳು ಕಂಡು ಬಂದಿರುವುದು ೨೦ನೇ ಶತಮಾನದಲ್ಲಿ ಎಂದು ಹೇಳಲಾಗಿದೆ.[2] ಈ ಪ್ರಯತ್ನದಲ್ಲಿ ತೊಡಗಿದವರು ಎಂ. ಶೇಷಾದ್ರಿ., ಎಂ.ಎಚ್. ಕೃಷ್ಣ., ಆಂಗ್ಲ ವಿದ್ವಾಂಸರಾದ ರಾಬರ್ಟ್ ಬ್ರೂಸ್‌ಫೂಟ್, ಆರ್.ಎ. ಕೋಲ್., ಸಿ. ಕೃಷ್ಣಮೂರ್ತಿ, ಎಸ್. ಶ್ರೀಕಂಠಶಾಸ್ತ್ರಿ, ಬಿ. ನರಸಿಂಹಯ್ಯ ಹಾಗೂ ಎ. ಸುಂದರ್ ಮುಂತಾದವರು ಶ್ರಮಿಸಿದ್ದಾರೆ. ಅಲ್ಲದೆ, ಇವರ ದಾಖಲೆಗಳ ವಿವರಗಳು, ಆರ್. ಗೋಪಾಲರವರ ಸಂಪಾದನಾ ಕೃತಿಯಾದ 'ಕೋಲಾರ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ', ಕೆ.ಬಿ. ಶಿವತಾರಕರವರ ಸಂಪಾದನ ಕೃತಿಯಾದ 'ಕರ್ನಾಟಕ ಪುರಾತತ್ವ ನೆಲೆಗಳು', ಬಿ. ಷೇಕಅಲಿರವರ ಸಂಪಾದನ ಕೃತಿಯಾದ 'ಕರ್ನಾಟಕ ಚರಿತ್ರೆ' (ಸಂಪುಟ ಒಂದು), ಆರ್.ಆರ್. ದಿವಾಕರ್‌ರವರ ಕರ್ನಾಟಕ ಪರಂಪರೆ (ಸಂಪುಟ ಒಂದು) ಕೃತಿ, ಸುಂದರರವರ 'ಕರ್ನಾಟಕ ಪ್ರಾಗೈತಿಹಾಸ' ಎಂಬ ಕೃತಿ ಹಾಗೂ ಎಂ.ಎಚ್. ಕೃಷ್ಣರವರ 'ಕರ್ನಾಟಕ ಪೂರ್ವ ಚರಿತ್ರೆ' ಎಂಬ ಕೃತಿಗಳಲ್ಲಿ ವಿವರಿಸಲ್ಪಟ್ಟಿದೆ. ಇವುಗಳ ಅವಲೋಕನದಿಂದ ಪ್ರಸ್ತುತ ಅಧ್ಯಯನವು ಚರ್ಚಿಸಿದೆ.

ಹಳೆಯ ಶಿಲಾಯುಗ

ಶಿಲಾಯುಗದ ಪ್ರಾಥಮಿಕ ಹಂತವನ್ನು ಹಳೆಯ ಶಿಲಾಯುಗವೆಂದು ಕರೆಯುತ್ತಾರೆ.[೩] ಇದು ಮಾನವನ ಜೀವನದ ಪ್ರಾಥಮಿಕ ಮೆಟ್ಟಿಲು ಎನ್ನಲಾಗುತ್ತದೆ. ಇದರ ವಿವೇಚನೆಯಲ್ಲಿ ಕೋಲಾರ ಪ್ರದೇಶದ ಚರಿತ್ರೆಯಲ್ಲಿ ಅಧ್ಯಯನ ಮಾಡಲಾಗಿದೆ.

ಹಳೆಯ ಶಿಲಾಯುಗದ ಪುರಾವೆಗಳು ಹೆಚ್ಚಾಗಿ ಕೋಲಾರ ಪ್ರದೇಶದಲ್ಲಿ ದೊರೆತಿಲ್ಲವಾದ್ದರಿಂದ ವಿವರಣೆಗಳು ಅಲ್ಪಪ್ರಮಾಣದಲ್ಲಿವೆ. ಆದರೂ ಆರ್.ಆರ್. ದಿವಾಕರ್ ಮತ್ತು ಕೆ.ಬಿ. ಶಿವತಾರಕ್‌ರವರು ಪಾಲಾರ್[೪] ಮತ್ತು ಪನ್ನಾರ.[೫] ನದಿಪಾತ್ರಗಳು ಕೋಲಾರ ಪ್ರದೇಶದಲ್ಲಿದ್ದು ಅವುಗಳ ಬಯಲುಗಳಲ್ಲಿ ಹಳೆಯ ಶಿಲಾಯುಗದ ಮಾನವರ ಪುರಾವೆಗಳನ್ನು ಗುರುತಿಸುವುದರಲ್ಲಿ ಸಫಲರಾಗಿದ್ದಾರೆ ಎಂದು ಅವರ ಸಂಶೋಧನೆಗಳಿಂದ ತಿಳಿದು ಬರುತ್ತದೆ. ಈ ಯುಗದ ಮಾನವನು ಅನಾಗರಿಕನಾಗಿ ಕಾಡುಜೀವನ ಮಾಡುತ್ತಿದ್ದು ಆಹಾರ ಹುಡುಕಾಟದಲ್ಲಿ ತೊಡಗಿದ್ದನು. ಬೇಟೆಗಾಗಿ ಮತ್ತು ಗಡ್ಡೆ ಗೆಣಸು ಕೆರೆಯಲು ಹಾಗು ಪ್ರಾಣರಕ್ಷಣೆಗಾಗಿ ಕಲ್ಲಿನ ಉಪಕರಣಗಳನ್ನು ಬಳಸಿದ್ದಾನೆ. ಅವೇ ಇಂದು ನಮಗೆ ಅಧ್ಯಯನದ ಪಳೆಯುಳಕೆಗಳಾಗಿವೆ. ಸೀಳುಗತ್ತಿ, ಮಚ್ಚುಗತ್ತಿ, ಹರಗತ್ತಿ, ಕೈಗೊಡಲಿ, ಚೂರಿ ತರಹದ ಚೆಕ್ಕೆಗಳು, ಕೊರೆಯುಳ್ಳ ಕೊರಗ ಚಕ್ರಕಾರದಂತಹ ಉಪಕರಣಗಳನ್ನು ಬಳಸಿದ್ದಾನೆ. ಇವೆಲ್ಲವು ಅಶ್ರೂತ್ ಮಾದರಿಯಲ್ಲಿವೆ ಎಂದು ಕೆ.ಬಿ. ಶಿವತಾರಕರು ಹೇಳಿದ್ದಾರೆ.[೬] ಗವಿಗಳು ಕಲ್ಲುಬಂಡೆಗಳೇ ಆದಿಮಾನವನ ಆಶ್ರಯ ತಾಣಗಳಾಗಿವೆ. ಇಂತಹ ಆದಿಮಾನವನ ಸಂಸ್ಕೃತಿ ಬೆಳೆಯಲು ಪಲಾರ, ಪನ್ನಾರು ನದಿ ಬಯಲುಗಳು ಮತ್ತು ಕೋಲಾರ ಪ್ರದೇಶದ ಬೆಟ್ಟಗುಡ್ಡಗಳು ಸಹಕಾರವಾಗಿವೆ ಎಂದು ಭೌಗೋಳಿಕ ಲಕ್ಷಣಗಳಿಂದ ಹೇಳಲಾಗುತ್ತದೆ.

ಮಧ್ಯ ಶಿಲಾಯುಗ

ಹಳೆಯ ಶಿಲಾಯುಗ ಆದಿ ಮಾನವನ ಜನಾಂಗದಲ್ಲಿ, ಕಾಲಾಂತರದಲ್ಲಿ ಅವರ ಜೀವನ ಶೈಲಿಯಲ್ಲಿ ವ್ಯತ್ಯಾಸಗಳು ಕಂಡುಬರುವುದು ಅವರ ಪುರಾವೆಗಳಿಂದ ಗುರುತಿಸಲ್ಪಟ್ಟಿದೆ. ಅಲ್ಲದೆ ಹಳೆಯ ಶಿಲಾಯುಗಕ್ಕೂ ಮತ್ತು ಹೊಸ ಶಿಲಾಯುಗದ ಮಧ್ಯ ಭಾಗದ ಕಾಲವನ್ನು ಮಧ್ಯ ಶಿಲಾಯುಗ ಎಂದು ಹೆಸರಿಸಲಾಗಿದೆ. ಈ ಕಾಲದ ಮಾನವನ ಕುರುಹುಗಳು ಕೋಲಾರ ಪ್ರದೇಶದಲ್ಲಿ ದೊರೆಯದ ಕಾರಣವಾಗಿ ಹಳೆ ಶಿಲಾಯುಗದ ಅವಶೇಷಗಳ ಹಿನ್ನೆಲೆಯಲ್ಲಿ ವಿವರಿಸಲು ಯತ್ನಿಸಲಾಗಿದೆ. ಆದರೂ ಅವರ ಕಾಲದ ಬಗ್ಗೆ ನಿರ್ಧರಿಸಲು ರಾಬರ್ಟ್ ಬ್ರೂಸ್‌ರು ಸಹ ವಿಫಲರಾಗಿದ್ದಾರೆ ಎಂದು ಕೆ.ಬಿ. ಶಿವತಾರಕರು ಹೇಳಿದ್ದಾರೆ.[೭]

ನೂತನ ಶಿಲಾಯುಗ

ಮಧ್ಯಶಿಲಾಯುಗ ಮತ್ತು ಸೂಕ್ಷ್ಮಶಿಲಾಯುಗದ ನಡುವಿನ ಭಾಗಕ್ಕೆ ನೂತನ ಶಿಲಾಯುಗ ಎಂದು ಕರೆಯಲಾಗಿದೆ. ಈ ಕಾಲದ ಪುರಾವೆಗಳನ್ನು ರಾಬರ್ಟ್ ಬ್ರೂಸ್‌ಫುಟ್‌ರವರು ಕೋಲಾರ ಪ್ರದೇಶದ

ಶ್ರೀನಿವಾಸಪುರ, ಜೀರಮಂಗಲ ಮುಂತಾದ ಕಡೆಗಳಲ್ಲಿ ಪತ್ತೆಮಾಡಿದ್ದಾರೆ. ಬಿ. ನರಸಿಂಹಯ್ಯನವರು ಮಾಲೂರು ತಾಲೂಕಿನ ಬನಹಳ್ಳಿಯಲ್ಲಿ ಇದೇ ಕಾಲದ ಕುರುಹುಗಳನ್ನು ಬಹಳವಾಗಿ ಅಧ್ಯಯನ ಮಾಡಿದ್ದಾರೆ. ಇದನ್ನೇ ಅ. ಸುಂದರರವರು ಅಧ್ಯಯನ ಮಾಡಿ ಆರ್.ಗೋಪಾಲರವರ ಸಂಪಾದನ ಕೃತಿಯಾದ 'ಕೋಲಾರ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ' ಎಂಬ ಕೃತಿಯಲ್ಲಿ ಲೇಖನ ನೀಡಿದ್ದಾರೆ. ಅಲ್ಲದೆ, ಕೆ.ಜಿ. ಶಿವತಾರಕರವರು ಎಂ.ಶೇಷಾದ್ರಿ ಭಾರತೀಯ ಪುರಾತತ್ವ ಶೋಧನ ದಾಖಲೆಗಳನ್ನು ಅಧ್ಯಯನ ಮಾಡಿ 'ಕರ್ನಾಟಕದ ಪುರಾತತ್ವ ನೆಲೆಗಳು' ಎಂಬ ಕೃತಿ ಸಂಪಾದನ ಮಾಡಿದ್ದಾರೆ. ಇದರಲ್ಲಿ ಕೋಲಾರ ನೂತನ ಶಿಲಾಯುಗದ ಪುರಾವೆ ನೆಲೆಗಳನ್ನು ೮೪ನೇ ಪುಟದಿಂದ ೧೪೩ ಪುಟದವರೆಗೆ ಪ್ರತಿ ತಾಲೂಕಿನ ವಿವರಗಳಂತೆ ಕ್ರಮವಾಗಿ ಪಟ್ಟಿಮಾಡಿದ್ದಾರೆ. ಉದಾಹರಣೆಗೆ

* ಕೋಲಾರ; ಅಬಿಕೊತ್ತನೂರು, ಕಡೆಗಟ್ಟೂರು, ಕೆಂದಟ್ಟಿ, ಗುಟ್ಟಹಳ್ಳಿ, ವೆಂಕಟಾಪುರ ಬಂಗಾರಪೇಟೆ; ಗೊನಕನಹಳ್ಳಿ, ತೂಕಲ್ಲು, ನೊಲಕುಂಟೆ. ಮಾಲೂರು; ಕುಪ್ಪಳ, ಗಂಗಸಂದ್ರ, ದೊಡ್ಡಕತೂರು, ನಾಗಸಂದ್ರ, ಬನಹಳ್ಳಿ, ಬೂದಿಕೋಟೆ. ಶ್ರೀನಿವಾಸಪುರ ಮುಂತಾದವು

ಈ ನೂತನ ಶಿಲಾಯುಗದ ನೆಲೆಗಳ ಪೈಕಿ, ಬನಹಳ್ಳಿಯಲ್ಲಿ ದೊರೆತ ಪುರಾವೆಗಳು ಹೆಚ್ಚು ಅಧ್ಯಯನಕ್ಕೆ ಒಳಗಾಗಿವೆ. ಇಲ್ಲಿರುವ ಗುಡ್ಡಕ್ಕೆ ಬಲಿಗುಡ್ಡ ಎಂದು ಕರೆಯುತ್ತಾರೆ. ಎತ್ತರ ೭ ಮೀಟರ್ ಮತ್ತು ವಿಸ್ತೀರ್ಣ ೫೦೦ ಮೀಟರ್ ಹೊಂದಿದೆ. ೧೯೬೭ರಲ್ಲಿ ಪ್ರಾಥಮಿಕವಾಗಿ ಪುರಾತತ್ವ ಇಲಾಖೆಯಿಂದ ದಾಖಲಿಸಲಾಗಿದೆ. (IAR-1973-74 IAR-77) ನಂತರ ಎರಡನೇ ಬಾರಿಗೆ (೧೯೮೩-೮೪ ರಿಂದ ೧೯೮೬-೮೭) ಇದರ ಸಂಸ್ಕೃತಿಯಲ್ಲಿ ಹೆಚ್ಚಿನ ಅಧ್ಯಯನ ಮಾಡಲಾಗಿದೆ. ಆರ್.ಎಸ್. ಶರ್ಮರವರು ಹೇಳಿರುವಂತೆ ಇಲ್ಲಿ ಶಿಬಿರಗಳ ಸುತ್ತಲು ದೂರದ ಕೋಲುಗಳನ್ನು ಬಳಸಿ ದೊಡ್ಡಿಗಳನ್ನು ಕಟ್ಟಿದ್ದಾರೆ.[೮]

ಈ ನೂತನ ಶಿಲಾಯುಗದ ಮಾನವನ ಸಂಸ್ಕೃತಿ ಹೆಚ್ಚು ಅಭಿವೃದ್ಧಿಗೊಂಡಿದ್ದು ವ್ಯವಸ್ಥಿತ ಸಮುದಾಯದತ್ತ ಸಾಗಿದೆ. ಆದುದರಿಂದ ಈ ಯುಗಕ್ಕೆ ನೂತನಯುಗ ಎಂದು ಹೆಸರು ಬಂದಿದೆ. ಈ ಯುಗದ ಮಾನವನು ಬೇಟೆಯೊಡನೆ ಕೃಷಿ ಜೀವನ ಮಾಡುತ್ತಿದ್ದು, ವಿವಿಧ ರೀತಿಯ ಉಪಕರಣಗಳು ಬಳಕೆ ಮಾಡಿದ್ದಾನೆ.[೯] ಅವುಗಳೆಂದರೆ, ಉಜ್ಜಿ ನಯಗೊಳಿಸಿದ ಕೆಲವು ಉಪಕರಣಗಳು, ಬೆಸಾಲ್ಟ್ ಶಿಲೆಗಳು, (ಗೊನಕನಹಳ್ಳಿ) ಕೈಯಿಂದ ಮಾಡಿದ ಮಡಕೆಗಳ ಪಾತ್ರೆಗಳು (ಹುನಗುಂದ), ತಟ್ಟೆಗಳು ಕಲ್ಲಿನ ಕೊಡಲಿ (ಕುಪ್ಪಳ್ಳಿ) ವಿವಿಧ ಉದ್ದನೆಯ ಉಪಕರಣಗಳು (ದೊಡ್ಡಕಡತೂರು), ಕೊಡಲಿ ಸುತ್ತಿಗೆ, ಸುಳಿ ಹರೆಯುವ ಕಲ್ಲು (ಬನಹಳ್ಳಿ, ಬೂದಿಕೋಟೆ), ಕಂದು, ಕೆಂಪು ವರ್ಣದ ಮಡಿಕೆಗಳು, (ಕೆಂದಟ್ಟಿ), ಬೂದಿಬಣ್ಣದ ಮಡಿಕೆ (ಕೋಲಾರ) ಶಿಲೋಪಕರಣಗಳು (ವೆಂಕಟಾಪುರ) ಮುಂತಾದವು ದೊರೆತಿವೆ. ಇವೆಲ್ಲವು ನೂತನ ಶಿಲಾಯುಗದ ಮಾನವನು ಬಳಸಿಕೊಂಡಿರುವ ಉಪಕರಣಗಳಾಗಿವೆ.

ನದಿಗಳು ಆದಿಮಾನವನ ಜೀವನಾಡಿಗಳು (ಇಂ.ಆದಿ:೧೯೮೩-೮೪:೪೨:೪೬) ಎಂದು ಬಿ. ನರಸಿಂಹಯ್ಯ ಹೇಳಿದ್ದಾರೆ.[೧೦] ಇದಕ್ಕೆ ಪಲಾರ, ಪನ್ನಾರ ನದಿ ಪಾತ್ರಗಳು ಆಧಾರಗಳಾಗಿವೆ. ಇವನ ಜೀವನಶೈಲಿ ಮಧ್ಯ ಶಿಲಾಯುಗದ ಜೀವನ ಶೈಲಿಗಿಂತ ಸ್ವಲ್ಪ ಸುಧಾರಿಸಿದೆ. ಅಂದರೆ ಅಲೆದಾಟ ನಿಂತು ಗುಂಪು ಜೀವನ, ವ್ಯವಸ್ಥಿತ ಸಮಾಜದಲ್ಲಿ ನೆಲೆಸಿರುವುದು ಹಾಗೂ ಸಂಪ್ರದಾಯಗಳಲ್ಲಿ ಶವಸಂಸ್ಕಾರ

ಮಾಡಿರುವುದು ಈ ಯುಗದ ವಿಶೇಷತೆಯನ್ನು ವ್ಯಕ್ತಪಡಿಸಿದೆ.[೧೧] ಇಂತಹ ಸಂಸ್ಕಾರಣ, ಸಂಪ್ರದಾಯದಲ್ಲಿ ಸತ್ತ ಮನುಷ್ಯನನ್ನು ಹೂಳುವುದು ಇಲ್ಲವೆ ಸುಟ್ಟು ಅವನ ಬೂದಿಯನ್ನು ಮಡಕೆಗಳಲ್ಲಿ ಸಂಗ್ರಹಿಸಿರುವುದು ಇಂದಿಗೂ ನಮ್ಮ ಅಧ್ಯಯನಕ್ಕೆ ಪುರಾವೆಗಳಾಗಿವೆ. ಅಲ್ಲದೆ ಮಣ್ಣಿನಿಂದ ಮಡಕೆ ಪಾತ್ರೆಗಳನ್ನು ತಯಾರಿಸುವುದು, ಮನೆಗಳು ಕಟ್ಟುವುದು ಹಾಗೂ ಪಶುಪಾಲನೆ ಮಾಡಿರುವುದು ಈ ನೂತನ ಶಿಲಾಯುಗದ ಪ್ರಮುಖ ಲಕ್ಷಣಗಳಾಗಿ ಕಂಡುಬರುತ್ತವೆ. ಮನೆಗಳ ವಿಸ್ತೀರ್ಣ ಕನಿಷ್ಟ ೨೦ ಮೀಟರಿನಿಂದ ೬೦ ಮೀಟರ್‌ವರೆಗೆ ಇದೆ. ಅಡುಗೆಗೆ ಬೆಂಕಿ ಉಪಯೋಗಿಸುವುದು, ಆಹಾರ ಸಂಗ್ರಹ ಮಾಡುವುದು ತಿಳಿದಿದ್ದನೆಂದು ಅ. ಸುಂದರ, ಬಿ. ನರಸಿಂಹಯ್ಯನವರು ಹೇಳುತ್ತಾರೆ.

ನೂತನ ಶಿಲಾಯುಗದ ಮಾನವನು ಹಿತಕರ ವಾತಾವರಣಕ್ಕೆ ಹೊಂದುವಂತ ದಿನ್ನೆ, ಗುಡ್ಡಗಳ ಮೇಲೆ ವಾಸಿಸುತ್ತಿದ್ದನೆಂಬುದಕ್ಕೆ ಬನಹಳ್ಳಿ ದಿಬ್ಬವೇ ಆಧಾರವಾಗಿದೆ. ಅವನ ಕೃಷಿ, ಬೇಟೆಗಾಗಿ ಉಪಯೋಗಿಸುತ್ತಿದ್ದ ಆಯುಧಗಳಿಗೆ ಮೆರುಗು ಕೊಡಲು ಮತ್ತು ಅವುಗಳನ್ನು ಚೂಪಾಗಿಸಲು ಬಂಡೆಗಳ ಮೇಲೆ ಉಜ್ಜಿರುವುದು ಬೂದಿಕೋಟೆಯ ಬಂಡೆಗಳ ಮೇಲಿರುವ ಆಕರಗಳು ತೋರ್ಪಡಿಸುತ್ತವೆ. ಅಲ್ಲದೆ, ಉಪಕರಣಗಳಿಗೆ ಬಣ್ಣ ಬಳಿಸುವುದನ್ನು ಬನಹಳ್ಳಿಯ ಪುರಾವೆಗಳು ವ್ಯಕ್ತಪಡಿಸುತ್ತವೆ.

ಟ್ರಾಪ ಎನ್ನುವ ಪದವು ಹಳೆಯ ಸ್ವೀಡಿಷ್ ಪದವು ಟ್ರಾಪ್ಪ ಎನ್ನುವುದರಿಂದ ಹುಟ್ಟಿದೆ. ಟ್ರಾಪ್ಪ ಎಂದರೆ ಮೆಟ್ಟಿಲು ಎಂದರ್ಥ. ಶಿಲಾಶಾಸ್ತ್ರದ ಪ್ರಕಾರ ಟ್ರಾಪ್ಪ ಶಿಲೆಯ ಸಂಯೋಜನೆಯ ವೈವಿಧ್ಯದಿಂದ ಟ್ರಾಕೈಟ್, ಆಂಟಿಸೈಟ್ ಮತ್ತು ಬೈಸಾಲ್ಟ್ ಎಂಬ ಶಿಲೆಗಳು ಸಾಮಾನ್ಯವಾಗಿ ಕಂಡುಬರುತ್ತದೆ.[೧೨] ಡೈಕ್, ಡಾಲರೈಟ್, ಕಣಶಿಲೆ ಬಳಪದ ಕಲ್ಲು ಮುಂತಾದವು ನೂತನ ಶಿಲಾಯುಗದ ಶಿಲೆಗಳ ಲಕ್ಷಣಗಳಾಗಿವೆ.

ಈ ಯುಗದ ಮಾನವನು ಸಾಂಪ್ರದಾಯಿಕವಾದ ಮಡಿಕೆ ತಯಾರಿಕೆ, ಲೋಟಗಳು, ಬಟ್ಟಲುಗಳ ಉಪಯೋಗವು ಸಾಧಾರಣವಾಗಿದೆ.[೧೩] ಇದರಿಂದಾಗಿಯೂ ಚರಿತ್ರೆಕಾರರು ಚರಿತ್ರೆಯನ್ನು ಈ ಯುಗದಿಂದಲೇ ಹೆಚ್ಚಿಗೆ ಗಣನೆಗೆ ತೆಗೆದುಕೊಂಡಿದ್ದಾರೆ. ಆದರೆ, ಇವರ ಕಾಲ ನಿರ್ಧರಿಸುವಲ್ಲಿ ಸಮಸ್ಯೆ ಉಂಟಾಗಿದೆ. ಆದರೂ ರೇಡಿಯೋ ಕಾರ್ಬನ್-೧೪ರಿಂದ ಕಾಲಗಣನೆಗೆ ತೆಗೆದುಕೊಂಡಿದ್ದಾರೆ. ಕೊಡಿಕಲ್‌ನಲ್ಲಿ ದೊರೆತ ಅವಶೇಷಗಳ ಕಾಲ ಕ್ರಿ.ಪೂ. ೨೪೬೫ ಎಂದು ವ್ಯಕ್ತವಾಗುತ್ತದೆ.

ಸೂಕ್ಷ್ಮಶಿಲಾಯುಗ ಅಥವಾ ಲೋಹಯುಗ

ನೂತನ ಶಿಲಾಯುಗದ ನಂತರ ಕಂಡುಬಂದಂತ ಯುಗಕ್ಕೆ ಸೂಕ್ಷ್ಮಶಿಲಾಯುಗವೆಂದು, ಇದೇ ಯುಗದಲ್ಲಿ ಲೋಹದ ಬಳಕೆ ಕಂಡುಬಂದಿರುವುದರಿಂದ ಇದನ್ನೇ ಲೋಹಯುಗವೆಂದು ಕರೆಯಲಾಗಿದೆ. ಅಂದರೆ ಲೋಹಯುಗದಲ್ಲಿ ಮಾನವನು ತನ್ನ ದಿನನಿತ್ಯ ಚಟುವಟಿಕೆಗಳಿಗೆ ಲೋಹದ ಪರಿಜ್ಞಾನ ತಿಳಿದು ಅದನ್ನು ತನಗೆ ಬೇಕಾದ ರೀತಿಯಲ್ಲಿ ತಯಾರಿಸಿಕೊಂಡು ಉಪಯೋಗಿಸಿದ್ದಾನೆ. ಅಂತಹ ಲೋಹಗಳೆಂದರೆ, ತಾಮ್ರ ಹಾಗೂ ಚಿನ್ನ ಅಲ್ಪಪ್ರಮಾಣದಲ್ಲಿ ಮುಖ್ಯವಾದವು. ಇವುಗಳಿಂದ ಮಡಿಕೆ ತಯಾರಿಕೆ, ಬಟ್ಟಲು, ತಟ್ಟೆ, ಕುಂಭಗಳು ತಯಾರಿಸಿ, ಅವುಗಳಿಗೆ ಕಪ್ಪು, ಕಂದುಬಣ್ಣ ಅಚ್ಚುವ ಪದ್ಧತಿಯನ್ನು ಈ ವೇಳೆಗೆ ಕಲಿತಿದ್ದನು ಎಂದು ಇದರಿಂದ ವ್ಯಕ್ತವಾಗುತ್ತದೆ. ಆರ್.ಆರ್.ದಿವಾಕರರವರ ಪ್ರಕಾರ ಆ ಯುಗದ

ಪ್ರಮುಖ ಲಕ್ಷಣಗಳು ಹೀಗಿವೆ:[೧೪]

೧. ಸ್ವಲ್ಪ ಪ್ರಮಾಣದಲ್ಲಿ ದೊರೆತಿರುವ ತಾಮ್ರದ ಬಳಕೆ ಮಾಡಿರುವುದು.

೨. ಕಪ್ಪು ಬಣ್ಣದಿಂದ ಸಿಂಗರಿಸಿದ ಕುಂಭಗಳು ಮತ್ತು ಕಂಪು ಕುಂಬಗಳು ವರ್ಣಗಳ ಉಪಯೋಗ.

೩. ಟ್ರ್ಯಾಪ್ ಶಿಲೆಯ ಮೆರಗು ಕೊಟ್ಟಕಲ್ಲು ಕೊಡಲಿಗಲ ಉಪಯೋಗಿಸಿರುವುದು.

೪. ಇವರು ಸೌಂದರ್ಯ ಪ್ರಜ್ಞೆಯುಳ್ಳವರಾಗಿದ್ದು, ವಿವಿಧ ಉಪಕರಣಗಳ ಬಳಕೆ ಮಾಡಿರುವುದು ಮತ್ತು ಅವುಗಳ ಮೇಲೆ ಬಣ್ಣ ಬಳೆದಿರುವುದು.

೫. ಸಮಾನಾಂತರ ಅರೆಗುಳ್ಳಿ ಕ್ಷುದ್ರಶಿಲಾ ಅಲಗುಗಳನ್ನು ಉಪಯೋಗಿಸಿರುವುದು.

೬. ತಾಮ್ರದ ಉಪಕರಣಗಳಾದ ಕತ್ತಿ, ಕೊಡಲಿ, ಚಕ್ರಗಳು ಮುಂತಾದವುಗಳ ಜೊತೆಗೆ ಕಲ್ಲಿನ ಉಪಕರಣಗಳನ್ನು ಬಳಸಿರುವುದು.

೭. ಶವಸಂಸ್ಕಾರ, ಮನೆಗಳ ಯೋಜನೆ, ಸಮುದಾಯದ ಜೀವನ, ವ್ಯವಸ್ಥಿತ ಸಮಾಜ ಹಾಗೂ ಬೇಟೆಯೊಂದಿಗೆ ಮೀನುಗಾರಿಕೆ, ವ್ಯವಸಾಯದ ಜ್ಞಾನವು ಹೊಂದಿದ್ದನು ಎಂದು ಹೇಳಿದ್ದಾರೆ. ಇದನ್ನು ಅ. ಸುಂದರ, ಬಿ. ನರಸಿಂಹಯ್ಯ, ಎಮ್. ಶೇಷಾದ್ರಿರವರ ಲೇಖನಗಳಲ್ಲಿ ತಿಳಿಸಲಾಗಿದೆ.

ಬೃಹತ್ ಕಬ್ಬಿಣ ಶಿಲಾಯುಗ

ಶಿಲಾಯುಗದಲ್ಲಿ ಅಂತಿಮ ಘಟ್ಟ ಹಾಗೂ ಹೆಚ್ಚು ಮುಂದುವರಿದು ಕಬ್ಬಿಣದ ಪರಿಜ್ಞಾನ ಪಡೆದಿರುವ ಕಾಲಕ್ಕೆ ಬೃಹತ್ ಶಿಲಾಯುಗವೆಂದು ಕರೆಯಲಾಗಿದೆ.[೧೫] ಈ ಯುಗದ ಲಕ್ಷಣಗಳು ಕೋಲಾರ ಪ್ರದೇಶದ ಎಲ್ಲ ಭಾಗಗಳಲ್ಲಿ ಕಂಡುಬಂದಿರುವುದು ಅ. ಸುಂದರ, ಬಿ. ನರಸಿಂಹಯ್ಯ, ಎಂ. ಶೇಷಾದ್ರಿ ಮುಂತಾದವರು ಸಂಶೋಧನೆ ಮಾಡಿದ್ದಾರೆ. ಈ ಯುಗದಲ್ಲಿ ಅಲ್ಲದೆ ಇದಕ್ಕೆ ಸಂಬಂಧಿಸಿದಂತೆ ಭಾರತದ ಪುರಾತತ್ವ ಇಲಾಖೆಯ ಕಾರ್ಯಗತದಿಂದಾಗಿ ಕೋಲಾರ ಜಿಲ್ಲೆಯ ಬಹುಭಾಗವನ್ನು ಸಂಶೋಧನೆ ಮಾಡಿದ್ದಾರೆ. ಇದರಿಂದಾಗಿ ಬೃಹತ್ ಶಿಲಾಯುಗದ ನೆಲೆಗಳನ್ನು ಕೆ.ಬಿ. ಶಿವತಾರಕರವರು ಗುರುತಿಸಿ ಪಟ್ಟಿ ಮಾಡಿದ್ದಾರೆ.

ಕೋಲಾರದಲ್ಲಿ ಮುಖ್ಯವಾಗಿ ಅಭಿಕೊತ್ತನೂರು (ಗೋರಿನೆಲೆ, ಶಿಲಾವೃತ್ತಗಳು) ಉಡಪನಹಳ್ಳಿ, ಉರಟ ಅಗ್ರಹಾರ, ಕುರುಗಲ್ಲು, ಕೀಲುಕೋಟೆ, ಕೆಂದಟ್ಟಿ, ಕೊತ್ತಪಾಳ್ಯ, ಕೊರಟಿ, ಮಲ್ಲಾಂಡಹಳ್ಳಿ, ಕೊಂಡರಾಜಹಳ್ಳಿ, ಕೊಂಗರಾಜಹಳ್ಳಿ, ಗರುಡಹಳ್ಳಿ, ಕೋಲಾರ, ಗುಟ್ಟಹಳ್ಳಿ, ಗುತ್ತೂರು, ದಿಣ್ಣೇಹಳ್ಳಿ, ನಂಡಬಳ್ಳಿ, ಬಿಳಗೆರೆ, ಬೆಟ್ಟದಕಲ್ಲುಹಳ್ಳಿ, ಬಂಡೂರು, ಮದ್ದೇರಿ, ಮಲಯಪ್ಪನಹಳ್ಳಿ, ನೆಲಗಲಬುರ್ರೆ, ವೆಂಕಟಾಪುರ ಗುಡಿಬಂಡೆ, ಗೌರಿಬಿದನೂರು. ಚಿಕ್ಕಬಳ್ಳಾಪುರ. ಬಟ್ಲೈಹಳ್ಳಿ. ಚಿಂತಾಮಣಿ, ಕುರುಬೂರು, ಕೈವಾರ, ಕೊಂಗನಹಳ್ಳಿ, ಚೆನ್ನಸಂದ್ರ. ಚಿಂತಾಮಣಿ: ಮುರುಗಮಲ್ಲ, ಬಂಗಾರಪೇಟೆ ಅಡಂಪಲ್ಲಿ,

ಅಕ್ಕೀತಲಗೊಲ್ಲಹಳ್ಳಿ, ಆಲ್ಲಿಕುಂಟೆ, ಉಕ್ಕುಂಡ, ಕದಿರೇನಹಳ್ಳಿ, ಕಮ್ಮಂಬಳಿ, ಕುಂದರಸಹಳ್ಳಿ, ಕಿರುಮಂಡೆ, ಕೀಲುಕಂಬಳಿ, ಕೆರೆಬಲೆ, ಬಂಗಾರಪೇಟೆ: ಕೊತ್ತೂರು, ಕೋಡಿಹಳ್ಳಿ, ಗಟ್ಟರಾಮದೇನಹಳ್ಳಿ, ಗೊಡಮಂದೆ, ಗೋಡುಗುಮಂದೆ, ಗೊನಕನಹಳ್ಳಿ, ಗೂಟ್ಟೂರು, ಗೊರವನಹಳ್ಳಿ, ಚಕ್ರನಹಳ್ಳಿ, ತೂಕಲ್ಲು, ದೇವಗಾನಹಳ್ಳಿ, ಬುಡಮಕನಹಳ್ಳಿ, ಭೂದನಹಳ್ಳಿ, ಚೆನ್ನಹಾರ, ಬೊಮ್ಮಂಡಹಳ್ಳಿ, ಪಂತಪಲ್ಲಿ, ಹುನಗುಂದ ಮಾಲೂರು: ಅಪ್ಪಯ್ಯನಹಳ್ಳಿ, ಅಜ್ಜೀನಹಳ್ಳಿ, ಉಪ್ಪಾರಹಳ್ಳಿ, ಓಬಳಾಪುರ, ಕೃಷ್ಣಾಪುರ, ಗಂಗಸಂದ್ರ, ಚಿಕ್ಕಸಂದ್ರ, ಬನಹಳ್ಳಿ, ಬೂದಿಕೋಟೆ, ಶ್ರೀನಿವಾಸಪುರ: ಮುಳಬಾಗಿಲು, ಅಭಿಕಲ್ ಮುಂತಾದ ಕಡೆಗಳಲ್ಲಿ ದೊರಕುತ್ತವೆ.

ಈ ಬೃಹತ ಶಿಲಾಯುಗದ ಅವಶೇಷಗಳು ಸಾಮಾನ್ಯವಾಗಿ ಕೋಲಾರ ಪ್ರದೇಶದ ಪ್ರತಿಯೊಂದು ತಾಲೂಕಿನಲ್ಲಿ ದೊರೆಯುತ್ತವೆ. ಇದರಿಂದಾಗಿ ಬೃಹತ್ ಶಿಲಾಯುಗ ಚರಿತ್ರೆಯನ್ನು ನಿರ್ಧಿಷ್ಟವಾಗಿ ತಿಳಿಸಲು ಸಾಧ್ಯವಾಗಿದೆ. ಪಾಲಾರ, ಪನ್ನಾರ ನದಿ ಬಯಲುಗಳಲ್ಲಿ ಹೆಚ್ಚಾಗಿ ಅವರ ಸಂಸ್ಕೃತ ನೆಲೆಗಳು ಕಂಡುಬಂದಿದ್ದು, ವ್ಯವಸಾಯ, ಪಶುಪಾಲನೆ, ಬೇಟೆ, ಮೀನುಗಾರಿಕೆ ಮುಂತಾದ ಮೂಲವೃತ್ತಿಗಳು ಕಂಡುಬರುತ್ತದೆ.[೨೬] ಅಂತೆಯೇ ಅವರು ಬಳಸುವ ಸಾಧನೋಪಕರಣಗಳು ಕಬ್ಬಿಣದ ಲೋಹದಿಂದ ಮಾಡಿಲ್ಪಟ್ಟಿದೆ. ಅವುಗಳ ಜೊತೆಗೆ ತಾಮ್ರ, ಕಲ್ಲಿನ ಸಾಧನೋಪಕರಣಗಳು ಇದ್ದೇ ಇದೆ.

ಕಪ್ಪು, ಕೆಂಪು ವರ್ಣದ ಮಡಿಕೆಗಳು (ಗೊನಕನಹಳ್ಳಿ) ಚಾಕು, ಮೊಳೆ, ಕೊಕ್ಕೆ, ಬಾಣ, ಬಿಲ್ಲೆ, ಗಾಜು, ಕಲ್ಲಾರು, ಉತ್ತಮ ಜಾತಿಯ ಕಾರ್ನಿಲಿಯನ ಕ್ರಿಸ್ಟರ್ ಕಲ್ಲುಗಳು ಮುಂತಾದವು ವ್ಯವಸಾಯ, ಬೇಟೆಗೆ ಉಪಯೋಗಿಸಲ್ಪಟ್ಟಿವೆ. ಮಡಿಕೆ ಪಾತ್ರೆಗಳು, ಲೋಹಗಳು, ಕತ್ತಿ, ಚಾಕು, ಉದ್ದದ ಸರಳುಗಳು ಇವೆಲ್ಲ ಮನೆಬಳಕೆ ಉಪಕರಣಗಳಾಗಿವೆ. ಮನೆಗಳು ದಿನ್ನೆಗಳಲ್ಲಿ ಕಟ್ಟಲ್ಪಟ್ಟಿವೆ. ಅವು ಒಳಗೆ ಹೊರಗಿನಿಂದ ನೀರು ತಲದಡಿಯಲ್ಲಿ ನೇರದಿಂದ ನಿರ್ಮಿಸಲ್ಪಟ್ಟಿವೆ. ಮನೆಯ ಆಸರೆಗೆಂದು ಅಲ್ಲಲ್ಲಿ ಕಂಬಗಳನ್ನು ಮಾಡಿರುವ (ನೆಡಲು) ಗುಂಡಿಗಳಿರುವುದು ಕಂಡುಬರುತ್ತವೆ. ಒಂದೆಡೆಯೇ ೬ ಮೀ. ವ್ಯಾಸದ ದೊಡ್ಡಮನೆಯಿದ್ದು ಅದರ ಸುತ್ತಮುತ್ತಲು ಸಣ್ಣಸಣ್ಣ ಮನೆಗಳಿರುವುದು ಅ. ಸುಂದರರವರು ಗುರುತಿಸಿದ್ದಾರೆ.

ವಾಸ್ತವ್ಯ ನೆಲೆಯಲ್ಲಿಯೇ ಶವಸಂಸ್ಕಾರ ಕುಣಿಗಳಿವೆ. ಇಂಥ ಸಂಪ್ರದಾಯ ನೂತನ ಶಿಲಾ ಸಾಂಸ್ಕೃತಿಕ ಜನ ಸಮುದಾಯದಲ್ಲಿದ್ದು, ಅದೇ ಮುಂದುವರೆದಿದೆ. ಆದರೆ ಈ ಹಂತದಲ್ಲಿ ಒಂದು ವೈಶಿಷ್ಟ್ಯವೆಂದರೆ, ಉತ್ತರ-ದಕ್ಷಿಣಾಭಿಮುಖವಾಗಿರುವ ಶವಕುಣಿಯ ಮೇಲೆ ಉದ್ದಕ್ಕೂ ಕಲ್ಲು ಚಪ್ಪಡಿಗಳನ್ನು ದಟ್ಟವಾಗಿ ಹೇರಿರುವುದು. ಈ ಲಕ್ಷಣಗಳು ಬೃಹತ ಶಿಲಾಸಂಸ್ಕೃತಿಯ ಕಲ್ಗೋರಿಗಳಲ್ಲಿವೆ. ಒಂದು ಶವಕುಣಿಯಲ್ಲಿ ಬ್ಲೇಡಿನಂಥ ಮೂರು ಸಣ್ಣ ಸಣ್ಣ ಕಲ್ಲುಚಕ್ಕೆಗಳನ್ನು ಉದ್ದನೆ ಎಲುಬಿನಲ್ಲಿ ಕೊರೆದು ಮಾಡಿದ ತಗ್ಗಿನಲ್ಲಿ ಒಂದರ ಪಕ್ಕದಲ್ಲಿ ಒಂದರಂತೆ ಜೋಡಿಸಿ ಅಂಟಿನಿಂದ ಗಟ್ಟಿ ಮಾಡಲಾಗುತ್ತಿತ್ತು.

ವಾಸ್ತವ್ಯ ನೆಲೆಯ ಉತ್ಪನನ ಗುಂಡಿಯ ನೆಲದ ಮಟ್ಟದಿಂದ ಕೆಳಮುಖವಾಗಿ ಗುರುತಿಸಿದ ೧೬ ಮತ್ತು ೨೦ನೇ ಅಡ್ಡ ಪದರುಗಳಲ್ಲಿ ದೊರೆತ ಇದ್ದಿಲು ಚೂರುಗಳು ಇಂಗಾಲ-೧೪ ವೈಜ್ಞಾನಿಕ

ವಿಶ್ಲೇಷಣೆಯಿಂದ ಕಾಲಮಾನ ಕ್ರಮವಾಗಿ ಕ್ರಿ.ಪೂ. ೧೮೦೦, ೧೫೦೦ ಆಗಿದ್ದು ಶಿಲಾ-ತಾಮ್ರ ಹಂತವಿದ್ದು, ನೂತನ ಶಿಲಾಸಂಸ್ಕೃತಿಯ ಆರಂಭದಿಂದ ಕೊನೆಗೊಂಡಿದೆ. ಇಲ್ಲಿಂದ ಮುಂದೆ ಬೃಹತ್ ಶಿಲಾಸಂಸ್ಕೃತಿಯು ಪ್ರಾರಂಭವಾಗಿ ಸು.ಕ್ರಿ.ಪೂ. ೧೨೦೦ ಮತ್ತು ಕಬ್ಬಿಣದ ತಂತ್ರಗಾರಿಕೆಯು ಸು.ಕ್ರಿ.ಪೂ. ೮೦೦ ಎಂದು ತರ್ಕಿಸಲಾಗಿದೆ.

* * *

ಕೋಲಾರ ಪ್ರದೇಶದ ಶಿಲಾಯುಗ ಚಾರಿತ್ರಿಕ ಹಿನ್ನೆಲೆಯನ್ನು ತಿಳಿಯಲು ೨೦ನೇ ಶತಮಾನದ ೫೦ ಮತ್ತು ೬೦ರ ದಶಕದಲ್ಲಿ ಸಂಶೋಧನೆಯ ಪ್ರಯತ್ನದ ಫಲವಾಗಿ ವಿವರಗಳು ಕಂಡುಬರುತ್ತವೆ. ಇದಕ್ಕೆ ಮೈಸೂರು ವಿಶ್ವವಿದ್ಯಾಲಯದ ಪ್ರಾಚ್ಯವಸ್ತು ಇಲಾಖೆಯ ಪ್ರಾಧ್ಯಾಪಕರಾದ ಎಂ. ಶೇಷಾದ್ರಿ, ಎಂ.ಎಚ್. ಕೃಷ್ಣ, ರಾಬರ್ಟ್ ಬ್ರೂಸ್‌ಫೂಟ್, ಸಿ. ಕೃಷ್ಣಮೂರ್ತಿ, ಎಸ್. ಶ್ರೀಕಂಠಶಾಸ್ತ್ರೀ ಆಂಗ್ಲ ಪುರಾತತ್ವ ಸಂಶೋಧಕರಾದ ಆರ್.ವಿ. ಕೋಲ್, ಬಿ. ನರಸಿಂಹಯ್ಯ, ಎ. ಸುಂದರ ಮುಂತಾದವರು ಶ್ರಮಿಸಿದ್ದಾರೆ. ಇವರ ಕೊಟ್ಟ ವರದಿಗಳು, ಲೇಖನಗಳು ಹಾಗೂ ಬರೆದ ಕೃತಿಗಳಿಂದ ಕೋಲಾರ ಪ್ರದೇಶದ ಶಿಲಾಯುಗ ಚರಿತ್ರೆ ತಿಳಿಯಲು ಹಾಗೂ ಗ್ರಹಿಸಲು ಸಾಧ್ಯವಾಗಿದೆ.

ಕೋಲಾರ ಪ್ರದೇಶದ ಚರಿತ್ರೆಗೆ ಸಂಬಂಧಿಸಿದಂತೆ ಶಿಲಾಯುಗದ ನೆಲೆಗಳಲ್ಲಿ ಕೊಂಗರಾಜಹಳ್ಳಿ ಮತ್ತು ಬೆಟ್ಟಪುರದ ಹತ್ತಿರ ಸೀತೆ ಗುಡ್ಡದಲ್ಲಿನ ನೂರಾರು ನೆಲೆಗಳನ್ನು ೧೯೪೩ರಲ್ಲಿ ಮತ್ತು ೧೯೫೫-೫೬ರಲ್ಲಿ ಎಂ. ಶೇಷಾದ್ರಿಯವರು ಸಂಶೋಧನೆ ಮಾಡಿ ಪತ್ತೆ ಮಾಡಿದ್ದಾರೆ. ಈ ಹಿಂದೆ ೧೮೭೩ರಲ್ಲಿ ರಾಬರ್ಟ್ ಬ್ರೂಸ್‌ಫೂಟ್, ಆರ್.ಎ. ಕೋಲ್‌ರವರು ಈಗಿನ ಶ್ರೀನಿವಾಸಪುರ, ಬಂಗಾರಪೇಟೆ, ಗುಡಿಬಂಡೆ, ಕೋಲಾರ, ಚಿಂತಾಮಣಿ ಪ್ರದೇಶದ ಹರಳಿಕೋಟೆ, ಗುರುಡಪಾಳ್ಯ, ಮಾಶಳ್ಳಿ, ಮಾರ್ಗಲ್, ಹೊನಗುಂದ ಮುಂತಾದ ಕಡೆ ಸಂಶೋಧನೆ ಮಾಡಿದ್ದಾರೆ. ಇವರಾದ ನಂತರ ಕೇಂದ್ರ ಸರ್ಕಾರದ ಪುರಾತತ್ವ ಸರ್ವೇಕ್ಷಣೆ ಇಲಾಖೆ ೧೯೬೦ರಲ್ಲಿ ಈ ಜಿಲ್ಲೆಯ ಪ್ರತಿಯೊಂದು ಹಳ್ಳಿಯಲ್ಲಿ ಪುರಾತತ್ವ ಅನ್ವೇಷಣೆಯನ್ನು ನಡೆಸಿತು. ಇದರ ಪರಿಶ್ರಮದ ವರದಿಗಳನ್ನು ಶ್ರದ್ಧೆಯಿಂದ ಕೆ.ಬಿ. ಶಿವತಾರಕರವರು ತಮ್ಮ ಕೃತಿಯಾದ 'ಕರ್ನಾಟಕ ಪುರಾತತ್ವ ನೆಲೆಗಳು' ಎಂಬುದರಲ್ಲಿ ೮೩ನೇ ಪುಟದಿಂದ ೧೪೩ನೇ ಪುಟದವರೆಗೆ ದಾಖಲಾತಿ ಮಾಡಿದ್ದಾರೆ. ಆದರೆ ಅವುಗಳ ಬಗ್ಗೆ ಹೆಚ್ಚಿನ ವಿವರಣೆ ಮಾಡಿಲ್ಲ. ಹಾಗಾಗಿ ಇದೊಂದು ಕರ್ನಾಟಕ ಪುರಾತತ್ವ ನೆಲೆಗಳ ಗ್ಯಾಸೆಟಿಯರ್ ಎಂಬುದಾಗಿ ಗುರ್ತಿಸಲಾಗುತ್ತದೆ. ಈ ದಾಖಲೆಗಳ ವಿವರಣೆ ಪಡೆಯಲು ಆರ್.ಆರ್.ದಿವಾಕರ ಸಂಪಾದನ ಕೃತಿಯಾದ 'ಕರ್ನಾಟಕ ಪರಂಪರೆ ಸಂಪುಟ-೧'ರಲ್ಲಿ ಎಂ. ಶೇಷಾದ್ರಿರವರು ಕೊಟ್ಟಿರುವ ಲೇಖನ, ಬಿ. ಷೇಕಅಲಿ ಅವರ ಸಂಪಾದನ ಕೃತಿಯಾದ 'ಕರ್ನಾಟಕ ಸಂಪುಟ-೧' ಮತ್ತು ಆರ್. ಗೋಪಾಲ್‌ರವರ ಸಂಪಾದನ ಕೃತಿಯಾದ 'ಕೋಲಾರ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ' ಎಂಬುದರಲ್ಲಿ ಇರುವ ಎ. ಸುಂದರರವರ 'ಬೃಹತ್ ಕಬ್ಬಿಣ ಶಿಲಾಯುಗದ ಚರಿತ್ರೆ' ಹಾಗೂ ಬಿ. ನರಸಿಂಹಯ್ಯನವರ ಲೇಖನವಾದ 'ನೂತನ ಶಿಲಾಯುಗದ ಲೇಖನ' ಮುಂತಾದವುಗಳನ್ನು ಪರಿಶೀಲಿಸುವಂತಾಗಿದೆ. ಇವುಗಳ ಹಿನ್ನೆಲೆಯಲ್ಲಿ ಎಸ್. ಜಗನ್ನಾಥ ಪ್ರಕಾಶನವರು ಬಸಹಳ್ಳಿಯ ಎರಡನೇ ಶತಮಾನದ ಶವಕುಣಿ ಸಮಾಧಿಗಳು ದೊರೆತಿವೆಯಾದರೂ ಜಿಲ್ಲಾದ್ಯಾಂತ

ಶಿಲಾಯುಗದ ಜನರು ನಿವಾಸ ಸ್ಥಳಗಳಿಗೆ ಇರುವ ವರದಿಗಳ ಕೊರತೆ ಇದೆ ಎಂದು ಹೇಳುವಾಗ ಸಂಪೂರ್ಣವಾಗಿ ಈ ಬಗ್ಗೆ ಗಮನ ನೀಡಿಲ್ಲವೆಂದು ಕಂಡುಬರುತ್ತದೆ.

ಇಷ್ಟಾದರೂ ಕೋಲಾರ. ಜಿಲ್ಲೆಯ ಶಿಲಾಯುಗದ ಚರಿತ್ರೆಯನ್ನು ಕ್ರಮವಾಗಿ ಎಲ್ಲಿಯೂ ವಿವರಿಸಿಲ್ಲ. ಇಲ್ಲಿ ಒಂದು ಅನುಮಾನವೆಂದರೆ, ಕೋಲಾರದ ಚಿನ್ನದ ಗಣಿಯ ಚಿನ್ನ ಸಿಂಧು ನಾಗರಿಕತೆ ಜನರಿಗೆ ತಲುಪಿತ್ತು ಎಂಬುದು ಎಚ್.ಎಸ್. ಗೋಪಾಲ್‌ರಾವ್‌ರವರು 'ಕರ್ನಾಟಕ ಏಕೀಕರಣ' ಎಂಬ ಕೃತಿಯಲ್ಲಿ ನಮೂದಿಸಿರುವುದು ನೋಡಿದರೆ ಇದನ್ನು ಮೇಲಿನ ಕೃತಿಗಳಲ್ಲಿ ಎಲ್ಲಿಯೂ ತಿಳಿಸಿರುವಂತೆ ಕಂಡುಬಂದಿಲ್ಲದ ಕಾರಣವಾಗಿ ಲೋಹಯುಗದ ವಿವರಣೆ ಇನ್ನು ಅಸ್ಪಷ್ಟತೆಯಲ್ಲಿದೆ ಎಂದು ವ್ಯಕ್ತವಾಗುತ್ತದೆ.

ಕೋಲಾರ ಪ್ರದೇಶದ ಬೆಟ್ಟ ಸಾಲುಗಳಾದ ನಂದಿದುರ್ಗ ಸಾಲುಗಳು, ಟೇಕಲು ಬೆಟ್ಟ ಸಾಲುಗಳು, ಶತಶೃಂಗ ಪರ್ವತಗಳು, ಚಿಂತಾಮಣಿಯ ಅಂಬಾಜಿದುರ್ಗದ ಸಾಲುಗಳು ಇವೆಲ್ಲ ಶಿಲಾಯುಗದ ನೆಲೆಗಳೇ ಪಾಲಾರ, ಪನ್ನಾರ, ಪಾಪಾಘ್ನಿ ಮುಂತಾದವು ಈ ನೆಲದಲ್ಲಿ ಪಂಚನದಿಗಳು ಹರಿಯುತ್ತಿದ್ದವು ಎಂದು ಕೃತಿಗಳಲ್ಲಿ ಉಲ್ಲೇಖವಿದ್ದರೂ ಪುರಾತತ್ವ ಇಲಾಖೆಯ ಅಧ್ಯಯನದಲ್ಲಿ ಗಮನ ಮಾಡಿಲ್ಲವೆಂಬುದು ಮೇಲಿನ ಕೃತಿಗಳ ಅವಲೋಕನದಲ್ಲಿ ವ್ಯಕ್ತವಾಗುತ್ತದೆ.

೨.೨. ಕೋಲಾರ ಪ್ರದೇಶದ ಐತಿಹಾಸಿಕ ಮತ್ತು ಸ್ಥಳನಾಮ ವಿವೇಚನೆ

ಪ್ರತಿಯೊಂದು ಸ್ಥಳಕ್ಕೂ ತನ್ನದೇಯಾದ ಐತಿಹ್ಯ ಅಥವಾ ಸ್ಥಳಪುರಾಣ ಇದ್ದೇ ಇರುತ್ತದೆ. ಹಾಗೆಯೇ ಕೋಲಾರ ಪ್ರದೇಶಕ್ಕೂ ಸಹ ಅದರದೇ ಆದ ಪುರಾಣಕಲ್ಪನೆ ಮತ್ತು ನಾಮವಿವೇಚನೆ ಇದೆ. ವಿಶೇಷವಾಗಿ ಕೋಲಾರ ಪ್ರದೇಶ ಬಹುತೇಕ ಸ್ಥಳಗಳು ರಾಮಾಯಣ ಮತ್ತು ಮಹಾಭಾರತದ ಕಥೆಯೊಂದಿಗೆ ಹೆಣೆದಿವೆ. ಆದುದರಿಂದ ಕೋಲಾರ ಪ್ರದೇಶದ ರಾಜಕೀಯ ಚರಿತ್ರೆ ತಿಳಿಯುವ ಮೊದಲು ಅದರ ಮೂಲದ ಪುರಾಣಗಳ ಕಲ್ಪನೆ ಮತ್ತು ಅದರ ಹೆಸರಿನ ವಿವೇಚನೆ ತಿಳಿಯಲಾಗುತ್ತದೆ. ಇದರಿಂದ ಈ ಕೆಳಗಿನಂತೆ ಭಾಗ ಒಂದರಲ್ಲಿ ಕೋಲಾರ ಪ್ರದೇಶದ ಮೂಲ ಐತಿಹ್ಯ ಅಥವ ಪುರಾಣದ ಕಲ್ಪನೆ ಬಗ್ಗೆ ವಿವರಿಸಲಾಗಿದೆ ಮತ್ತು ಭಾಗ ಎರಡರಲ್ಲಿ ಕೋಲಾರದ ಹೆಸರು ಹುಟ್ಟು ಮತ್ತು ಬೆಳವಣಿಗೆ ಕುರಿತಾಗಿ ವಿವರಿಸಿದೆ.

ಕೋಲಾರ ಪ್ರದೇಶ ಮೂಲ ಚರಿತ್ರೆ ಬಹುತೇಕವಾಗಿ ಅಲಿಖಿತ ಮತ್ತು ಮೌಖಿಕ ಹೇಳಿಕೆಗಳ ಆಧಾರದಿಂದ ತಿಳಿದುಬರುತ್ತದೆ. ಅದು ಕೋಲಾರ ಪ್ರದೇಶದ ಚರಿತ್ರೆಯ ಬೆಳವಣಿಗೆಗೆ ತಳಪಾಯ ಹಾಕಿದೆ. ಇದರಿಂದ ಸ್ಥಳಪುರಾಣ ವಿವೇಚನೆ ಎಂಬುದು ಅನಿವಾರ್ಯವಾಗಿದೆ. ಪ್ರಾಥಮಿಕವಾಗಿ ಭಾರತೀಯ ಪುರಾಣಗಳು ಎಂತಿರುವ ರಾಮಾಯಣ ಕಾಲದ ಪರುಶರಾಮ ಹಾಗೂ ಕಾರ್ತೀವಿರ್ಯಾಜುನರ ಕಥೆ ರಾಮಸೀತೆಯರ ವನವಾಸ ಕಾಲದಲ್ಲಿ ಕೋಲಾರ ಪ್ರದೇಶಕ್ಕೆ ಬಂದಿರುವುದು ಹಾಗೂ ಮಹಾಭಾರತ ಕಾಲದ ಪಾಂಡವರು ವನವಾಸದಲ್ಲಿದ್ದ ಕಾಲದಲ್ಲಿ ಕೋಲಾರ ಪ್ರದೇಶಕ್ಕೆ ಬಂದಿರುವುದರ ಕುರಿತಾಗಿ ಪುರಾಣಗಳು ಹೇಳುತ್ತವೆ. ಅವುಗಳಲ್ಲಿ ಕೆಲವು ಐತಿಹ್ಯಗಳನ್ನು ಇಲ್ಲಿ ನೀಡಲಾಗಿದೆ.

ಐತಿಹ್ಯ ಒಂದು : ಕೋಲಾರ ಜಿಲ್ಲೆಯ ಮುಳಬಾಗಿಲು ತಾಲೂಕಿನ ಅವನಿಯು ಒಂದು ಪುಣ್ಯಕ್ಷೇತ್ರವಾಗಿದ್ದು, ಅದನ್ನು ಆವನ್ಯ, ಆವನಿ ಎಂದಾಗಿ ಕರೆಯಲಾಗಿದೆ. ಪುರಾಣಪ್ರಸಿದ್ಧವಾದ ಆವಂತಿಕ ಕ್ಷೇತ್ರ ಎಂದಾಗಿದೆ. ವಾಲ್ಮೀಕಿ ಋಷಿಯ ಆಶ್ರಮವಿದೆ. ರಾಮನು ಲಂಕೆಯನ್ನು ಗೆದ್ದು ಅಯೋಧ್ಯೆಗೆ ಹಿಂತಿರುಗಿದ ವೇಳೆಯಲ್ಲಿ ಇಲ್ಲಿಗೆ ಬಂದಿದ್ದನೆಂದು, ಸೀತಾದೇವಿ ಗಂಡನಿಂದ ಕಾಡಿಗೆ ಕಳುಹಿಸಲ್ಪಟ್ಟಾಗ ಇಲ್ಲಿಗೆ ಬಂದು ತಂಗಿದ್ದು, ಲವಕುಶರಿಗೆ ಜನ್ಮವಿತ್ತಳೆಂದು, ಲವಕುಶರು ರಾಮನ ಯಜ್ಞಾಶ್ವವನ್ನು ಕಟ್ಟಿ ಹಾಕಿದ ಬಂಡೆ, ರಾಮಲಕ್ಷ್ಮಣರು ಕುಳಿತಿದ್ದ ಬಂಡೆಗಳನ್ನು ಸ್ಥಳೀಯರು ತೋರಿಸುವುದರಲ್ಲಿ ಮುಂದಾಗುತ್ತಾರೆಂದು ಜ್ಯೋತಿಬಾಯಿಯವರು ಐತಿಹ್ಯ ಲೇಖನದಲ್ಲಿ ತಿಳಿಸಿದ್ದಾರೆ.[೧೬] ಇದೇ ರೀತಿ ಕೈವಾರದ ಲಕ್ಷ್ಮಣತೀರ್ಥ, ನಂದಿಗಿರಿಧಾಮ, ಕೋಲಾರ ಬಳಿ ಇರುವ ಸೀತೆಬೆಟ್ಟಗಳು ರಾಮಯಣ ಕತೆಗಳ ಕುರುಹುಗಳನ್ನು ವ್ಯಕ್ತಪಡಿಸುತ್ತವೆ.

ಎರಡನೆಯ ಐತಿಹ್ಯ : ಮಹಾಭಾರತ ಕಥೆಯ ಸರಣಿ ಹೊಂದಿದೆ. ದ್ವಾಪರ ಯುಗದಲ್ಲಿ ಅರ್ಜುನನ ಮಗನಾದ ಕಾರ್ತಿವೀರ್ಯಾಜನ ಎಂಬುವನು ಸಾವಿರ ತೋಳ್ಬಲ ಹೊಂದಿದ್ದು ಮಹಾಋಷಿ ದತ್ತಾತ್ರೇಯರಿಂದ ವರಸಿದ್ಧಿ ಗಳಿಸಿದನು. ಮತ್ತು ಕೋಲಾರ ಪ್ರದೇಶವನ್ನು ಆಡಳಿತ ಮಾಡುತ್ತಿದ್ದಾಗ ಅದೇ ಪ್ರದೇಶದಲ್ಲಿ ಜಮದಗ್ನಿ ಮಹಾಋಷಿ ಮತ್ತು ಆತನ ಪತ್ನಿಯಾದ ರೇಣುಕೆದೇವಿ ಹಾಗೂ ಅವರ ಪುತ್ರನಾದ ಪರಶುರಾಮನೊಂದಿಗೆ ವಾಸಮಾಡುತ್ತಿದ್ದರು. ಒಮ್ಮೆ ಕಾರ್ತಿವೀರ್ಯಾಜುನ ಅವರ ಆಶ್ರಮಕ್ಕೆ ಭೇಟಿ ನೀಡಿ, ಅವರಲ್ಲಿದ್ದ ದೇವತಾ ಸಹೃದಿಯಾದ ಸುರಭಿ ಎಂಬ ಹಸುವನ್ನು ಕೇಳಿ, ಅದನ್ನು ಪಡೆಯಲು ವಿಫಲನಾದಾಗ ಪರಶುರಾಮನೊಂದಿಗೆ ಕಾದಾಡಿ ಸಾವಿಗೀಡಾದ. ನಂತರ ಕಾರ್ತಿವಿರ್ಯಾಜನನ ಮಕ್ಕಳು ರೋಷಗೊಂಡು ಜಮದಗ್ನಿ ಮಹಾರ್ಷಿಯನ್ನು ಕೊಂದರು. ಆಗ ರೇಣುಕಾದೇವಿ ಸಹಗಮನ ಪದ್ಧತಿ ಅನುಸರಿಸಿದಳು. ಇದನ್ನು ತಿಳಿದ ಪರಶುರಾಮ ಕಾರ್ತಿವೀರ್ಯಜನನ ಕುಟುಂಬವನ್ನು ಕೊಲೆಗೈಯಲು ಕೋಲಾರ ಪ್ರದೇಶದ ಶತಶೃಂಗ ಪರ್ವತಗಳಲ್ಲಿ ಕೋಲಾಹಲ ಎಬ್ಬಿಸಿದ ಅದನ್ನು ಕಂಡ ಜನರು ಆ ಪ್ರದೇಶಕ್ಕೆ ಕೋಲಾಹಲ-ಪುರ ಎಂದೇ ನಾಮಕರಣ ಮಾಡಿದರು ಎಂದು ಗೆಜೆಟಿಯರನಲ್ಲಿ ತಿಳಿಸಿದೆ.[೧೭] ಇದನ್ನೇ ಜ್ಯೋತಿಬಾಯಿ, ಶ್ರೀಮತಿ ಪ್ರಹ್ಲಾದರಾವ, ಬಿ. ರಾಜಶೇಖರಪ್ಪನವರು ಹೇಳಿದ್ದಾರೆ. ಮತ್ತು ಜಿ.ಆರ್. ತಿಪ್ಪೇಸ್ವಾಮಿಯವರು ಇದನ್ನು ಸ್ವಲ್ಪ ತಿರುವಿ ಹಾಕಿ ಹೇಳಿದ್ದಾರೆ. ಅಂದರೆ ಸಾಮಾಜಿಕ ಘಾತುಕನಾದ ಮಹಿಷಾಸುರ ಎಂಬ ರಾಕ್ಷಸನನ್ನು ಸಂಹಾರ ಮಾಡವಾಗ ಉಂಟಾದ್ದ ಕೋಲಾಹಲವು ಆ ಪ್ರದೇಶಕ್ಕೆ ಕೋಲಾಹಲಪುರವಾಗಿದೆ ಎಂದು, ಮಹಿಷಾಸುರಮರ್ದಿನಿ ಅಂದರೆ ರೇಣುಕಾದೇವಿ ಕಥೆಯನ್ನು ಹೇಳಿದ್ದಾರೆ.[೧೮]

ಮೂರನೆಯ ಐತಿಹ್ಯ : ಚೋಳರ ಆಡಳಿತದಲ್ಲಿ ಕಂಡುಬರುತ್ತದೆ. ಪ್ರಾಯಶಃ ಇದು ಕಲಿಯುಗದ ವಾಸ್ತವಿಕ ವಿಷಯವಾದರು ಲಿಖಿತ ದಾಖಲೆಗಳಿಲ್ಲದ ಕಾರಣ ಮತ್ತು ಕೋಲಾರಮ್ಮ ಗುಡಿಯನ್ನು ಚೋಳರು ಕಟ್ಟಿಸಿರುವುದರಿಂದ ಹಾಗೂ ಈ ಕುರಿತು ಹೆಚ್ಚಾಗಿ ಮೌಖಿಕ ಆಕರಗಳನ್ನು ಅನುಸರಿಸಿ ಹೇಳಿರುವುದಕ್ಕೆ ಐತಿಹ್ಯವಾಗಿ ಗುರುತಿಸಲಾಗಿದೆ. ಅಂದರೆ, ಚೋಳರು ಕೋಲಾರ ಪ್ರದೇಶವನ್ನು ಆಡಳಿತ ಮಾಡುತ್ತಿದ್ದಾಗ ಕೋಲು ಎಂಬ ಗೊಲ್ಲನು ಆ ಪ್ರದೇಶದಲ್ಲಿ ಉಳುಮೆ ಮಾಡುತ್ತಿದ್ದ. ಒಮ್ಮೆ

ಅವನ ನೇಗಿಲಿಗೆ (ಹಲ) ನಿದಿಯೊಂದು ದೊರೆತು, ಆ ವಿಷಯ ಉತ್ತಮ ಚೋಳನಿಗೆ ತಿಳಿದು ಮತ್ತು ಅವನಿಗೆ ಕೋಲಾರಮ್ಮ ದೇವಿ (ರೇಣುಕಾದೇವಿ) ಕನಸಿನಲ್ಲಿ ಬಂದು ಅಲ್ಲಿ ಗುಡಿ ನಿರ್ಮಾಣಕ್ಕೆ ಹೇಳಿದಾಗ, ಅಲ್ಲಿ ಕೋಲಾರಮ್ಮ ಗುಡಿ ನಿರ್ಮಿಸಿ ಕೋಲನ ಹೆಸರಿನಲ್ಲಿಯೇ ಆ ಪ್ರದೇಶವನ್ನು ಕರೆಯಲಾರಂಭಿಸಿದರು. (ಕೋಲು+ಹಲ=ನಿಧಿ) ಕೋಲಾಹಲ ಎಂಬುದಾಗಿ ಹೆಸರಿಸಲಾಗಿದೆ.[೨೦]

ಇದೇ ರೀತಿ ನಂದಿಗಿರಿಧಾಮಕೆ ಕಷ್ಮಂಡ ಪುರಾಣ[೨೧] ಕುರುಡುಮಲೆಯನ್ನು ಕಾಂಡಿನ್ಯ ಕ್ಷೇತ್ರವೆಂದು, ಬ್ರಹ್ಮಾಂಡ ಪುರಾಣ, ಸಾದಲಿಯನ್ನು, ಸಹದೇವಪುರವೆಂದು ಮತ್ತು ವಿದುರಾಶ್ವತ್ಥ ಎಂಬುದಾಗಿ ಪುರಾಣಗಳ ಚರಿತ್ರೆಯನ್ನು ಹೇಳುತ್ತವೆ. ಇದರಿಂದ ಕೋಲಾರ ಪ್ರದೇಶವು ಪುರಾಣಗಳ ಕ್ಷೇತ್ರ ಎಂದರೆ ತಪ್ಪಾಗಲಾರದು. ಇವು ಕೋಲಾರ ಪ್ರದೇಶದ ರಾಜಕೀಯ ಚರಿತ್ರೆ ಬೆಳವಣಿಗೆಯನ್ನು ತಿಳಿದುಬರುವ ವಿಷಯಗಳಾಗಿವೆ.

೨.೩. ಕೋಲಾರ ನಾಮ ವಿವೇಚನೆ

ಐತಿಹ್ಯಗಳಂತೆ ಕೋಲಾರಕ್ಕೆ 'ಕೋಲಾರ' ಎಂಬ ನಾಮ ಉದಯವು ಅದರ ಪುರಾಣಗಳಲ್ಲಿ ಹೆಣೆದಿದ್ದರು. ಅದು ಕಾಲಕಾಲಕ್ಕೆ ಉಚ್ಚಾರಣೆಯಲ್ಲಿ ಮತ್ತು ಅರ್ಥನೀಡಿಕೆಯಲ್ಲಿ ವ್ಯತ್ಯಾಸಾಗಿರುವುದು ಗಮನಾರ್ಹವಾಗಿದೆ. ಆದುದರಿಂದ ಅದರ ಹೆಸರು ವಿವೇಚನೆಯು ಚರಿತ್ರೆ ವಿಷಯದಲ್ಲಿ ತಿಳಿಯುವುದು ಅಗತ್ಯವಾಗಿ ಈ ಕೆಳಕಂಡಂತೆ ವಿವರಿಸಿದೆ.

ಪುರಾಣಗಳಿಂದ ಕೋಲಾರಕ್ಕೆ 'ಕೋಲಾರ' ಎಂಬ ಹೆಸರು ಕೋಲಾರಮ್ಮ (ರೇಣುಕಾದೇವಿ), ಪರಶುರಾಮ ಕೋಲಾಹಲ (ಶತಶೃಂಗ ಬೆಟ್ಟಗಳ ಸಾಲು)ಗಳಿಂದ ಕೋಲಾಹಲಪುರವೆಂದು ನಾಮಕರಣವಾದರೆ, ಗಂಗರ ಕಾಲಕ್ಕೆ ಅದರ ಹೆಸರಿನ ಹುಟ್ಟು ಗಂಗವಂಶದಿಂದ ನಿರ್ಧರಿಸುವುದು ಕಂಡುಬಂದಿದೆ. ಅಂದರೆ ಆಂಧ್ರಪ್ರದೇಶದಲ್ಲಿರುವ ವಿಶಾಖಪಟ್ಟಣದಲ್ಲಿ ದೊರೆತ ಕಳಿಂಗ-ಗಂಗರ ಒಂದು ತಾಮ್ರ ಶಾಸನದಲ್ಲಿ ಕೋಲಾರಕ್ಕೆ ಸಂಬಂಧಿಸಿದ ಪ್ರಸಂಗವಿದೆ. ಇದರ ಪ್ರಕಾರ ಗಂಗೇಯ ವಂಶದಲ್ಲಿ ೧೮ ಜನ ದೊರೆಗಳು ಇದ್ದು, ಅವರಲ್ಲಿ ೧೭ನೇಯವನೇ ಕೋಲಾಹಲ. ಅವನ ಕಟ್ಟಿಸಿದ ನಗರವನ್ನು ಕೋಲಾಹಲವೆಂದು ಕರೆಯಲಾಗಿದೆ ಎಂದು ಶಾಸನದಿಂದ ತಿಳಿಯಲಾಗುತ್ತದೆಂದು ಬಿ. ರಾಜಶೇಖರಪ್ಪನವರು ಹೇಳಿದ್ದಾರೆ.[೩] ಗಂಗರು ಆಂಧ್ರ ಕಡೆಯ 'ಸರೋಯ:' ಎಂಬ ಸ್ಥಳದಲ್ಲಿ ನೆಲೆಯೂರಿದ್ದು, ನಂತರ ಕೋಲಾರದ ಕಡೆಗೆ ಬಂದರು. ಇದಕ್ಕೆ ಪುರಾವೆ ಇದೆ ಎಂದು ಸಮರ್ಥಿಸಿದ್ದಾರೆ. ಇದೇ ವಾದದಲ್ಲಿ ಎಂ.ಎಸ್. ವೆಂಕಟರಮಣಪ್ಪನವರು ಗಂಗರ ಕಾಲಕ್ಕೆ ಅದು 'ಕುವಳಾಳಪುರವೆಂದು ಹೆಸರು ಪಡೆಯಿತು ಮತ್ತು ಅವರ ಶಾಸನಗಳಲ್ಲಿ ಕುವಳಾಳಪುರರಾದೀಶ್ವರ ಎಂಬ ಬಿರುದಾವಳಿಯಿರುವದು ಇದಕ್ಕೆ ಸಾಕ್ಷಿಯಾಗಿದೆ ಎಂದಿದ್ದಾರೆ. ಇದನ್ನು ಸೂರ್ಯನಾಥ ಕಾಮತರವರ 'ಇತಿಹಾಸ ದರ್ಶನ ಸಂಪುಟ ೧೦' ೧೯೯೫ರಲ್ಲಿ ಪಿ.ವಿ. ಕೃಷ್ಣಮೂರ್ತಿರವರ ಕೋಳಾಲನಾಡು ಒಂದು ಚಾರಿತ್ರಿಕ ಪರಿಶೀಲನೆ ಲೇಖನದಲ್ಲಿ ತಿಳಿಸಿದ್ದಾರೆ.[೨೨]

ಚೋಳರ ಕಾಲದಲ್ಲಿ ಕೋಲಾರವನ್ನು ಕೋಲಾಹಲಪುರವೆಂದು ಕರೆದಿರುವುದು ಹೀಗಾಗಲೇ ತಿಳಿಸಲಾಗಿದೆ. ನಂತರ ಕರಿಕಾಲಚೋಳನ ಆಡಳಿತ ಕಾಲಕ್ಕೆ ಅದು 'ಕರಿಕಾಲಚೊಳಮಂಡಲ' ಎಂಬ

ಉಪನಾಮ ಪಡೆಯಿತು. ಆದರೆ ಕೋಳಾಲನಾಡು ಎಂದು ಪೂರ್ವನಾಮ ಇದ್ದೇ ಇದೆ ಎಂದು, ಪಿ.ವಿ. ಕೃಷ್ಣಮೂರ್ತಿಯವರು ಹೇಳಿದ್ದಾರೆ.[೨೨] ಇದನ್ನೇ ಬಿ. ರಾಜಶೇಖರಪ್ಪನವರು ಹೇಳಿದ್ದಾರೆ. ಎಂ.ಎಸ್. ವೆಂಕಟರಮಣಪ್ಪನವರು ಕೋವಳಾಳಪುರದ ವ್ಯಾಪ್ತಿಗೆ ಸೇರಿದ್ದ ಬೈರಕೂರು, ಪುಂಗನೂರು ಸೇರಿ 'ನಿಗಿರಲಿ ಚೋಳಮಂಡಲ' ಎಂದು ಕರೆಯಲ್ಪಟ್ಟಿದ್ದಾರೆ. ಇದು ಕ್ರಮೇಣ ವ್ಯತ್ಯಾಸವಾಗುತ್ತ ಬೆಳವಣಿಗೆಯನ್ನು ಹೊಂದಿದೆ. ಇದಕ್ಕೆ ಮುಖ್ಯ ಕಾರಣ, ಭೌಗೋಳಿಕ ಲಕ್ಷಣಗಳು ಹಾಗೂ ಅನಕ್ಷರಸ್ಥ ಜನರು, ದ್ವಿಭಾಷೆ ಪ್ರದೇಶವೆನಿಸಿದೆ ಅಲ್ಲದೆ ತಮಿಳು ಭಾಷೆಯು ತೆಲುಗು ಕನ್ನಡ ಭಾಷೆಯಗಳ ನಡುವೆ ಪ್ರಭಾವ ಬೀರಿದೆ. ಇಷ್ಟಾಗಿಯೂ ಕೋಲಾರ ಎಂಬ ಹೆಸರಿನ ಬೆಳವಣಿಗೆಯಲ್ಲಿ ಒಂದು ಎರಡು ಪದಗಳಲ್ಲದೆ ಅನೇಕ ಪದಗಳಾಗಿ ಸುದೀರ್ಘ ಚರಿತ್ರೆಯನ್ನೇ ಹೊಂದಿದೆ.

ಭಾಷಾಶಾಸ್ತ್ರೀಯ ದೃಷ್ಟಿಯಿಂದ ಸ್ಥಳನಾಮದ ನಿಷ್ಪತ್ತಿಯ ವಿವೇಚನೆಯನ್ನು ಕೈಗೊಂಡು ಸ್ಥಳನಾಮಕ್ಕೆ ಸಂಬಂಧಿಸಿದ ವಿವರವನ್ನು ಗ್ರಹಿಸಿದ ಬಿ. ರಾಜಶೇಖರಪ್ಪನವರು ಕಾಲಕ್ಕೆ ಅನುಗುಣವಾಗಿ ವ್ಯತ್ಯಾಸ ಕಂಡುಹಿಡಿದು ಈ ಕೆಳಕಂಡಂತೆ ಒಂದು ಪಟ್ಟಿ ಮಾಡಿದ್ದಾರೆ.[೨೪] ಅದು:

ಕುವಲಾಲ ಕ್ರಿ.ಶ. ೫೭೦	ಕೋಲಾಲ ಕ್ರಿ.ಶ. ೯೬೭	ಕುವಲಾಲ ಕ್ರಿ.ಶ.೫ ಶತಮಾನ
ಕುವಳಾಲ ಕ್ರಿ.ಶ.೧೦೦೦	ಕೂವಳಲ ಕ್ರಿ.ಶ. ೭೫೦	ಕುವಳಾಲ ಕ್ರಿ.ಶ. ೧೦೧೯
ಕೊವಳಾಲ ಕ್ರಿ.ಶ. ೭೮೦	ಕುವಳಾಲ ಕ್ರಿ.ಶ. ೧೦೩೩	ಕೋಳಾಲ ಕ್ರಿ.ಶ. ೮೨೦
ಕೋಳಾಳ ಕ್ರಿ.ಶ. ೧೦೫೫	ಕೋವಳಾಲ ಕ್ರಿ.ಶ. ೮೫೬	ಕುವಳಾಳ ಕ್ರಿ.ಶ. ೧೦೬೦
ಕೋಳಾಲ ಕ್ರಿ.ಶ. ೮೯೦	ಕೊವಲಾಲ ಕ್ರಿ.ಶ.೧೧ ಶತಮಾನ	ಕೊಳಾಲ ಕ್ರಿ.ಶ. ೮೯೯
ಕುವಲಾಳ ಕ್ರಿ.ಶ. ೧೧೦೬	ಕೊವಳಾಲ ಕ್ರಿ.ಶ.ಸು. ೯೧೫	ಕುವಳಾಲ ಕ್ರಿ.ಶ. ೧೧೨೨
ಕೂವಳಾಲ ಕ್ರಿ.ಶ. ೯೩೦?	ಕೋಳಾಲ ಕ್ರಿ.ಶ. ೧೧೨೨	ಕೋಳಾಲ ಕ್ರಿ.ಶ. ೧೨೪೦
ಕುವಳಾಲ ಕ್ರಿ.ಶ. ೧೩	ಕೋಳಾಲ ಕ್ರಿ.ಶ. ೧೩೯೦	ಕೋಳಾಲ ಕ್ರಿ.ಶ. ೧೪೧೯
ಕೊಳಾಲ ಕ್ರಿ.ಶ. ೧೫೪೧	ಕೋಳಾಲ ಕ್ರಿ.ಶ. ೧೫೬೫	

ಈ ರೀತಿಯಾಗಿ ಕಾಲಕ್ರಮೇಣ ವ್ಯತ್ಯಾಸವಾಗುತ್ತ ಬಂದಿದೆ. ಪಿ.ವಿ. ಕೃಷ್ಣಮೂರ್ತಿಯವರು ಈ ಮಧ್ಯೆ, ಕೋಳಾಲನಾಡು, ಕೋಳಾಲಸೀಮೆ, ಕೋಳಾಲದೇಶ, ಕೋಳಾಲರಾಜಧಾನಿ, ಕೋವಲಪ್ರಾಂತ್ಯ ಎಂದಾಗಿರುವುದು ತಿಳಿಸಿದ್ದಾರೆ. ಮುಸ್ಲಿಂರು, ಬ್ರಿಟಿಷರ ಕಾಲಕ್ಕೆ ಕೋಲಾರ ಎಂಬುದಾಗಿ ಕರೆದು ಪ್ರಸ್ತುತದಲ್ಲಿ ಕೋಲಾರ ಜಿಲ್ಲೆ ಎಂದು ಕರೆದಿದ್ದಾರೆ. ಇದರಿಂದಾಗಿ ಕೋಲಾರ ಎಂಬ ಹೆಸರು ಅದರ ಚರಿತ್ರೆಯಷ್ಟೇ ಸುದೀರ್ಘ ಚಾರಿತ್ರಿಕ ವಿವರಣೆಯನ್ನು ಹೊಂದಿದೆ ಎಂದು ತಿಳಿಯಲಾಗುತ್ತದೆ.

* * *

ಸ್ಥಳನಾಮ ವಿವೇಚನೆಗೆ ಅನೇಕ ಲೇಖನಗಳು ಮತ್ತು ಕೃತಿಗಳು ಕಂಡುಬರುತ್ತವೆ. ಅವುಗಳಲ್ಲಿ ಮುಖ್ಯವಾಗಿ ಸೂರ್ಯನಾಥ ಕಾಮತರ 'ಇತಿಹಾಸ ದರ್ಶನ ಸಂಪುಟ ೧೦' ೧೯೯೫ರಲ್ಲಿ ಪಿ.ವಿ. ಕೃಷ್ಣಮೂರ್ತಿರವರ ಲೇಖನ, ಆರ್. ಗೋಪಾಲ್‌ರವರ 'ಕೋಲಾರ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ' ಎಂಬ ಕೃತಿಯಲ್ಲಿ ಜ್ಯೋತಿಬಾಯಿರವರ ಐತಿಹ್ಯಗಳು ಎಂಬ ಲೇಖನ ಹಾಗೂ ಬಿ. ರಾಜಶೇಖರಪ್ಪರವರ ಕೋಲಾರ ಸ್ಥಳನಾಮ ಎಂಬ ಲೇಖನಗಳು ಚರಿತ್ರೆ ಬೆಳವಣಿಗೆಯಲ್ಲಿ ಅದರ ಉಚ್ಚಾರಣೆಯ ಸೊಗಸನ್ನು ಗುರುತಿಸಿ ಹೇಳಿದ್ದಾರೆ. ದೇವರಾಜಯ್ಯನವರ ಸಿರಿನಂದಿ (೧೯೯೯) ಎಂಬ ಕೃತಿಯಲ್ಲಿ ಯು. ಗೋಪಾಲಕೃಷ್ಣರವರು ನೀಡಿರುವ ಕೋಲಾರ ಜಿಲ್ಲೆಯ ಸ್ಥಳನಾಮಗಳು ಅವಲೋಕನದಲ್ಲಿ ಪ್ರಕೃತಿಯ ಲಕ್ಷಣಗಳ ಹಿನ್ನೆಲೆಯಲ್ಲಿ ಮತ್ತು ಭಾಷೆ ಬೆಳವಣಿಗೆಯಲ್ಲಿ ಹಾಗೂ ಜನಾಂಗಕ್ಕೆ ಹೋಲಿಸುವುದರಲ್ಲಿ ಹೆಸರುಗಳು ಹುಟ್ಟಿರುವುದು ಗುರುತಿಸಿದ್ದಾರೆ. ಇದಲ್ಲದೆ ಗೆಜೆಟಿಯರಗಳು, ಪ್ರಾಚೀನ ಚರಿತ್ರೆ ಕೃತಿಗಳು ಸ್ಥಳನಾಮ ವಿವೇಚನೆಯನ್ನು ವ್ಯಕ್ತಪಡಿಸುತ್ತವೆ. ಆದರೆ ಯಾವುದು ಪರಿಪೂರ್ಣ ವಿವರಣೆ ಕೊಟ್ಟಿಲ್ಲವೆಂಬುದು ಮತ್ತು ಕೋಲಾರ ಎಂಬ ಹೆಸರು ವಿಶೇಷತೆ ಹೊಂದಿರುವುದು ಗಮನಾರ್ಹ ವಿಷಯವಾಗಿದೆ.

೨.೪. ರಾಜಕೀಯ ಚರಿತ್ರೆ

ಚರಿತ್ರೆ ಲೇಖನಶಾಸ್ತ್ರದಲ್ಲಿ ರಾಜಕೀಯ ಚರಿತ್ರೆಯ ಪ್ರಾಬಲ್ಯ ಇಂದಿಗೂ ಹೆಚ್ಚಾಗಿದೆ. ಪ್ರಸ್ತುತ ಅಧ್ಯಯನದ ಭಾಗವು ಕೋಲಾರ ಪ್ರದೇಶದಲ್ಲಿ ಆಡಳಿತ ಮಾಡಿದ ಪ್ರಾಚೀನ ರಾಜವಂಶಗಳು ಮತ್ತು ಅವುಗಳ ವಿಸ್ತಾರ, ಪ್ರಾಮುಖ್ಯತೆಗಳನ್ನು ವಿವಿಧ ಕೃತಿಗಳು, ಲೇಖನಗಳನ್ನು ಅವಲೋಕಿಸುವುದರ ಮೂಲಕ ಸೈದ್ಧಾಂತಿಕವಾಗಿ ವಿವರಿಸಲು ಯತ್ನಿಸಿದೆ. ಈ ಕೋಲಾರ ಪ್ರದೇಶದಲ್ಲಿ ಆಡಳಿತ ಮಾಡಿದ ಪ್ರಾಚೀನ ರಾಜವಂಶಗಳಲ್ಲಿ ಬಾಣರು, ಗಂಗರು, ರಾಷ್ಟ್ರಕೂಟರು, ಚಾಲುಕ್ಯರು, ಪಲ್ಲವರು, ನೊಳಂಬರು, ವೈಡುಂಬರು ಹಾಗೂ ಚೋಳರ ರಾಜವಂಶಗಳು ಮೊದಲಾದವುಗಳು ಪ್ರಮುಖವಾಗಿ ಕಂಡುಬರುತ್ತವೆ. ಅದೇ ರೀತಿಯಾಗಿ ಮಧ್ಯಕಾಲೀನ ಚರಿತ್ರೆಯಲ್ಲಿ ಹೊಯ್ಸಳರು, ವಿಜಯನಗರ ಸಾಮ್ರಾಜ್ಯ, ವಿಜಾಪುರದ ಸುಲ್ತಾನರು, ಮೊಗಲರು, ಮರಾಠರು ಹಾಗೂ ಪಾಳೆಯಗಾರರು ಮೊದಲಾದ ರಾಜವಂಶಗಳು ಕಂಡುಬರುತ್ತವೆ.

ಒಂದು ಪ್ರದೇಶದ ಚರಿತ್ರೆ ಎಂದರೆ ಪ್ರಧಾನವಾಗಿ ಕಂಡುಬರುವುದು ರಾಜಕೀಯ ಚರಿತ್ರೆ. ಇದು ಆ ಪ್ರದೇಶದ ಹುಟ್ಟು ಬೆಳವಣಿಗೆಯನ್ನು ವಿವೇಚಿಸುತ್ತದೆ. ಇದೇ ರೀತಿಯಾಗಿ ಕೋಲಾರ ಪ್ರದೇಶದ ಚರಿತ್ರೆಯನ್ನು ಅವಲೋಕಿಸಿದಾಗ ಗಮನಾರ್ಹ ರಾಜಕೀಯ ಚರಿತ್ರೆ ಕಂಡುಬರುತ್ತದೆ. ಅಲ್ಲದೆ ಇದರಿಂದ ವೈಶಿಷ್ಟ್ಯತೆಯನ್ನು ಪಡೆದುಕೊಂಡಿದೆ. ಅಂದರೆ ಅದು ಕೇವಲ ಸ್ಥಳೀಯ ರಾಜಕುಟುಂಬಗಳನ್ನು ವಿವೇಚನೆಗೆ ತೆಗೆದುಕೊಳ್ಳುವುದು ಅಲ್ಲದೆ ಅದರ ಸುತ್ತಲಿನ ರಾಜವಂಶಗಳನ್ನು ತನ್ನದಾಗಿಸಿಕೊಂಡು ಅದರ ಚರಿತ್ರೆ ಬೆಳೆಸಿಕೊಳ್ಳುವುದರಲ್ಲಿ ಯಶಸ್ಸು ಕಂಡಿದೆ. ಇಂತಹ ಚರಿತ್ರೆಯು ಪ್ರಾಥಮಿಕವಾಗಿ ಬಾಣ ಅರಸರ ಆಡಳಿತದಿಂದ ಪ್ರಾರಂಭವಾಗಿ, ಗಂಗರಾಜರಿಂದ ರಾಜಧಾನಿಯಾಗಿಸಿಕೊಂಡು ನಂತರ ನಾಡು, ಸೀಮೆ

ಹಾಗೂ ಉಪರಾಜಧಾನಿಯಾಗಿ ರಾಜಕೀಯ ಚರಿತ್ರೆಯಲ್ಲಿ ಬೆಳವಣಿಗೆಗೊಂಡಿದೆ. ಇದರಿಂದಾಗಿ ಪ್ರಸ್ತುತ ಈ ಕೆಳಕಂಡಂತೆ ಬಾಣ ಅರಸರು, ಗಂಗರು, ಪಲ್ಲವರು, ಚಾಲುಕ್ಯರು, ನೊಳಂಬರು, ವೈಡುಂಬರು, ಚೋಳರು ಎಂಬುದಾಗಿ ಕೋಲಾರ ಪ್ರಾಚೀನ ಚರಿತ್ರೆಯಲ್ಲಿ ಕ್ರಮವಾಗಿ ವಿವರಿಸಲು ಕಿರುಯತ್ನ ಮಾಡಿದೆ.

ಬಾಣ ಅರಸರು

ಕೋಲಾರ ಪ್ರಾಚೀನ ಚರಿತ್ರೆಯ ಪ್ರಾರಂಭದಲ್ಲಿ ಬಾಣ ಅರಸರ ಆಡಳಿತ ಕಂಡುಬಂದು. ಕೋಲಾರ ಚರಿತ್ರೆಗೆ ಬುನಾದಿ ಹಾಕಲ್ಪಟ್ಟಿದೆ. ಈ ವಿಷಯದ ಅನೇಕ ವಿದ್ವಾಂಸರು ಕೃತಿಗಳು ಬರೆದಿದ್ದಾರೆ. ಇವು ಕೇವಲ ಕನ್ನಡದಲ್ಲಿ ಅಲ್ಲದೆ ತೆಲುಗು, ತಮಿಳಿನಲ್ಲಿಯು ಬರೆದಿದ್ದಾರೆ. ನಮ್ಮ ಅಧ್ಯಯನಕ್ಕೆ ಬಾಣ ಅರಸರ ಕುರಿತಾಗಿ ಅನೇಕ ಕೃತಿಗಳು ಕಂಡುಬಂದುವಾದರೂ ಕೋಲಾರ ಪ್ರದೇಶ ಚರಿತ್ರೆಗೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ ಬರೆದಿರುವ ಕೃತಿಗಳು ಇಲ್ಲ. ಆದರೂ ದೊರೆಯುವ ಕೃತಿಗಳ ಮೂಲಕ ಬಾಣರ ಕೋಲಾರ ಪ್ರದೇಶದಲ್ಲಿ ಆಡಳಿತ ನಡೆಸಿರುವುದರ ಬಗ್ಗೆ ತಿಳಿಯಲು ಸಾಧ್ಯವಾಗಿದೆ. ಪ್ರಾಥಮಿಕವಾಗಿ ಬಿ.ಎಲ್.ರೈಸರು ಸಂಪಾದಿಸಿರುವ 'ಕೋಲಾರ ಜಿಲ್ಲಾ ಶಾಸನಗಳ ಸಂಪುಟ-೧೦', ಎಂ. ಶೇಷಾದ್ರಿ ಅವರು ಸಂಪಾದನ ಕೃತಿಯಾದ 'ಕರ್ನಾಟಕ ಶಾಸನಗಳ ಸಂಪುಟ XVII' ಮುಂತಾದವು ಸಹಾಯಕವಾಗಿವೆ. ಬಿ.ಎಲ್.ರೈಸರ ಕೋಲಾರ ಜಿಲ್ಲೆಯ ದೊರೆತಿರುವ ಸುಮಾರು ೧೩೪೫ ಶಾಸನಗಳನ್ನು ಸಂಗ್ರಹಿಸಿ, ಅವುಗಳನ್ನು ಕಾಲಾನುಕ್ರಮವಾಗಿ ಮತ್ತು ವಂಶಾವಳಿಗಳನ್ನು ಗುರುತಿಸುವುದರಿಂದ ಅದರಲ್ಲಿ ಬಾಣ ಅರಸರ ಆಡಳಿತವು ದೃಢಪಡಿಸಲು ಸಾಧ್ಯವಾಗಿದೆ. ಅದೇ ರೀತಿ ಎಂ. ಶೇಷಾದ್ರಿಯವರು ಬಾಣರ ಆಡಳಿತದ ವಿಷಯವಾಗಿ ಕಾಲಾನುಕ್ರಮವನ್ನು ತಿಳಿಸಿದ್ದಾರೆ. ಇವುಗಳ ಹಿನ್ನೆಲೆಯಲ್ಲಿ ಕೆ. ಅಭಿಶಂಕರ ಅವರು ೧೯೬೮ರಲ್ಲಿ ಕೋಲಾರ ಜಿಲ್ಲಾ ಗೆಜೆಟಿಯರನ್ನು ಸಂಪಾದಿಸಿದ್ದಾರೆ. ಇದರಿಂದಾಗಿ ಕೋಲಾರ ಚರಿತ್ರೆ ಬೆಳವಣಿಗೆ ಆರ್ಥಿಕ ಮತ್ತು ಸಾಮಾಜಿಕ ಅಂಶಗಳನ್ನು ದಾಖಲೆಗಳ ಮೂಲಕ ತಿಳಿಯಲು ಸಾಧ್ಯವಾಗಿದೆ. ಮತ್ತು ಇದರಿಂದಾಗಿ ಕೋಲಾರದ ಚರಿತ್ರೆ ಬಾಣ ಅರಸರಿಂದ ಪ್ರಾರಂಭವಾಗಿರುವುದು ತಿಳಿದುಬರುತ್ತದೆ. ಇವುಗಳಲ್ಲದೆ ಬಿ.ಎಂ. ಶ್ರೀಕಂಠಯ್ಯನವರು 'ಕನ್ನಡ ನಾಡಿನ ಚರಿತ್ರೆ' ಹಾಗೂ ಶ್ರೀಪಾದ ರಾಮಚಂದ್ರ ದೇಶಪಾಂಡೆಯವರು 'ಕರ್ನಾಟಕ ಸಾಮ್ರಾಜ್ಯ' (೧೯೨೦) ಕೃತಿಗಳನ್ನು ಬರೆದಿದ್ದಾರೆ. ಶ್ರೀಪಾದ ರಾಮಚಂದ್ರ ದೇಶಪಾಂಡೆಯವರು ಬಾಣರ ಮೂಲದ ಬಗ್ಗೆ ಚರ್ಚಿಸಿದ್ದಾರೆ. ಇದರಿಂದ ಬಾಣರ ಮೂಲ ಉತ್ತರಭಾರತವಾಗಿದ್ದು, ನಂತರ, ಆಂಧ್ರದಲ್ಲಿ ನೆಲೆನಿಂತು ರಾಜ್ಯ ಕಟ್ಟಿ ಕೋಲಾರ ಪ್ರದೇಶದವರೆಗೆ ವಿಸ್ತರಿಸಿರುವುದು ತಿಳಿದುಬರುತ್ತದೆ. ಇದನ್ನೇ ಬಿ.ಎಂ. ಶ್ರೀಕಂಠಯ್ಯ, ಆರ್.ಆರ್. ದಿವಾಕರ (ಕರ್ನಾಟಕ ಪರಂಪರೆ-೧) ರವರು ಹೇಳಿದ್ದಾರೆ. ಎಂ.ವಿ. ಕೃಷ್ಣರಾವರವರು ಇನ್ನೊಂದು ಹೆಜ್ಜೆ ಮುಂದಾಗಿ ಪುರಾಣಗಳ ಜತೆ ಸೇರಿಸಿದ್ದಾರೆ. ಅಂದರೆ, ಬಲಿಚಕ್ರವರ್ತಿ ವಿಲೋಚನ ಮಗನಾಗಿದ್ದ. ಪ್ರಹ್ಲಾದನ ಮೊಮ್ಮಗನು ಎಂದು ಹೇಳಿದ್ದಾರೆ. ಇದನ್ನು ಕ್ಯಾಪ್ಟನ್ ಕಾರವನರು "ಏಳು ಪಗಡಗಳು" ಎಂಬ ಕೃತಿಯಲ್ಲಿ ಸಮರ್ಥಿಸಿದ್ದಾರೆ. ಇದಷ್ಟೇ ವಿಶೇಷವಾದ ಎಂ.ಜಿ. ರಾಮರಾವ್‌ರವರು "ಪ್ರಾಚೀನ ಕರ್ನಾಟಕ ಮತ್ತು ಆಂಧ್ರ ಸಂಬಂಧ" ಎಂಬ ಕೃತಿಯನ್ನು ಆಂಗ್ಲ ಭಾಷೆಯಲ್ಲಿ ಪ್ರಕಟಿಸಿದ್ದಾರೆ. ಇದು ಕೋಲಾರದಲ್ಲಿ ಬಾಣರ ಆಡಳಿತ ವಿಸ್ತರಣೆಯ ಮೂಲಕ ಸಂಬಂಧಕ್ಕೆ ನಾಂದಿ ಉಂಟಾಗಿರುವುದು ವ್ಯಕ್ತವಾಗಿದೆ. ಬಾಣರು

ನಿರ್ಮಿಸಿರುವ ದೇವಾಲಯಗಳು, ಹಳ್ಳಿಗಳು ಹಾಗೂ ಅವರ ಸಂಸ್ಕೃತಿ ಬೆಳವಣಿಗೆ ಇಂದಿಗೂ ಸಹ ಕೋಲಾರ ಪ್ರದೇಶದಲ್ಲಿ ಪುರಾವೆಗಳಾಗಿ ಉಳಿದಿವೆ.

ಉದಾಹರಣೆಗೆ ವಿಜಯಾದಿತ್ಯ ಎಂಬುವನು ಸ್ಥಾಪಿಸಿದ 'ವಿಜಯಾದಿತ್ಯ ಮಂಗಳ' ಎಂಬ ಊರು ಇಂದು 'ಬೇತಮಂಗಳ'ವಾಗಿದೆ ಎಂದು ಎಚ್.ಎಂ. ನಾಯಕರವರ ಸಂಪಾದನ ಕೃತಿಯಾದ 'ಕನ್ನಡ ವಿಶ್ವಕೋಶ ಸಂಪುಟ-೨- ರಿಂದ ತಿಳಿದುಬರುತ್ತದೆ. ಮೊದಲಿಗೆ ಬನವಾಸಿ ಕದಂಬರ ಅಧೀನರಾಗಿದ್ದು ರಾಜಕೀಯ ಸ್ಥಿತಿಗತಿಗಳು ಬದಲಾದಂತೆಲ್ಲ ಬಾಣರು ತಮ್ಮ ಪ್ರಭುತ್ವವನ್ನು ಬದಲಾಯಿಸಿಕೊಂಡು ಏಳಿಗೆಗೆ ಬಂದರು ಎಂದು ಆರ್.ಆರ್.ದಿವಾಕರರವರ ಕೃತಿ 'ಕರ್ನಾಟಕ ಪರಂಪರೆ-೧'ರಲ್ಲಿ ತಿಳಿಸಿದೆ. ಇದು ಅದರ ಚರಿತ್ರೆಯ ಬೆಳವಣಿಗೆಯನ್ನು ಗುರುತಿಸುವಲ್ಲಿ ನಿಖರತೆಯನ್ನು ಹೇಳುತ್ತದೆ. ಕದಂಬರು ಕೋಲಾರ ಪ್ರದೇಶದಲ್ಲಿ ಆಡಳಿತ ನಡೆಸಿರುವುದು ತಿಳಿದಿಲ್ಲ.

ಭಾರತದ ರಾಜಕೀಯ ಚರಿತ್ರೆ, ಕರ್ನಾಟಕದ ರಾಜಕೀಯ ಚರಿತ್ರೆ ಮೌರ್ಯರು ಮತ್ತು ಶಾತವಾಹನರುಗಳಿಂದ ಪ್ರಾರಂಭವಾಗಿರುವಂತೆ, ಕೋಲಾರ ಪ್ರದೇಶದಲ್ಲಿ ಕಂಡುಬಂದಿಲ್ಲದಿರುವುದು ವ್ಯಕ್ತವಾಗುತ್ತದೆ. ಹಾಗೂ ಮೌರ್ಯರು, ಶಾತವಾಹನರ ಪುರಾವೆಗಳು ಕೋಲಾರ ಪ್ರದೇಶದಲ್ಲಿ ದೊರೆತಿಲ್ಲದಿರುವುದು ಮತ್ತು ಬಾಣರ ಆಡಳಿತದ ಅಂತಹ ಚಾರಿತ್ರಿಕ ಅರ್ಹ ಪುರಾವೆಗಳು ದೊರೆತಿರುವುದು ಗಮನಾರ್ಹ ವಿಷಯವಾಗಿದೆ.

ಆದರೂ, ಬಾಣರ ರಾಜಕೀಯ ಪ್ರಾರಂಭ ಹಾಗೂ ರಾಜಕೀಯ ವಿಸ್ತರಣೆಯಾದಾಗಿನಿಂದ ಪ್ರಾರಂಭವಾಯಿತು ಎಂಬುವುದಕ್ಕೆ ಕಾಲದ ನಿರ್ಧಾರ ದೊರೆತಿಲ್ಲ. ದೊರೆತ ಆಕರಗಳಿಂದ ಬಾಣರು ಕ್ರಿ.ಶ. ೨ನೇ ಶತಮಾನದ ಹೊತ್ತಿಗೆ ಕೋಲಾರದ ಪೂರ್ವಭಾಗಕ್ಕೆ ಇರುವ ಆಂಧ್ರಪ್ರದೇಶದ ಮಹಾಬಲಿಪುರಂ ಎಂಬಲ್ಲಿ ರಾಜಧಾನಿ ಮಾಡಿಕೊಂಡು ಆಡಳಿತ ಮಾಡುತ್ತಿದ್ದರು ಎಂದು ಅವರ ಶಾಸನಗಳು (ಸಂಖ್ಯೆ ೨೭) ಮತ್ತು ತಮಿಳು ಕೃತಿಗಳಿಂದ ತಿಳಿದುಬರುತ್ತದೆ ಎಂದು ಶ್ರೀಪಾದರಾಮಚಂದ್ರ ದೇಶಪಾಂಡೆ, ಆರ್.ಆರ್.ದಿವಾಕರ, ಎಂ.ವಿ. ಕೃಷ್ಣರವರು ಹೇಳಿದ್ದಾರೆ.[೨೫] ಕಾಲಕ್ರಮೇಣ ಬಾಣರ ರಾಜ್ಯವು ಕೋಲಾರ ಪ್ರದೇಶದ ಮುಳಬಾಗಿಲು, ಶ್ರೀನಿವಾಸಪುರ, ಬಾಗೇಪಲ್ಲಿ, ಕೋಲಾರ ತಾಲ್ಲೂಕ ಪ್ರದೇಶದವರೆಗೆ ವಿಸ್ತರಿಸಿಕೊಂಡಿದೆ ಎಂದು ಅವರ ಶಾಸನಗಳಿಂದ ತಿಳಿದುಬರುತ್ತದೆಂದು ಗೆಜೆಟಿಯರನಲ್ಲಿ ಹೇಳಿದೆ.[೨೬]

ಇದರ ಹಿನ್ನೆಲೆಯನ್ನು ಗುರುತಿಸುವಾಗ ಯಾವುದೇ ಒಂದು ಪ್ರದೇಶದ ಚರಿತ್ರೆ ಬೆಳವಣಿಗೆ ಉಂಟಾಗಲು ಆ ಪ್ರದೇಶದ ಭೌಗೋಳಿಕ ಲಕ್ಷಣಗಳಲ್ಲಿ ಪ್ರಾಮುಖ್ಯತೆ ಇದೆ. ಮತ್ತು ಪ್ರಾರಂಭದಲ್ಲಿ ಸ್ಥಳೀಯ ರಾಜಕೀಯ ಚರಿತ್ರೆ ಬೆಳವಣಿಗೆಯು ಐತಿಹ್ಯಗಳು ಬಿಟ್ಟು ಉಂಟಾಗದೆ ಇರುವುದು ಗಮನಾರ್ಹವಾಗಿದೆ. ಆವನಿ ಕೋಲಾರದ ಶತಶೃಂಗ ಪರ್ವತ, ಕೈವಾರ, ಸಾದಲಿ, ಗೌರಿಬಿದನೂರು, ವಿದುರಾಶ್ವತ್ಥ ಮುಂತಾದವು ಪುರಾಣಗಳ ಕಾಲದಿಂದಲೂ ಜನರ ವಾಸಸ್ಥಳಗಳಾಗಿವೆ. ಆದರೂ ಆ ಪ್ರದೇಶದ ರಾಜವಂಶಗಳ ಪ್ರಾರಂಭಿಕವಾಗಿ ಏಕೆ ಕಾಣಬರಲಿಲ್ಲ? ಒಂದು ವೇಳೆ ಇದ್ದರೆ ಅಂತಹ ರಾಜರು ಯಾರು ಎಂಬುದನ್ನು ಇನ್ನು ಸಂಶೋಧನೆ ನಡೆಸಬೇಕಾಗಿದೆ.

ಹೀಗಾಗಿ ಕೋಲಾರದ ಪ್ರದೇಶವು ಪ್ರಾರಂಭದ ಚರಿತ್ರೆಯಲ್ಲಿನ ಜಿಜ್ಞಾಸೆಗಳಿಗೆ ಒಳಗಾಗಿದೆ. ಅಂದರೆ ಅದು ಅನ್ಯ ರಾಜ್ಯದ ರಾಜ್ಯಾಡಳಿತದ ಪ್ರಾರಂಭವಾಗಿದೆ. ಇದು ಸ್ಥಳೀಯ ಜನರ ಅಸಮರ್ಥತೆ, ಅನೈತಿಕ ಸೂಚನೆಯನ್ನು ಕೊಡುತ್ತದೆ. ಅಲ್ಲದೆ, ಪ್ರಬಲ ರಾಜ್ಯವು ನೆರೆಯ ಪ್ರದೇಶಗಳನ್ನು ಕಬಳಿಸುತ್ತವೆ ಎಂದು ಮತ್ತು ಕೌಟಿಲ್ಯನ ರಾಜನೀತಿಯ ಪ್ರಕಾರ ಅನೈತಿಕ ಬಿಡಾರ ಕೋಲಾರ ಪ್ರದೇಶದಲ್ಲಿ ರಾಜಕೀಯ ಮೊಳಕೆಯನ್ನು ಬಿತ್ತಿದ ಘನತೆ ಬಾಣರಿಗೆ ಸಲ್ಲುತ್ತದೆ. ಆ ಮೂಲಕ ಕೋಲಾರ ಪ್ರದೇಶದ ರಾಜಕೀಯ ಪ್ರಾರಂಭವಾಗಿ ಪ್ರಮುಖ್ಯತೆ ಗಳಿಸಿದೆ.

ಎನ್. ಲಕ್ಷ್ಮೀನಾರಾಯಣರಾಯರು ಬಾಣರ ಐತಿಹ್ಯವು ಪ್ರತಿಪಾದಿಸಿದ್ದಾರೆ.[೨೭] ಮಹಾವಾಲಿ ಎಂಬ ರಾಜನು ಪ್ರಾಚೀನ ಕಾಲದಲ್ಲಿ ಪ್ರಸಿದ್ಧ ದೊರೆ. ಶಿವನ ಭಕ್ತನಾದ ಮಹಾವಾಲಿ ವರಸಿದ್ಧಿ ಪಡೆದು ದೇವಾದೇವತೆಗಳಲ್ಲಿ ದ್ವಿಗ್ವಿಜಯನಾಗಿದ್ದ. ಅಂತೆಯೇ ದಾನಿಯು ಆಗಿದ್ದನು. ಇದನ್ನು ಗಮನಿಸಿದ ಶ್ರೀವಿಷ್ಣು ವಾಮನ ಅವತಾರ ತಾಳಿ ಮಹಾವಾಲಿಯಲ್ಲಿಗೆ ಬಂದು ಮೂರು ಹೆಜ್ಜೆ ಭೂಮಿ ಕೇಳಿ ಮಹಾವಾಲಿಯನ್ನು ಪಾತಾಳಕ್ಕೆ ತಳ್ಳಿದ ಅಂದಿನಿಂದ ಅವರ ವಂಶಕ್ಕೆ 'ಮಹಾಬಲಿ ವಂಶ' ಎಂದು ಹೆಸರಾಗಿದೆ. ಇದನ್ನೇ ಗೆಜೆಟಿಯರನಲ್ಲಿ ಹೇಳಿದೆ. ಆದರೆ ಎನ್. ಲಕ್ಷ್ಮೀನಾರಾಯಣರಾಯರು ಇದರ ತಿರುಳು ಪಾತಾಳವೆಂದರೆ ದಕ್ಷಿಣ ಪಥ ಎಂದು ವಿವರಿಸಿದ್ದಾರೆ. ಅಂದರೆ ಮಹಾಬಲಿಚಕ್ರವರ್ತಿಯು ದಕ್ಷಿಣ ಪಥಕ್ಕೆ ಬಂದು ರಾಜ್ಯ ವಿಸ್ತರಿಸಿದನು ಎಂದರ್ಥ. ಇಷ್ಟಾದರೂ ಇಂದಿಗೂ ಆಂಧ್ರ ಮತ್ತು ಕೋಲಾರ ಪ್ರದೇಶಗಳಲ್ಲಿ ಮಹಾವಾಲಿಯ ಬಲಿದಾನದ ಜ್ಞಾಪಕಾರ್ಥವಾಗಿ ಬಲಿಪಾಡ್ಯಮಿ ಎಂಬ ಹಬ್ಬವನ್ನು ಆಚರಣೆ ಮಾಡುತ್ತಿರುವುದು ಸಂಸ್ಕೃತಿ ಪುರಾವೆಯು ಚರಿತ್ರೆಯನ್ನು ಪ್ರತಿಬಿಂಬಿಸುತ್ತದೆ.

ಬಾಣರ ರಾಜ್ಯವನ್ನು ಆಂಧ್ರಮಂಡಲವಾಗಿದ್ದು ೧೨೦೦೦ ಗ್ರಾಮಗಳನ್ನು ಒಳಗೊಂಡು, ಕಪ್ಪುಬಣ್ಣದ ರಾಜ್ಯಧ್ವಜ ಹಾಗೂ ವೃಷಭ ರಾಜ್ಯಲಾಂಛನವೊಂದಿದೆ ಎಂದು ಗೆಜೆಟಿಯರನಲ್ಲಿ ತಿಳಿಸಿದೆ. ಇದನ್ನೇ ಎನ್.ಲಕ್ಷ್ಮೀನಾರಾಯಣರಾಯರು, ಬಿ.ಎಂ.ಶ್ರೀಕಂಠಯ್ಯ, ಎ.ಬಿ.ಬಸವರಾಜುರವರು ಹೇಳಿದ್ದಾರೆ. ಅವನಿ, ನಂದಿಕ್ಷೇತ್ರ, ಮುಳಬಾಗಿಲು ಮುಂತಾದ ಕಡೆ ಬಾಣರ ದೇವಾಲಯಗಳು ಕಂಡುಬಂದಿದ್ದು ಅಲ್ಲದೆ, ಅವರ ಶಾಸನಗಳಾದ ಬಾಣರಾಜ, ಬಾಣಾಧಿರಾಜ, ಜಯನಂದಿವರ್ಮ, ವಿಜಯಾದಿತ್ಯ, ಜಗದೇಕಮಲ್ಲ, ಬಾಣ ವಿಜಯಾದಿತ್ಯ, ವಿಕ್ರಮಾದಿತ್ಯ ಮುಂತಾದ ಪ್ರಮುಖ ಬಾಣರಾಜರ ಉಲ್ಲೇಖವಿದೆ ಎಂದು ಎ.ಬಿ. ಬಸವರಾಜರವರು 'ಹೊಂಗಿರಣ' ಕೃತಿಯಲ್ಲಿನ ಕೆ.ಎಲ್. ರಾಜಶೇಖರರವರ ಲೇಖನದಿಂದ ವ್ಯಕ್ತವಾಗುತ್ತದೆ.[೨೮] 'ಕರ್ನಾಟಕ ಪರಂಪರೆ ಸಂಪುಟ ೧'ರಲ್ಲಿ ಬಾಣರ ವಂಶಾವಳಿಯನ್ನು ಕ್ರಮಾನುಗತವಾಗಿ ಈ ಕೆಳಗಿನಂತೆ ತಿಳಿಸಲು ಪ್ರಯತ್ನಿಸಿದ್ದಾರೆ.[೨೯]

ಮಹಾಬಲಿ, ಬಾಣಾಧಿರಾಜ ನಂದಿವರ್ಮ, ಜಯನಂದಿವರ್ಮ, ಮೊದಲನೆ ವಿಜಯಾದಿತ್ಯ ಮಹಾಬಲಿ (ಕ್ರಿ.ಶ. ೭೯೦-೮೩೫), ಮಲ್ಲದೇವ ಜಗದೇಕ ಮಲ್ಲ (ಕ್ರಿ.ಶ. ೮೩೫-೮೫೦), ಬಾಣ ವಿದ್ಯಾಧರ ವಿಕ್ರಮಾದಿತ್ಯ, ಜಯಯೇರು ಬಾಣ (ಕ್ರಿ.ಶ. ೮೫೦-೮೯೫), ೨ನೇ ವಿಜಯಾದಿತ್ಯ ಪ್ರಭು ಮೇರುದೇವ (ಕ್ರಿ.ಶ. ೮೯೫-೯೧೦), ಪ್ರಭುಮೇರು (ಚಿಕ್ಕವಯಸ್ಸಿನಲ್ಲಿ ಸತ್ತನು), ೨ನೇ ವಿಕ್ರಮಾದಿತ್ಯ

ಮಹಾಬಲಿಬಾಣ (ಕ್ರಿ.ಶ. ೯೧೦-೯೧೬), ೨ನೇ ವಿಜಯಾದಿತ್ಯ (೯೧೬?), ವಿಜಯಾಬಾಹು, ೨ನೇ ವಿಕ್ರಮಾದಿತ್ಯ (೯೪೯?), ಸಂಬುಯ (ಕ್ರಿ.ಶ. ೯೧೬)

ಹೀಗೆ ಬಾಣರ ವಂಶಾವಳಿಯು ಕ್ರಿ.ಶ. ಆರಂಭದಿಂದ ೧೦ನೇ ಶತಮಾನದವರೆಗೆ ಕಂಡುಬರುತ್ತದೆ. ಆದರೆ, ಪ್ರಾರಂಭದಲ್ಲಿ ಮೊದಲನೆ ವಿಜಯಾದಿತ್ಯ ಮಹಾವಾಲಿಯವರೆಗೆ ಕಾಲ ನಿರ್ಣಯ ತಿಳಿದುಬಂದಿಲ್ಲದಲ್ಲಿಗೆ, ಕೋಲಾರ ಪ್ರದೇಶದಲ್ಲಿ ಪ್ರಾರಂಭದ ರಾಜರ ಆಡಳಿತದ ಬಗ್ಗೆ ನಿಕರವಾದ ಆಧಾರಗಳಿಲ್ಲ ಎಂಬುದು ತಿಳಿದುಬಂದಿದೆ ಎಂದು ಎಂ.ವಿ. ಕೃಷ್ಣರಾವರವರು ಹೇಳಿದ್ದಾರೆ. ಇದನ್ನೇ ಶ್ರೀಪಾದರಾಮಚಂದ್ರದೇಶಪಾಂಡೆ, ಲಕ್ಷ್ಮೀನಾರಾಯಣರಾಯರು, ಕೆ. ಅಭಿಶಂಕರ, ಕೆ.ಎಲ್. ರಾಜಶೇಖರರವರು ಹೇಳಿದ್ದಾರೆ. ಹೀಗಿದ್ದರೂ ಬಾಣರು ಕೋಲಾರದಲ್ಲಿ ಯಾವ ರೀತಿ ಆಡಳಿತ ಮಾಡಿದ್ದಾರೆ ಎಂಬುದು ತಿಳಿದಿಲ್ಲ. ಆದರೆ ಅವರ ಸಾಂಸ್ಕೃತಿಕ ಕಾರ್ಯಗಳು ಮಾಡಿರುವುದು ಕೋಲಾರ ಪ್ರದೇಶಾದದ್ಯಾಂತ ಕಂಡುಬರುತ್ತದೆ. ಮಾಲೂರು ಅವರು ಪ್ರಮುಖ ರಾಜಕೀಯ ಕೇಂದ್ರವಾಗಿದ್ದು, ಬಾಣರ ರಾಣಿ ರತ್ನಾವಳಿ 'ನಂದಿಯ ಶಿವಾಲಯ' ಎಂಬ ದೇವಸ್ಥಾನವನ್ನು ಕಟ್ಟಿಸಿದರು ಎಂದು ಗೆಜೆಟಿಯರನಲ್ಲಿ ತಿಳಿಸಿದೆ. ಇದು ಕ್ರಿ.ಶ. ೮೦೦ರಲ್ಲಿ ಬಾಣ ವಿದ್ಯಾಧರನ ಶಾಸನವು ತಿಳಿಸಿದೆ. ಇದನ್ನು ಶ್ರೀಪಾದ ರಾಮಚಂದ್ರ ದೇಶಪಾಂಡೆಯವರು ಹೇಳಿದ್ದಾರೆ.[೩೦]

ಕ್ರಿ.ಶ. ೪ನೇ ಶತಮಾನದ ಹೊತ್ತಿಗೆ ಗಂಗರ ಪ್ರಬಲತೆಗಳಿಸಿ ಬಾಣರ ಸಮಕಾಲೀನರಾಗಿದ್ದಾರೆ. ಅಲ್ಲದೆ ರಾಷ್ಟ್ರಕೂಟರು ೮ನೇ ಶತಮಾನದ ಹೊತ್ತಿಗೆ ಪ್ರಬಲರಾಗಿ ಕಂಡುಬರುತ್ತದೆ. ಇದರಿಂದ ಬಾಣರ ಪ್ರಬಲತೆ ಹೆಚ್ಚಾಗಲು ಸಾಧ್ಯವಾಗಿಲ್ಲ ಮತ್ತು ಇವರು ರಾಷ್ಟ್ರಕೂಟರೊಂದಿಗೆ ಸಂಬಂಧ ಬೆಳೆಸಿದ್ದು ೨ನೇ ಗೋವಿಂದನ ಸಂಬಂಧವಾಗಿ ತಿಳಿಸುತ್ತದೆ.

ಕ್ರಿ.ಶ. ೮೭೪ರಲ್ಲಿ ವೈಡುಂಬರು ಹಾಗೂ ನೊಳಂಬರು ಪ್ರಬಲತೆಗೆ ಬಂದರು ಎಂದು ಗೆಜೆಟಿಯರನಲ್ಲಿ ತಿಳಿಸಿದೆ. ಗಂಗರು ಬಾಣರನ್ನು ನಾಶ ಮಾಡುವಲ್ಲಿ ಯತ್ನಿಸಿದರು. ಕೊಂಗಣಿವರ್ಮನು ಈ ಕಾರ್ಯದಲ್ಲಿ ನಿರತನಾಗಿದ್ದನು. ಹೀಗಾಗಿ ಹತ್ತನೇ ಶತಮಾನದ ಹೊತ್ತಿಗೆ ಬಾಣರ ಆಡಳಿತ ಇತಿಹಾಸದಿಂದ ನಿರ್ಗಮವಾಗುತ್ತವೆಂದು ಶ್ರೀಪಾದ ರಾಮಚಂದ್ರ ದೇಶಪಾಂಡೆಯವರು ಹೇಳಿದ್ದಾರೆ. ಗಂಗರ ಆಕ್ರಮಣದಿಂದ ಪರಾಗತರಾದರು ಅವರು ಇತರೆ ರಾಜವಂಶಗಳಲ್ಲಿ ಸೇರಿಕೊಂಡು ಸಣ್ಣಪುಟ್ಟ ಅಧಿಕಾರಿಗಳಾಗಿ ಮುಂದುವರೆದಿರುವುದು ತಿಳಿದುಬರುತ್ತದೆ. ಇದನ್ನು ಆರ್.ಆರ್. ದಿವಾಕರ ಅವರ ಸಂಪಾದನ ಕೃತಿಯಾದ 'ಕರ್ನಾಟಕ ಪರಂಪರೆ-೧' ಎಂಬುದರಿಂದ ತಿಳಿದುಬರುತ್ತದೆ.[೩೧] ಈ ಎಲ್ಲದರ ಹಿನ್ನೆಲೆಯಲ್ಲಿ ಕೋಲಾರ ಪ್ರದೇಶದ ಚರಿತ್ರೆಗೆ ವೈಶಿಷ್ಟ್ಯ ಕಂಡುಬಂದಿರುವುದು ಗಮನಾರ್ಹ ವಿಷಯವಾಗಿದೆ.

ಹೀಗಾಗಿ ಕೋಲಾರ ಪ್ರದೇಶದಲ್ಲಿ ಬಾಣರ ಆಡಳಿತವು ಪ್ರಾಚೀನ ರಾಜಕೀಯ ಚರಿತ್ರೆಗೆ ಬುನಾದಿ ಹಾಕಿದ್ದು ಕೋಲಾರ ಚರಿತ್ರೆ ಲೇಖನಶಾಸ್ತ್ರದಲ್ಲಿ ಪ್ರಾಮುಖ್ಯತೆ ಗಳಿಸಿರುವುದಲ್ಲದೆ ಮುಂದಿನ ರಾಜವಂಶದ ಬೆಳವಣಿಗೆಗೆ ಕೂಡ ಅವಕಾಶ ಕಲ್ಪಿಸಿಕೊಡುವುದರಲ್ಲಿ ನೆರವಾಗಿದೆ ಎಂದು ಹೇಳಲಾಗುತ್ತದೆ.

ಗಂಗರು

ಪ್ರಾಚೀನ ಕೋಲಾರದ ಚರಿತ್ರೆಯಲ್ಲಿ ಬಾಣ ಅರಸರ ನಂತರ ಕಂಡುಬಂದ ಪ್ರಮುಖ ರಾಜವಂಶ ಗಂಗರದಾಗಿದೆ. ಬಿ.ಎಲ್. ರೈಸರು, ಎಂ. ಶೇಷಾದ್ರಿಯವರು ಗಂಗರ ಶಾಸನಗಳನ್ನು ಸಂಗ್ರಹಿಸಿ ಅಧ್ಯಯನ ಮಾಡಿದ್ದಾರೆ. ದೇವರಕೊಂಡಾರೆಡ್ಡಿಯವರು ಗಂಗರ ದೇವಾಲಯಗಳ ಬಗ್ಗೆ ಅಧ್ಯಯನ ಮಾಡಿ ಅವರ ಸಂಸ್ಕೃತಿಯ ಹಿನ್ನೆಲೆಯನ್ನು ವಿವರಿಸಿದ್ದಾರೆ. ಬಿ. ಷೇಕಅಲಿಯವರ ಪಶ್ಚಿಮ ಗಂಗರ ರಾಜಕೀಯ ಚರಿತ್ರೆ ಬಗ್ಗೆ ಅಧ್ಯಯನ ಮಾಡಿದ್ದಾರೆ. ಎಚ್.ಎಸ್. ಗೋಪಾಲರವರ ಕೃತಿಯಾದ 'ಕೋಲಾರ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ' ಎಂಬುವುದರಲ್ಲಿ, ಗಂಗರ ಶಾಸನಗಳು ಅಧ್ಯಯನ ಎಂಬ ಲೇಖನದಲ್ಲಿ ಗಂಗರ ಆಡಳಿತ ಬೆಳವಣಿಗೆ ಅವರ ಆಡಳಿತದಲ್ಲಿ ಕಂಡುಬಂದ ಶಾಸನಗಳನ್ನು ಚರ್ಚಿಸಿದೆ. ಈ ಪ್ರಯತ್ನಗಳಿಂದ ಗಂಗರ ರಾಜಕೀಯ ಚರಿತ್ರೆಯನ್ನು ಚರ್ಚಿಸಲು ಸಾಧ್ಯವಾಗಿದೆ. ಇವರ ಸಮಕಾಲೀನರು ರಾಷ್ಟ್ರಕೂಟರು, ವೈಡುಂಬರು, ನೊಳಂಬರು ಮುಂತಾದವರು ಕಂಡುಬಂದು ಅವರ ಆಡಳಿತಕ್ಕೆ ಕೋಲಾರ ಪ್ರದೇಶವು ಒಳಗಾಗಿರುವುದು ಈ ಮುಂದೆ ವಿಶ್ಲೇಷಣೆ ಮಾಡಲಾಗಿದೆ.

ಗಂಗರು ಕೋಲಾರ ಪ್ರದೇಶದಲ್ಲಿ ಕ್ರಿ.ಶ.೪ನೇ ಶತಮಾನದಿಂದ ೧೧ನೇ ಶತಮಾನದವರೆಗೆ ಪ್ರಬಲವಾಗಿರುವುದು ಕಂಡುಬಂದಿದೆ. ಮತ್ತು ಪ್ರಾಥಮಿಕ ಹಂತದಲ್ಲಿ ಕೋಲಾರವು ಅವರ ರಾಜಧಾನಿಯಾಗಿದ್ದು ನಂತರ ರಾಜಧಾನಿಯನ್ನು ತಲಕಾಡಿಗೆ ವರ್ಗಾಯಿಸಿ ತಲಕಾಡಿನಿಂದಲೇ ಕೋಲಾರ ಪ್ರದೇಶವನ್ನು ಆಡಳಿತ ಮಾಡಿರುವುದು ತಿಳಿದುಬರುತ್ತದೆ. ಬಿ.ಎಲ್. ರೈಸರು ಸುಮಾರು ೭೦ ಗಂಗರ ಶಾಸನಗಳನ್ನು ಸಂಗ್ರಹಿಸಿ ಅವರ ಆಡಳಿತದ ಮೇಲೆ ಬೆಳಕು ಚೆಲ್ಲಿದ್ದಲ್ಲದೆ ನಂತರ ಇದೇ ಹಾದಿಯಲ್ಲಿ ಎಂ. ಶೇಷಾದ್ರಿಯವರ ನಂತರ ಕೆ. ಅಭಿಶಂಕರರವರ ಶಾಸನ ಸಂಪುಟಗಳ ಹಿನ್ನೆಲೆಯನ್ನು ಅಧ್ಯಯನ ಮಾಡಿ ಚರಿತ್ರೆ ತಿಳಿಸುವಲ್ಲಿ ಶ್ರಮಿಸಿದ್ದಾರೆ. ಇವುಗಳಿಂದ ಕೋಲಾರ ಚರಿತ್ರೆಲೇಖನಶಾಸ್ತ್ರವು ನಿಲುವು ತಾಳಲು ಸಾಧ್ಯವಾಗಿದೆ.

ಪ್ರಾಚೀನ ಚರಿತ್ರೆಯಲ್ಲಿ ಗಂಗರ ಚರಿತ್ರೆ ವಿಶಿಷ್ಟ ಸ್ಥಾನ ಪಡೆದುಕೊಂಡಿದೆ ಮತ್ತು ನಿರಂತರ ಸೋಲುಗೆಲುವುಗಳ ನಡುವೆ ಸುಮಾರು ೬೫೦ ವರ್ಷಗಳ ಕಾಲ ತನ್ನತನವನ್ನು ಉಳಿಸಿಕೊಂಡಿದೆ.[೩೨] ಇದರಿಂದಾಗಿ ಕೋಲಾರದ ಚಾರಿತ್ರಿಕ ಘನತೆ ಹೆಚ್ಚಿಸಿದಲ್ಲದೆ ಕರ್ನಾಟಕ ಚರಿತ್ರೆಯಲ್ಲಿ ಕೀರ್ತಿಯನ್ನುಂಟುಮಾಡಿದೆ. ರಾಜಕೀಯ, ಸಾಮಾಜಿಕ, ಆರ್ಥಿಕ ಹಾಗೂ ಸಾಂಸ್ಕೃತಿಕ ಕೊಡುಗೆಗಳು ಚರಿತ್ರೆಯಲ್ಲಿ ಪ್ರಾಮುಖ್ಯತೆ ಗಳಿಸಿವೆ. ಪರರಾಜ್ಯವಾದ ಬಾಣರ ಪ್ರಬಲತೆಯನ್ನು ಮುರಿಯುವಲ್ಲಿ ಗಂಗರು ಸಫಲರಾದರು. ಅಲ್ಲದೆ ತಮ್ಮದೆಯಾದ ರಾಜಧಾನಿಯನ್ನು ಹಾಗೂ ರಾಜ್ಯವನ್ನು ಕಟ್ಟಿ ಕನ್ನಡ ಕಳಶವನ್ನು ಚಿನ್ನದ ನೆಲದಿಂದ ಬೆಳೆಸಿದ್ದಾರೆ ಎಂದರೆ ತಪ್ಪಾಗಲಾರದು.

ಕ್ರಿ.ಶ.೩೫೦ರ ವೇಳೆಗೆ ದಡಿಗ ಮತ್ತು ಮಾಧವ ಎಂಬ ಸಹೋದರರು ಕೋಲಾರ ಪ್ರದೇಶದ ನಂದಿಕ್ಷೇತ್ರದಲ್ಲಿದ್ದ ಜೈನ ಯತಿಯಾದ ಸಿಂಹನಂದಿಯವರ ಬಳಿಗೆ ಬಂದು ಶಿಷ್ಯತನ ಪಡೆದರು ಮತ್ತು ಇವರಲ್ಲಿನ ರಾಜ ಲಕ್ಷಣಗಳನ್ನು ತಿಳಿದ ಸಿಂಹನಂದಿಯವರು ರಾಜ್ಯವನ್ನು ಕಟ್ಟಲು ತರಬೇತಿ ನೀಡಿದರು. ಅವರ ಪ್ರಯತ್ನದಲ್ಲಿ ಗಂಗ ರಾಜ್ಯವನ್ನು ಕಟ್ಟಿದರು. ಅವರ ಪ್ರಥಮ ರಾಜಧಾನಿ ಕುವಳಾಲಪುರ

(ಇಂದಿನ ಕೋಲಾರವೇ)ವಾಗಿದೆ ಎಂದು ಗೆಜೆಟಿಯರನಲ್ಲಿ ತಿಳಿಸಿದೆ. ಇದನ್ನೇ ಕೆ.ಎಲ್. ರಾಜಶೇಖರ, ಎಂ.ವಿ. ಕೃಷ್ಣರಾವರವರು ಲೇಖನಗಳಲ್ಲಿ ಹೇಳಿದ್ದಾರೆ.[೩೩] ಇವರ ರಾಜ್ಯ ಸ್ಥಾಪನೆಗೊಂಡ (ಕ್ರಿ.ಶ. ೨೨೫ ರಿಂದ ಕ್ರಿ.ಶ. ೩೪೫) ವೇಳೆಗೆ ಶಾತವಾಹನರು ಕರ್ನಾಟಕದ ಇತರ ಭಾಗಗಳಲ್ಲಿ ಪ್ರಬಲ ಆಡಳಿತವನ್ನು ಹೊಂದಿದ್ದರು ಎಂದು ಸಮಕಾಲೀನ ಚರಿತ್ರೆಯ ವಿಶ್ಲೇಷಣೆಯಿಂದ ತಿಳಿದುಬರುತ್ತದೆ. ಗಂಗರು ತಮ್ಮ ಆಡಳಿತ ಸುಲಭಗೊಳಿಸಲು ಮತ್ತು ರಕ್ಷಣೆಯ ದೃಷ್ಟಿಯಿಂದ ಕೋಲಾರ, ಚಿಕ್ಕಬಳ್ಳಾಪುರದ ಸಮೀಪದಲ್ಲಿರುವ ನಂದಿದುರ್ಗದಲ್ಲಿ ಕೋಟೆಗಳನ್ನು ನಿರ್ಮಿಸಿದ್ದಾರೆ ಮತ್ತು ಇವರ ಮೂಲದ ಕುರಿತಾಗಿ ಶ್ರೀಪಾದ ರಾಮಚಂದ್ರ ದೇಶಪಾಂಡೆಯವರು ಗಂಗರು ಇಕ್ಷ್ವಾಕು (ಸೂರ್ಯವಂಶ) ವಂಶದ ಪದ್ಮನಾಭನ ಮಕ್ಕಳಾದ ದಡಿಗ ಮತ್ತು ಮಾಧವರ ಬಗ್ಗೆ ಹೇಳಿದಲ್ಲದೆ, ಅವರಿಗೆ ಆ ಹೆಸರಿಡಲು ಏನೋ ಕಾರಣವಿರಬೇಕು ಎಂದು ಶ್ರೀಪಾದ ರಾಮಚಂದ್ರ ದೇಶಪಾಂಡೆಯವರು ಹೇಳಿದ್ದಾರೆ.[೩೪] ಇದರಿಂದಾಗಿ ಇವರು ಉತ್ತರ ಕಡೆಯವರಾಗಿದ್ದು ದಕ್ಷಿಣಕ್ಕೆ ಬಂದಾಗ ಆಂಧ್ರಪ್ರದೇಶದ ಗಡಿಯಲ್ಲಿರುವ 'ಸೇರೂರು' ಎಂಬಲ್ಲಿ ತಂಗಿದ್ದು, ನಂತರ ನಂದಿದುರ್ಗದ ಬಳಿ ಇದ್ದ ಸಿಂಹನಂದಿಯಲ್ಲಿಗೆ ಬಂದು ಶಿಷ್ಯ ದೀಕ್ಷೆಯನ್ನು ಪಡೆದರು ಎಂದು ತಿಳಿದುಬರುತ್ತದೆ. ಇದನ್ನೇ ಎಚ್. ತಿಪ್ಪೇರುದ್ರಸ್ವಾಮಿಯವರು ಹೇಳಿದ್ದಾರೆ. ಗಂಗರ ಮೂಲದಲ್ಲಿ ಬೇರೆ ಬೇರೆ ವಾದಗಳಿವೆ. ಕಾಳಿಂಗ ನಗರದಿಂದ ಬಂದಂತಹ ಪಶ್ಚಿಮ ಗಂಗರು ಕೋಲಾರ ಪ್ರದೇಶದಲ್ಲಿ ನೆಲೆನಿಂತವರು ಕೆ. ಅಭಿಶಂಕರರವರ ಗೆಜೆಟಿಯರನಿಂದ ತಿಳಿದುಬರುತ್ತದೆ. ಇವರು ರೈತಾಪಿ ವರ್ಗದವರಾಗಿದ್ದು ಸ್ಥಳೀಯ ಜನರನ್ನು ಆಕರ್ಷಿಸುವಲ್ಲಿ ಸಫಲರಾಗಿದ್ದಾರೆ. ಇವರ ರಾಜ್ಯ ಸ್ಥಾಪನೆಯಾದ ಕಾಲದಲ್ಲಿ ಶಾತವಾಹನರು ಕರ್ನಾಟಕದ ಇತರೆ ಭಾಗಗಳಲ್ಲಿ ಪ್ರಬಲ ಆಡಳಿತ ನೀತಿ ಹೊಂದಿದ್ದರು. ಸಣ್ಣ ರಾಜ್ಯವಾಗಿದ್ದು ನಂತರ ಕ್ರಮೇಣ ವಿಸ್ತಾರ ಹೊಂದಿದೆ. ಆಡಳಿತ ರಕ್ಷಣ ದೃಷ್ಟಿಯಿಂದ ಕೋಲಾರ ಹಾಗೂ ನಂದಿದುರ್ಗದಲ್ಲಿ ಕೋಟೆಗಳನ್ನು ಕಟ್ಟಿದರು ಎಂದು ಎಂ.ಬಿ. ನೇಗಿನಹಾಳರವರ ಅಭಿಪ್ರಾಯ. ಇದನ್ನು 'ಕರ್ನಾಟಕ ಇತಿಹಾಸ ಸಂಪುಟ ೧'ರಲ್ಲಿ ಬಿ. ಷೇಕಅಲಿಯವರು ಹೇಳಿದ್ದಾರೆ.

ಗಂಗರು ಇಕ್ಷ್ವಾಕು ವಂಶದವರಾಗಿದ್ದು (ಸೂರ್ಯವಂಶ) ಪದ್ಮನಾಭ ಎಂಬ ದೊರೆ ಅಯೋಧ್ಯ ಆಳುತ್ತಿದ್ದಾಗ ತನ್ನಿಬ್ಬರ ಮಕ್ಕಳಿಗೆ ದಡಿಗ ಮಾಧವರೆಂದು ಹೆಸರಿಟ್ಟು ಕಳಿಸಿದರು ಎಂದು ಆಗ ಅವರಿಗೆ ರಾಜ್ಯ ಸ್ಥಾಪಿಸಲು ಸಿಂಹನಂದಿ ನೆರವಾದರು ಎಂದು ಎಚ್. ತಿಪ್ಪೇರುದ್ರಸ್ವಾಮಿ ಕರ್ನಾಟಕ ಸಂಸ್ಕೃತ ಸಮೀಕ್ಷೆ ಕೃತಿಯಲ್ಲಿ ಮತ್ತು ಶ್ರೀಪಾದ ರಾಮಚಂದ್ರ ದೇಶಪಾಂಡೆಯವರ ಕರ್ನಾಟಕ ಸಾಮ್ರಾಜ್ಯದಲ್ಲಿ ವ್ಯಕ್ತಪಡಿಸಿದ್ದಾರೆ.

ಗಂಗರ ಆಡಳಿತದಲ್ಲಿ ಸುಮಾರು ೧೮ ರಾಜರ ಆಡಳಿತ ಸರಣಿ ಕಂಡುಬಂದಿದೆ ಎಂದು ಬಿ.ಎಲ್. ರೈಸರು ತಮ್ಮ ಶಾಸನಸಂಪುಟದಲ್ಲಿ ತಿಳಿಸಿದ್ದಾರೆ.[೩೫] ಇದನ್ನು ಎಂ.ಶೇಷಾದ್ರಿಯವರು ಅನುಮೋದಿಸಿದ್ದಾರೆ.[೩೬] ಇವರಲ್ಲಿ ಪ್ರಮುಖರಾದವರು ದಡಿಗ (ಕ್ರಿ.ಶ. ೩೫೦-೪೦೦), ಕೊಂಗಣಿವರ್ಮ (ಮಾಧವ) (೪೦೦-೪೩೫), ಬಾಣರನ್ನು ಸದೆಬಡೆದು ರಾಜ್ಯ ವಿಸ್ತರಿಸಿದ ೧ನೇ ಮಾಧವ ಎಂದು ಅವನಿಗೆ ಹೆಸರು. ಹರಿವರ್ಮ (೪೩೦-೪೬೦)ನ ಕಾಲದಲ್ಲಿ ರಾಜಧಾನಿಯನ್ನು ಆಡಳಿತ ದೃಷ್ಟಿಯಿಂದ ಮೂಲೆಯಾಗಿದ್ದರಿಂದ ತಲಕಾಡಿಗೆ ಬದಲಾಯಿಸಿದ ಎಂದು ಶ್ರೀಪಾದ ರಾಮಚಂದ್ರ ದೇಶಪಾಂಡೆ

ಹೇಳುತ್ತಾರೆ.[೬೭] ಇವನ ನಂತರ ವಿಷ್ಣುಗೋಪ (ಕ್ರಿ.ಶ.?), ಅವನೀತ (೫೦೦-೫೪೦), ತಡಂಗಾಲ ಮಾಧವ (೪೮೦-೫೦೦), ದುರ್ವಿನೀತ (೫೪೦-೬೦೦), ಗಜಶಾಸ್ತ್ರಪರಿಣಿತ ನಾದ ಮುಷ್ಕರ (೬೫೫-೬೦೦) ಶ್ರೀಪುರುಷ (೭೨೦-೭೭೬), ರಾಚಮಲ್ಲ ಚಾವುಂಡರಾಯ ಮುಂತಾದವರು.

ಇವರ ರಾಜ್ಯವನ್ನು ಗಂಗವಾಡಿ ೩೬,೦೦೦ ಎಂದು ಹಾಗೂ ಗಂಗರಾಜರು ತಮ್ಮ ಬಿರುದುಗಳಲ್ಲಿ 'ಕೊಲಾರಮ್ಮ ಪುರಾದೀಶ್ವರ ನಂದಿಗಿರಿನಾಥ'ರೆಂದು ಕರೆಸಿಕೊಂಡಿದ್ದಾರೆ. ಇವರ ಆಡಳಿತ ಪ್ರದೇಶವನ್ನು ಪ್ರಮುಖವಾಗಿ ತಮ್ಮ ಶಾಸನಗಳು ಕೋಲಾರ, ಚಿಕ್ಕಬಳ್ಳಾಪುರ, ನಂದಿದುರ್ಗ, ಮುಡಿಯನೂರು, ಉತ್ತನೂರು, ಸೂಗಟೂರು, ನರಸಾಪುರ, ಗಮ್ಮರೆಡ್ಡಿಪುರ, ಹೆಬ್ಬಟಿ, ಗಂಗರಸನಹಳ್ಳಿ, ರೆಡ್ಡಿಪುರ, ಉತ್ತಮಾರು ಮುಂತಾದ ಕಡೆ ದೊರೆತಿವೆ.[೬೮] ಒಟ್ಟಾರೆ ಸುಮಾರು ೨೭ ಶಾಸನಗಳು ಇವೆ.[೬೯] ಇದನ್ನು ಬಿ.ಎಲ್. ರೈಸರವರ ದಾಖಲೆಯನ್ನು ವ್ಯಕ್ತಪಡಿಸಿದೆ. ಇವರ ರಾಜ್ಯಾಡಳಿತ ಮೇರೆಗಳು ಶ್ರೀಪಾದ ರಾಮಚಂದ್ರ ದೇಶಪಾಂಡೆಯವರು 'ಕರ್ನಾಟಕ ಸಾಮ್ರಾಜ್ಯ' ಎಂಬುದರಲ್ಲಿ ಹೀಗೆ ತಿಳಿಸಿದ್ದಾರೆ. ಮೂಡಲಿಗೆ ತೊಂಡನಾಡು (ಮೈಸೂರು ಪೂರ್ವ ಮದ್ರಾಸ), ಪಡವಲಿಗೆ ಚೇರನಾಡು (ಶ್ರಾವಣಕೋಂ), ತೆಂಕಣಗೆ ಕೊಯನಾಡು (ತಮಿಳುನಾಡು), ಬಡಲಿಗೆ ಯಾವುದು ಎಂದು ಗೊತ್ತಿಲ್ಲ.[೭೦] ಕೋಲಾರವು ಗಂಗರ ವಿಶೇಷ ಆಡಳಿತ ಕೇಂದ್ರ ಎಂಬುದು ಮತ್ತೆ ಹೇಳುವ ಅಗತ್ಯವೆನಿಸಿಲ್ಲ. ಗಂಗರು ಆಡಳಿತ ಬೆಳವಣಿಗೆಯಲ್ಲಿ ಒಬ್ಬರಾದ ನಂತರ ಒಬ್ಬರಾಗಿ ಅಧಿಕಾರ ಮುಂದುವರಿಸಿಕೊಂಡು ಬಂದರೂ, ಅವರು ನೆರೆಯ ರಾಜ್ಯಗಳ ದಾಳಿಗಳು ಪರಿಗಣಿಸುತ್ತಲೆ ಇದ್ದರು. ರಾಷ್ಟ್ರಕೂಟರು, ಚೋಳರು, ಕದಂಬರು, ಬಾಣರು ಇವರ ಪ್ರಮುಖ ಸಮಕಾಲೀನ ರಾಜ್ಯವಂಶಗಳಾಗಿವೆ. ಇದರಿಂದಾಗಿ ಕಾಲಕ್ರಮೇಣ ಗಂಗರ ರಾಜ್ಯದ ಆಡಳಿತದ ಅವಧಿಯಲ್ಲಿರುವ ಭಾಗಗಳು ಹಿಗ್ಗುಕುಗ್ಗುವಿಕೆಯಲ್ಲಿ ಕುವಾಲಾಲನಾಡು, ಕುವಾಲಾಲ ಸೀಮೆ, ನಾಡು/ಪ್ರಾಂತ್ಯ/ರಾಷ್ಟ್ರ[೭೧] ಮುಂತಾಗಿ ಕರೆಯಲ್ಪಟ್ಟಿದೆ. ಇದು ರಾಜ್ಯದ ಆಡಳಿತ ದೃಷ್ಟಿಯಲ್ಲಿ ಬಳಸಿದ ಪದಗಳಾಗಿವೆ ಎಂದು ನಿರ್ಧರಿಸಲಾಗಿದೆ.

ಕ್ರಿ.ಶ. ೯೬೧ರ ಹೊತ್ತಿಗೆ ಗಂಗರ ಆಡಳಿತ ಅವನತಿಯತ್ತ ತಿರುಗುತ್ತದೆ.[೭೨] ಅಷ್ಟೊತ್ತಿಗೆ ದಿಲೀಪನ ಮಗನಾದ 'ವನ್ನಾ' ನೊಳಂಬ ಎಂಬುವನು ಕೋಲಾರದ ಪಶ್ಚಿಮ ಭಾಗದಿಂದ ಪ್ರಭುತ್ವಕ್ಕೆ ಬರಲು ಅಲ್ಲಿದ್ದ ಗಂಗರನ್ನು ಸದೆಬಡಿಯಲು ಮುಂದಾಗುತ್ತಾನೆ. ಇವನನ್ನು ನೊಳಂಬ ಕನ್ನಡಿಗ ಎಂದು ಗೆಜೆಟಿಯರ್‌ನಲ್ಲಿ ತಿಳಿಸಿದೆ.[೭೩] ರಾಷ್ಟ್ರಕೂಟರ ರಾಜ 'ಧ್ರುವನು' ಗಂಗರಾಜ ಶಿವಮಾರನನ್ನು ಸೋಲಿಸಿ ಗಂಗವಾಡಿಯನ್ನು ಗೆದ್ದನೆಂದು, ಬಿ. ಷೇಕಅಲಿಯವರ ಕರ್ನಾಟಕ ಚರಿತ್ರೆ ಸಂಪುಟ-೨ರಲ್ಲಿ ತಿಳಿಸಲಾಗಿದೆ. ಕೆ.ಆರ್. ನರಸಿಂಹನರವರು ಚೋಳರು ಗಂಗರನ್ನು ಸೋಲಿಸುವುದರ ಮೂಲಕ ಮಾಂಡಲೀಕರರನ್ನಾಗಿ ಮಾಡಿಕೊಂಡರು. ನೀಲಕರಿಚೋಳ ಮಂಡಲ ಎಂದು ರಾಜ್ಯವನ್ನು ಕಟ್ಟಿದರು ಎಂದು ಆರ್. ಗೋಪಾಲರವರ ಸಂಪುಟದ ಲೇಖನಗಳಿಂದ ತಿಳಿದುಬರುತ್ತದೆ.[೭೪]

ಒಟ್ಟಾರೆ ೧೧ನೇ ಶತಮಾನದ ಅಂತ್ಯದ ಹೊತ್ತಿಗೆ ಗಂಗರ ಪ್ರಬಲ್ಯತೆ ಕ್ಷೀಣಿಸಿ ನೆರೆರಾಜ್ಯಗಳ ಹಾವಳಿಯಿಂದ ಅದು ತತ್ತರಿಸಿತು ಎಂದು ಹೇಳಲಾಗುತ್ತದೆ. ಎಚ್.ಎಸ್. ಗೋಪಾಲರಾವ ಹೇಳಿದಂತೆ ಕೋಲಾರ ಜಿಲ್ಲೆಯಲ್ಲಿಯೇ ಮಾತ್ರವಲ್ಲದೆ ಸಮಗ್ರ ಕರ್ನಾಟಕದ ಪ್ರಾರಂಭಿಕ ಇತಿಹಾಸದಲ್ಲಿ ಗಂಗರು

ಅತ್ಯಂತ ಮಹತ್ವ ಸ್ಥಾನ ಪಡೆದಿದೆ. ಗಂಗವಾಡಿ ೯೬,೦೦೦ನ್ನು ಆಳಿದ ಗಂಗರ ಮೊದಲ ರಾಜಧಾನಿಯೇ 'ಕುವಳಾಲಪುರ' ಅದೇ ಇಂದಿನ ಕೋಲಾರ. ಅವರ ಪ್ರತಿಯೊಂದು ಶಾಸನಗಳು ಬಿರುದಾವಳಿಗಳು ಇದ್ದು ಧರ್ಮ ಮಹಾರಾಜರು, ಪ್ರಜಾಪಾಲನೆಯೇ ಮುಖ್ಯ ದಯೆ ಎಂಬುದು ತಿಳಿದವರು. ಶ್ರೀಪುರುಷನ ಕಾಲಕ್ಕಾಗಲೇ ಗಂಗರ ರಾಜಧಾನಿಯು ಕುವಳಾಲ (ಕೋಲಾರ)ದಿಂದ ತಲಕಾಡಿಗೆ ಬದಲಾಗಿತ್ತು. ಆದ್ದರಿಂದ ಚೋಳರು ತಲಕಾಡಿನಲ್ಲಿ ತಳವೂರಬೇಕಾಯಿತು. ಚೋಳ ದೊರೆಯು ಅಂಥ ಘಟನೆಗೆ ಅಣಿಯಾಗಬೇಕಾಗಿ ಕ್ರಿ.ಶ. ೧೦೦೪ರ ವೇಳೆಗೆ ಗಂಗರನ್ನು ಸಂಪೂರ್ಣವಾಗಿ ಸೋಲಿಸಿ ಇಡೀ ಕೋಲಾರ ಜಿಲ್ಲೆಯನ್ನು ತಮ್ಮ ವಶಕ್ಕೆ ತೆಗೆದುಕೊಂಡಿದ್ದರು."[೪೫] ಇದು ಸಹಜವಾಗಿ ಅಸಮರ್ಥಕ ಆಡಳಿತದ ಬದಲಾವಣೆಗಳನ್ನು ಹೊಂದಿರುವುದು ಗುರುತಿಸಲಾಗುತ್ತದೆ.

* * *

ಗಂಗರ ರಾಜ್ಯದ ಬಗ್ಗೆ ಹಲವಾರು ಕೃತಿಗಳು ಪ್ರಕಟಣೆ ಆಗಿವೆ. ಆದರೆ `ಕೋಲಾರದ ಗಂಗರು' ಎಂದು ಯಾರು ಯಾವ ಕೃತಿಯಲ್ಲಿ ಹೇಳಿರುವುದು ಕಂಡುಬಂದಿಲ್ಲ. ಇದಕ್ಕೆ ಕಾರಣ ಕೋಲಾರವು ಕೇವಲ ಇಬ್ಬರು ಮಾತ್ರ ಪ್ರಾಥಮಿಕ ಹಂತದಲ್ಲಿ ಆಡಳಿತ ನಡೆಸಿದರೆ ನಂತರ ಹರಿವರ್ಮ ಎಂಬ ರಾಜನು ತನ್ನ ರಾಜಧಾನಿಯೇ ತಲಕಾಡಿಗೆ ಬದಲಾಯಿಸಿರುವುದು ಕಾರಣ. ಆದರೆ ಅವರು ರಾಜ್ಯ ಹುಟ್ಟು ಮತ್ತು ಬೆಳವಣಿಗೆ ಕಾರಣವಾದ ಕೋಲಾರದ ಬಗ್ಗೆ ಯಾವ ವಿದ್ವಾಂಸರು ಅಷ್ಟೊಂದು ಆಳಕ್ಕೆ ಇಳಿದಿಲ್ಲ ಎಂದು ತಿಳಿದುಬರುತ್ತದೆ. ಪಶ್ಚಿಮ ಗಂಗರು ಎಂದು ಬಿ. ಷೇಕಅಲಿ ಅವರು ಕೃತಿ ಬರೆದರೂ, ಉಳಿದ ಹಲವರು ತಲಕಾಡು ಗಂಗರು ಎಂದು ಕೃತಿ ಸಂವಾದ ಮಾಡಿದ್ದಾರೆ. ಈ ಪದಗಳನ್ನು ತಿದ್ದಲು ಅಥವಾ ಅವುಗಳೊಂದಿಗೆ ಕೋಲಾರ ಗಂಗರು ಎಂದು ಬರೆದರೆ ತಪ್ಪೇನಿಲ್ಲ. ಪ್ರಾಯಶಃ ಕೋಲಾರ ಪ್ರದೇಶದ ಚರಿತ್ರೆ ಲೇಖನಶಾಸ್ತ್ರವು ಅಂತಹದೇ ಪದವನ್ನು ಕಾಯ್ದಿರಿಸಿಕೊಳ್ಳಲು ಮುಂದಾಗಿರುತ್ತದೆ. ತಲಕಾಡು ಗಂಗರು ಪಶ್ಚಿಮ ಗಂಗರು ಇನ್ನಾವುದೇ ಗಂಗರು ಎಂದು ಕರೆಯಲ್ಪಟ್ಟರೂ ಅವರ ಮೂಲ ಬೆಳವಣಿಗೆಗೆ ಕೋಲಾರ ಪ್ರದೇಶವೇ ಕಾರಣ ಎಂಬುದನ್ನು ನಿರ್ಲಕ್ಷಿಸುವಂತದೇನು ಇಲ್ಲ. ಈ ನಿಟ್ಟಿನಲ್ಲಿ ಅಧ್ಯಯನ ಅನೇಕ ಆಕರಗಳು ಪರವಾಗಿವೆ. ಪ್ರಥಮಬಾರಿಗೆ ಬಿ.ಎಲ್. ರೈಸರವರು 'ಮೈಸೂರು ಶಾಸನಗಳ ಸಂಪುಟ' 'ಕೋಲಾರ ಜಿಲ್ಲಾ ಶಾಸನಗಳ ಸಂಪುಟ'ಗಳು ಸಂಪಾದಿಸುವುದರಲ್ಲಿ ಮುಂದಿನ ಅಧ್ಯಯನಕಾರರಿಗೆ ನೆರವಾಗಿದೆ. ಅದೇ ಮಾರ್ಗ ಹಾದಿಯಲ್ಲಿ ಎಂ. ಶೇಷಾದ್ರಿಯವರು ಇನ್ನಷ್ಟು ವಿವರಗಳನ್ನು ಸೇರಿಸಲು ಯತ್ನಿಸಿದ್ದಾರೆ. ತದನಂತರ ಕೆ. ಅಭಿಶಂಕರರವರು ಈ ಪ್ರಯತ್ನದ ಫಲವಾಗಿ ಆಡಳಿತದ ದಕ್ಷತೆಗೆ ತಮ್ಮದೇಯಾದ ಸಂಸ್ಕೃತಿಗಳನ್ನು ಗುರುತಿಸುವುದರಲ್ಲಿ ಪ್ರಯತ್ನಿಸಿದ್ದಾರೆ. ಅಂದರೆ ಈ ಶಾಸನ ಸಂಪುಟಗಳಲ್ಲಿನ ಚಾರಿತ್ರಿಕ ಅಂಶಗಳನ್ನು ಆಯ್ದು ಕ್ರಮವಾಗಿ ಜೋಡಿಸುವುದರಲ್ಲಿ ಪ್ರಯತ್ನಿಸಿದ್ದಾರೆ ಮತ್ತು ಅವರ ಸಂಸ್ಕೃತಿ ದಕ್ಷತೆಯ ವಿವರಗಳನ್ನು ದಾಖಲಿಸಿದ್ದಾರೆ. ದೇವರಕೊಂಡಾರೆಡ್ಡಿಯವರು 'ತಲಕಾಡು ಗಂಗರ ದೇವಾಯಗಳು' ಎಂಬ ಕೃತಿ ಬರೆಯುವುದರ ಮೂಲಕ ಗಂಗರ ಸಂಸ್ಕೃತಿ ಚರಿತ್ರೆಗೆ ಬೆಳಕು ಚೆಲ್ಲಿದ್ದಾರೆ. ಅಂತೆಯೇ ಎಂ.ವಿ. ಕೃಷ್ಣರಾವ ಅವರ 'ಕರ್ನಾಟಕ ಇತಿಹಾಸ ದರ್ಶನ'ದಲ್ಲಿ ತಲಕಾಡು ಗಂಗರ ಬಗ್ಗೆ ಹೆಚ್ಚಿನ ವಿವರಗಳನ್ನು ನೀಡುವಲ್ಲಿ ಕೋಲಾರ ಪ್ರದೇಶದ ಆಡಳಿತ ನಿರ್ಲಕ್ಷ್ಯ

ಮಾಡಿರುವುದು ಕಂಡುಬಂದಿದೆ. ಅಂತೆಯೇ ಆರ್.ಆರ್. ದಿವಾಕರವರು ಕೃತಿಯಾದ 'ಕರ್ನಾಟಕ ಪರಂಪರೆ'ಯಲ್ಲಿ ಗಂಗರು ಎಂಬ ಲೇಖನಗಳು ಕೋಲಾರ ಪ್ರದೇಶದ ಚರಿತ್ರೆಯನ್ನು ಪ್ರತಿಬಿಂಬಿಸಿದೆ ಎಂದರೆ ತಪ್ಪಾಗಲಾರದು. ಒಟ್ಟಾರೆ ಕೋಲಾರ ಪ್ರದೇಶದ ರಾಜಕೀಯ ಚರಿತ್ರೆ ಲೇಖನಶಾಸ್ತ್ರಕ್ಕೆ ಗಂಗರ ಅದ್ಭುತ ಚರಿತ್ರೆ ಅಭ್ಯುದಯ ಮತ್ತು ಪ್ರಮುಖ ಸ್ಥಾನಗಳಿಸಿರುವುದರಲ್ಲಿ ಎರಡು ಮಾತಿಲ್ಲ.

ಚಾಲುಕ್ಯರು

ದಕ್ಷಿಣ ಭಾರತ ಹಾಗೂ ಕರ್ನಾಟಕದ ರಾಜಕೀಯ, ಸಾಂಸ್ಕೃತಿಕ ಚರಿತ್ರೆಯಲ್ಲಿ ಒಂದು ಹೊಸ ಅಧ್ಯಾಯವನ್ನು ಚಾಲುಕ್ಯರು ಸ್ಥಾಪಿಸಿದರು. ಇವರ ಪರಮಾಧಿಕಾರ ಉತ್ತರದಲ್ಲಿ ನರ್ಮದಾ ನದಿ ತೀರದಿಂದ ದಕ್ಷಿಣದ ಕಾವೇರಿ ಬಯಲಿನವರೆಗೂ ವ್ಯಾಪಿಸಿತು. ಇವರಲ್ಲಿ ಮೂರು ರೀತಿಯ ಶಾಖೆಗಳನ್ನು ಹೊಂದಿದ್ದು ೬ನೇ ಶತಮಾನದಿಂದ ೧೨ನೇ ಶತಮಾನದವರೆಗೆ ಏಳಿಗೆಯಲ್ಲಿದ್ದರು. ಇವರಲ್ಲಿ ಪಶ್ಚಿಮ ಚಾಲುಕ್ಯರು (ಬಾದಾಮಿ ಚಾಲುಕ್ಯರು), ಕಲ್ಯಾಣ ಚಾಲುಕ್ಯರು ಹಾಗೂ ವೆಂಗಿಯ ಚಾಲುಕ್ಯರು ಪ್ರಮುಖರಾಗಿದ್ದಾರೆ. ಇದರಲ್ಲಿ ಕೋಲಾರ ಪ್ರದೇಶವನ್ನು ಆಡಳಿತ ಮಾಡಿದವರು ಬಾದಾಮಿ ಚಾಲುಕ್ಯರಾಗಿದ್ದಾರೆ. ಸುಮಾರು ೨೦೦ ವರ್ಷಗಳ ಕಾಲ ಸಮಸ್ತ ಕರ್ನಾಟಕದಲ್ಲಿ ಆಡಳಿತ ಮಾಡಿದ್ದಾರೆ. ಕ್ರಿ.ಶ. ೫೩೫ರಿಂದ ೭೫೭ರವರೆಗೆ ಅವರ ಉಚ್ಛ್ರಾಯ ಕಾಲ ಎಂಬುದಾಗಿ ಎಂ.ವಿ. ಕೃಷ್ಣರಾವ ಮತ್ತು ಎಂ. ಕೇಶವಭಟ್ಟರು ಹೇಳಿದ್ದಾರೆ.[೪೬] ಇವರ ಕೆಲವೇ ಕೆಲವು ಶಾಸನಗಳು ಕೋಲಾರ ಪ್ರದೇಶದಲ್ಲಿ ದೊರೆತಿದ್ದು, ಅವರ ಆಡಳಿತದ ಮೇಲೆ ಬೆಳಕು ಚೆಲ್ಲುತ್ತವೆ ಎಂಬುದಾಗಿ ಗೆಜೆಟಿಯರನಲ್ಲಿ ತಿಳಿಸಿದೆ.[೪೭] ಬಿ.ಎಲ್. ರೈಸರು ಇವರ ಎರಡು ಶಾಸನಗಳನ್ನು ಕೋಲಾರ ಪ್ರದೇಶದಲ್ಲಿ ಪತ್ತೆ ಮಾಡಿದ್ದಾರೆ. ಬಿಜಾಪುರದ 'ಬಾದಾಮಿ' ಇವರ ರಾಜಧಾನಿ ಎಂಬುದ್ವಾಗಿ ತಿಳಿಸಿದ್ದಾರೆ.[೪೮] ಇದರ ಸ್ಥಾಪಕ ೧ನೇ ಜಯಸಿಂಹ. ವೆಕ್ಕಲೇರಿ ಪ್ರದೇಶದಲ್ಲಿ ದೊರೆತ ಶಾಸನವು ೭೫೭ರ ಕಾಲಕ್ಕೆ ಸೇರಿದೆ ಮತ್ತು ಅದು ೨ನೇ ಕೀರ್ತಿವರ್ಮನ ಹೆಸರು ಹೇಳುತ್ತದೆ ಎಂಬುದಾಗಿ ರೈಸರು ತಿಳಿಸಿದ್ದಾರೆ. ಕರ್ನಾಟಕದ ಚರಿತ್ರೆಯಲ್ಲಿ ಸಾಂಸ್ಕೃತಿಕ 'ಸುವರ್ಣ ಯುಗ' ಎಂದು ಶಿವರಾಮರವರು ಕರೆದಿರುವುದು ಐಹೊಳೆ, ಬಾದಾಮಿ ಮತ್ತು ಪಟ್ಟದಕಲ್ಲಿನಲ್ಲಿರುವ ಚಾಲುಕ್ಯರ ಕಲಾಕೃತಿಗಳಿಂದ. ಇದನ್ನೇ ಎಚ್.ವಿ. ಶ್ರೀನಿವಾಸಮೂರ್ತಿ ಮತ್ತು ಆರ್. ರಾಮಕೃಷ್ಣರವರು ಹೇಳಿದ್ದಾರೆ.[೪೯] ಇದು ಅವರ ರಾಜಕೀಯದಷ್ಟೇ ಸಾಂಸ್ಕೃತಿಕ ವೈಶಾಲ್ಯತೆಯನ್ನು ವ್ಯಕ್ತಪಡಿಸುವ ವಿಷಯವಾಗಿದೆ. ಇವರ ಪ್ರಖ್ಯಾತ ರಾಜನಾದ ೨ನೇ ಪುಲಿಕೇಶಿಯ (ಕ್ರಿ.ಶ. ೬೪೦) ಆಡಳಿತ ಕಾಲದಲ್ಲಿ 'ಕೊನ್ನೈಕಲ್ ವಿಷಯ' ಎಂಬುದು ಪ್ರಮುಖ ರಾಷ್ಟ್ರಕೂಟರ ಆಡಳಿತ ಕೇಂದ್ರವಾಗಿತ್ತು ಮತ್ತು ಅಲ್ಲಿ ಸುಮಾರು ಮೂವತ್ತೊಂದು ಬ್ರಾಹ್ಮಣರ ಸಂಘ ಇರುವುದಾಗಿ ಗೆಜೆಟಿಯರನಲ್ಲಿ ತಿಳಿಸಿದೆ. ವಿಶೇಷವಾಗಿ ಹಲಚಿರಾ ಎಂಬ ಬ್ರಾಹ್ಮಣನ ಮಗಳ ಸಂಬಂಧ ಕುರಿತಾಗಿ ತಿಳಿಸಲಾಗಿದೆ. ಗುಡಿಬಂಡೆ ತಾಲೂಕಿನ ಹೊಸೂರು ಎಂಬಲ್ಲಿ ದೊರೆತ ಶಾಸನದಲ್ಲಿ ಪುಲಿಕೇಶಿಯನ್ನು ರಣವಿಕ್ರಮನೆಂದು ಕರೆದಿರುವುದಾಗಿ ಬಿ.ಎಲ್. ರೈಸರು ತಿಳಿಸಿದ್ದಾರೆ.[೫೦] ಇಷ್ಟಾದರೂ ಇವರ ಆಡಳಿತದ ಬಗ್ಗೆ ಹೆಚ್ಚಿನ ಮಾಹಿತಿಗಳು ಕೋಲಾರ ಪ್ರದೇಶದಲ್ಲಿ ದೊರೆತಿಲ್ಲವಾದರೂ ಪುಲಿಕೇಶಿ ಕಾಲಕ್ಕೆ ಚಾಲುಕ್ಯರ ರಾಜ್ಯವು ೯೯,೦೦೦ ಗ್ರಾಮಗಳನ್ನು ಒಳಗೊಂಡಿತ್ತು ಎಂದು ಅದರಲ್ಲಿ ಕೋಲಾರವು ವ್ಯಾಪಾರ-ವಾಣಿಜ್ಯ ಕೇಂದ್ರವಾಗಿತ್ತು ಎಂಬುದಾಗಿ ಎಂ.ವಿ.

ಕೃಷ್ಣರಾವ ಮತ್ತು ಎಂ. ಕೇಶವಭಟ್ಟರು ಹೇಳಿದ್ದಾರೆ.[೫೧] ೨ನೇ ಪುಲಿಕೇಶಿಗೆ 'ಸತ್ಯಾಶ್ರಯ' ಎಂಬುದು ರೂಢನಾಮವಾಗಿದೆ. 'ವಲ್ಲಭ', 'ವಲ್ಲಭರಾಜ', ವಲ್ಲಭೇಂದ್ರ', 'ಪೃಥ್ವೀವಲ್ಲಭ' ಮೊದಲಾದ ಬಿರುದುಗಳೊಡನೆ ಸಾರ್ವಭೌಮ ಅಧಿಕಾರ ಸೂಚಿತವಾದ 'ಪರಮೇಶ್ವರ' ಮುಂತಾದ ಬಿರುದುಗಳು ಅವನಿಗಿದ್ದವು. ತದನಂತರದ ಬಾದಾಮಿಯ ಚಾಲುಕ್ಯರು ಧರಿಸಿದ 'ಮಹಾರಾಜಾಧಿರಾಜ', 'ಪರಮೇಶ್ವರ', 'ಭಟ್ಟಾರಕ' ಎಂಬ ಬಿರುದುಗಳು ಇದ್ದವು. ಇವನ ಕಾಲಕ್ಕೆ ಕೋಲಾರ ಪ್ರದೇಶದಲ್ಲಿ ದುರ್ವಿನೀತನ ಆಡಳಿತ ಮುಂದುವರೆಯುತ್ತಿದ್ದರೂ ಎರಡನೇ ಪುಲಿಕೇಶಿಯ ದಾಳಿಯನ್ನು ಎದುರಿಸಲಾಗಲಿಲ್ಲ. ಇದರಿಂದಾಗಿ ತನ್ನ ಮಗಳನ್ನು ಕೊಟ್ಟು ವಿವಾಹ ಮಾಡಿ ಅವರೊಂದಿಗೆ ಸ್ನೇಹ ಬೆಳೆಸಿದನು ಎಂದು ತಿಳಿದುಬರುತ್ತದೆ. ಇದು ಗಂಗ ರಾಜ್ಯಕ್ಕೆ ಸ್ವಲ್ಪಕಾಲ ಭದ್ರತೆ ದೊರೆಯಿತು. ಅಲ್ಲದೆ ಎರಡನೇ ಪುಲಿಕೇಶಿಯು ಅತ್ಯಂತ ಮಹಿಮಾನ್ವಿತನಾದ ರಾಜ, ಪ್ರಾಚೀನ ಮಹಾಮಹಿಮರಾದ ರಾಜಾಧಿರಾಜರಲ್ಲಿ ಅವನು ಅಗ್ರಪಂಕ್ತಿ ಸೇರಿದವನೇ ಸರಿ. ಅವನ ಖ್ಯಾತಿಯು ಪ್ರಭಾವವೂ ಭಾರತದ ಹೊರಗಡೆಗೂ ವ್ಯಾಪಿಸಿತ್ತು ಎಂಬುದಾಗಿ ಎಂ.ವಿ. ಕೃಷ್ಣರಾವ ಮತ್ತು ಎಂ. ಕೇಶವಭಟ್ಟರು ಹೇಳಿದ್ದಾರೆ. ಇವನ ನಂತರ ೧ನೇ ವಿಕ್ರಮಾದಿತ್ಯ, ವಿನಯದಿತ್ಯ, ವಿಜಯಾದಿತ್ಯ ಮತ್ತು ಎರಡನೇ ವಿಕ್ರಮಾದಿತ್ಯ ಪ್ರಮುಖರಾಗಿದ್ದಾರೆ. ಲಾಟರ ಧಾರಾಶ್ರಯ ಜಯಸಿಂಹವರ್ಮನು ಮಗನಾದ ಅವನಿಜಶ್ರಾಯ ಪುಲಿಕೇಶಿಯ ವತಸಾಲಿ ಶಾಸನವು ಹೇಳುತ್ತದೆ. ಇದು ಕೋಲಾರ ಪ್ರದೇಶದ ಅವನಿಯನ್ನು ಸೂಚಿಸುತ್ತದೆ ಎಂದು ಹೇಳಲಾಗುತ್ತದೆ. ಇಷ್ಟಾದರೂ ಕೊನೆಗೆ ರಾಷ್ಟ್ರಕೂಟ ಎರಡನೇ ಕೃಷ್ಣರಾಜನಿಂದ ಪೂರ್ಣವಾಗಿ ಪರಾಜಿತಗೊಂಡಿತು. ಅಲ್ಲಿಗೆ ೨ ಶತಮಾನಗಳ ಚಾಲುಕ್ಯ ಸಾಮ್ರಾಜ್ಯವು ಭಗ್ನವಾಯಿತು ಎಂಬುದಾಗಿ ಎಂ.ವಿ. ಕೃಷ್ಣರಾವ ಮತ್ತು ಕೇಶಭಟ್ಟರು ಹೇಳಿದ್ದಾರೆ. 'ದಕ್ಷಿಣ ಪಥೇಶ್ವರ' ಎಂಬ ಬಿರುದು ಗಳಿಸಿದ ಇವರುಗಳು ವಿಶಾಲ ರಾಜ್ಯ ಕಟ್ಟಿದರು. ಅವರ ಸಮಾನರಾದ ಚೋಳರು, ಪಾಂಡ್ಯರು, ಚೇರರು ರಾಷ್ಟ್ರಕೂಟರನ್ನು ಕೊನೆಗೆ ನಿಯಂತ್ರಿಸುವಲ್ಲಿ ವಿಫಲವಾದರು ಎಂಬುದಾಗಿ ಅವರ ಚರಿತ್ರೆಯಿಂದ ತಿಳಿದುಬರುತ್ತದೆ.

ರಾಷ್ಟ್ರಕೂಟರು

ಕರ್ನಾಟಕದ ರಾಜಮನೆತನಗಳಲ್ಲಿ ರಾಷ್ಟ್ರಕೂಟರು ಪ್ರಮುಖರಾಗಿದ್ದಾರೆ. ಇವರ ರಾಜಧಾನಿ ಗುಲ್ಬರ್ಗಾ ಜಿಲ್ಲೆಯ 'ಮಾನ್ಯಖೇಟವಾಗಿದೆ. ಕ್ರಿ.ಶ. ೮ನೇ ಶತಮಾನದಿಂದ ೧೦ನೇ ಶತಮಾನದವರೆಗೆ ವಿಶಾಲ ಸಾಮ್ರಾಜ್ಯವನ್ನು ಎರಡೂವರೆ ಶತಮಾನಗಳ ಕಾಲ ಆಡಳಿತ ಮಾಡಿದ್ದಾರೆ. ದಂತಿದುರ್ಗ ಇವರ ಪ್ರಥಮ ಪ್ರಬಲ ಅರಸನಾಗಿದ್ದನು. ನಂತರ ೧ನೇ ಕೃಷ್ಣರಾಜ, ೨ನೇ ಗೋವಿಂದ, ಧ್ರುವ ನಿರುಪನು, ಮೂರನೇ ಗೋವಿಂದ, ಅಮೋಘವರ್ಷ ನೃಪತುಂಗ ಮುಂತಾದವರು ಪ್ರಮುಖರಾಗಿದ್ದಾರೆ. ಮತ್ತು ಚಿಕ್ಕಬಳ್ಳಾಪುರ, ಮಾಲೂರು ಇವರ ಪ್ರಮುಖ ಆಡಳಿತ ಕೇಂದ್ರಗಳಾಗಿದ್ದವು ಎಂಬುದಾಗಿ ದೊರೆತ ಶಾಸನಗಳಿಂದ ಬಿ.ಎಲ್. ರೈಸರು ಮತ್ತು ಶೇಷಾದ್ರಿಯವರು ಖಚಿತಪಡಿಸಿದ್ದಾರೆ.[೫೨]

ಗಂಗರ ಪ್ರಬಲತೆ ಮುರಿಯಲು ರಾಷ್ಟ್ರಕೂಟ 'ಕೃಷ್ಣ'ರಾಜನು ದಂಡಯಾತ್ರೆ ಗೈದನು. ಆಗ ಶ್ರೀಪುರುಷ ವೃದ್ಧನಾಗಿದ್ದಲ್ಲದೇ ಗಂಗರ ಚರಿತ್ರೆ ಅಸಮರ್ಥತೆಯಲ್ಲಿರುವಂತೆ ಕಾಣುತ್ತಿತ್ತು. ಹೀಗಾಗಿ

ಅವರ ರಾಜಧಾನಿಯಾದ ಮಾನ್ಯಪುರವು ಕೃಷ್ಣರಾಜನ ವಶವಾಯಿತು. ಅಲ್ಲದೆ ಗಂಗವಾಡಿ ಸಮಸ್ತ ಭಾಗವನ್ನು ಗೆದ್ದು, ಶ್ರೀಪುರುಷನನ್ನೇ ಮಾಂಡಲಿಕರನ್ನಾಗಿ ನೆಲೆಗೊಳಿಸಿ ಸುಮಾರು ಕ್ರಿ.ಶ. ೭೬೯ರಲ್ಲಿ ಸ್ವ-ರಾಜಧಾನಿಗೆ ಮರಳಿದನು ಎಂಬುದಾಗಿ ಎಂ.ವಿ. ಕೃಷ್ಣರಾವ ಮತ್ತು ಎಂ. ಕೇಶವಭಟ್ಟರು ಹೇಳಿದ್ದಾರೆ. ನಂತರದ ಧ್ರುವ ನಿರೂಪನು ರಾಷ್ಟ್ರಕೂಟರಲ್ಲಿ ಪ್ರಖ್ಯಾತ ಅರಸ. ಇವನಿಗೆ ಧಾರಾವರ್ಷ (ಧಾರಾಶ್ರಯ), ನಿರುಪಮ, ಕಲಿವಲ್ಲಭ ಎಂಬುದಾಗಿ ಬಿರುದುಗಳಿವೆ. ಇವನು ಪ್ರಥಮ ಯುದ್ಧಯಾತ್ರೆ ಗಂಗವಾಡಿ ಮತ್ತು ಅದರ ರಾಜ ಶಿವಮಾರನು, ಶ್ರೀಪುರುಷನ ನಂತರ ಪ್ರಬಲತೆಗೆ ಬಂದು ಸ್ವತಂತ್ರ್ಯ ಬಯಸಿದನು. ಆದರೂ ಧ್ರುವನ ದಾಳಿಗೆ ಮಣಿಯಲೇಬೇಕಾಯಿತು. ನಂತರ ಮೂರನೇ ಗೋವಿಂದನು ಕೋಲಾರ ಪ್ರದೇಶವನ್ನು ಆಡಳಿತ ಮಾಡಿದ ಪ್ರಮುಖ ರಾಷ್ಟ್ರಕೂಟರ ದೊರೆ. ಪ್ರಭೂತವರ್ಷ, ಜಗತ್ತುಂಗ, ಜನವಲ್ಲಭ, ಕೀರ್ತಿನಾರಾಯಣ, ಪ್ರಭುವನ ಧವಳ ಎಂಬುವುಗಳು ಇವನ ಬಿರುದುಗಳಾಗಿವೆ. ಕ್ರಿ.ಶ. ೮೦೬ರಲ್ಲಿ ಇವನ ತಾಮ್ರ ಶಾಸನವು ಕೋಲಾರ ಪ್ರದೇಶದ ನಂದಿಗ್ರಾಮದಲ್ಲಿರುವ ಭೋಗನಂದೀಶ್ವರ ದೇವಾಲಯದಲ್ಲಿ ದೊರೆತಿದ್ದು ಆ ದೇವಾಲಯವನ್ನು ಇವನ ಮಗಳಾದ ರತ್ನಾವಳಿ ಎಂಬುವಳು ನಿರ್ಮಿಸಿದ್ದಾಳೆ ಎಂಬುದಾಗಿ ತಿಳಿದುಬರುತ್ತದೆ ಎಂದು ಪಿ.ವಿ. ಕೃಷ್ಣಮೂರ್ತಿಯವರ ಲೇಖನದಿಂದ ತಿಳಿದುಬರುತ್ತದೆ.[೫೩] ಈ ವೇಳೆಗೆ ಗಂಗರೊಂದಿಗೆ ವೈವಾಹಿಕ ಸಂಬಂಧ ಹೊಂದಿರುವುದು ತಿಳಿದುಬರುತ್ತದೆ. ಆದರೆ, ಅದು ಅಷ್ಟಕಷ್ಟೇ ಎನಿಸಿ ರಾಷ್ಟ್ರಕೂಟರ ಅಧಿಕಾರ ವಿಸ್ತರಣಾ ನೀತಿ ಮುಂದುವರಿದಿದೆ. ಸೂರ್ಯನಾಥ ಕಾಮತರು ಹೇಳಿರುವಂತೆ ಕೋಲಾರದ ಇತರೆ ಭಾಗಗಳಿಗೂ ಅವರ ಅಧಿಕಾರ ವಿಸ್ತಾರವಾಗಿದೆ. ಕೈವಾರ ಅವರ ಪ್ರಮುಖ ಆಡಳಿತ ಭಾಗವಾಗಿದೆ ಎಂದು ಎಂ.ಜಿ. ನಾಗರಾಜಯ್ಯನವರು ತಿಳಿಸಿದ್ದಾರೆ.[೫೪] ಇದು ಗಂಗರೊಂದಿಗೆ ಇರುವ ವೈಶಮ್ಯವನ್ನು ವ್ಯಕ್ತಪಡಿಸುತ್ತದೆ. ಈ ಹಿನ್ನೆಲೆಯಲ್ಲಿ ಮೂರನೇ ಗೋವಿಂದನು ಶಿವಮಾರನನ್ನು ಬಂಧನದಲ್ಲಿರಿಸಿದರೂ, ಅವರಿಗೆ ಗಂಗ ಪಟ್ಟವನ್ನು ಕೊಡಬಯಸಿದನು. ಈ ತಂತ್ರ ತಿಳಿದ ಶಿವಮಾರನು ಸಂತೋಷದಿಂದ ಅವರಲ್ಲಿ ಸೇರಿಕೊಂಡನೆಂದು ಎಂ.ವಿ. ಕೃಷ್ಣರಾವ ಮತ್ತು ಎಂ. ಕೇಶವಭಟ್ಟರು ಹೇಳುತ್ತಾರೆ. ಆದರೆ ಕೊನೆಗೆ ಯಶಸ್ಸು ಕಾಣದೆ ಗಂಗವಾಡಿಯನ್ನು ಗೆಲ್ಲುವ ತವಕದಲ್ಲಿ ಮುಂದುವರೆದು ನಂತರ ನೊಳಂಬವಾಡಿಯ ಚಾರುಪೊನ್ನೇರವನ್ನು ಆಕ್ರಮಿಸಿದನು. ಕೊನೆಗೆ ಇವನ ಸಾಹಸಗಳಿಂದ ವಿಶಾಲ ರಾಜ್ಯ ನಿರ್ಮಾಣವಾಯಿತು. ಇದನ್ನು ಗ್ರಹಿಸಿದ ಎಂ.ವಿ. ಕೃಷ್ಣರಾವ ಮತ್ತು ಎಂ. ಕೇಶವಭಟ್ಟರು ಎರಡು ಸಾವಿರ ವರ್ಷಗಳ ಭಾರತೀಯ ಚರಿತ್ರೆಯಲ್ಲಿ ವಿಖ್ಯಾತಿಗೆ ಬಂದ ಹಲಮಂದಿ ರಾಜರೆಲ್ಲ ಮೂರನೇ ಗೋವಿಂದರಾಜನಿಗೆ ಅಗ್ರಸ್ಥಾನ ಲಭಿಸುವುದು ನ್ಯಾಯವಾಗಿದೆ ಎಂಬುದಾಗಿ ಜಿ.ವಿ. ಕೃಷ್ಣಮೂರ್ತಿರವರ ಲೇಖನದಿಂದ ವ್ಯಕ್ತವಾಗುತ್ತದೆ.[೫೫] ಇವನ ನಂತರ ಬಂದವನೇ ಪ್ರಖ್ಯಾತ ರಾಜ ಅಮೋಘವರ್ಷ ನೃಪತುಂಗ ರಾಜನು. ಇವನಿಗೆ ರಟ್ಟಮಾರ್ತಾಂಡ, ವೀರನಾರಾಯಣ, ಅತಿಶಯಧವಳ, ನೀತಿನಿರಂತಕ, ಅಲ್ಲವಲ್ಲಭ ಎಂಬ ಬಿರುದುಗಳಿವೆ. ಇವನು ಕೋಲಾರ ಪ್ರದೇಶದಲ್ಲಿರುವ 'ರಾಜಮಡು' ಎಂಬಲ್ಲಿ ಗಂಗರನ್ನು ಸೋಲಿಸಿದನು. ನಂತರ ಅವರನ್ನು ತಮ್ಮ ಸಾಮಂತರಾಗಿ ಮಾಡಿಕೊಂಡು ತನ್ನ ಮಗಳಾದ ಚಂದ್ರೋಬಲಬ್ಬೆಯನ್ನು ನೀತಿಮಾರ್ಗ ಎರೆಯಂಗನಿಗೆ ಕೊಟ್ಟು ವಿವಾಹ ಮಾಡಿ ಅವರ ಸ್ನೇಹ ಬೆಳೆಸಿ ರಾಜ್ಯವನ್ನು ವಿಸ್ತರಿಸಿದನು ಎಂದು ಟಿ.ಜಿ. ಚಂದ್ರಶೇಖರಪ್ಪನವರು ಹೇಳಿದ್ದಾರೆ.[೫೬] ಸುಮಾರು ೬೦ ವರ್ಷಗಳ ಕಾಲ ರಾಜನಾಗಿದ್ದ ಇವನು

ಹಲವು ಯುದ್ಧಗಳು ಮಾಡಿ ರಾಜ್ಯ ಸ್ವಧೀನಕ್ಕೆ ತಂದನು. ಆದರೆ ಉತ್ತರ ಭಾಗಗಳ ಗಲಭೆಯಿಂದ ಮತ್ತು ಗಂಗರಾಜ ರಾಜಮಲ್ಲನ ಪ್ರಬಲತೆಯಲ್ಲಿ ಮತ್ತೊಂದು ಗಂಗರೊಡನೆ ಯುದ್ಧಕ್ಕಿಳಿಯದಾದನು ಎಂಬುದಾಗಿ ಎಂ.ವಿ. ಕೃಷ್ಣರಾವ ಮತ್ತು ಎಂ. ಕೇಶವಭಟ್ಟರು ಹೇಳಿದ್ದಾರೆ. ಭಾಗಶಃ ಈ ಅವಧಿಯಲ್ಲಿಯೇ ಚಂದ್ರಬ್ಬ ಲಬ್ಬೆ ಎಂಬ ಮಗಳನ್ನು ಗಂಗ ಭೂತಗ ಗುಣದುತ್ತರಂಗನಿಗೆ ವಿವಾಹ ಮಾಡಿರಬೇಕೆಂದು ತಿಳಿದುಬರುತ್ತದೆ. ಇವನ ನಂತರ ಆಡಳಿತಕ್ಕೆ ಬಂದ ಅನೇಕ ರಾಷ್ಟ್ರಕೂಟರ ದೊರೆಗಳು ಕೋಲಾರ ಪ್ರದೇಶದಲ್ಲಿ ಆಡಳಿತ ಮಾಡಿರುವುದರ ಬಗ್ಗೆ ತಿಳಿದುಬರುವುದಿಲ್ಲ. ಕೊನೆಗೆ ಕ್ರಿ.ಶ. ೯೭೫ರಲ್ಲಿ ಇದ್ದ ಮಾರಸಿಂಹನ ಮರಣದ ನಂತರ ರಾಷ್ಟ್ರಕೂಟರ ರಾಜ್ಯವು ಪತನದ ಹಾದಿಯುತ್ತ ಸಾಗಿತು. ಆಗ ಚಾಲುಕ್ಯರು ಕೋಲಾರ ಪ್ರದೇಶದಲ್ಲಿ ಪ್ರಬಲತೆಗೆ ಬರುವುದು ಚಾರಿತ್ರಿಕ ಅಧ್ಯಯನಗಳಿಂದ ತಿಳಿದುಬರುತ್ತದೆ.

ಪಲ್ಲವರು

ಪಲ್ಲವರು ಕೋಲಾರ ಪ್ರದೇಶದ ಆಡಳಿತ ಮತ್ತು ಅವರ ಆಡಳಿತದ ಕುರಿತಾಗಿ ಪ್ರಕಟಣೆಗೊಂಡ ಕೃತಿಗಳ ವಿಷಯವಾಗಿ ಈ ಮೂಲಕ ಚರ್ಚಿಸಿದೆ. ಮತ್ತು ಪಲ್ಲವರು ಕೋಲಾರ ಚರಿತ್ರೆಯಲ್ಲಿನ ಪ್ರಾಮುಖ್ಯತೆಯನ್ನು ವಿವರಿಸುವುದಾಗಿದೆ.

ಪ್ರಾಚೀನ ದಕ್ಷಿಣ ಭಾರತದ ಚರಿತ್ರೆಯಲ್ಲಿ ಪಲ್ಲವರ ರಾಜಕೀಯ ಚರಿತ್ರೆ ಪ್ರಾಮುಖ್ಯತೆ ಹೊಂದಿದೆ. ಇವರ ರಾಜಧಾನಿ ತಮಿಳುನಾಡಿನ ಕಂಚಿ, ಇದು ಪ್ರಸಿದ್ಧ ಧಾರ್ಮಿಕ ಕ್ಷೇತ್ರ ಎನಿಸಿದೆ. ಕ್ರಿ.ಶ. ೨೭೫ ರಿಂದ ೫೧೨ ರವರೆಗೆ ಆಡಳಿತದಲ್ಲಿ ಪ್ರಬಲರಾಗಿದ್ದ ಪಲ್ಲವರು ಕೋಲಾರ ಪ್ರದೇಶದಲ್ಲಿ ಅಧಿಕಾರ ವಿಸ್ತರಿಸಿದ್ದಾರೆ. ಇವರ ಸಮಕಾಲೀನವರು ಚಾಲುಕ್ಯರು, ಗಂಗರು ಮತ್ತು ಬಾಣರು ಕಂಡುಬರುತ್ತಾರೆ. ಇವರಲ್ಲಿ ಪಾಂಡ್ಯದ ಚಾಲುಕ್ಯರು, ಚೇರರು ಹಾಗೂ ಚೋಳರನ್ನು ಹತ್ತಿಕ್ಕಿ ಪ್ರಬಲರಾಗುತ್ತಾ ಸುಮಾರು ಹತ್ತು ಶತಮಾನಗಳ ಕಾಲ ಸುದೀರ್ಘ ಆಡಳಿತ ಚರಿತ್ರೆಯನ್ನು ಹೊಂದಿದ್ದು ಪರಮಾಧಿಕಾರ ಹಾಗೂ ಸಾಮಾಂತಿಕೆಯನ್ನು ಹೊಂದಿರುವುದು ಕಂಡುಬರುತ್ತದೆ.

ಬಿ.ಎಲ್. ರೈಸರು, ಎಂ. ಶೇಷಾದ್ರಿಯವರು ಇವರ ಶಾಸನಗಳನ್ನು ಕೋಲಾರ ಪ್ರದೇಶದಲ್ಲಿ ಪತ್ತೆ ಮಾಡಿದ್ದಲ್ಲದೆ ವಿವರಿಸಲು ಯತ್ನಿಸಿದ್ದಾರೆ. ಇವುಗಳ ಹಿನ್ನೆಲೆಯಲ್ಲಿ ಕೆ. ಅಭಿಶಂಕರರವರು ಕೋಲಾರದ ಜಿಲ್ಲಾ ಗೆಜೆಟಿಯರ್‌ನ್ನು ಸಂಪಾದಿಸಿದ್ದು ಅದರಲ್ಲಿ ಪಲ್ಲವರ ಕುರಿತಾಗಿ ವಿಶ್ಲೇಷಿಸಿದ್ದಾರೆ. ೧೯೭೦ರಲ್ಲಿ ಆರ್.ಆರ್. ದಿವಾಕರರವರ ಸಮ್ಮುಖದಲ್ಲಿ ಪ್ರಕಟಗೊಂಡ ಕರ್ನಾಟಕ ಪರಂಪರೆ ಸಂಪುಟ-೧ರಲ್ಲಿ ಪಲ್ಲವರ ರಾಜಕೀಯ, ಸಾಮಾಜಿಕ ಹಾಗೂ ಧಾರ್ಮಿಕ ಚರಿತ್ರೆಯ ಬಗ್ಗೆ ಚರ್ಚಿಸಲಾಗಿದೆ. ಬಿ.ಎಲ್. ರೈಸರು ಕೋಲಾರದ ಪ್ರದೇಶದಲ್ಲಿ ಸುಮಾರು ೭೧ ಪಲ್ಲವರ ಶಾಸನಗಳನ್ನು ಪತ್ತೆಮಾಡಿದ್ದಾರೆ. ಮತ್ತು ಕೋಲಾರ ಪ್ರದೇಶದಲ್ಲಿ ಪಲ್ಲವರ ಆಡಳಿತ ಕ್ರಿ.ಶ. ೭೩೩ರಿಂದ ೧೦೪೯ರವರೆಗೆ ಇರುವುದಾಗಿ ಅವರ ಶಾಸನಸಂಪುಟ-೧ರಲ್ಲಿ XVII ರಿಂದ XX ಪುಟದವರೆಗೆ ವಿವರಿಸಿದ್ದಾರೆ. ಹೀಗಿದ್ದರೂ ಇವರ ಶಾಸನಸಂಪುಟವು ಪಲ್ಲವರ ಆಡಳಿತ ಚರಿತ್ರೆಯ ಬಗ್ಗೆ ಹೆಚ್ಚಿನ ಮಾಹಿತಿಯನ್ನು ನೀಡುವಲ್ಲಿ ವಿಫಲಗೊಂಡಿದೆ. ಇವುಗಳಲ್ಲದೆ ದಂಡಿಯ 'ಅವಂತಿ ಸುಂದರಿ ಕಥೆ', ಭಾರವಿಯ 'ಕಿರಾತಾರ್ಜುನೀಯ'

೧೫ನೇ ಭಾಗವನ್ನು ದುರ್ವಿನೀತನು ಬರೆದಿದ್ದಾನೆ. ಇವು ಪಲ್ಲವರ ಚರಿತ್ರೆಯ ಮೇಲೆ ಬೆಳಕು ಚೆಲ್ಲುವ ಪ್ರಾಚೀನ ಕೃತಿಗಳಾಗಿವೆ.

ಕ್ರಿ.ಶ. ೬ನೇ ಶತಮಾನದಲ್ಲಿ ಕಳಭ್ರರನ್ನು ಸೋಲಿಸಿ ತಮಿಳುನಾಡನ್ನೊಳಗೊಂಡ ಹಿರಿದಾದ ಸಾಮ್ರಾಜ್ಯವನ್ನು ಕಟ್ಟಿದರು. ಅದು ವಿಜಯಾಲಯ ಎಂಬ ಚೋಳನು ಪಲ್ಲವರ ಕಂಚಿಯ ರಾಜಧಾನಿಯನ್ನು ಮುತ್ತುವವರೆಗೂ ಸುಮಾರು ೩೦೦ ವರ್ಷಗಳ ಕಾಲ ಆಡಳಿತ ನಡೆಸಿದ್ದಾರೆ. ಅವರ ರಾಜ್ಯವು ಕೃಷ್ಣ ನದಿಯ ದಕ್ಷಿಣ ಭಾಗದಿಂದ ಪಾಲಾರ ನದಿಯವರೆಗೂ ವಿಸ್ತರಿಸಿತು. ಈ ಭಾಗವನ್ನು 'ತೊಂಡೈಮಂಡಲ' ಎಂದು ಸಹ ಕರೆಯಲಾಗುತ್ತಿತ್ತು ಎಂದು ಕೆ. ಸದಾಶಿವರವರು ಹೇಳಿದ್ದಾರೆ.[೫೭] ನಂದಿಪರ್ವತದ ಪೂರ್ವ ಭಾಗವಾದ ವಕ್ಕಲೇರಿ ಪ್ರದೇಶವು ಪಲ್ಲವರ ಪ್ರಮುಖ ಆಡಳಿತ ಕೇಂದ್ರವಾಗಿತ್ತು. ಆದರೆ ಕ್ರಿ.ಶ. ೭೩೩ ರಿಂದ ೭೪೪ರಲ್ಲಿ ಎರಡನೇ ವಿಕ್ರಮಾದಿತ್ಯನು ಅದರ ಮೇಲೆ ನಿಯಂತ್ರಣ ಸಾಧಿಸಿದನು ಎಂದು ಗೆಜೆಟಿಯರ್‌ನಲ್ಲಿ ತಿಳಿಸಿದೆ. ಇದನ್ನೇ ಎಂ.ವಿ. ಕೃಷ್ಣರಾವ್, ಶ್ರೀಪಾದ ರಾಮಚಂದ್ರ ದೇಶಪಾಂಡ್ಯರವರು ಹೇಳಿದ್ದಾರೆ.[೫೮]

ಪಲ್ಲವರ ಪ್ರಮುಖ ರಾಜನಾದ ಒಂದನೇ ಮಹೇಂದ್ರವರ್ಮನು ಬಾದಾಮಿ ಚಾಲುಕ್ಯ ಇಮ್ಮಡಿ ಪುಲಿಕೇಶಿಯ ಸಮಕಾಲೀನವನು. ಇವರ ನಡುವಿನ ಘರ್ಷಣೆಯಿಂದ ಪಲ್ಲವರ ರಾಜ್ಯದ ಅನೇಕ ಭಾಗಗಳು ಕೈಬಿಟ್ಟವು. ನಂತರ ಬಂದ ಪ್ರಖ್ಯಾತ ಒಂದನೇ ನರಸಿಂಹವರ್ಮನು ಮಹಾಬಲಿಪುರಂನ್ನು ಎರಡನೇ ರಾಜಧಾನಿಯಾಗಿ ಮಾಡಿಕೊಂಡು ರಾಜ್ಯ ವಿಸ್ತರಿಸಿದ್ದಾನೆ. ಅಲ್ಲದೆ, ವಾತಾಪಿಕೊಂಡ ಎಂಬ ಬಿರುದು ಪಡೆದಿದ್ದಾನೆ. ಕೋಲಾರ ಪ್ರದೇಶವು ಈ ಅವಧಿಯಲ್ಲಿ ಪಲ್ಲವರ ಆಡಳಿತ ಭಾಗವಾಗಿತ್ತು ಎಂಬುದು ಕುಂದುವಟಿ, ಶ್ರೀನಿವಾಸಪುರಗಳಲ್ಲಿ ದೊರೆತ ಶಾಸನಗಳಲ್ಲಿ ಬಿ.ಎಲ್. ರೈಸರು ಹೇಳಿರುವುದು ಗ್ಯಾಸೆಟಿಯರನಲ್ಲಿ ತಿಳಿಸಿದೆ. ಇಷ್ಟಾದರು ಪಲ್ಲವರ ಆಡಳಿತವು ಕೋಲಾರ ಪ್ರದೇಶದಲ್ಲಿ ಹೆಚ್ಚಿನ ಮಾಹಿತಿ ನೀಡಿರುವುದಿಲ್ಲ ಎಂದು ತಿಳಿದುಬರುತ್ತದೆ. ೧೩ನೇ ಶತಮಾನದ ಹೊತ್ತಿಗೆ ಪಲ್ಲವರ ಪ್ರಬಲತೆ ಕಡಿಮೆಯಾಗಿ, ಅವರ ರಾಜಕುಮಾರರು ತಮಿಳುನಾಡಿನಲ್ಲಿ ಸಣ್ಣಪುಟ್ಟ ಸಂಸ್ಥಾನಗಳನ್ನು ಸ್ಥಾಪಿಸಿಕೊಂಡು ಚೋಳರ ಸಾರ್ವಭೌಮದ ಅಧೀನರಾಗಿ ಆಳಿದರು ಎಂದು ಕೆ. ಸದಾಶಿವರವರು ಹೇಳಿದ್ದಾರೆ. ನಂತರ ಇವರ ಕುಲದವರಾದ ನೊಳಂಬರು ತಮ್ಮ ಪೂರ್ವ ಕೀರ್ತಿಯನ್ನು ಕೋಲಾರ ಚರಿತ್ರೆಯಲ್ಲಿ ಬಳಸಿದ್ದಾರೆ ಎಂದು ರಾಜಪ್ಪ ದಳವಾಯಿಯವರ 'ನೊಳಂಬ ಅರಸರು' ಎಂಬ ಲೇಖನದಿಂದ ತಿಳಿದುಬರುತ್ತದೆ.[೫೯]

ನೊಳಂಬರು

ಕೋಲಾರ ಪ್ರದೇಶದ ಚರಿತ್ರೆಯಲ್ಲಿ ಪಲ್ಲವರ ನಂತರ ಕಂಡುಬರುವ ರಾಜವಂಶ ಎಂದರೆ ನೊಳಂಬರು. ಇವರ ರಾಜಕೀಯ ಮತ್ತು ಸಾಂಸ್ಕೃತಿಕ ಕೊಡುಗೆಗಳು ಗಂಗರಷ್ಟೇ ವಿಶಿಷ್ಟವಾಗಿರುವುದರಿಂದ ಪ್ರಸ್ತುತದಲ್ಲಿ ಅವರ ಕೃತಿಗಳು ಮತ್ತು ಲೇಖನಿಗಳಲ್ಲಿ ಅನರ ಆಡಳಿತದ ವಿಷಯವಾಗಿ ಚರ್ಚಿಸಿರುವುದಾಗಿದೆ.

ಕ್ರಿ.ಶ. ೮ನೇ ಶತಮಾನದಿಂದ ೧೧ನೇ ಶತಮಾನದವರೆಗೆ ಪ್ರಬಲವಾಗಿ ಕಂಡುಬಂದ ನೊಳಂಬ ಅರಸರು ಆಡಳಿತ ನಡೆಸಿದರು.[೬೦] ನಂತರ ಅವರ ಆಡಳಿತದ ಜೊತೆಗೆ ಸಾಂಸ್ಕೃತಿಕ ಚಟುವಟಿಕೆಗಳನ್ನು

ಚರಿತ್ರಾರ್ಹವಾಗಿ ಬಿಟ್ಟುಹೋಗಿದ್ದಾರೆ ಎಂಬುದನ್ನು ಅವನಿ, ಚಿಕ್ಕಬಳ್ಳಾಪುರದ ನಂದಿಕ್ಷೇತ್ರ, ಬೌರಿಂಗಪೇಟೆ, ಚಿಂತಾಮಣಿಗಳಲ್ಲಿ ಕಂಡುಬರುವ ನೊಳಂಬರ ದೇವಾಲಯಗಳು ಮತ್ತು ಶಾಸನಗಳನ್ನು ೧೯೩೦, ೧೯೩೨, ೧೯೫೫ರ ಎಂ.ವಿ.ಆರ್. ವರದಿಯಂತೆ ಎಚ್. ಜಯಮ್ಮ ಕರಿಯಣ್ಣನವರು ಲೇಖನಿಗಳಿಂದ ತಿಳಿದುಬರುತ್ತದೆ.[೬೨] ಇದಕ್ಕಿಂತ ನೊಳಂಬರ ರಾಜಕೀಯ ವಿಷಯವನ್ನು ಹೆಚ್ಚಾಗಿ ರಾಜಪ್ಪ ದಳವಾಯಿ, ಕೆ. ಕೃಷ್ಣಮೂರ್ತಿ, ಎಂ.ಎಸ್. ಕೃಷ್ಣಮೂರ್ತಿ, ಟಿ.ವಿ. ಮಹಾಲಿಂಗಂ, ಕೆ.ಆರ್. ಬಸವರಾಜುರವರ ಅಧ್ಯಯನದ ವಿಷಯಗಳಿಂದ ತಿಳಿದುಬರುತ್ತದೆ. ಮತ್ತು ಸಾಂಸ್ಕೃತಿಕವಾಗಿ ಎಚ್. ಜಯಮ್ಮ ಕರಿಯಣ್ಣನವರಂತೆ, ಡಾಗ್ಲಾಸ್ ಬ್ಯಾರೆಟ್, ಆ್ಯನ್‌ಡ್ರಿವ್ ಎಲ್.ಕೋಹೆನ್, ಶಿವರಾಮಮೂರ್ತಿಯವರು ಅಧ್ಯಯನ ಮಾಡಿದ್ದಾರೆ. ಇದರಿಂದಾಗಿ ನೊಳಂಬ ಅರಸರ ರಾಜಕೀಯ ಚರಿತ್ರೆ ಬಹುವಿಸ್ತಾರ ಹಾಗೂ ಪ್ರಾಚೀನ ರಾಜವಂಶಗಳಲ್ಲಿ ಪ್ರಸಿದ್ಧವಾದದು ಎಂದು ತಿಳಿದುಬರುತ್ತದೆ.

ಇಂತಹ ಪ್ರಸಿದ್ಧ ರಾಜವಂಶದ ಪ್ರಥಮ ಪ್ರಮುಖ ದೊರೆ 'ಮಂಗಳ' ಎಂಬುವನು ಎಂಬುದಾಗಿ ರಾಜಪ್ಪ ದಳವಾಯಿ, ನೆಲಮಂಗಲ ಲಕ್ಷ್ಮೀನಾರಾಯಣ, ಆರ್.ಎಸ್. ಪಂಚಮುಖಿಯವರು ಹೇಳಿದ್ದಾರೆ. ನಂತರ ಕ್ರಮವಾಗಿ ಆಡಳಿತದಲ್ಲಿ ಕಂಡುಬಂದಿರುವ ನೊಳಂಬ ಅರಸರಾದ ಒಂದನೇ ಪೊನ್ನೇರ, ಒಂದನೇ ಪೊಳಲ್ಚೋರ, ನೊಳಂಬಾರಿ ರಾಜಮಹೇಂದ್ರ, ಒಂದನೇ ಅಯ್ಯಪ್ಪದೇವ, ಬೀರನೊಳಂಬ ಅಣಿಗೆ, ಇರಿವ ನೊಳಂಬ ದಿಲೀಪ, ನನ್ನಿ ನೊಳಂಬ, ಎರಡನೇ ಪೊಳಲ್ಚೊರ, ಎರಡನೇ ಮಹೇಂದ್ರ, ಇರಿವ ನೊಳಂಬ, ಘಟಿಯಾಂಕಾಕಾರ, ಉದಯಾದಿತ್ಯ ಮುಂತಾದವರು ಪ್ರಮುಖ ಅರಸರಾಗಿದ್ದಾರೆ.

ಚಾಲುಕ್ಯ ಮತ್ತು ಗಂಗರ ಸಾಮಂತರಾಗಿ ಆಡಳಿತದಲ್ಲಿ ಕಂಡುಬಂದ ನೊಳಂಬರು ಸಣ್ಣಸಂಸ್ಥೆಯಿಂದ ಕ್ರಮೇಣ ಬೃಹತ್ ರಾಜ್ಯ ಕಟ್ಟಿದರು.[೬೩] ಮುಂದೆ ರಾಷ್ಟ್ರಕೂಟರ, ಕಲ್ಯಾಣಚಾಲುಕ್ಯರ ನಿಷ್ಠಾವಂತ ಮಾಂಡಲಿಕರಾಗಿ ತಮ್ಮ ಆದಿರಾಜರ ಅನೇಕ ಸಾಂಸ್ಕೃತಿಕ ಮತ್ತು ಧಾರ್ಮಿಕ ಚಟುವಟಿಕೆಗಳನ್ನು ಅನುಸರಿಸಿದ್ದಾರೆ ಎಂದು ವ್ಯಕ್ತವಾಗುತ್ತದೆ. ಕೋಲಾರ ಪ್ರದೇಶದಲ್ಲಿನ ನೂರಕ್ಕೂ ಹೆಚ್ಚಿನ ನೊಳಂಬರ ಶಾಸನಗಳು ದೊರೆತಿದ್ದು ಅವುಗಳಲ್ಲಿ ಶೇಕಡ ೩೫ರಿಂದ ೪೦ರಷ್ಟು ಶಾಸನಗಳು ವೀರಗಲ್ಲು, ತುರುಕಾಳಗಗಳಿಗೆ ಸಂಬಂಧಿಸಿವೆ ಎಂದು ಅದೇ ಕೃತಿಯಲ್ಲಿನ ಎಚ್. ಜಯಮ್ಮ ಕರಿಯಣ್ಣನವರ ಲೇಖನಿಯಿಂದ ತಿಳಿದುಬರುತ್ತದೆ. ಇವರ ರಾಜಧಾನಿ ಕೋಲಾರ ಪ್ರದೇಶದ ಪಶ್ಚಿಮ ಗಡಿಭಾಗವಾದ ತುಮಕೂರು ಜಿಲ್ಲೆಯ 'ಹೇಮಾವತಿ' ಎಂದಾಗಿದೆ. ಇದಕ್ಕೆ 'ಹೆಂಜೇರು' ಎಂದು ಮತ್ತೊಂದು ಹೆಸರು. ಪೊಲ್ಲೂಚೋರ ನೊಳಂಬ (೮೪೦ ರಿಂದ ೮೭೦)ವನ್ನು 'ನೊಳಂಬರಾಜ'ವೆಂದು ಕರೆಯಲಾಗಿದೆ. ಇವನ ಬಗ್ಗೆ ಚಿಕ್ಕಬಳ್ಳಾಪುರದ ಶಾಸನ ತಿಳಿಸಿದೆ ಎಂದು ಆರ್.ಆರ್. ದಿವಾಕರರ ಕೃತಿಯಾದ ಕರ್ನಾಟಕ ಇತಿಹಾಸ ಪರಂಪರೆ ಸಂಪುಟ ಒಂದರಲ್ಲಿ ಹೇಳಲಾಗಿದೆ. ಇವನ ನಂತರ ಒಂದನೇ ಮಹೇಂದ್ರನು (೮೭೦-೯೫೫) ಕೋಲಾರ ಪ್ರದೇಶದಲ್ಲಿದ್ದ ಬಾಣರನ್ನು ಓಡಿಸಿ ರಾಜ್ಯವಿಸ್ತಾರ ಮಾಡಿದನೆಂದು ಪಿ.ವಿ. ಕೃಷ್ಣಮೂರ್ತಿ, ಎಚ್. ಜಯಮ್ಮ ಕರಿಯಣ್ಣ, ಲಕ್ಷ್ಮೀನಾರಾಯಣರವರು ಹೇಳಿದ್ದಾರೆ.[೬೪] ಮತ್ತು ಒಂದನೇ ಮಹೇಂದ್ರನನ್ನು ಮಹಾವಾಲಿಕುಲಾಂತಕ ಎಂದು ಚಿಕ್ಕಬಳ್ಳಾಪುರದ ಶಾಸನವೊಂದರಲ್ಲಿ ತಿಳಿಸಿದೆ ಎಂದು ಗೆಜೆಟಿಯರಸಲ್ಲಿ ಹೇಳಿದೆ.[೬೫] ಅವನಿ, ಬಾಗೇಪಲ್ಲಿ, ಚಿಂತಾಮಣಿ, ಚಿಕ್ಕಬಳ್ಳಾಪುರ ಮುಂತಾದವು

ನೊಳಂಬರ ಪ್ರಮುಖ ಆಡಳಿತ ಕೇಂದ್ರಗಳಾಗಿದ್ದವು ಎಂದು ಪಿ.ವಿ. ಕೃಷ್ಣಮೂರ್ತಿ, ಎಚ್. ಜಯಮ್ಮ ಕರಿಯಣ್ಣನವರು ಹೇಳಿದ್ದಾರೆ. ಇದು ಗೆಜೆಟಿಯರನಲ್ಲಿ ಬಿಡಿಬಿಡಿಯಾಗಿ ಉಲ್ಲೇಖವಾಗಿದೆ.

ನೊಳಂಬರು ಗಂಗರು, ಚೋಳರು, ಪಲ್ಲವರೊಂದಿಗೆ ವೈವಾಹಿಕ ಸಂಬಂಧವನ್ನು ಹೊಂದಿ ಕಾಲಾನುಗತದಲ್ಲಿ ಪ್ರಬಲಕ್ಕೆ ಬರಲು ಕಾರಣರಾಗಿದ್ದಾರೆ. ಪ್ರಾಥಮಿಕವಾಗಿ ಇವರು ತಮ್ಮನ್ನು ನೊಳಂಬ ಪಲ್ಲವರು ಎಂದು ಹೇಳಿಕೊಂಡಿರುವುದರಲ್ಲಿ ಇದು ವ್ಯಕ್ತವಾಗುತ್ತದೆ. ಇದನ್ನು ಗೆಜೆಟಿಯರನಲ್ಲಿ ತಿಳಿಸಿದೆ ಮತ್ತು ಇದನ್ನೇ ಜಯಮ್ಮ ಕರಿಯಣ್ಣ, ರಾಜಪ್ಪ ದಳವಾಯಿಯವರು ತಿಳಿಸಿದ್ದಾರೆ. ಪೆನ್ನಾರ ಮತ್ತು ಪಶ್ಚಿಮದ ಹಗರಿ ನದಿಗಳು ಇವರ ಆಡಳಿತದ ಗಡಿಪ್ರದೇಶವಾಗಿವೆ. ಇವರ ಉನ್ನತ ಕಾಲದಲ್ಲಿ ೩೨,೦೦೦ ಪ್ರಾಂತ್ಯವನ್ನು ಆಡಳಿತ ಮಾಡುತ್ತಿದ್ದರು. ಇದರಲ್ಲಿ ಕೋಲಾರ, ಚಿತ್ರದುರ್ಗ, ಬೆಂಗಳೂರು, ಬಳ್ಳಾರಿ, ತುಮಕುರು, ಅನಂತಪುರ ಜಿಲ್ಲೆಗಳು ಸೇರಿಕೊಂಡಿದ್ದು ಬೃಹತ ರಾಜ್ಯವಾಗಿತ್ತು. ಇದಕ್ಕೆ ನೊಳಂಬವಾಡಿ ಎಂಬುದಾಗಿ ಹೆಸರು ಇತ್ತು ಎಂದು ಮಹಾಬಳೇಶ್ವರಪ್ಪನವರು ಹೇಳಿದ್ದಾರೆ. ಇದನ್ನು ಗೆಜೆಟಿಯರನಲ್ಲಿ ನೊಳಂಬವಾಡಿ (Nanambavadi) ಎಂದು ಉಲ್ಲೇಖಿಸಲ್ಪಟ್ಟಿದೆ.[೬೫]

ನೊಳಂಬರು ಮೊದಲಿಗೆ ಗಂಗರ ಮತ್ತು ಬಾದಾಮಿ ಚಾಲುಕ್ಯರ ಸಾಮಂತರಾಗಿ ಇತಿಹಾಸದಲ್ಲಿ ಕಂಡುಬರುತ್ತಾರೆ ಎಂದು ನೆಲಮಂಗಳ ಲಕ್ಷ್ಮೀನಾರಾಯಣ, ಆರ್.ಎಸ್. ಪಂಚಮುಖಿ, ಎಚ್. ಜಯಮ್ಮ ಕರಿಯಣ್ಣನವರ ಲೇಖನಿಗಳಿಂದ ತಿಳಿದುಬರುತ್ತದೆ.[೬೬] ಮುಂದೆ ತಮ್ಮ ಶಕ್ತಿಸಾಮರ್ಥ್ಯಗಳಿಂದ ಅಧಿಕಾರಗೈದರು ಎಂಬುದು ಇದರಿಂದ ವ್ಯಕ್ತವಾಗುತ್ತದೆ. ಎಚ್. ಜಯಮ್ಮ ಕರಿಯಣ್ಣನ ಪ್ರಕಾರ ಕ್ರಿ.ಶ. ೭೪೦ರಲ್ಲಿ ಮಂಗಳ ರಾಜನಿಂದ ರಾಜಕೀಯ ಚರಿತ್ರೆ ಪ್ರಾರಂಭವಾಗಿದೆ. ನಂತರ ಕ್ರಿ.ಶ. ೭೫೫ರಲ್ಲಿ ಅಧಿಕಾರಕ್ಕೆ ಬಂದ ಮಂಗಳರಾಜನ ಮಗನಾದ ಸಿಂಹಪೋತ ತಲಕಾಡಿನ ಗಂಗರ ಸಾಮಂತನಾಗಿದ್ದನು ಎಂದು ಹೇಳುವುದರಲ್ಲಿ ನೆಲಮಂಗಳ ಲಕ್ಷ್ಮೀನಾರಾಯಣ, ಆರ್.ಎಸ್. ಪಂಚಮುಖಿಯವರ ವಾದವನ್ನು ಪ್ರೋತ್ಸಾಹಿಸಿದಂತಾಗಿದೆ. ಸಿಂಹಪೂತ ಗಂಗರ ಶ್ರೀಪುರುಷನ ಮಗನಾದ ಶಿವಮಾರ ಮತ್ತು ದುಗ್ಗಮಾರರೊಂದಿಗೆ ಸ್ಪರ್ಧೆ ಮಾಡಿದನು ಎಂದು ಅವನ ನಂತರ ಬಂದ ಚಾರುಪೊನ್ನೇರ ಕ್ರಿ.ಶ. (೮೦೦-೮೩೦). ಅನಂತರ ಬಂದ 'ಒಂದನೇ ಪೊಳಲ್ಚೋರ ನೊಳಂಬಾಧಿರಾಜ' ಕೋಲಾರ ಪ್ರದೇಶದಲ್ಲಿ ಆಡಳಿತ ಮಾಡಿದ ಮೊದಲ ಅರಸನೆಂದು (ಕ್ರಿ.ಶ. ೮೩೦-೮೭೦) ಚಿಕ್ಕಬಳ್ಳಾಪುರದ ಪೂಳಲ್ಚೋರ ನೊಳಂಬಾಧಿರಾಜನಿಂದಲೇ ಕೋಲಾರ ಪ್ರದೇಶದಲ್ಲಿ ನೊಳಂಬರ ರಾಜಕೀಯ ಚರಿತ್ರೆ ಪ್ರಾರಂಭವಾಗಿದೆ ಎಂದು ಹೇಳಲಾಗುತ್ತದೆ. ಈ ರಾಜನ ಚಿಕ್ಕಬಳ್ಳಾಪುರದ ನಂದಿ ದೇವಾಲಯವೊಂದಕ್ಕೆ ಗೋಪುರವೊಂದನ್ನು ನಿರ್ಮಿಸಿದ್ದಾನೆ ಎಂದು ಎಚ್. ಜಯಮ್ಮ ಕರಿಯಣ್ಣನವರ ಹೇಳಿಕೆ ದೃಢವಾಗುತ್ತದೆ. ಅನಂತರ ಅಧಿಕಾರಕ್ಕೆ ಬಂದ ನೊಳಂಬವಾಡಿ ರಾಜಮಹೇಂದ್ರನು ಅಥವಾ ೧ನೇ ಮಹೇಂದ್ರ (ಸುಮಾರು ೮೭೦ ರಿಂದ ೮೯೫) ಕೋಲಾರದಲ್ಲಿನ ಚೋಳರನ್ನು ಸದೆಬಡಿದು ಅವರ ರೇನಾಲ್ಬು ೭೦೦೦ ಪ್ರಾಂತ್ಯದ ಮುಖ್ಯಭಾಗಗಳನ್ನು ಆಕ್ರಮಿಸುವುದರಲ್ಲಿ ಯಶಸ್ಸು ಕಂಡನೆಂದು ಗೆಜೆಟಿಯರ್ ಮತ್ತು ರಾಜಪ್ಪ ದಳವಾಯಿ ಲೇಖನದಿಂದ ತಿಳಿದುಬರುತ್ತದೆ. ಇದರಿಂದ ಕೋಲಾರದಲ್ಲಿ ನೊಳಂಬರ ಅಧಿಕಾರ ಇನ್ನಷ್ಟು ವಿಸ್ತಾರವಾಯಿತೆಂದು ತಿಳಿದುಬರುತ್ತದೆ. ಇದೇ ಮಹೇಂದ್ರನು ಕೋಲಾರ ಪ್ರದೇಶದಲ್ಲಿ ಅಳಿದುಳಿದ

ಬಾಣರನ್ನು ಸಂಪೂರ್ಣವಾಗಿ ಸೋಲಿಸಿ ಅವರನ್ನು ತನ್ನ ಅಧೀನರಾಗಿ ಮಾಡಿಕೊಂಡನೆಂದು ತಿಳಿದುಬರುತ್ತದೆ. ಇದರಿಂದ "ಮಹಾವಾಲಿ ಕೂಲಾಂತಕ ಅಥವಾ ಮಹಾವಾಲಿ ಕುಲಾಂತಕ"ನೆಂದು. ಬಿ.ಎಲ್. ರೈಸರು ಸಂಬಂಧಿಸಿದ ಶಾಸನಗಳನ್ನು ಸಾದರಪಡಿಸುವುದು ಗೆಜೆಟಿಯರನಿಂದ ತಿಳಿದುಬರುತ್ತದೆ. ಅಂದಿಗೆ ಗಂಗರ ೬೦೦೦ ದೇಶವು ನೊಳಂಬರ ಆಡಳಿತದಲ್ಲಿತ್ತು. ಅನಂತರ ಒಂದನೇ ಅಯ್ಯಪದೇವ, ನಂತರ ಬೀರನೊಳಂಬ ಅಣ್ಣಿಗೆ ಕಾಲದ ಆಡಳಿತದ ಬಗ್ಗೆ ಹೆಚ್ಚಿಗೇನು ಮಾಹಿತಿಗಳಿಲ್ಲ. ನಂತರ ಬಂದ ಇರಿವ ನೊಳಂಬ ದಿಲೀಪ ಮತ್ತು ವನ್ನಿನೊಳಂಬ ಅರಸರ ಬಗ್ಗೆ ಕಾಲಾನುಗತದಲ್ಲಿ ಅಸ್ಪಷ್ಟವಾಗಿದೆ. ಆದರೂ ಇರಿವ ನೊಳಂಬ ಅರಸರಷ್ಟೆ ಅಥವಾ ಕ್ರಿ.ಶ. ೯೫೦ರ ಅವನಿ ಶಾಸನದಲ್ಲಿ ಎಚ್. ಜಯಮ್ಮ ಕರಿಯಣ್ಣನವರು ನಮೂದಿಸಿದರೆ, ರಾಜಪ್ಪ ದಳವಾಯಿ (ಲೇಖನ) ಇರಿವ ನೊಳಂಬ ದಿಲೀಪ (ಕ್ರಿ.ಶ. ೯೪೧-೯೬೭) ಎಂದು ತನ್ನ ಲೇಖನದಲ್ಲಿ ತಿಳಿಸಿದ್ದಾರೆ. ಗೆಜೆಟಿಯರನಲ್ಲಿ ದಿಲೀಪಯ್ಯ ಅಥವಾ ದಿಲೀಪರಸ-ಇರಿವ-ನೊಳಂಬ (೯೪೨-೯೬೬) ಎಂದು ದಾಖಲಿಸಿದೆ. ಅಲ್ಲದೆ ಮತ್ತೊಂದೆಡೆ ಎಚ್. ಜಯಮ್ಮ ಕರಿಯಣ್ಣನವರು ಕ್ರಿ.ಶ. ೯೫೦ರ ಅವನಿ ಶಾಸನ ದಿಲೀಪ ಅರಸನು ಅವನ ಸ್ಥಾನದ ಪನ್ನರಡು ಕಿಮೆದೇರೆಯಂ (ತೆರಿಗೆ) ಮಹಾದೇವರಿಗೆ ಬಿಟ್ಟನೆಂದು (ECX Mb 51) ತಿಳಿಸುವಾಗ ಈ ಮೇಲಿನ ಅಸ್ಪಷ್ಟತೆ ಕಂಡುಬರುತ್ತದೆ. ಇದೇನೆ ಇದ್ದರೂ ದಿಲೀಪ ಅರಸು (ಕ್ರಿ.ಶ. ೯೪೧-೯೬೭) ಕೋಲಾರ ಶಾಸನದ ಪ್ರಕಾರ ೨೭ ವರ್ಷಗಳ ಕಾಲ ಸುಖಶಾಂತಿಯಿಂದ ಆಡಳಿತವನ್ನು ಮಾಡಿದ ಉಲ್ಲೇಖಗಳು ದೊರೆಯುತ್ತವೆ ಎಂದು ರಾಜಪ್ಪದಳವಾಯಿ ಹೇಳುತ್ತಾರೆ (ಲೇಖನದಲ್ಲಿ) ಆರ್.ಆರ್. ದಿವಾಕರ ಕರ್ನಾಟಕ ಪರಂಪರೆ ಸಂಪುಟ೧ದಲ್ಲಿ ಇದನ್ನು ಹೇಳಿದ್ದಾರೆ. ನಂತರ ಬಂದ ಎರಡನೇ ಪೊಳಲ್ಚೋರ ಮಡದಿ ಕದಂಬ ವಂಶದವಳಾದ ದೀವಾಂಬಿಕೆ. ವಿದ್ಯಾವಂತಳು, ಲೋಕೋಪಕಾರ ಕೆಲಸಗಳನ್ನು ಮಾಡಿದಳು ಎಂದು ಎಂ.ಎಂ. ಕಲಬುರ್ಗಿಯವರ ಹೇಳಿಕೆಗೆ ಅವನಿ ಶಾಸನದಲ್ಲಿ ಗುರುತಿಸಿದ್ದಾರೆ. ಇದು ಕ್ರಿ.ಶ. ೯೮೨ರಲ್ಲಿ ಅನೇಕ ದೇವಾಲಯಗಳಿಗೆ ದಾನದತ್ತಿಗಳು ನೀಡಿದಳು ಎಂಬ (ECX Mb 38.50) ಎಚ್. ಜಯಮ್ಮ ಕರಿಯಣ್ಣನವರು ಒತ್ತಿ ಹೇಳಿದ್ದಾರೆ. ಇರಿವ ನೊಳಂಬ (ECX Mb.59) ಅವನಿ ಶಾಸನದಲ್ಲಿ ೨ನೇ ಮಹೇಂದ್ರನ ನಂತರ ಅಧಿಕಾರಕ್ಕೆ ಬಂದನೆಂದು ಉಲ್ಲೇಖಿಸಿದೆ.[೬] ಇವರ ಬಗ್ಗೆ ಹೆಚ್ಚಿನ ವಿವರಗಳು ಇಲ್ಲ.

೯೫೦ರಲ್ಲಿ ಅಧಿಕಾರಕ್ಕೆ ಬಂದ ವಿಜಯಾದಿತ್ಯ ಮಂಗಳ(ಬೇತಮಂಗಳ ಭಾಗ)ನು ಕೆರೆ ನಿರ್ಮಾಣಕ್ಕೆ ದಾನ ನೀಡಿದ ಕೈವಾರವಾಡಿನಲ್ಲಿ ಬ್ರಾಹ್ಮದಾನ ಮಾಡಿದನೆಂದು ಗೆಜೆಟಿಯರನಲ್ಲಿ ಉಲ್ಲೇಖವಿದೆ. ೯೬೧ರಲ್ಲಿ ಖಾಸಸಾಂಬಾಯ್ಯ ಇರಿವ ನೊಳಂಬನ ಅಧೀನದಲ್ಲಿ ಆಡಳಿತ ಮಾಡುತ್ತಿದ್ದ. ೯೬೯ರಲ್ಲಿ ಬಂದ ದಿಲೀಪನ ಮಗನನ್ನು ನೊಳಂಬ ಅಧಿಕಾರಕ್ಕೆ ಬಂದನು. ಗಂಗರ ರಾಜ ಮೂರನೇ ಮಾರಸಿಂಹನೊಂದಿಗೆ ಕಾದಾಡಿದ ಮೇಲೆ ಸೋತ, ಆಗ ಮೂರನೇ ಮಾರಸಿಂಹನು 'ನೊಳಂಬ ಕೂಲಂತಕ' ಎಂಬ ಬಿರುದುನೊಂದಿಗೆ ಗಂಗರಾಜ್ಯ ವಿಸ್ತರಿಸಿದ. ಇದರಿಂದ ಕೋಲಾರ ಪ್ರದೇಶದಲ್ಲಿ ನೊಳಂಬರ ಅಧಿಕಾರ ಕ್ಷೀಣಿಸಿತು. ಗಂಗರ ನಂತರ ಚೋಳರ ಅಧೀನ ಅಧಿಕಾರಿಗಳಾಗಿ ನೊಳಂಬರು ಮುಂದುವರಿದರು ಎಂದು ಮುಳಬಾಗಿಲಿನ ಶಾಸನವೊಂದರಲ್ಲಿ ವ್ಯಕ್ತವಾಗುತ್ತದೆ ಎಂದು ಗೆಜೆಟಿಯರನಲ್ಲಿ

ತಿಳಿಸಿದೆ.[೬೮] (ಕ್ರಿ.ಶ. ೧೦೧೮ರಲ್ಲಿ ಅಧಿಕಾರಕ್ಕೆ ಬಂದ ಜಗದೇಕಮಲ್ಲ ನೊಳಂಬ ಪಲ್ಲವ ಪೆರ್ಮಾಡಿ ಉದಯಾದಿತ್ಯ ರಾಜಧಾನಿಯನ್ನು ಹೇಮಾವತಿಯಿಂದ ಕಂಪಲಿಗೆ ಸ್ಥಳಾಂತರಿಸಿದ ಎಂದು ರಾಜಪ್ಪ ದಳವಾಯಿ ಹೇಳಿದ್ದಾರೆ.)

* * *

ಕೋಲಾರ ಪ್ರದೇಶದಲ್ಲಿ ನೊಳಂಬರ ರಾಜಕೀಯ ಚರಿತ್ರೆಗೆ ಸಂಬಂಧಿಸಿದಂತೆ ಹೆಚ್ಚಿಗೆ ಆಕರಗಳು ಕಂಡುಬರುವುದಿಲ್ಲ. ಮೊದಲಿಗೆ ಬಿ.ಎಲ್. ರೈಸರ ೧೯೦೫ ಶಾಸನಸಂಪುಟ-೧೦ ಮತ್ತು ಅನಂತರ ಎಂ. ಶೇಷಾದ್ರಿಯವರ ಶಾಸನಸಂಪುಟ XVIII, ೧೯೬೫ ಗಳಲ್ಲಿ ದಾಖಲಿಸಿದರು. ವಿವರಗಳು ಹೆಚ್ಚಿಗೆ ಇಲ್ಲ. ಅನಂತರ ೧೯೬೮ರಲ್ಲಿ ಬೆಳಕಿಗೆ ಬಂದ ಕೆ.ಅಭಿಶಂಕರ ಕೃತಿಯಲ್ಲಿ ಇವುಗಳನ್ನು ಆಧರಿಸಿ ವಿವರಿಸಿದ ಆದರೆ ೧೯೩೨ ಮತ್ತು ೧೯೩೫ರಲ್ಲಿ ಪುರಾತತ್ವ ಇಲಾಖೆ ಸಮಿತಿ, ಸಂಶೋಧನೆ ಮಾಡಿದ ಸಾಂಸ್ಕೃತಿಕ ಶೋಧನೆಗಳಿಂದ ನೊಳಂಬರ ಆಡಳಿತ ಮತ್ತು ಅವರ ಸಾಂಸ್ಕೃತಿಕ ಚಟುವಟಿಕೆಗಳ ಮೇಲೆ ಬೆಳಕು ಚೆಲ್ಲುತ್ತದೆ. ನಂತರ ಬಂದ ನೆಲಮಂಗಳ ಲಕ್ಷ್ಮಿನಾರಾಯಣರವರ ಕೃತಿ 'ದಕ್ಷಿಣ ಭಾರತದ ಅರಸುಮನೆತನಗಳು' ಮತ್ತೆ ಎಂ.ವಿ. ಪ ಸುರವರ 'ದಕ್ಷಿಣ ಕರ್ನಾಟಕ ಅರಸು ಮನೆತನಗಳು' ನಂತರ ಬಂದ ಆರ್. ಗೋಪಾಲ 'ಕೋಲಾರ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ' ಎಂಬ ಕೃತಿಯಲ್ಲಿನ ಎಚ್.ಜಯಮ್ಮ ಕರಿಯಣ್ಣನವರ 'ನೊಳಂಬರ ದೇವಾಲಯಗಳು' ಮತ್ತು ಶಾಸನೋಕ್ತ ದಾನದತ್ತಿಗಳಲ್ಲಿರುವ ಕೋಲಾರ ಚರಿತ್ರೆ ರಚನೆಯೂ ನೊಳಂಬರ ರಾಜಕೀಯ ಚರಿತ್ರೆಯನ್ನು ತಿಳಿಯಲು ಸಾಧ್ಯವಾಗಿದೆ.

ವೈದುಂಬರು

ಕೋಲಾರ ಪ್ರದೇಶದಲ್ಲಿ ಗಂಗರ ಆಡಳಿತದ ಅವಧಿಯಲ್ಲಿಯೇ ಜಿಲ್ಲಾ ಸಂಸ್ಥೆಯ ನಾಯಕರಾಗಿ ಮತ್ತು ಗಂಗರ ಸಾಮಂತರಾಗಿರುವುದು ಚರಿತ್ರೆಯಲ್ಲಿ ಕಂಡುಬರುತ್ತಾರೆ ಮತ್ತು ಚೋಳರು ಪ್ರಬಲವಾಗುವವರೆಗೂ ಇವರ ಆಡಳಿತ ಉತ್ತಮವಾಗಿರುವುದು ಎಂದು ಸೂರ್ಯನಾಥ ಕಾಮತ, ಬಿ.ಎಲ್. ರೈಸರು, ಕೆ.ಎಲ್. ರಾಜಶೇಖರಪ್ಪನವರ ಲೇಖನಗಳಿಂದ ತಿಳಿದುಬರುತ್ತದೆ.

ಕ್ರಿ.ಶ. ೧೦ ಮತ್ತು ೧೧ನೇ ಶತಮಾನದಲ್ಲಿ ಪ್ರಭುತ್ವಕ್ಕೆ ಬಂದ ವೈದುಂಬರು ಕೋಲಾರ ಪ್ರದೇಶದಲ್ಲಿ ಆಡಳಿತ ಮಾಡಿದ್ದು, ಇವರ ಮೂಲಸ್ಥಳ ಉತ್ತರಾಕಾರರು ಜಿಲ್ಲೆಯ 'ತುಂಬ' ಎಂಬ ಊರಾಗಿದೆ ಎಂದು ಎಂ.ವಿ. ಕೃಷ್ಣರಾವ ಮತ್ತು ಎಂ. ಕೇಶವಭಟ್ಟರು ಹೇಳಿದ್ದಾರೆ.[೬೯] ಕೋಲಾರ ಜಿಲ್ಲೆಯ ಬೌರಿಂಗ್‌ಪೇಟೆ, ಬಾಗೇಪಲ್ಲಿ, ಮುಳಬಾಗಿಲು ಮತ್ತು ಚಿಂತಾಮಣಿ ತಾಲೂಕುಗಳಲ್ಲಿ ಇವರ ಶಾಸನಗಳು ಕಂಡುಬಂದಿವೆ. ಮತ್ತು ಇವರ ವೀರಸಾಹಸಗಳನ್ನು ತಿಳಿಸುವ ವೀರಗಲ್ಲು ಬಾಗೇಪಲ್ಲಿಯಲ್ಲಿ ದೊರೆತಿದ್ದು, ಕ್ರಿ.ಶ.೯೦೦ರ ಕಾಲವನ್ನು ತಿಳಿಸಿದೆ ಎಂಬುದಾಗಿ ಬಿ.ಎಲ್. ರೈಸರು, ಕೆ. ಅಭಿಶಂಕರರವರ ಹೇಳಿಕೆಯನ್ನು ಎಂ.ವಿ. ಕೃಷ್ಣರಾವ ಮತ್ತು ಕೇಶವಭಟ್ಟರು ಒಪ್ಪುತ್ತಾರೆ.[೭೦] ಇದರಿಂದಾಗಿ ವೈದುಂಬರು ಚಿಕ್ಕಪುಟ್ಟ ಸಾಹಸಗಳಲ್ಲಿಯೇ ಚರಿತ್ರೆಯಲ್ಲಿ ಸ್ಥಿರವಾಗಿದ್ದಾರೆ ಎಂದು ತಿಳಿಯಲಾಗುತ್ತದೆ. 'ದಂಡ ತ್ರಿಣೇತ್ರ' ಎಂಬ ವೈದುಂಬ ಮಹಾರಾಜನು ಆಡಳಿತ ಮಾಡುತ್ತಿದ್ದಾಗ, 'ಕಿರುದೊರೆ'ಯು ಅವನ ರಾಜ್ಯದ ಗಡಿಭಾಗವನ್ನು

ಆಡಳಿತ ಮಾಡುತ್ತಿದ್ದನು. ಆದರೆ ಅದು ಯಾವ ಗಡಿಪ್ರದೇಶವಾಗಿರಬೇಕು ಎಂದು ಇದುವರೆಗೆ ತಿಳಿದಿಲ್ಲವೆಂದು ಎಂ.ವಿ. ಕೃಷ್ಣರಾವರವರು ಹೇಳಿದ್ದಾರೆ. ನಂತರದ ಪ್ರಬಲ ರಾಜನಾದ ವೈಡುಂಬ ವಿಕ್ರಮಾದಿತ್ಯನು ವಿಜಯಾದಿತ್ಯ ಮಂಗಲದ (ಬೇತಮಂಗಲದ) ಕೆರೆಯನ್ನು ಜೀರ್ಣೋದ್ಧಾರ ಮಾಡಿದನೆಂದು ಮುಳಬಾಗಿಲು ೧೯೮ನೇಯ ಶಾಸನವು ಹೇಳಿರುವುದು ಸೂರ್ಯನಾಥ ಕಾಮತ್, ಎಂ.ವಿ. ಕೃಷ್ಣರಾವ ಹಾಗೂ ಎಂ. ಕೇಶವಭಟ್ಟರು ಹೇಳಿದ್ದಾರೆ.[೬೧] ನಂತರ ವಿಕ್ರಮಾದಿತ್ಯನ ಮಗನಾದ ಚಂದ್ರಶೇಖರ ಆಡಳಿತ ಮುಂದುವರಿಸಿದ್ದಾನೆ.

ವೈಡುಂಬರು ಪ್ರಬಲ ಗಂಗರೊಂದಿಗೆ ವೈವಾಹಿಕ ಸಂಬಂಧ ಬೆಳೆಸಿ ತಮ್ಮ ಅಧಿಪತ್ಯ ನಿಲುವನ್ನು ಉಳಿಸಿಕೊಂಡಿದ್ದಾರೆ ಎಂಬುದಕ್ಕೆ ಕಳಿಂಗ ಗಂಗರಾಜನಾದ ೬ನೆಯ ಕಾಮವರ್ಮನು ವಿನಯಾ ಮಹಾದೇವಿ ಎಂಬ ವೈಡುಂಬ ರಾಜಕುಮಾರಿಯನ್ನು ವರಿಸಿದನು. ಆ ದಂಪತಿಗಳ ಮಗನು ಆರನೇ ವಜ್ರಹಸ್ತಿಯು ಕ್ರಿ.ಶ. ೧೦೩೮ರಲ್ಲಿ ಅಧಿಕಾರಕ್ಕೆ ಬಂದನು ಎಂಬುದಾಗಿ ಬಿ.ಎಲ್. ರೈಸರು ಹೇಳಿದ್ದಾರೆ.[೬೨] ಅಲ್ಲದೆ ಅವರು ಸ್ವತಂತ್ರ್ಯ ರಾಜ್ಯವನ್ನು ಹೊಂದಿದರು ಎಂಬುದಾಗಿ ಬಾಗೇಪಲ್ಲಿಯ ೬೨ನೇ ಶಾಸನವು ತಿಳಿಸಿದೆ ಎಂದು ಹೇಳಿದ್ದಾರೆ.

ಹೀಗಿದ್ದರೂ ಚೋಳರು ಇವರನ್ನು ದಮನ ಮಾಡಲು ಪ್ರಯತ್ನ ಮಾಡುತ್ತಿದ್ದರು. ಅಂದರೆ ಕ್ರಿ.ಶ. ೯೦೭ರಲ್ಲಿ ಚೋಳ ರಾಜನಾದ ಒಂದನೇ ಪರಾಂತಕನು ವೈದುಂಬರರನ್ನು ಜಯಿಸಿದನು ಎಂಬುದಾಗಿ ಎಂ.ವಿ. ಕೃಷ್ಣರಾವ ಮತ್ತು ಎಂ. ಕೇಶವಭಟ್ಟರು ಹೇಳಿದ್ದಾರೆ. ಅಲ್ಲದೆ ನೊಳಂಬ ರಾಜ ದಿಲೀಪನು ವೈಡುಂಬ ರಾಜ ವಿಕ್ರಮಾದಿತ್ಯನೆದುರು ಪರಾಭವಗೊಂಡನೆಂದು ಅವರ ಶಾಸನಗಳಿಂದ ತಿಳಿದುಬರುತ್ತದೆ. ಚೋಳ ರಾಜನಾದ ಒಂದನೇ ವೀರರಾಜೇಂದ್ರನು ವೈದುಂಬ ರಾಜನೊಬ್ಬನ ಶಿರಚ್ಛೇದನ ಮಾಡಿದನೆಂದು ಕ್ರಿ.ಶ. ೧೦೬೭ರ ಶಾಸನದಲ್ಲಿ ಹೇಳಿದೆ. ಇದನ್ನೇ ಎಂ.ಎಸ್. ಗೋಪಾಲರವರು ಮುಳಬಾಗಿಲಿನ ಶಾಸನದಲ್ಲಿ ತಿಳಿಸಿದೆ ಎಂದು ಹೇಳಿದ್ದಾರೆ. ಇದೇ ಕಾಲಕ್ಕೆ ವೈಡುಂಬರು ವೀರರಾಜೇಂದ್ರನಿಂದ ಸಂಪೂರ್ಣ ಪರಾಜಿತರಾಗಿರಬೇಕು. ಇದಾದ ನಂತರ ಹಲವಾರು ವೈಡುಂಬ ಮುಖಂಡರು ತಲೆಯೆತ್ತಿದರು. ಇವರು ರಾಜ ಬಿರುದುಗಳನ್ನು ಹೊಂದಿ, ರಾಜಲಾಂಛನ ಧಾರಣೆಗೆ ಅನುಮತಿ ಪಡೆದಿದ್ದರು ಅಲ್ಲದೆ ಪಶ್ಚಿಮ ಮಹಾರಾಜವಾಡಿ ಎಂಬ ಗ್ರಾಮವನ್ನು ದತ್ತಿ ಪಡೆದರು ಎಂದು ಎಂ.ವಿ. ಕೃಷ್ಣರಾವ ಹೇಳುತ್ತಾರೆ ಇದನ್ನೇ ಪಿ.ವಿ. ಕೃಷ್ಣಮೂರ್ತಿಯವರು, ಬಿ.ಎಲ್. ರೈಸ್‌ರವರು ಹೇಳಿದ್ದಾರೆ ಹಾಗೂ ಕೆ.ಎಲ್. ರಾಜಶೇಖರರವರು ಈ ಕುರಿತಾಗಿ ಲೇಖನವನ್ನು ಬರೆದಿದ್ದು, ಅದರಲ್ಲಿ ಕೋಲಾರದಲ್ಲಿ ೭ ವೈಡುಂಬ ಶಾಸನಗಳು ದೊರೆತಿರುವುದಾಗಿ ತಿಳಿಸಿದ್ದಾರೆ.[೬೩] ಹೀಗೆ ಚೋಳರ ದಾಳಿಗಳಿಗೆ ತತ್ತರಿಸಿ ಹೋದ ವೈಡಂಬರು ಕೋಲಾರ ಚರಿತ್ರೆಯಲ್ಲಿ ೧೧ನೇ ಶತಮಾನದ ಅಂತ್ಯದ ವೇಳೆಗೆ ನಿರ್ಗಮನರಾಗಿ ಚೋಳರು ಪ್ರಭುತ್ವಕ್ಕೆ ಬರುತ್ತಾರೆ.

ಚೋಳರು

ಗಂಗರ ನಂತರ ಚರಿತ್ರೆ ಪುಟಗಳಲ್ಲಿ ಬೃಹತ್ ಚರಿತ್ರೆಯನ್ನು ನಿರ್ಮಿಸಿದ ಚೋಳರು ಕೋಲಾರದ ಚರಿತ್ರೆಯಲ್ಲಿ ಪ್ರಾಮುಖ್ಯತೆ ಪಡೆದಿದ್ದಾರೆ. ಇವರು ಕರ್ನಾಟಕದಲ್ಲಿ ತಮ್ಮ ಸಂಸ್ಕೃತಿ ವಿಸ್ತರಣೆಗೆ

ಕೋಲಾರದ ಪ್ರದೇಶವು ಸಹಕಾರಗೊಂಡಿದೆ. ಮತ್ತು ಇವರ ಆಡಳಿತದ ಕಾಲದಲ್ಲಿ ಕೋಲಾರವು ಇತರೆ ಕರ್ನಾಟಕದ ಭಾಗಗಳಿಗಿಂತ ಹೆಚ್ಚಿನ ಚರಿತ್ರೆಯನ್ನು ಹೊಂದುವುದರಲ್ಲಿ ವೈಶಿಷ್ಟ್ಯತೆಯನ್ನು ಪಡೆದಿದೆ. ಈ ವಿಷಯವಾಗಿ ಕೆ. ಅಭಿಶಂಕರರವರ 'ಕೋಲಾರ ಜಿಲ್ಲಾ ಗೆಜೆಟಿಯರ್', ಬಿ.ಎಲ್. ರೈಸ್‌ರ 'ಶಾಸನ ಸಂಪುಟ-೧೦', ಎಂ. ಶೇಷಾದ್ರಿಯವರ 'ಶಾಸನಗಳ ಸಂಪುಟ-೧೮', ಎಸ್. ಸ್ವಾಮಿನಾಥನ್‌ರವರ 'ತಮಿಳು ಶಾಸನಗಳ ಲೇಖನ', ಪಿ.ವಿ. ಕೃಷ್ಣಮೂರ್ತಿಯವರ 'ಚೋಳರ ಆಡಳಿತ ಘಟಕಗಳು' ಎಂಬ ಲೇಖನ, ಎಂ.ಜಿ. ನಾಗರಾಜ್‌ರವರ 'ಇತಿಹಾಸ ದರ್ಶನ ಸಂಪುಟ-೧೭' ಹಾಗೂ ಆರ್. ಸತ್ಯನಾಥ್ ಅಯ್ಯರ್‌ರವರ 'ಪ್ರಾಚೀನ ಭಾರತದ ಚರಿತ್ರೆ', ಪಿ. ವೆಂಕಟಲಕ್ಷ್ಮಮ್ಮನವರ ಕೃತಿಗಳಿಂದ ಚೋಳರ ರಾಜಕೀಯ ಚರಿತ್ರೆಯನ್ನು ವಿಶ್ಲೇಷಿಸಲು ಸಾಧ್ಯವಾಗಿದೆ.

ಕೋಲಾರ ಪ್ರದೇಶದಲ್ಲಿ ಚೋಳರ ರಾಜಕೀಯ ಚರಿತ್ರೆ ೧೦ನೇ ಶತಮಾನದಲ್ಲಿಯೇ ಕಂಡುಬರುವುದಾದರೂ ೧೧ನೇ ಶತಮಾನದಲ್ಲಿ ಒಂದನೇ ಪರಾಂತಕನು (ಕ್ರಿ.ಶ. ೧೦೦೪ರಲ್ಲಿ) ಗಂಗರ ಪ್ರಭುತ್ವವನ್ನು ಕೋಲಾರ ಪ್ರದೇಶದಲ್ಲಿ ಮುರಿಯುವುದರ ಮೂಲಕ ಪ್ರಬಲತೆಗೆ ಬಂದರು. ಇವನಿಗೆ 'ತಂಜೈಯ್‌ಕೊಂಡ' ಎಂಬ ಬಿರುದು ಇದೆ. ಹೀಗಾಗಿ ಈ ವೇಳೆಗೆ ಬಾಣರು, ವೈದುಂಬರು, ಗಂಗರು ಹಾಗೂ ನೊಳಂಬರನ್ನು ಸೋಲಿಸಿ ಅವರನ್ನು ತಮ್ಮ ಸಾಮಂತರಾಗಿ ಮಾಡಿಕೊಂಡರು. ಇದಕ್ಕೆಲ್ಲ ಕೋಲಾರ ಪ್ರದೇಶದ ಅನೈತಿಕ ರಾಜಕೀಯ ಸ್ಥಿತಿಯೇ ಕಾರಣ ಎಂಬುದಾಗಿ ಗೆಜೆಟಿಯರಗಳಿಂದ ವ್ಯಕ್ತವಾಗುತ್ತದೆ.[೭೪] ಇಂತಹ ಸ್ಥಿತಿಯಲ್ಲಿ ಪ್ರಬಲತೆಗೆ ಬಂದ ಚೋಳರಾಜ ಒಂದನೇ ಪಾರಂತಕನು ಪ್ರಥಮನು ಎಂದು ಗೆಜೆಟಿಯರಗಳೂ ತಿಳಿಸಿದೆ. ಇದನ್ನು ಬಿ.ಎಲ್. ರೈಸರು ಮತ್ತು ಎಂ. ಶೇಷಾದ್ರಿಯವರ ಶಾಸನ ಸಂಪುಟಗಳಲ್ಲಿ ಉಲ್ಲೇಖಿಸಿಗುವುದು ಕಂಡುಬರುತ್ತದೆ. ಇವರ ರಾಜಧಾನಿ ತಮಿಳುನಾಡಿನ ತಂಜಾವೂರು ಎಂಬುದಾಗಿದೆ. ಮತ್ತು ಇವರ ಪ್ರಥಮ ರಾಜನು 'ವಿಜಯಾಲ' ಎಂಬುದಾಗಿ ತಿಳಿದುಬರುತ್ತದೆ.

ಈ ಅವಧಿಯಲ್ಲಿ ಕೋಲಾರವನ್ನು ಕೋಲಹಲ/ಕೋಲಾಹಲಪುರ ಎಂಬುದಾಗಿ ಕರೆಯುತ್ತಿದ್ದರು ಎಂದು ಪಿ.ವಿ. ಕೃಷ್ಣಮೂರ್ತಿಯವರ ಲೇಖನದಲ್ಲಿ ಹೇಳುತ್ತಾರೆ.[೭೫] ಇದನ್ನು ಗೆಜೆಟಿಯರಗಳಲ್ಲಿ ತಿಳಿಸಿದೆ. ಪ್ರಾರಂಭದ ಅವಧಿಯಲ್ಲಿ ಕೋಲಾರದ 'ಬೈರಕೊರು' (Bairkur) ಎಂಬುದು ಪ್ರಮುಖ ಆಡಳಿತ ಭಾಗವಾಗಿತ್ತು. ಇವರ ಆಡಳಿತವು ಕ್ರಿ.ಶ. ೧೦೦೪ ರಿಂದ ೧೧೧೬ರವರೆಗೆ ಅಂದರೆ ಹೊಯ್ಸಳರು ಪ್ರಬಲರಾಗುವವರೆಗೂ ಮುಂದುವರೆಯಿತು. ಅಲ್ಲದೆ ಮಧ್ಯ ಉತ್ತರ ಕರ್ನಾಟಕದಲ್ಲಿ ಚಾಲುಕ್ಯರು ರಾಜಕೀಯವಾಗಿ ಪ್ರಬಲರಾಗಿರುವುದು ಕಂಡುಬರುತ್ತದೆ. ಇದು ಅಂದಿನ ಭೌಗೋಳಿಕವಾಗಿ ರಾಜಕೀಯ ಭಾಗಗಳು ವ್ಯಕ್ತಪಡಿಸಿರುವುದಾಗಿದೆ.

ಒಂದನೇ ರಾಜೇಂದ್ರ ಚೋಳನು (೯೮೫-೧೦೧೬) ಕೋಲಾರ ಪ್ರದೇಶವನ್ನು ಹಿಡಿದಾಗ ಮೈಸೂರು ರಾಜ್ಯದ ಬಹುಭಾಗವನ್ನು ಗಂಗರಿಂದ ವಶಪಡಿಸಿಕೊಂಡಿದ್ದನು. ಇವನ ಅಧೀನದಲ್ಲಿ ಇದ್ದ ಕೋಲಾರದಲ್ಲಿ 'ಪಿಡಿಯೂರಮ್ಮ' ಅಥವಾ 'ಕೋಲಾರಮ್ಮ' ಎಂಬ ದೇವಾಲಯವನ್ನು (ಗಂಗರ ದೇವಾಲಯ) ಪುನರುಜ್ಜೀವನಗೊಳಿಸಲ್ಪಟ್ಟಿದೆ. ಮತ್ತು ಅವರ ಆಡಳಿತ ಭಾಗಕ್ಕೆ 'ನಿಗರಿಲಿ ಚೋಳಮಂಡಲ'

ಎಂಬುದಾಗಿ ಎಗರಿಲಿ ಚೋಳರಸನ ಹೆಸರಿನಲ್ಲಿ ಕರೆಯಲು ರೂಢಿಗತಗೊಂಡಿತು ಎಂಬುದಾಗಿ ಗೆಜೆಟಿಯರ ತಿಳಿಸಿದೆ. ಇದನ್ನು ಪಿ.ವಿ. ಕೃಷ್ಣಮೂರ್ತಿ, ಎಸ್. ಸ್ವಾಮಿನಾಥನ, ಸಿ.ವೆಂಕಟಲಕ್ಷ್ಮಮ್ಮನವರು ಹೇಳುತ್ತಾರೆ. ಚೋಳರು ಎಂದಾಗ ಅವರ ಆಡಳಿತ ಘಟಕಗಳು ಅವರ ಚರಿತ್ರೆಯಲ್ಲಿ ವಿಶೇಷವಾಗಿ ಕಂಡುಬರುತ್ತವೆ. ಇದು ಕೋಲಾರ ಪ್ರದೇಶದಲ್ಲಿ ಚೋಳರ ಆಡಳಿತ ಘಟಕಗಳನ್ನು ಪಿ.ವಿ. ಕೃಷ್ಣಮೂರ್ತಿಯವರು ಲೇಖನದಲ್ಲಿ ಗುರುತಿಸಿರುವುದನ್ನು ಈ ಕೆಳಕಂಡಂತೆ ಗುರುತಿಸಿರುವುದರಲ್ಲಿ ತಿಳಿಯಲಾಗುತ್ತದೆ.[೬]

'ಪುಲಿನಾಡು', 'ನಡಗಾವಳಿ' '೧೨,೦೦೦ ನೊಳಂಬವಾಡಿಯ', 'ಕುವಳಾಲ', 'ಕೈಮರನಾಡುಗಳು', 'ಗಂಗವಾಡಿ', 'ದಡಿಗವಾಡಿ', 'ಮಹಾರಾಜವಾಡಿ ೭೦೦೦' ಮುಂತಾದ ಪ್ರಧಾನ ನಾಡುಗಳಿಗೆ ಸೇರಿದ್ದ 'ಗಂಗೈಸಾಸಿರ', 'ಕೊಡಲ್ ೧೨', 'ರಾಮಡಿ ೩೦೦', 'ತೇಕಲ್‌ನಾಡು ೭೦', 'ಅವನಿನಾಡು' ಮುಂತಾದವುಗಳೊಂದಿಗೆ 'ಕಳವರನಾಡು', 'ಪೊದಲ್‌ನಾಡು', 'ಪುಲಿಯೂರುನಾಡು' ಎಂಬುವು ಚೋಳರ ಆಡಳಿತದಲ್ಲಿ ಕಂಡುಬರುವ ಆಡಳಿತದ ಭಾಗಗಳಾಗಿವೆ. ಅವುಗಳಲ್ಲಿ ಬಹಳಷ್ಟು ಚೋಳ ಮಂಡಲದಲ್ಲಿ ಅಂತರ್ಗತವಾಗಿದ್ದವು. ನಿಗರಿಲಿ ಚೋಳಮಂಡಲವನ್ನು ಎಗರಿಲಿ ಚೋಳನ ಬಿರುದುಗಳಲ್ಲಿ ಒಂದಾಗಿದೆ. ಇದು ನೊಳಂಬವಾಡಿ ಪ್ರದೇಶಕ್ಕೆ ಪ್ರತಿನಾಮವಾಗಿದೆ. ಅಂದರೆ ಚೋಳರು ಗದ್ದೆ ಪ್ರದೇಶಗಳಿಗೆ 'ಚೋಳಮಂಡಲ' ಎಂದಾಗಿರುವುದು ಖಚಿತವಾಗಿದೆ. ಇದರಲ್ಲಿ ಕುವಲಾಲನಾಡು, ಕೈವಾರನಾಡು, ಪುದನಾಟ್ಟುಗಳು ಅಂತರ್ಗತವಾಗಿವೆ. ಅವನಿಯು ಜಯಿಸಿಕೊಂಡ ಚೋಳ ಒಳನಾಡಿನ ಒಂದು ನಾಡಾಗಿದೆ. ಕೋಲಾರ ಜಿಲ್ಲೆಯ ಕೋಲಾರ, ಮುಳಬಾಗಿಲು, ಬಂಗಾರಪೇಟೆ, ಶಿಡ್ಲಘಟ್ಟ, ಶ್ರೀನಿವಾಸಪುರ, ಚಿಕ್ಕಬಳ್ಳಾಪುರ, ಚಿಂತಾಮಣಿ, ಮಾಲೂರು ತಾಲೂಕು ಪ್ರದೇಶದ ಅನೇಕ ಶಾಸನಗಳು ಈ 'ನಿಗರಿಲಿ ಚೋಳಮಂಡಲ' ಎಂದಾಗಿ ಉಕ್ತವಾಗಿದೆ. ಚೋಳ ದೊರೆ ವೀರರಾಜೇಂದ್ರನ ಬಿರುದು ಇರಟ್ಟ 'ರಾಜಕುಲ ಕಾಲನ' ಎಂದಾಗಿದೆ. ಪ್ರಾಯಶಃ ಈತನ ಕಾಲದಲ್ಲಿ ಅವನ ಆಕ್ರಮಣಕ್ಕೆ ಒಳಗಾದ ಮೂಲ ರಾಷ್ಟ್ರಕೂಟ ರಾಜ್ಯದ ಭಾಗಗಳಿಗೆ 'ಇರಟ್ಟಪಾಡಿ ಚೋಳಮಂಡಲ' ಎಂದು ಹೆಸರು ಬಂದಿರಬೇಕು. ಇದರಲ್ಲಿರುವ ಚಿಂತಾಮಣಿ ಮತ್ತು ಶಿಡ್ಲಘಟ್ಟ ಪ್ರದೇಶಗಳು ಅಂತರ್ಗತವಾಗಿವೆ. ಮಡಿಕೊಂಡ 'ಚೋಳಮಂಡಲ' ಎಂಬುದು ಮಾಲೂರು ಭಾಗವಾಗಿದೆ. ಮಣ್ಣೆ ನಾಡುಗಳು, ವಿಕ್ರಮಚೋಳ ಮಂಡಲದಲ್ಲಿ ವಿಲೀನವಾಗಿದ್ದವು. ಇವುಗಳಿಗೆಲ್ಲ ಮಂತ್ರಿಮಂಡಲ ಎಂಬುದಾಗಿ ಕರೆಯಲಾಗುತ್ತಿತ್ತು. ಇವುಗಳು ಮಂತ್ರಿಗಳ ಅಧೀನದಲ್ಲಿದ್ದವು.

* * *

ಹೀಗೆ ವಿವಿಧ ರಾಜರ ಹೆಸರನ್ನು ಅವರ ಕಾಲಾವಧಿಯಲ್ಲಿ ಅವರ ಹೆಸರುಗಳಿಂದ ಕರೆಯುವುದು ರೂಢಿಯಾಗಿದೆ ಎಂದು ಹೇಳುವುದರ ಮೂಲಕ ಚೋಳರ ಮಂಡಲದಲ್ಲಿ ಗ್ರಾಮಾ ಸಮಾಜದ ಆಡಳಿತದ ಮೇಲೆ ಬೆಳಕು ಚೆಲ್ಲುತ್ತದೆ. ಈ ರಾಜವಂಶದ ಪ್ರಖ್ಯಾತರಾದ ರಾಜರು ಎಂದರೆ, ಒಂದನೇ ಪಾರಾಂತಕ, 'ರಾಜರಾಜಚೋಳ', 'ಒಂದನೇ ರಾಜೇಂದ್ರ ಚೋಳ', ಒಂದನೇ ಕುಲೋತ್ತುಂಗ ಚೋಳ ಮುಂತಾದವರು ಪ್ರಮುಖರಾಗಿದ್ದಾರೆ. 'ಒಂದನೇ ರಾಜೇಂದ್ರ ಚೋಳನು' (೧೦೧೨-೧೦೪೪) ಚಿಕ್ಕಂದಿನಿಂದಲೇ ಸೈನಿಕ

ತರಬೇತಿಯಲ್ಲಿ ಪಳಗಿದ್ದು, ಗಂಗರಾಜರ ತಲಕಾಡನ್ನು ಒಡಿದು ಅಲ್ಲಿನ ಗಂಗರ ಪ್ರಭುತ್ವವನ್ನು ಮುರಿದನು. ಗಂಗವಾಡಿ ಮತ್ತು ನೊಳಂಬವಾಡಿಗಳ ಮೇಲೆ ಅಧಿಕಾರವನ್ನು ಸಾಧಿಸಿರುವುದಾಗಿ ಗೆಜೆಟಿಯರ್‌ನಲ್ಲಿ ತಿಳಿಸಿದೆ. ನಿಲಿಕರಿ ಚೋಳಮಂಡಲದಿಂದ ನೊಳಂಬವಾಡಿಯವರೆಗೆ ಅವರ ರಾಜ್ಯ ವಿಸ್ತರಣೆಗೊಂಡಿದೆ. ಇಷ್ಟಾದರೂ ಚೋಳರ ರಾಜ್ಯವನ್ನು ಕಾಲಾಕ್ರಮವಾಗಿ ತಿಳಿಸುವಲ್ಲಿ ಗೊಂದಲವಾಗಿದೆ. ಮತ್ತು ಚರಿತ್ರೆ ಅಸ್ಪಷ್ಟಗೊಂಡಿದೆ ಎಂದು ಆರ್. ಸತ್ಯನಾಥರು ಹೇಳಿದ್ದಾರೆ. ಆದರೂ ಚೋಳರ ಶಾಸನಗಳನ್ನು ವಿಶೇಷವಾಗಿ ಅಧ್ಯಯನ ಮಾಡಿದ ಎಂ. ಶೇಷಾದ್ರಿಯವರು ಕಾಲಾನುಕ್ರಮವಾಗಿ ತಿಳಿಸಲು ಯತ್ನಿಸಿದ್ದಾರೆ. ಅಂದರೆ, ರಾಜರಾಜ ಚೋಳನ ಆಡಳಿತ ಕಾಲ ಕ್ರಿ.ಶ. ೧೦೦೫ರವರೆಗೆ ಸರಿಯಾಗಿ ಕಾಲವನ್ನು ಗುರುತಿಸಲು ಸಾಧ್ಯವಾಗಿಲ್ಲ. ನಂತರದ ಅವಧಿಯಲ್ಲಿ ಅಧಿಕಾರಕ್ಕೆ ಬಂದ ಅರಸರಾದ ೧ನೇ ರಾಜರಾಜೇಂದ್ರಚೋಳ, ಒಂದನೇ ಕುಲೋತ್ತುಂಗರ ಕಾಲವು ಸರಿಯಾಗಿದೆ ಎಂದು ತಿಳಿಸಿದ್ದಾರೆ. ಸುಮಾರು ೬ ಅಥವಾ ೭ ಶಾಸನಗಳಲ್ಲಿ ದೊರೆತ ಮಾಹಿತಿಯ ಪ್ರಕಾರ ನಂದಿದುರ್ಗದ ದೇವಾಲಯವು ಚೋಳರ ರಾಜೇಂದ್ರನ ಕಾಲದಲ್ಲಿ ಪುನರ್‌ನಿರ್ಮಿತವಾದದ್ದು. ಅಲ್ಲದೆ, ಅವನ ಸಹೋದರ ಒಂದನೇ ರಾಜೇಂದ್ರ (೧೦೫೨-೧೦೬೪) ಮತ್ತು ೧ನೇ ವೀರರಾಜೇಂದ್ರ (೧೦೬೩-೧೦೭೦) ರವರು ನಿರ್ಮಿಸಿದ ಪಿಡಿಯಾರೂ (ಕೋಲಾರಮ್ಮ) ದೇವಾಲಯವು ಅವರ ಸಾಂಸ್ಕೃತಿಕ ಚರಿತ್ರೆಗೆ ಮಹತ್ವದ ಕೊಡುಗೆ ಎಂದು ಗೆಜೆಟಿಯರ್‌ಗಳಿಂದ ತಿಳಿಯುತ್ತದೆ. ವೀರರಾಜೇಂದ್ರನ ನಂತರ ಬಂದ ಆದಿರಾಜೇಂದ್ರನ ಕಾಲಕ್ಕಾಗಲೇ ಪಶ್ಚಿಮದಲ್ಲಿ ಚಾಲುಕ್ಯರ ದಾಳಿ ಎದುರಿಸಬೇಕಾಗಿ ಬಂತು. ಒಂದನೇ ಕುಲೋತ್ತುಂಗನು ಚೋಳರ ರಾಜ್ಯವನ್ನು ವಿಸ್ತರಿಸುವುದಲ್ಲದೆ ಆಡಳಿತದಲ್ಲಿ ಪ್ರಗತಿ ಸಾಧಿಸಿದನು.[೬೬] ಅವರ ಸೇನಾಪತಿ ಗಂಗಯ್ಯರಾಜನು ನಿಗರಿಲಿ ಚೋಳಮಂಡಲ ಮತ್ತು (ಕೊವಲನಾಡು ಪ್ರಾಂತ್ಯ) ದೇವಾಲಯಗಳಿಗೆ ಚಿನ್ನ ಒದಗಿಸಿದನು ಎಂದು ಗೆಜೆಟಿಯರನಲ್ಲಿ ತಿಳಿಸಿದೆ. ಇದನ್ನೇ ಪಿ.ವಿ.' ಕೃಷ್ಣರಾವ್, ಎಸ್. ಸ್ವಾಮಿನಾಥನರವರು ಹೇಳಿದ್ದಾರೆ. ಯುವರಾಜ ಮಹೇಂದ್ರನು ನಿರ್ಮಿಸಿದ ಅವಧಿಯ ರಾಮೇಶ್ವರ ದೇವಾಲಯವು ಚೋಳರ ಆಡಳಿತದ ವೈಶಾಲ್ಯತೆಯನ್ನು ಗುರುತಿಸುತ್ತದೆ. ಆದರೆ ೧ನೇ ಕುಲೋತ್ತುಂಗನ ಅಂತಿಮ ಕಾಲದಲ್ಲಿ ಪಶ್ಚಿಮ ಚಾಲುಕ್ಯರು ಹಾಗೂ ಹೊಯ್ಸಳರ ದಾಳಿಗಳನ್ನು ಎದುರಿಸಲು ವಿಫಲರಾದರು. ಹೊಯ್ಸಳರ ಪ್ರಖ್ಯಾತ ಅರಸನಾದ ವಿಷ್ಣುವರ್ಧನನು ಗಂಗರಾಜ್ಯದ ಮೇಲೆ ಅಧಿಪತ್ಯ ಸಾಧಿಸುತ್ತಾನೆ. ಇದರಿಂದ ಅಲ್ಲಿನ ಚೋಳರ ಆಡಳಿತ ನಿರ್ಗಮನವಾಗಬೇಕಾಯಿತು ಎಂದು ಶೇಷಾದ್ರಿರವರು ಹೇಳಿದ್ದಾರೆ.[೬೭] ಆದರೂ ೧೩ನೇ ಶತಮಾನದವರೆಗೆ ಅಂದರೆ ಜಯಗೊಂಡ ಚೋಳನ ಕಾಲದವರೆಗೆ ಕೋಲಾರದ ಕೆಲವು ಭಾಗಗಳಲ್ಲಿ ಹೊಯ್ಸಳರ ಅಧೀನದಲ್ಲಿಯೇ ತಮ್ಮ ಅಧಿಕಾರವನ್ನು ಉಳಿಸಿಕೊಂಡು ಬಂದಿದ್ದವು ಎಂಬುದು ಗೆಜೆಟಿಯರನಲ್ಲಿದೆ. ಇದು ಅವರು ನಿರ್ಮಿಸಿದ ಅವನಿ, ಬೇಕಲ್, ತೊಂಡುಮಲ್ಲೆ ದೇವಾಲಯಗಳಲ್ಲಿ ದೊರೆತ ಶಾಸನಗಳಿಂದ ವ್ಯಕ್ತವಾಗುತ್ತದೆ ಎಂಬುದಾಗಿ ಎಸ್. ಸ್ವಾಮಿನಾಥನರವರ ಲೇಖನಗಳಿಂದ ತಿಳಿದುಬರುತ್ತದೆ.[೬೮]

ಕೋಲಾರ ಪ್ರದೇಶದಲ್ಲಿ ಚೋಳರ ಆಡಳಿತ ಮುಂದುವರೆಯುತ್ತಿದ್ದಂತೆ ಪ್ರಾಚೀನ ಚಾರಿತ್ರಿಕ ಯುಗ ಮುಗಿದು ಮಧ್ಯಕಾಲೀನ ಚರಿತ್ರೆ ಪ್ರಾರಂಭವಾಗುತ್ತದೆ. ಆದುದರಿಂದ ಪ್ರಸ್ತುತ ಲೇಖನಶಾಸ್ತ್ರದಲ್ಲಿ

ಚೋಳರ ಆಡಳಿತ ಚರಿತ್ರೆಯೊಂದಿಗೆ ಪ್ರಾಚೀನ ಚರಿತ್ರೆ ಭಾಗವನ್ನು ಮುಕ್ತಾಯ ಮಾಡಲಾಗಿದೆ. ಹಾಗೂ ಮಧ್ಯಕಾಲೀನ ಚರಿತ್ರೆ ಹೊಯ್ಸಳರ ಆಡಳಿತದಿಂದ ಪ್ರಾರಂಭವಾಗಿದ್ದು, ಅಧ್ಯಾಯನದ ಭಾಗ (ಅ)ವನ್ನು ಮುಂದಿನ ಭಾಗದಲ್ಲಿ ವಿವರಿಸಲ್ಪಟ್ಟಿದೆ.

* * *

ಕೋಲಾರ ಪ್ರದೇಶದ ಪ್ರಾಚೀನ ಚರಿತ್ರೆಯನ್ನು ವ್ಯಕ್ತಪಡಿಸಲು ಕೋಲಾರ ಪ್ರದೇಶವನ್ನೇ ಕೇಂದ್ರವಾಗಿಟ್ಟುಕೊಂಡು ರಚಿಸಿರುವ ಕೃತಿಗಳು ಹೆಚ್ಚಾಗಿ ಕಂಡುಬಂದಿಲ್ಲ, ಆದರೂ ಬಿ.ಎಲ್. ರಾಯಿಸ ಹಾಗೂ ಎಂ. ಶೇಷಾದ್ರಿ ಅವರ ಶಾಸನಸಂಪುಟಗಳು ಹೆಚ್ಚಿನ ಮಾಹಿತಿ ನೀಡಲು ನೆರವಾಗಿವೆ. ಅನಂತರ ಕೆ. ಅಭಿಶಂಕರರವರ ಕೋಲಾರ ಜಿಲ್ಲಾ ಗೆಜೆಟಿಯರ್ ಹೆಚ್ಚಾಗಿ ಈ ಶಾಸನ ಸಂಪುಟಗಳನ್ನು ಅವಲಂಭಿಸಿಯೇ ರಚಿಸಲ್ಪಟ್ಟಿದೆ. ಇತ್ತೀಚೆಗೆ ಈ ಕುರಿತಾಗಿ ಪ್ರಕಟಣೆಗೊಂಡಿರುವ ಆರ್. ಗೋಪಾಲ್‌ರವರು 'ಕೋಲಾರ ಜಿಲ್ಲಾ ಇತಿಹಾಸ ಮತ್ತು ಪುರಾತತ್ವ' ಎಂಬ ಕೃತಿ ಒಂದು ಅಂಶದಲ್ಲಿ ಮೇಲುಗೈ ಎನಿಸಿದೆ. ಇದರಲ್ಲಿ ಕಂಡುಬರುವ ಬಹುತೇಕ ಲೇಖನಿಗಳು ಕೋಲಾರ ಪ್ರದೇಶದ ಪ್ರಾಚೀನ ಚರಿತ್ರೆಯನ್ನೇ ಒತ್ತಿ ಹೇಳುತ್ತದೆ. ಆದರೂ, ಇವು ಯಾವುವೂ ಪರಿಪೂರ್ಣವಾಗಿ ವಿವರಿಸುವಲ್ಲಿ ವಿಫಲವಾಗಿವೆ ಎಂದೇ ತಿಳಿದುಬರುತ್ತದೆ. ಸೈದ್ಧಾಂತಿಕವಾಗಿ ಕೋಲಾರ ಪ್ರದೇಶದ ಚರಿತ್ರೆಯ ಬೆಳವಣಿಗೆ ಹಾಗೂ ಈ ಕುರಿತಾಗಿ ಚರಿತ್ರೆ ಲೇಖನಾ ಶಾಸ್ತ್ರದಲ್ಲಿ ನಡೆದಿರುವ ಪ್ರಯತ್ನಗಳು, ಇದರಿಂದಾಗಿರುವ ವಿಶೇಷತೆ ಈ ಮೇಲ್ಕಂಡ ರೀತಿಯಲ್ಲಿ ವಿವರಿಸುವಾಗ ಈ ಒಂದು ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ ಸ್ವರೂಪದಂತೆ ವಿವರಿಸಲಾಗಿದೆ. ಮುಂದಿನ ಚರಿತ್ರೆ ಬೆಳವಣಿಗೆ ಮತ್ತು ಚರಿತ್ರೆ ಲೇಖನಾಶಾಸ್ತ್ರದ ಪ್ರಯತ್ನಗಳು ಈ ಕೆಳಕಂಡಂತೆ ವಿವರಿಸಲಾಗಿದೆ.

ಆ

ಮಧ್ಯಕಾಲೀನ ಚರಿತ್ರೆ ಕೃತಿಗಳ ಅವಲೋಕನ

ಮಧ್ಯಕಾಲೀನ ಚರಿತ್ರೆ ಪ್ರಾಚೀನ ಚರಿತ್ರೆಗಿಂತ ಭಿನ್ನವಾಗಿದ್ದು, ವಿಶಾಲ ಸಾಮ್ರಾಜ್ಯ, ಸಂಸ್ಕೃತಿಗಳು ಹೆಚ್ಚಾಗಿ ಬೆಳವಣಿಗೆಯಾಗಿದ್ದರಿಂದ ಮಧ್ಯಕಾಲೀನ ಚರಿತ್ರೆಯಾಗಿ ವಿಂಗಡಿಸಲ್ಪಟ್ಟಿದೆ. ಇಂತಹ ಮಧ್ಯಕಾಲೀನ ಚರಿತ್ರೆಯಲ್ಲಿ ಕಂಡುಬರುವ ಪ್ರಮುಖ ರಾಜವಂಶಗಳು ಎಂದರೆ, ಹೊಯ್ಸಳರು, ವಿಜಯನಗರ ಸಾಮ್ರಾಜ್ಯ, ಬಿಜಾಪುರದ ಸುಲ್ತಾನರು, ಮೊಗಲರು, ಮರಾಠರು ಹಾಗೂ ಪಾಳೆಯಗಾರರು ಪ್ರಮುಖರಾಗಿದ್ದಾರೆ. ಪ್ರಸ್ತುತದ ಅಧ್ಯಾಯದ ಭಾಗದಲ್ಲಿ ಇವರ ಆಡಳಿತದ ಬೆಳವಣಿಗೆ ಮತ್ತು ಪ್ರಾಮುಖ್ಯತೆಯನ್ನು ವಿವಿಧ ಕೃತಿಗಳು, ಲೇಖನಗಳನ್ನು ಅವಲೋಕಿಸುವುದರ ಮೂಲಕ ಸೈದ್ಧಾಂತಿಕವಾಗಿ ವಿವರಿಸಲು ಈ ಕೆಳಕಂಡಂತೆ ಕಿರುಪ್ರಯತ್ನ ಮಾಡಲಾಗಿದೆ.

ಮಧ್ಯಕಾಲೀನ ಚರಿತ್ರೆಯಲ್ಲಿ ಪ್ರಮುಖವಾಗಿ ಹೊಯ್ಸಳರು, ವಿಜಯನಗರದ ಅರಸರು, ಬಿಜಾಪುರದ ಸುಲ್ತಾನರು, ದೆಹಲಿಯ ಮೊಗಲರು, ಮರಾಠರು, ಪಾಳೆಗಾರರು ಹಾಗೂ ಮೈಸೂರು ಒಡೆಯರುಗಳ

ರಾಜ್ಯ ಪ್ರಾರಂಭವನ್ನು ಕುರಿತಾಗಿ ಅಧ್ಯಯನ ಮಾಡಲಾಗಿದೆ. ಇವುಗಳ ಅಧ್ಯಯನಕ್ಕೆ ಬಿ.ಎಲ್. ರೈಸರ ಶಾಸನ ಸಂಪುಟ-೧೦, ಎಂ. ಶೇಷಾದ್ರಿಯವರ 'ಶಾಸನ ಸಂಪುಟ-೧೭', ಗೆಜೆಟಿಯರುಗಳು, ಆರ್. ಗೋಪಾಲರಾವರವರ 'ಕೋಲಾರ ಜಿಲ್ಲಾ ಇತಿಹಾಸ ಮತ್ತು ಪುರಾತತ್ವ', ಬಿ. ಷೇಕಅಲಿಯವರ ಕರ್ನಾಟಕ ಚರಿತ್ರೆ ಸಂಪುಟಗಳು, ಸಿ. ವೆಂಕಟಲಕ್ಷ್ಮಿಯವರ 'ಕೋಲಾರ ಜಿಲ್ಲೆಯಲ್ಲಿ ವಿಜಯನಗರ ಆಡಳಿತ', ಎಂ.ವಿ. ವಸುರವರ 'ದಕ್ಷಿಣ ಕರ್ನಾಟಕದ ಅರಸು ಮನೆತನಗಳು', ಎನ್. ಜಗನ್ನಾಥಪ್ರಕಾಶರವರ 'ಕೋಲಾರ ಸಿರಿಸಂಪುಟ' ಮುಂತಾದ ಕೃತಿಗಳು ಸಹಕಾರಿಯಾಗಿವೆ. ಹೊಯ್ಸಳ ರಾಜಕೀಯ ಚರಿತ್ರೆಯಿಂದ ಹಿಡಿದು ವಿಜಯನಗರ ಅರಸರ ಆಡಳಿತ ಮತ್ತು ಅನಂತರ ಕಾಲದವರೆಗೆ ಸೈದ್ಧಾಂತಿಕವಾಗಿ ವಿಶ್ಲೇಷಿಸಲ್ಪಟ್ಟಿದೆ.

ಹೊಯ್ಸಳರು

ಇವರ ಚರಿತ್ರೆ ಕುರಿತಾಗಿ ಪಿ.ವಿ. ಕೃಷ್ಣಮೂರ್ತಿಯವರ 'ಹೊಯ್ಸಳರ ಕಾಲದ ಆಡಳಿತ ಘಟಕಗಳು' ಎಂಬ ಲೇಖನ, ಟಿ. ದಯಾನಂದ ಪಟೇಲರವರ 'ಹೊಯ್ಸಳರ ದೇವಾಲಯಗಳು' ಎಂಬ ಲೇಖನವು, ಆರ್. ರಾಜಗೋಪಾಲ್‌ರವರ 'ಕೋಲಾರ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ' ಎಂಬ ಕೃತಿಯಲ್ಲಿ ಲೇಖನಗಳಾಗಿ ಕಂಡುಬಂದಿವೆ. ಇವುಗಳ ಜೊತೆಗೆ ಕೆ. ಅಭಿಶಂಕರವರ 'ಕೋಲಾರ ಜಿಲ್ಲಾ ಗೆಜೆಟಿಯರ್', ಬಿ.ಎಲ್. ರೈಸರು ಮತ್ತು ಎಂ. ಶೇಷಾದ್ರಿಯವರ 'ಶಾಸನಗಳ ಸಂಪುಟ', ಎನ್. ಜಗನ್ನಾಥ ಪ್ರಕಾಶನರವರ 'ಕೋಲಾರ ಸಿರಿಸಂಪುಟ', 'ಚಿಂತಾಮಣಿ ತಾಲೂಕ ದರ್ಶನ', 'ಮಾಲೂರು ತಾಲೂಕು ದರ್ಶನ' ಮುಂತಾದವು ಅಧ್ಯಯನ ಮಾಡಲು ನೆರವಾಗಿವೆ.

ಕೋಲಾರದಲ್ಲಿ ದೊರೆತ ಬಹುತೇಕ ಹೊಯ್ಸಳರ ಶಾಸನಗಳು ಹೆಚ್ಚಾಗಿ ತಮಿಳುನಲ್ಲಿ ದೊರೆತಿವೆ. ಪ್ರಾಯಶಃ ಇದಕ್ಕೆ ಅಂದಿನ ಆಡಳಿತ ಭಾಷೆ ತಮಿಳು ಇರಬೇಕೆಂದು ಹೇಳಲಾಗುತ್ತದೆ ಎಂದು ಗೆಜೆಟಿಯರನಲ್ಲಿ ತಿಳಿಸಿದೆ.

ಹೊಯ್ಸಳರು ತಮ್ಮ ಹೆಚ್ಚಿನ ಗಮನವನ್ನು ರಾಜ್ಯ ವಿಸ್ತರಣೆಗಾಗಿ ಉತ್ತರದಲ್ಲಿ ತುಂಗಭದ್ರಾ ಪ್ರದೇಶದ ಕಡೆ ಮತ್ತು ಪೂರ್ವದಲ್ಲಿ ಚೋಳರ ಪ್ರದೇಶಗಳ ಮೇಲೆಯೇ ಕೇಂದ್ರೀಕರಿಸಿದ್ದುದು ಕಂಡುಬರುತ್ತದೆ. ಆ ಸಂದರ್ಭದಲ್ಲಿ ಕೋಲಾರ ಪ್ರದೇಶದ ಬ್ರಹ್ಮಾದಿರಾಯ, ಗಂಗಪೆರುಮಾಳ, ಪೂರ್ವಾಧಿರಾಯರೆಂಬ ಹೊಯ್ಸಳ ಮಾಂಡಲಿಕರು ಇದ್ದು, ಬಹುಮಟ್ಟಿಗೆ ತಮ್ಮ ಅಧಿರಾಜರಾಜ ಹೊಯ್ಸಳರನ್ನು ಅಷ್ಟಾಗಿ ಗಣನೆಗೆ ತೆಗೆದುಕೊಳ್ಳದೆ ಹೆಚ್ಚು ಸ್ವಾಯತತ್ತೆಯಿಂದ ಆಡಳಿತ ನಡೆಸಿರುವುದು ಕಂಡುಬರುತ್ತದೆ. ಈ ಮಾಂಡಲಿಕರಲ್ಲಿ ಬಹುಪಾಲು ಮೂಲತಃ ಗಂಗವಂಶೀಯರೇ ಆಗಿದ್ದರೆಂಬುದು ಗಮನಾರ್ಹ. ಇದು ಕ್ರಮೇಣ ಹೊಯ್ಸಳರ ಅಧೀನತೆಯನ್ನು ಸರಿದೂಗಿಸಿಕೊಂಡಿದೆ. ಚೋಳಮಂಡಲ, ಅವನಿನಾಡು, ತೇಕಲನಾಡು, ಕಳವರನಾಡು ಮುಂತಾದವುಗಳಲ್ಲಿ ಹೊಯ್ಸಳರ ಅಸ್ತಿತ್ವವನ್ನು ಉಳಿಸಿಕೊಂಡಿವೆ. ಅವು ಮುಂದೆ ರಾಮನಾಥನ ಕಾಲದವರೆಗೂ ಅವಿರತವಾಗಿ ಮುಂದುವರೆದಿವೆ ಎಂಬುದಾಗಿ ಪಿ.ವಿ. ಕೃಷ್ಣಮೂರ್ತಿಯವರು ಹೊಯ್ಸಳರ ಆಡಳಿತದ ಘಟಕಗಳ ಬಗ್ಗೆ ಹೇಳಿದ್ದಾರೆ. ಇದಕ್ಕೆ ತಕ್ಕಂತೆ ವಾಸ್ತುಶಿಲ್ಪವು ಬೆಳವಣಿಗೆಗೊಂಡಿದೆ. ಅಂದರೆ ಸೋಮೇಶ್ವರ ದೇವಾಲಯ, ಕೈವಾರದ ಭೀಮೇಶ್ವರ,

ಸದಾಶಿವ ದೇವಾಲಯಗಳು, ನಂದಿಬೆಟ್ಟದ ಬೋಗನಂದೀಶ್ವರ ಕಲ್ಯಾಣಮಂಟಪ, ಚಿಕ್ಕಬಳ್ಳಾಪುರದ ರಂಗನಾಥ ದೇವಾಲಯಗಳು ಹೊಯ್ಸಳರ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತವೆ ಎಂದು ಟಿ. ದಯಾನಂದ ಪಟೇಲರು ಹೇಳುತ್ತಾರೆ.

ಮಧ್ಯಕಾಲೀನ ಚರಿತ್ರೆಯ ಪ್ರಾರಂಭದ ವೇಳೆಗೆ ದ್ವಾರಸಮುದ್ರದ ಹೊಯ್ಸಳರ ರಾಜಕೀಯ ಚರಿತ್ರೆ ಪ್ರಾಮುಖ್ಯತೆಯನ್ನು ಪಡೆದುಕೊಂಡು, ಪ್ರಖ್ಯಾತವಾದ ರಾಜವಂಶ ಎನಿಸಿಕೊಂಡಿತು. ವಿಷ್ಣುವರ್ಧನ, ವೀರಬಲ್ಲಾಳ ಮುಂತಾದ ಪ್ರಮುಖರಾದ ಅರಸರನ್ನು ಹೊಂದಿತ್ತು. ಈ ಅವಧಿಯಲ್ಲಿಯೇ ಉತ್ತರ ಭಾರತದಲ್ಲಿ ಅಲ್ಲವುದ್ದೀನ್ ಖಿಲ್ಜಿ ಪ್ರಬಲವಾಗಿ ಅವನ ಸೇನಾ ದಂಡನಾಯಕ ಮಲ್ಲಿಕಾಫರ್‌ನ ದಾಳಿಗಳು ದ್ವಾರಸಮುದ್ರದವರೆಗೂ ವ್ಯಾಪಿಸಿಕೊಂಡಿರುತ್ತವೆ. ಸ್ಥಳೀಯವಾಗಿ ಚೋಳರ ಪ್ರಬಲತೆ ಕ್ಷೀಣಿಸುತ್ತದೆ. ಇವು ಅಂದಿನ ಭೌಗೋಳಿಕ ಲಕ್ಷಣಗಳಾಗಿವೆ. ಕ್ರಿ.ಶ. ೧೧ನೇ ಶತಮಾನವು ಚರಿತ್ರೆಯ ಪ್ರಭುತ್ವಕಾಲ. ಗಂಗರು, ಚೋಳರು, ಚಾಲುಕ್ಯರು, ನೊಳಂಬರು, ಪಾಂಡ್ಯರು ಹೀಗೆ ಅನೇಕ ರಾಜರು ರಾಜಕೀಯ ಹಕ್ಕುಬಾದ್ಯತೆ ವಿಸ್ತರಣೆಗಾಗಿ ಸೆಣಸಾಡುತ್ತಿದ್ದರು. ಅಂತಹ ವೇಳೆಯಲ್ಲಿ ರಾಜ್ಯ ವಿಸ್ತರಣೆ ಮಾಡಿ ಕೋಲಾರ ಪ್ರದೇಶದ ಪೂರ್ವ ಗಡಿಯವರೆಗೂ ವ್ಯಾಪಿಸಿ ಅದನ್ನೇ ಗಡಿರೇಖೆಯಾಗಿಸಿಕೊಂಡ ಹೊಯ್ಸಳರ ಆಡಳಿತ ಚರಿತ್ರೆಯು ಅದ್ಭುತವಾಗಿದೆ. ಅವರ ರಾಜಕೀಯ ಚಟುವಟಿಕೆಗಳಲ್ಲದೆ, ಸಾಂಸ್ಕೃತಿಕ ಚಟುವಟಿಕೆಗಳು ಪ್ರಾಮುಖ್ಯತೆ ಗಳಿಸಿಕೊಂಡಿವೆ. ಅಲ್ಲದೆ ಚರಿತ್ರೆಯ ಬೆಳವಣಿಗೆಯಲ್ಲಿ ಹೊಸ ಆಯಾಮವನ್ನುಂಟು ಮಾಡಿದೆ.

ಹೊಯ್ಸಳರ ರಾಜಧಾನಿ 'ಶಶಿರಾಪುರ' ಅಥವಾ 'ಸೊಸೆವೂರು' ಪ್ರಾಥಮಿಕವಾಗಿದ್ದು ನಂತರ 'ದ್ವಾರಸಮುದ್ರ', 'ಹಳೇಬೀಡು'ಗಳಾಗಿ ಬದಲಾಗಿವೆ.[೮೦] ಈ ವಂಶದ ಸ್ಥಾಪಕ 'ಸಳ' ಎಂಬುವನು ಎಂದು ಗೆಜೆಟಿಯರನಲ್ಲಿ ತಿಳಿಸಿದೆ. ಇದನ್ನೇ ಎಂ.ವಿ. ಕೃಷ್ಣರಾವ ಮತ್ತು ಕೇಶವಭಟ್ಟರ ಕೃತಿಯಾದ ಕರ್ನಾಟಕ 'ಇತಿಹಾಸ ದರ್ಶನ ಸಂಪುಟ' ಒಂದರಲ್ಲಿ ತಿಳಿಸಿದ್ದಾರೆ. ಇವರು ಮೊದಲಿಗೆ ಗಂಗವಾಡಿ ಪ್ರದೇಶದಲ್ಲಿ ಆಡಳಿತ ಮಾಡುತ್ತಿದ್ದ ರಾಷ್ಟ್ರಕೂಟರಲ್ಲಿ ಸಾಮಂತರಾಗಿದ್ದರು.[೮೧] ಕಾಲಕ್ರಮೇಣ ತಮ್ಮ ಸಾಮರ್ಥ್ಯಗಳನ್ನು ಪ್ರಯೋಗಿಸಿ ಪ್ರಬುದ್ಧಮಾನಕ್ಕೆ ಬಂದರು. ಕೋಲಾರ ಪ್ರದೇಶದಲ್ಲಿ ಇವರ ಬಗ್ಗೆ ಪ್ರಾಥಮಿಕವಾಗಿ ಮುಳಬಾಗಿಲಿನ ಶಾಸನವೊಂದು ತಿಳಿಸುತ್ತದೆ. (ಕರ್ನಾಟಕ ಎಫಿಗ್ರಾಫಿ, ಸಂಪುಟ-೩, ಮುಳುವಾಯಿ - ೩) ಎಂಬುದಾಗಿ ಗೆಜೆಟಿಯರನಲ್ಲಿ ತಿಳಿಸಿದೆ.[೮೨] ಈ ಭಾಗವನ್ನು ಚೋಳರ ಆಡಳಿತದಿಂದ ಬಿಡಿಸಿಕೊಂಡಿರುವ ಅಂಶ ಇದರಿಂದ ವ್ಯಕ್ತವಾಗುತ್ತದೆ. ಹೊಯ್ಸಳರಲ್ಲಿ ಪ್ರಖ್ಯಾತವಾದ ಒಂದನೇ ಬಲ್ಲಾಳನ ನಂತರ ಹೊಯ್ಸಳರ ಸಿಂಹಾಸನವೇರಿದ ವಿಷ್ಣುವರ್ಧನ ಅಥವಾ ಬಿಟ್ಟಿದೇವ ಎಂಬುವರು ಹೊಯ್ಸಳರ ಧವಳಕೀರ್ತಿಯನ್ನು ಸರ್ವತ್ರ ಹರಡಿಸಿದ ಮಹಾಪರಾಕ್ರಮಶಾಲಿ ಎಂಬುದಾಗಿ ಎಂ.ವಿ. ಕೃಷ್ಣರಾವ ಮತ್ತು ಎಂ. ಕೇಶವಭಟ್ಟರು ಹೇಳುತ್ತಾರೆ.[೮೩] ಗಂಗರ ಉತ್ತರಾಧಿಕಾರಿಗಳೆಂಬ ಮಹಾಕಾಂಕ್ಷೆಯನ್ನು ಹೊಂದಿದ ಇವರು ತಮ್ಮ ರಾಜ್ಯದ ಸುತ್ತಲು ಇದ್ದ ಚಾಲುಕ್ಯರ ಆಜ್ಞಾದೀನರಾದ ಪಾಳೆಗಾರರನ್ನು ಸೋಲಿಸಿ ಕೋಲಾರ ಪ್ರದೇಶದಲ್ಲಿದ್ದ ಚೋಳರನ್ನು ಕಂಚಿಯವರೆಗೆ ಓಡಿಸಿ ಅವರಿಂದ ರಾಜ್ಯ ಕಿತ್ತುಕೊಂಡು ವಿಶಾಲ ರಾಜ್ಯವನ್ನು ಕಟ್ಟಿದರು ಎಂದು ಎಂ. ಶೇಷಾದ್ರಿಯವರ ಶಾಸನ ಸಂಪುಟಗಳ ಹಿನ್ನೆಲೆಯಲ್ಲಿ ಕೆ.

ಅಭಿಶಂಕರರವರ ಗೆಜೆಟಿಯರುಗಳು ತಿಳಿಸಿವೆ.[೮೪] ಅಲ್ಲದೆ ಇದನ್ನು ಎಂ.ವಿ. ಕೃಷ್ಣರಾವ, ಎಸ್. ಜಗನ್ನಾಥ ಪ್ರಕಾಶರವರು ಹೇಳಿದ್ದಾರೆ. ೧೧೧೬-೧೧೧೭ರಲ್ಲಿಯೆ ನರಸಿಂಗ ವರ್ಮನಲ್ಲಿ ಚಾಲುಕ್ಯ ಊಳಿಗಮಾನ್ಯವನ್ನು ಈ ಅಭ್ಯುದಯ ಕಾಲಕ್ಕೆ ಗಂಗವಾಡಿ ೯೬,೦೦೦ ನಿಯಂತ್ರಿಸಿದ್ದನು. ವಿಷ್ಣುವರ್ಧನನು ಹೊಂದಿದ್ದು ಅಧಿಪತಿಯಾದನು. ಇದಲ್ಲದೆ ಬಹುಕಾಲ ಕೋಲಾರ ಮತ್ತು ತಲಕಾಡು ಪ್ರದೇಶದಲ್ಲಿ ವಿಷ್ಣುವರ್ಧನನು ಶಾಂತಿಯಾಗಿ ಆಡಳಿತ ಮಾಡಿದನೆಂದು ಚಾಮರಾಜನಗರದ ೮೩ನೇ ಶಾಸನವು ಹೇಳುತ್ತದೆ ಎಂದು ಎಂ.ವಿ. ಕೃಷ್ಣರಾವರವರು ಹೇಳಿದ್ದಾರೆ.[೮೫] ವಿಷ್ಣುವರ್ಧನನಿಗೆ ಬಿಟ್ಟಿದೇವ, ವೀರಗಂಗ ಎಂಬ ಬಿರುದುಗಳಿವೆ. ನಂದಿದುರ್ಗದಲ್ಲಿ ಇವರಿಂದ ನಿರ್ಮಾಣವಾದ ದೇವಾಲಯಗಳು ಕರ್ನಾಟಕದ ವಾಸ್ತುಶಿಲ್ಪದಲ್ಲಿಯೇ ಮೇಲುಗೈ ಎನಿಸಿದೆ.[೮೬] ಕ್ರಿ.ಶ. ೧೧೧೬ ರಿಂದ ೧೩೬೭ರವರೆಗೆ ಕೋಲಾರ ಪ್ರದೇಶವನ್ನು ಇವರಿಂದ ಆಳಲ್ಪಟ್ಟು, ಅವರ ಅನೇಕ ಶಾಸನಗಳು ಮತ್ತು ವಾಸ್ತುಶಿಲ್ಪಗಳು ನಿರ್ಮಿತವಾಗಿರುವುದು ಕಂಡುಬರುತ್ತದೆ. ಅಲ್ಲದೆ ಮಹಿಳೆಯ ದಾನ ಕೊಡುಗೆಗಳು ಆರ್ಥಿಕ ಅಭಿವೃದ್ಧಿ ಕಾರ್ಯ ಪ್ರತಿಬಿಂಬಿಸಿವೆ.[೮೭] ವಿಷ್ಣುವರ್ಧನನ ಆಡಳಿತ ೧೧೧೦ರಿಂದ ೧೧೪೨ರವರೆಗೆ ಕಂಡುಬರುತ್ತದೆ. ಇವರ ಸಹೋದರನಾದ ಉದಯಾದಿತ್ಯ ಕೋಲಾರ ಪ್ರದೇಶದ ಪ್ರಾಂತ್ಯಾಧಿಕಾರಿ ಆಗಿದ್ದನು. ಈ ಪ್ರದೇಶವು ಇಂದು ಬೇತಮಂಗಲವಾಗಿದೆ. ಇದು ಗಂಗರ ಸಂಬಂಧವನ್ನು ತಿಳಿಸಿದೆ. ಇವರ ರಾಜ್ಯವು ಪೂರ್ವದ ಕೋಲಾರ ಪ್ರದೇಶದ ನಂಗಲಿಯಿಂದ ಹಿಡಿದು ದಕ್ಷಿಣಕ್ಕೆ ಕೊಂಗ, ಪಶ್ಚಿಮದಲ್ಲಿ ದಕ್ಷಿಣ ಕನ್ನಡ ಬಾರಕೂರು ಮತ್ತು ಸವಿಮಲೆ ಪ್ರಾಂತಗಳವರೆಗೆ ವ್ಯಾಪಿಸಿಕೊಂಡಿತ್ತು ಎಂದು ತಿಳಿದುಬರುತ್ತದೆ.[೮೮] ಕೋಲಾರದ 'ನಂಗಲಿ' ಇದರ ಪೂರ್ವ ಗಡಿಯಾಗಿದ್ದು, ಸೋಮೇಶ್ವರನ ನಿಧನ ನಂತರ ಹೊಯ್ಸಳರು ಆ ಸ್ಥಳವನ್ನು ೧೩೫೦ರಲ್ಲಿ ಹಲವು ವಿಭಾಗಗಳಾಗಿ ವಿಂಗಡಿಸಲ್ಪಟ್ಟಿದ್ದವು. ಈ ಅವಧಿಯಲ್ಲಿ ವಿಷ್ಣುವರ್ಧನನಿಗೆ 'ತಲಕಾಡುಗೊಂಡ' ಎಂಬ ಬಿರುದು ಬಂದಿರಬೇಕು ಎಂದು ಕೆ. ಸದಾಶಿವರವರು ಅಭಿಪ್ರಾಯಪಟ್ಟಿದ್ದಾರೆ. ಇವನ ನಂತರ ಅಧಿಕಾರಕ್ಕೆ ಬಂದ ವೀರಬಲ್ಲಾಳ, ಮೂರನೇ ವೀರಬಲ್ಲಾಳರು ಪ್ರಮುಖರಾಗಿದ್ದಾರೆ.

ವಿಷ್ಣುವರ್ಧನನ ಮಗನಾದ ೧ನೇ ನರಸಿಂಹನು (೧೧೪೨-೧೧೭೩) ನಿರ್ಮಿಸಿದ ಕೋಲಾರದ ತಾಲೂಕಿನ ವೈಲೂರು ದೇವಾಲಯವು ಆಧುನಿಕ ಬೇಲೂರು ಎಂದೇ ಹೆಸರುಪಡೆದಿದೆ. ಇದನ್ನು ವಿಷ್ಣುವರ್ಧನ 'ಚತುರ್ವೇದಿ ಮಂಗಳಂ' ಎಂದು ಕರೆಯಲಾಗಿದೆ. ಇದರಂತೆ ಬೇತಮಂಗಳದ ನರಸಿಂಹನ ಹಿರಿಯ ಅಧಿಕಾರಿಯಾಗಿದ್ದನು ಎಂದು ಗೆಜೆಟಿಯರನಲ್ಲಿ ತಿಳಿಸಿದೆ. ನಂತರ ಬಂದ ದಂಡನಾಯಕ ಇದರ ಸೇನಾನಾಯಕನಾಗಿದ್ದನು. ವಿಜಯನರಸಿಂಹನ ಮಗನಾದ ಎರಡನೇ ಬಲ್ಲಾಳನ ಕಾಲದಲ್ಲಿ ಶ್ರೀಕರಣ ಹೆಗ್ಗಡೆಯನ್ನು ಮತ್ತು ದೊಡ್ಡಣ್ಣನಾಯಕ ಬಲ್ಲಳ ಗೋವಿಂದ ಅರಸನು ಉಮ್ಮಡಿ ಯುದ್ಧಕ್ಕೆ ತೆರಳಿ ಜಯವನ್ನು ಸಾಧಿಸಿದರು ಎಂದು ಗೆಜೆಟಿಯರನಲ್ಲಿ ತಿಳಿಸಿದೆ. ಇದನ್ನೇ ಎಂ.ವಿ. ಕೃಷ್ಣರಾವ್ ಹೇಳಿದ್ದಾರೆ.[೮೯] ೨ನೇ ನರಸಿಂಹನ ವಿಶಾಲವಾದ ರಾಜ್ಯ ನಿರ್ಮಾಣ ಮಾಡುವಾಗ 'ಅವನಿ' ಆಡಳಿತ ಕೇಂದ್ರವಾಗಿತ್ತು. ಈ ಅವಧಿಯಲ್ಲಿಯೇ ಕೂಡುಮಲ್ಲೆ, ಬೇತಮಂಗಳ, ಮಡಿವಾಳವು ಇತರೆ ಆಡಳಿತ ಘಟಕಗಳಾಗಿ ರೂಪುಗೊಂಡವು. ಸೋಮೇಶ್ವರ ನಂತರ ಅವರ ಮಕ್ಕಳಾದ ರಾಮನಾಥ ಮತ್ತು ೩ನೇ ನರಸಿಂಹರು ಅಧಿಕಾರಕ್ಕೆ ಬಂದಾಗ ರಾಮನಾಥನ ಕೋಲಾರ ಪ್ರದೇಶದ ಅಧಿಕಾರವನ್ನು ಹೊಂದುತ್ತಾನೆ ಎಂಬುದಾಗಿ

ಎಂ.ವಿ. ಕೃಷ್ಣರಾವ ಮತ್ತು ಎಂ. ಕೇಶವಭಟ್ಟರು ಹೇಳುತ್ತಾರೆ.[೧೦] ಆಕ್ರಮಣಕಾರಿಯಾದ ಇವನು ತನ್ನ ರಾಜಧಾನಿಯನ್ನು ಕಣ್ಣನೂರು (ತುಮಕೂರು ಜಿಲ್ಲೆ) ಮಾಡಿಕೊಂಡನು. ಇವನಿಗೆ 'ಸಾರ್ವಭೌಮ ಚಕ್ರವರ್ತಿ', 'ಸಾರ್ವಭೌಮ ಪ್ರತಾಪ ಚಕ್ರವರ್ತಿ' ಎಂಬುದಾಗಿ ಬಿರುದುಗಳಿವೆ. ಇವನಿಗೆ ಆಪ್ತರಾಗಿ ಕೋಲಾರದ ಮಹಾಪ್ರಧಾನಿ ವೀರದಂಡನಾಯಕ ಮತ್ತು ಪ್ರಾಂತ್ಯಾಧಿಕಾರಿ ಸೋಮಯ್ಯ ದಂಡನಾಯಕರು ಆಡಳಿತದಲ್ಲಿ ನೆರವಾಗುತ್ತಿದ್ದರು. ಅಲ್ಲದೆ, ಆಡಳಿತದ ವಿಸ್ತರಣೆ ಮತ್ತು ಯುದ್ಧಗಳಲ್ಲಿ ನೆರವಾಗುತ್ತಾರೆ. ಇವರು ಮೂಲತಃ ಕೋಲಾರ ಪ್ರದೇಶದವರು ಎಂಬುದಾಗಿ ತಿಳಿದುಬರುತ್ತದೆ.

ರಾಮನಾಥನ ನಂತರ ಬಂದ ವಿಶ್ವನಾಥರ ಆಡಳಿತದ ಬಗ್ಗೆ ಹೆಚ್ಚಿನ ವಿಷಯಗಳು ಕಂಡುಬರುವುದಿಲ್ಲ. ನಂತರದ ಪ್ರಮುಖ ಅರಸನಾದ ೩ನೆ ಬಲ್ಲಾಳ ಅಥವಾ ವೀರಬಲ್ಲಾಳ (೧೨೯೧-೧೩೪೨)ನು ಹೊಯ್ಸಳರ ರಾಜ್ಯಕ್ಕೆ ಅಧೀನವಾಗಿ ಸಂಯುಕ್ತವಾಗುತ್ತದೆ. ಈ ವೇಳೆಗೆ ಹೊಯ್ಸಳರ ಪ್ರಬಲತೆ ಕುಸಿದಿರುತ್ತದೆ. ಅಲ್ಲದೆ ದೆಹಲಿ ಸುಲ್ತಾನ ಅಲ್ಲಾವುದ್ದೀನ್‌ಖಿಲ್ಜಿಯ ದಂಡನಾಯಕ ಮಲ್ಲಿಕಾರ್ಜುನನ ದಾಳಿಗಳು ಪ್ರಾರಂಭವಾಗುತ್ತದೆ. ಮತ್ತು ಯಾದವರು ಅವರ ಕುಲದ್ವೇಷಿಗಳಾಗಿದ್ದರು ಎಂದು ಎಂ.ವಿ. ಕೃಷ್ಣರಾವ ಮತ್ತು ಎಂ. ಕೇಶವಭಟ್ಟರು ಹೇಳುತ್ತಾರೆ.[೧೧] ಇದನ್ನೇ ಗೆಜೆಟಿಯರನಲ್ಲಿ ತಿಳಿಸಿದೆ. ಇವನ ಬಗ್ಗೆ ತಿಳಿಸುವ ಶಾಸನಗಳು ಗೌರಿಬಿದನೂರಿನ ಹೊಸೂರುಗಳಲ್ಲಿ ದೊರೆತಿವೆ.[೧೨] ಈ ವೇಳೆಗೆ ವಿಜಯನಗರ ಸಾಮ್ರಾಜ್ಯದ ಅಂಕುತಾರ್ಪಣೆ ಉಂಟಾಗುತ್ತೆ. ಮೂರನೇ ಬಲ್ಲಾಳನ ಅವಧಿಯಲ್ಲಿ ಕೋಲಾರ ಮತ್ತಿತರ ಭಾಗಗಳಲ್ಲಿ ಆಡಳಿತ ಮಾಡುತ್ತಿದ್ದನು. ಈ ವೇಳೆಗೆ ಮಾಲೂರು ತಾಲೂಕಿನ ಲಕ್ಕುರು, ಪುಂಗನೂರು ಹಾಗೂ ಮುಳಬಾಗಿಲು, ನಂಗಲಿ ಈ ರಾಜ್ಯದ ಎಲ್ಲೆಗಳಾಗಿದ್ದವು. ಬಂಗಾರುಪೇಟೆಯ ಸಂಖ್ಯೆ ೨೩ ಹಾಗೂ ೨೫ ಶಾಸನಗಳ ಪ್ರಕಾರ ಇಳಮಂಜಿರಾಯ, ಮಂಜಿಯಾರಾಯ ಎಂಬುವರು ರಾಮನಾಥನ ಪ್ರತಿನಿಧಿಗಳಾಗಿ ಈ ಪ್ರಾಂತ್ಯವನ್ನು ಆಳುತ್ತಿದ್ದರು. ಕ್ರಿ.ಶ. ೧೩೪೦ರಲ್ಲಿ ನಡೆದ ಯುದ್ಧದಲ್ಲಿ ಮೂರನೇ ಬಲ್ಲಾಳನು ಮಧುರೆಯಲ್ಲಿ ಹತ್ಯೆಗೊಳಗಾದನು. ಆಗ ಕೋಲಾರ ಹೊಯ್ಸಳರ ಕೈಬಿಟ್ಟು ಹೋಯಿತು. ಕೊನೆಗೆ ೧೩೪೩ರಲ್ಲಿ ಹೊಯ್ಸಳರ ಆಡಳಿತ ಕಣ್ಮರೆಯಾಗಿ ವಿಜಯನಗರ ಆಡಳಿತ ಕಂಡುಬರುತ್ತದೆ ಎಂದು ಗೆಜೆಟಿಯರನಲ್ಲಿ ತಿಳಿಸಿದೆ. ವೀರಬಲ್ಲಾಳನ ಮಕ್ಕಳಾದ ವಣನ ಮತ್ತು ಬಳಾಪ್ಪನವರು ಕೋಲಾರದ ಪ್ರತಿನಿಧಿಗಳಾಗಿ ವಿಜಯನಗರದ ಅರಸ ಅಧೀನದಲ್ಲಿ ನಿಯುಕ್ತರಾಗುತ್ತಾರೆ.

ವಿಜಯನಗರ

ವಿಜಯನಗರ ಸಾಮ್ರಾಜ್ಯ ದಕ್ಷಿಣ ಭಾರತದ ಚರಿತ್ರೆಯಲ್ಲಿ ಮತ್ತು ಮಧ್ಯಕಾಲೀನ ಚರಿತ್ರೆಯಲ್ಲಿ ಪ್ರಮುಖ ರಾಜ್ಯವಂಶವಾಗಿದ್ದು ಚರಿತ್ರೆಯಲ್ಲಿ ಹೊಸ ಆಯಾಮವನ್ನುಂಟುಮಾಡಿದೆ. ಇದರ ಉಪರಾಜಧಾನಿ ಎನಿಸಿದ ಕೋಲಾರ ಪ್ರದೇಶದ 'ಮುಳಬಾಗಿಲು'(ಮುಳವಾಯಿ)ಯಿಂದಾಗಿ ಕೋಲಾರ ಪ್ರದೇಶದ ಚರಿತ್ರೆಗೆ ಅದರದೇ ಸ್ಥಾನಗಳಿಸಿ ಕೊಟ್ಟಿರುವುದು. ಮತ್ತು ಆ ರಾಜ್ಯದ ದಕ್ಷಿಣ ಭಾಗದ ರಾಜಧಾನಿ ಎಂದೇ ಹೆಸರುಗಳಿಸಿರುವುದೆಂದು ಎಂ.ವಿ. ಕೃಷ್ಣರಾವ, ಬಿ.ಎಲ್. ರೈಸ್, ಸಿ. ಅಶ್ವಥಮ್ಮ, ಎಂ. ಶೇಷಾದ್ರಿಯವರು ಹಾಗೂ ಕೆ.ಆರ್. ನರಸಿಂಹನವರು ಹೇಳಿದ್ದಾರೆ.

ಉತ್ತರಭಾರತದ ದೆಹಲಿ ಸುಲ್ತಾನರ ದಾಳಿಗಳನ್ನು ತಡೆದು ಹಿಂದೂ ಸಂಸ್ಕೃತಿಯನ್ನು ಉಳಿಸಿಕೊಳ್ಳಲು ವಿಫಲತೆ ಕಂಡ ಹೊಯ್ಸಳರು, ಅವರ ಉತ್ತರಾಧಿಕಾರಿಗಳೆಂಬಂತೆ ಹಕ್ಕ (ಹರಿಹರ) ಮತ್ತು ಬುಕ್ಕರಾಯರು ಎಂಬ ಸಹೋದರರು ಆ ಹೊಣೆ ಹೊತ್ತರು ಎಂದು ಎಂ.ವಿ. ಕೃಷ್ಣರಾವ ಮತ್ತು ಎಂ. ಕೇಶವಭಟ್ಟರು ಹೇಳಿದ್ದಾರೆ.[೯೩] ಈ ಇಬ್ಬರ ಪ್ರಯತ್ನದ ಫಲವಾಗಿ ಕ್ರಿ.ಶ. ೧೩೩೬ರಲ್ಲಿ ವಿಜಯನಗರ ರಾಜ್ಯ ಸ್ಥಾಪನೆಗೊಂಡಿದೆ. ಅದರ ರಾಜಧಾನಿ 'ಹಂಪಿ' ಎಂಬುದಾಗಿ ಕೆ. ಅಭಿಶಂಕರವರ ಸಂಪಾದಿತ ಕೃತಿಯಾದ ಕೋಲಾರ ಜಿಲ್ಲಾ ಗೆಜೆಟಿಯರನಲ್ಲಿ ತಿಳಿಸಿದೆ.[೯೪] ಇದರ ಆಡಳಿತವನ್ನು ಹಲವು ಘಟಕಗಳಾಗಿ ವಿಂಗಡಿಸಿ ಅದಕ್ಕೆ ಮಂಡಲೇಶ್ವರರೆಂಬ ಅಧಿಕಾರಿಗಳನ್ನು ನೇಮಿಸಿದ್ದಾರೆ. ಅಂತಹ ಮಂಡಲಗಳಲ್ಲಿ ಕೋಲಾರವು ಒಂದಾಗಿದೆ.[೯೫] ಈ ಪ್ರದೇಶದಲ್ಲಿ ಆಗ ಹೊಯ್ಸಳರ ರಾಜ ೪ನೇ ವೀರಪ್ಪಬಳ್ಳಾಳ ಅಥವಾ ಅಪ್ಪಾಯಿ ಒಡೆಯ ಅಧಿಕಾರಿಯಾಗಿದ್ದು ವಿಜಯನಗರ ಅರಸರ ಆಡಳಿತವನ್ನು ಒಪ್ಪಿಕೊಂಡಿದ್ದಾನೆ. ಸಂಗಮ ವಂಶದ ಹರಿಹರನು ಅಧಿಕಾರಿಯಾದಾಗ ಕೋಲಾರ ಪ್ರದೇಶದಲ್ಲಿ ಅವನ ಮಗನಾದ ಕೆಂಪಣ್ಣನು ಮಂಡಲೇಶ್ವರ ಎನಿಸಿದ್ದಾನೆ ಎಂದಾಗಿ ಎಂ.ವಿ. ಕೃಷ್ಣರಾವ ಮತ್ತು ಎಂ. ಕೇಶವಭಟ್ಟರ ಹೇಳಿಕೆಯನ್ನೇ ಸಿ. ಅಶ್ವಥಮ್ಮ, ಬಿ.ಎಲ್. ರೈಸರು ಹೇಳುತ್ತಾರೆ.[೯೬] ಈ ಕೆಂಪಣ್ಣರಾಯನು ಕೋಲಾರ ಪ್ರದೇಶದಿಂದ ದಂಡೆತ್ತಿ ಹೋಗಿ ಸೇಲಂ, ಧರ್ಮಪುರಿ ಗೆದ್ದು, ಸಾಂಬವರಾಯನನ್ನು ಸೋಲಿಸಿದನು. ಇದನ್ನು ಕೆಂಪಣ್ಣನ ಪತ್ನಿ ಮುಳಬಾಗಿಲಿನವಳೇ ಆದ ಗಂಗಾದೇವಿಯವರು ತಮ್ಮ 'ವೀರಕಂಪಣರಾಯ' ಅಥವಾ 'ಮಧುರಾವಿಜಯ' ಎಂಬ ಕೃತಿಯಲ್ಲಿ ಬರೆದಿದ್ದಾಳೆ. ಇದು ಅವರ ಚರಿತ್ರೆಯ ಮೇಲೆ ಹೊಸ ಬೆಳಕು ಚೆಲ್ಲುತ್ತದೆ ಎಂಬುದು [illegible], ಹಾಗೂ ಕೆ. ಅಭಿಶಂಕರವರ ಕೃತಿಗಳಿಂದಲೂ ವ್ಯಕ್ತವಾಗುತ್ತದೆ.

ಹೀಗೆ ವಿಜಯನಗರ ಅಧಿಕಾರ ವಿಸ್ತರಣೆಯಾದಂತೆ, 'ಸಾದಲಿ' ಎಂಬ ಪ್ರಾಂತ್ಯವು ಇವರ ಇತರೆ ಪ್ರಮುಖ ಆಡಳಿತ ಕೇಂದ್ರವಾಯಿತು. ಇದರಿಂದಾಗಿ ಜಯನಗರದ ಸಾಮಾಂತರು ಕೋಲಾರದ ಪಶ್ಚಿಮ ಭಾಗವಾದ ಚಿಕ್ಕಬಳ್ಳಾಪುರದವರೆಗೆ ರಾಜ್ಯ ವಿಸ್ತರಣೆ ಮಾಡಲು ನಾಂದಿ ಹಾಡಿತ್ತು ಎಂದು ಗೆಜೆಟಿಯರ್‌ನಲ್ಲಿ ತಿಳಿಸಿದೆ. ಇದು ೧೩೭೧ರಲ್ಲಿ ಅಧಿಕಾರಕ್ಕೆ ಬಂದ ಬುಕ್ಕರಾಯನ ಆಡಳಿತ ಅವಧಿಗೆ ಸ್ಥಳೀಯ ನಾಗಣ್ಣ ಒಡೆಯರು ಇನ್ನಷ್ಟು ಅಧಿಕಾರ ವಿಸ್ತರಣೆಗೊಂಡಿತು ಎಂಬುದಾಗಿ ಸಿ. ಅಶ್ವತ್ಥಮ್ಮನವರು ಹಾಗೂ ಬಿ.ಎಲ್. ರೈಸ್‌ರು ಕೋಲಾರದ ೧೬೨ನೇ ಶಾಸನದ ಮೂಲಕ ಹೇಳಿದ್ದಾರೆ. ೨ನೇ ದೇವರಾಯನು ತಮಿಳುನಾಡಿನ ಕೊಂಡವೀರ, ಮಧುರೈ ಚೋಳರನ್ನು ಸದೆಬಡಿಯುವಾಗ ಕೋಲಾರ ಪ್ರದೇಶದಲ್ಲಿ ಅವರ ಸಹೋದರನು ನೆರವಾಗಿದ್ದನು ಎಂಬುದಾಗಿ ಎಂ.ವಿ. ಕೃಷ್ಣರಾವರ ಕೃತಿಯಲ್ಲಿ ವ್ಯಕ್ತವಾಗುತ್ತದೆ. ಪ್ರಾಯಶಃ ಇದೇ ಕಾಲದಲ್ಲಿ ವಿಗರಿಲಿ ಚೋಳಮಂಡಲ ಎಂದಾಗಿದ್ದ ಚೋಳರ ಪ್ರದೇಶವು ವಿಜಯನಗರ ಅರಸರ ಆಡಳಿತ ಭಾಗವಾಗಿ ಮುಳವಾಯಿ ಅವರ ರಾಜಧಾನಿ ಎನಿಸಿಕೊಂಡಿತು ಎಂದಾಗಿ ಸಿ. ಅಶ್ವತ್ಥಮ್ಮನವರು ತಮ್ಮ ಕೃತಿಯಾದ ವಿಜಯನಗರ ಅರಸರ ಆಡಳಿತ ಕಾಲದಲ್ಲಿ ಕೋಲಾರ ಪ್ರದೇಶದ ಆಡಳಿತ ಎಂಬ ಕೃತಿಯಲ್ಲಿ ತಿಳಿಸಿದ್ದಾರೆ. ಉನ್ನತ ಸ್ಥಿತಿಯಲ್ಲಿದ್ದ ವಿಜಯನಗರ ಆಡಳಿತವನ್ನು ಸಾಳ್ವ ವಂಶದ ಲೋಕಣ್ಣ, ಮಾರಣ್ಣರು ಕೋಲಾರ ಪ್ರದೇಶದ ಅಧಿಕಾರಿಗಳಾಗಿದ್ದರು ಎಂಬುದಾಗಿ ಕೆ. ಅಭಿಶಂಕರರವರ ಕೋಲಾರ ಜಿಲ್ಲಾ ಗೆಜೆಟಿಯರನಲ್ಲಿ ಹೇಳಿದೆ. ನಂತರ ಅಧಿಕಾರಕ್ಕೆ ಬಂದ ಮಲ್ಲಿಕಾರ್ಜುನನ ಕಾಲಕ್ಕೆ ವಿಜಯನಗರ

ರಾಜ್ಯವು ಉತ್ತರದ ಗೋದಾವರಿಯಿಂದ ದಕ್ಷಿಣದ ಕಾವೇರಿವರೆಗೆ ವಿಸ್ತಾರವಾಯಿತು ಎಂಬುದಾಗಿ ಎಂ.ವಿ. ಕೃಷ್ಣರಾವ ಮತ್ತು ಕೇಶವಭಟ್ಟರವರು ಹೇಳಿದ್ದಾರೆ. ಆಗ ಸಾಳ್ವನಾಯಕ ಮತ್ತು ೨ನೇ ನರಸಿಂಹನವರು ಕೋಲಾರ ಪ್ರದೇಶದ ಅಧಿಕಾರಿಗಳಾಗಿದ್ದರು ಎಂದು ಗೆಜೆಟಿಯರನಲ್ಲಿ ತಿಳಿಸಿದೆ. ನಂತರ ಅಧಿಕಾರದಲ್ಲಿ ಕಂಡುಬಂದ ತುಳುವಂಶದ ನರಸನಾಯಕ ಮತ್ತು ಕೃಷ್ಣದೇವರಾಯನ ಕಾಲದಲ್ಲಿ ರಾಜ್ಯವು ತುಷ್ಟಿಪುಷ್ಟಿ-ಸಮೃದ್ಧಿಗಳ ಹಾಲ್ಜೇನಾಗಿ ಹರಿದ ಕಾಲವಾಗಿತ್ತು ಮತ್ತು ಕೃಷ್ಣದೇವರಾಯನು ಅದಕ್ಕೆ ತಕ್ಕಂತೆ ಮಹಾರಾಜಾಧಿರಾಜ, ರಾಜಪರಮೇಶ್ವರ, ವೀರಪ್ರತಾಪ ಕೃಷ್ಣದೇವರಾಯ, ಮಹಾರಾಯ ಎಂಬುದಾಗಿ ಬಿರುದುಗಳನ್ನು ಹೊಂದಿದ್ದನು ಎಂಬುದಾಗಿ ಎಂ.ವಿ. ಕೃಷ್ಣರಾವ ಅವರು ಹೇಳುತ್ತಾರೆ.[೧೭] ಮತ್ತು ಇವರ ೨೦ ವರ್ಷದ ಅವಧಿಯಲ್ಲಿ ಹಲವು ಕಲ್ಯಾಣ, ಅಭಿವೃದ್ಧಿ ಕಾರ್ಯಗಳು ನಡೆದವು ಎಂಬುದಾಗಿ ಎಸ್.ಎಸ್. ಸ್ವಾಮಿಯವರು ಲೇಖನದಲ್ಲಿ ಹೇಳಿದ್ದಾರೆ.[೧೮] ಈ ವೇಳೆಗೆ ವಿಜಯನಗರ ಸಾಮ್ರಾಜ್ಯದ ಮಧ್ಯ ಕೇಂದ್ರಸ್ಥಳ ಕೋಲಾರ ಎಂಬುದಾಗಿ ಗೋಚರಿಸುವುದು ಸಹಜವಾಗಿದೆ. ಇದರ ಪಾಳೆಯಗಾರರಾದ ಗುಮ್ಮನಾಯಕನ ಪಾಳೆಗಾರರು, ಅವತಿ ಪಾಳೆಗಾರರು, ಸೂಗಟೂರು ಪಾಳೆಗಾರರು, ವಿಜಯನಗರದೊಡನೆ ನೇರ ಸಂಪರ್ಕ ಹೊಂದಿ, ಅವರಿಂದ ಆಜ್ಞೆ-ನಿಯಮಗಳು ಪಡೆದು ಪಾಲಿಸುತ್ತಿದ್ದರು. ಅನೇಕ ಯುದ್ಧಗಳಲ್ಲೂ ಪಾಲುಗೊಂಡಿದ್ದರು. ಗುಮ್ಮ ನಾಯಕನ ಪಾಳೆಗಾರರಂತೂ, ವಿಜಯನಗರದ ಅರಸರಿಗೆ ಆಪ್ತ ಸಮಾಂತರಾಗಿದ್ದರು. ನಂತರದ ಸದಾಶಿವರಾಯ, ಅವರ ಅಳಿಯ ಅಚ್ಯುತರಾಯ ಹಾಗೂ ರಾಮರಾಯರ ಕಾಲಕ್ಕೆ ವಿಜಯನಗರದ ಆಡಳಿತವು ಅತಿ ಉನ್ನತ ಮಟ್ಟದಲ್ಲಿತ್ತು. ಆದರೆ ಅದಕ್ಕೆ ರಾಮರಾಯನ ಕಾಲವು ಮಣ್ಣುಪಾಲಾಗಿಸಿದೆ ಎಂಬುದಾಗಿ ಎಸ್.ಎಸ್. ಸ್ವಾಮಿ ಹೇಳಿದ್ದಾರೆ.[೧೯] ಅಂದರೆ ಕ್ರಿ.ಶ. ೧೫೬೫ರಲ್ಲಿ ನಡೆದ ತಾಳಿಕೋಟೆ ಯುದ್ಧದಿಂದಾಗಿ ವಿಜಯನಗರ ಸಾಮ್ರಾಜ್ಯ ಛಿದ್ರಗೊಂಡು ನಾಶವಾಯಿತು. ಬಿಜಾಪುರದ ಸುಲ್ತಾನರು ಅವರ ರಾಜ್ಯವನ್ನು ಹಂಚಿಕೊಂಡರು. ಉಳಿದ ಭಾಗಗಳಲ್ಲಿರುವ ಪಾಳೆಪಟ್ಟುಗಳ ಮೇಲೆ ಅಧಿಕಾರದ ಬಲಪ್ರಯೋಗಿಸಿ ಅವರಿಂದ ಪೊಗದಿ ವಸೂಲಿ ಮಾಡಿದರು ಎಂದು ಪಿ.ವಿ. ಕೃಷ್ಣಮೂರ್ತಿಯವರು ಹೇಳುತ್ತಾರೆ. ತಿರಮಲರಾಯರು ಸ್ವಾರ್ಥಪರನಾಗಿ ಕಾಲಕಾಲಕ್ಕೆ ಸುಲ್ತಾನರ ನೆರವು ಪಡೆಯುವಲ್ಲಿ ಸಫಲನಾದನು. ಸಾಮ್ರಾಜ್ಯದ ಬಹುಭಾಗವನ್ನು ಉಳಿಸಿಕೊಂಡು ರಕ್ಷಣೆಗೈದು ಪಾಳೆಯಗಾರರ ಸ್ವಾತಂತ್ರ್ಯವನ್ನು ಒಪ್ಪಿದನು ಎಂಬುದಾಗಿ ಎಂ.ವಿ. ಕೃಷ್ಣರಾವ್ ಮತ್ತು ಎಂ. ಕೇಶವಭಟ್ಟರು ಹೇಳಿದ್ದಾರೆ. ಕ್ರಿ.ಶ. ೧೬೫೮ರ ವೇಳೆಗೆ ವಿಜಯನಗರದ ಬಹುಭಾಗ ಬಿಜಾಪುರದ ಆದಿಲ್‌ಷಾಹಿಗಳ ಕೈಸೇರಿತು ಎಂದು ಗೆಜೆಟಿಯರ್‌ನಲ್ಲಿ ತಿಳಿಸಿದೆ.

* * *

ವಿಜಯನಗರ ಆಡಳಿತದ ಚರಿತ್ರೆಯ ಬಗ್ಗೆ ಅನೇಕ ಕೃತಿಗಳು ಪ್ರಕಟಣೆಗೊಂಡಿವೆ. ಆದರೆ ಕೋಲಾರ ಪ್ರದೇಶದ ಆಡಳಿತಕ್ಕೆ ನೇರವಾಗಿ ಬರೆದಿರುವುದು ಅತ್ಯಲ್ಪ. ಕಂಪಣ್ಣನವರ ಪತ್ನಿಯವರು ಬರೆದಿರುವ ವೀರಕಂಪಣರಾಯ ಅಥವಾ ಮಧುರಾವಿಜಯವು ಕೆಂಪಣ್ಣನ ಮಧುರೈ ಮೇಲೆ ನಡೆಸಿದ ದಂಡಯಾತ್ರೆ ಹಾಗೂ ವಿಜಯನಗರದ ವೈಶಾಲ್ಯತೆಯನ್ನು ವಿವರಿಸಿದೆ ಮತ್ತು ಮುಳಬಾಗಿಲಿನ ಲಕ್ಕಣ್ಣ ದಂಡನಾಯಕನು ವಿಜಯನಗರ ರಾಜಧಾನಿಯಾದ ಹಂಪಿಯಲ್ಲಿನ ಶ್ರೇಷ್ಠ ಕವಿಯಾಗಿದ್ದು,

ಸಾಹಿತ್ಯಗಾರನಾಗಿದ್ದಲ್ಲದೆ ದಂಡನಾಯಕನಾಗಿದ್ದನು ಎಂದು ಬಿ.ಎಸ್. ದೀಕ್ಷಿತ್, ಓ.ಎನ್. ಲಿಂಗಣ್ಣಯ್ಯ, ಸಿ. ಅಶ್ವತ್ಥಮ್ಮನವರು ಹೇಳುತ್ತಾರೆ.[೧೦೦] ಲಕ್ಕಣ್ಣ ದಂಡೇಶನು ಪ್ರೌಢದೇವರಾಯನ ಆಸ್ಥಾನ ಕವಿಯಾಗಿದ್ದು, ಶಿವತತ್ವಚಿಂತಾಮಣಿ ಎಂಬ ಶ್ರೇಷ್ಠ ಕೃತಿ ಬರೆದಿದ್ದಾನೆ ಎಂದು ಕೆ.ಆರ್. ನರಸಿಂಹರಾವ್ ಲೇಖನದಿಂದ ತಿಳಿದುಬರುತ್ತದೆ.[೧೦೧] ಇದು ಕೋಲಾರ ಪ್ರದೇಶದಲ್ಲಿ ವಿಜಯನಗರ ಸಾಮ್ರಾಜ್ಯದ ವಿಶೇಷತೆಯಲ್ಲಿ ಒಂದಾಗಿದೆ. ಅಲ್ಲದೆ ಲಕ್ಕಣ್ಣದಂಡನಾಯಕ ಮುಳಬಾಗಿಲು ರಾಜ್ಯದ ಪ್ರಾಂತ್ಯಾಧಿಕಾರಿಯಾಗಿಯು ತಿರುಚಿನಾಪಲ್ಲಿ ದಂಡಯಾತ್ರೆಯನ್ನು ೧೪೪೩ರಲ್ಲಿ ಕೈಗೊಂಡು ಜಯಶೀಲನಾಗಿ ಬಂದನೆಂದು ಬಿ.ಎಸ್. ದೀಕ್ಷಿತ್‌ರವರ ಹೇಳಿಕೆಯಲ್ಲಿ ಈ ಮೇಲಿನ ಅಂಶವನ್ನು ಸಮರ್ಥಿಸುವುದಾಗಿದೆ. ಇದನ್ನೇ ಓ.ಎನ್. ಲಿಂಗಯ್ಯನವರು ಹೇಳಿದ್ದಾರೆ.[೧೦೨] ಇಷ್ಟಾದರು ವಿಜಯನಗರದ ಆಡಳಿತ ವಿಭಜನೆಯಲ್ಲಿ ಪ್ರಾಂತ್ಯ, ಗ್ರಾಮ, ಅಗ್ರಹಾರ ಹಾಗೂ ಪಟ್ಟಣ ಶ್ರೇಣಿಗಳ ಆಡಳಿತವು ಕೋಲಾರ ಪ್ರದೇಶದಲ್ಲಿ ಪ್ರಮುಖ ಲಕ್ಷಣವಾಗಿ ಕಂಡುಬರುತ್ತವೆ ಎಂಬುದಾಗಿ ಹೇಳಲಾಗುತ್ತದೆ.[೧೦೩] ಅಂದರೆ, ನಾಡು, ಸೀಮೆ, ಪಟ್ಟಣ, ಚಾವಡಿ ಮುಂತಾಗಿ ಕಂಡುಬರುತ್ತವೆ ಎಂದು ಪಿ.ವಿ. ಕೃಷ್ಣಮೂರ್ತಿಯವರು ಹೇಳಿದ್ದಾರೆ.

ಸಿ. ಅಶ್ವತ್ಥಮ್ಮನವರು 'ಕೋಲಾರ ಪ್ರಾಂತ್ಯದಲ್ಲಿ ವಿಜಯನಗರ ಆಡಳಿತ' ಎಂಬುದಾಗಿ ಪ್ರಬಂಧ ಬರೆದು ಕೋಲಾರದಲ್ಲಿ ವಿಜಯನಗರ ಸಾಮ್ರಾಜ್ಯದ ಚರಿತ್ರೆಯ ಮೇಲೆ ಹೊಸ ಬೆಳಕು ಚೆಲ್ಲಿದ್ದಾರೆ. ಇದರಲ್ಲಿ ಪ್ರಮುಖವಾಗಿ ವಿಜಯನಗರ ಆಡಳಿತವನ್ನು ಮತ್ತು ಸಾಂಸ್ಕೃತಿಕ ಅಂಶಗಳಾದ ದೇವಾಲಯಗಳು ಮತ್ತು ಪದ್ಧತಿಗಳನ್ನು ಚರ್ಚಿಸಿದೆ. ಇದರಂತೆ ಬಿ. ಪಾಂಡುಕುಮಾರರವರು ಕೋಲಾರ ಪ್ರದೇಶದಲ್ಲಿ 'ವಿಜಯನಗರ ಅರಸರ ದೇವಾಲಯ'ಗಳ ಕುರಿತಾಗಿ ಅಧ್ಯಯನ ಮಾಡಿ ಅವರ ಸಾಂಸ್ಕೃತಿಕ ಕೊಡುಗೆಗಳ ಮೇಲೆ ಹೊಸ ಬೆಳಕು ಚೆಲ್ಲಿದ್ದಾರೆ. ಹಾಗೂ ಎ.ವಿ. ವೆಂಕಟಕೃಷ್ಣರವರು ವಿಜಯನಗರ ಸಾಮ್ರಾಜ್ಯದ 'ಸ್ಥಳೀಯ ಸರ್ಕಾರ'ಗಳ ಬಗ್ಗೆ ಅಧ್ಯಯನ ಮಾಡಿದ್ದು ವಿಜಯನಗರ ಸಾಮ್ರಾಜ್ಯದ ಆಡಳಿತದ ಘಟಕಗಳ ಮೇಲೆ ಬೆಳಕು ಚೆಲ್ಲುತ್ತದೆ.[೧೦೪] ಇವುಗಳಲ್ಲದೆ ಪಿ.ವಿ. ಕೃಷ್ಣಮೂರ್ತಿಯವರು ಕೋಲಾರ ಪ್ರದೇಶದಲ್ಲಿ ವಿಜಯನಗರ ಅರಸರ ಆಡಳಿತ ಘಟಕಗಳ ಬಗ್ಗೆ ಚರ್ಚಿಸಿದ್ದಾರೆ. ಇವುಗಳೆಲ್ಲವುಗಳಿಂದ ವಿಜಯನಗರ ಸಾಮ್ರಾಜ್ಯದ ರಾಜಕೀಯ ಚರಿತ್ರೆಯನ್ನು ಕೋಲಾರ ಪ್ರದೇಶದ ಚರಿತ್ರೆಯ ಲೇಖನ ಶಾಸನದ ಅಡಿಯಲ್ಲಿ ಅಧ್ಯಯನ ಮಾಡಲು ಸಾಧ್ಯವಾಗಿದೆ.

* * *

ಈ ಮಧ್ಯಕಾಲ ಚರಿತ್ರೆಯಲ್ಲಿ ದೆಹಲಿ ಸುಲ್ತಾನರು, ವಿಜಾಪುರ ಸುಲ್ತಾನರು, ಮೊಗಲರುಗಳ ದಾಳಿ ಪ್ರಾರಂಭವಾಗಿದ್ದು ಅದನ್ನು ಸಾಂಪ್ರದಾಯಕ ದೃಷ್ಟಿಕೋನದಲ್ಲಿ ನೋಡಲಾಗಿದೆ. ಅಂದರೆ ಇವರಿಂದ ಹಿಂದು ಸಾಮ್ರಾಜ್ಯಗಳು ನಾಶವಾದವು ಮತ್ತು ಹಿಂದು ಸಂಸ್ಕೃತಿ ಕಲ್ಮಶಗೊಂಡಿತು ಎಂದಾಗಿ ಚಿತ್ರಿಸಲ್ಪಟ್ಟಿದೆ. ಈ ನಡುವೆ ದಕ್ಷಿಣ ಭಾರತ ಚರಿತ್ರೆಯೇ ಪ್ರಖ್ಯಾತ ಸಾಮ್ರಾಜ್ಯವಾದ ವಿಜಯನಗರ ಸಾಮ್ರಾಜ್ಯ ಪತನದಿಂದ ಈ ನಿಲುವುಗಳು ಮತ್ತಷ್ಟು ಚರಿತ್ರೆ ಲೇಖನದಲ್ಲಿ ದೃಢವಾಗಿ ಕಾಣಲಾಗಿದೆ. ಆದರೆ ವಿದ್ವಾಂಸರು ಕೃತ್ಯಗಳನ್ನು ಸರಿಯಾಗಿ ಗ್ರಹಿಸದೆ ವಿದೇಶಿ ಹೇಳಿಕೆಗಳನ್ನೇ ಭಾರತೀಯ ವಿದ್ವಾಂಸರು ರಾಷ್ಟ್ರೀಯ ಮನೋಭಾವನೆಯನ್ನು ಬೆಳೆಸಲು ಸ್ವತಂತ್ರ್ಯ ಪೂರ್ವದ ಕಾಲಘಟ್ಟದಲ್ಲಿ ಪ್ರಮುಖವಾಗಿ

ಬಳಸಿಕೊಂಡರು. ಆದರೆ ಈ ಬಗೆಯ ಬರವಣಿಗೆಗಳು ಸ್ವತಂತ್ರ್ಯದ ನಂತರವು ಪ್ರಾಮುಖ್ಯತೆ ಪಡೆದಿರುವುದು ಸೋಜಿಗವೆನಿಸಿದೆ. ಈ ಹಿನ್ನೆಲೆಯಲ್ಲಿ ಕೋಲಾರ ಪ್ರದೇಶವು ವಿಜಯನಗರ ಸಾಮ್ರಾಜ್ಯದ ಒಂದು ಉಪರಾಜಧಾನಿ ಭಾಗವೆಂದಾಗಿ ಅಲ್ಲದೆ, ಈ ಮುಸ್ಲಿಂರೊಂದಿಗೆ ಹೈದರಾಲಿ ಮತ್ತು ಟಿಪ್ಪುನವರ ದಾಳಿಗಳಿಂದ ಮತ್ತು ಸ್ಥಳೀಯ ಪಾಳೆಗಾರರ ಹೋರಾಟದ ದೃಷ್ಟಿಯಲ್ಲಿ ಇಂತಹ ನಿಲುವುಗಳು ತಾಳಿರುವುದು ಸಹಜವೆನಿಸಿದೆ.

ವಿಜಯನಗರ ಸಾಮ್ರಾಜ್ಯ ಪತನದ ನಂತರ ಬಿಜಾಪುರದ ಸುಲ್ತಾನರು ಮತ್ತು ದೆಹಲಿಯ ಮೊಗಲರು ಪ್ರಬಲ್ಯಕ್ಕೆ ಬಂದಾಗ ಕೋಲಾರ ಪ್ರದೇಶವು ಸಹಜವಾಗಿ ಅವರ ಆಡಳಿತಕ್ಕೆ ಒಳಗಾಗಿರುವುದು ಚರಿತ್ರೆಯಲ್ಲಿ ಕಂಡುಬರುತ್ತದೆ. ಈ ವಿಷಯವಾಗಿ ಪಿ.ವಿ. ಕೃಷ್ಣಮೂರ್ತಿ, ಎಂ.ಎಸ್. ನರಸಿಂಹಮೂರ್ತಿ, ಎಚ್.ಎಂ. ನಾಯಕ ಹಾಗೂ ಕೆ. ಅಭಿಶಂಕರರವರು ತಿಳಿಸಿದ್ದಾರೆ. ಅವರ ಕೃತಿಗಳು ನೇರವಾಗಿ ಕೋಲಾರ ಪ್ರದೇಶವನ್ನೇ ಕೇಂದ್ರವಾಗಿರಿಸಿಕೊಂಡು ಬರೆಯದಿದ್ದರೂ ಅದು ಪರೋಕ್ಷವಾಗಿ ಅಲ್ಲಲ್ಲಿ ಕೋಲಾರದ ಪ್ರಸ್ತಾವನೆಗಳಿರುವುದರಿಂದ ಸುಲ್ತಾನರು ಮತ್ತು ಮೊಗಲರ ಆಡಳಿತವನ್ನು ತಿಳಿಯಲು ಸಾಧ್ಯವಾಗಿದೆ. ಇದರಂತೆ ಈ ಮೂಲಕ ಚರ್ಚಿಸಲಾಗಿದೆ.

ಸುಲ್ತಾನರು

ವಿಜಯನಗರ ಸಾಮ್ರಾಜ್ಯವು ತಾಳಿಕೋಟೆ ಯುದ್ಧದ ಮೂಲಕ ಪತನದ ಹಾದಿ ಹಿಡಿಯಿತು. ಬಿಜಾಪುರದ ಎರಡನೇ ಆದಿಲ್‌ಷಾಹಿಗಳು, ಬಿಜಾಪುರದ ಸುಲ್ತಾನರ ಕೀರ್ತಿಯನ್ನು ದಕ್ಷಿಣ ಭಾರತಾದ್ಯಂತ ವಿಸ್ತರಿಸುವಾಗ ಅವರ ಪ್ರಸಿದ್ಧ ಸೇನಾನಾಯಕ ರಣದುಲ್ಲಾಖಾನರವರು ಬಹುಮುಖ್ಯ ಪಾತ್ರವಹಿಸಿದ್ದಾರೆ. ಇವರು ಕ್ರಿ.ಶ. ೧೬೩೮ರಲ್ಲಿ ದಂಡಯಾತ್ರೆ ಕೈಗೊಂಡು ಕೋಲಾರ, ಹೊಸಕೋಟೆ, ಚಿಕ್ಕಬಳ್ಳಾಪುರ, ಶಿಡ್ಲಘಟ್ಟ ಮುಂತಾದವು ಗೆದ್ದು ಅವುಗಳನ್ನು ಅವರ ಆಪ್ತಸೇನಾ ಮುಖ್ಯಸ್ಥನಾದ ಮರಾಠರ ವಂಶದ ಷಹಜಿಯವರಿಗೆ ಜಹಗೀರಾಗಿ ಕೊಟ್ಟರು ಎಂದು ಎ.ವಿ. ಕೃಷ್ಣಮೂರ್ತಿ, ಕೆ. ಅಭಿಶಂಕರರವರು ಹೇಳಿದ್ದಾರೆ.[೧೦೫] ಈ ದಂಡಯಾತ್ರೆಯೂ ಮುಂದುವರಿದಂತೆ, ಮಾಲೂರು, ಮಾಸ್ತಿ, ಸುಗಟೂರು, ಚಿಂತಾಮಣಿ ಮುಂತಾದವು ವಶಪಡಿಸಿಕೊಂಡಿದ್ದಾರೆ. ಇವುಗಳ ಆಡಳಿತದ ನಿರ್ವಹಣೆಗೆ ಸ್ಥಳೀಯ ನಾಯಕರನ್ನು ನೇಮಿಸಿ ಅವರಿಗೆ ಮನ್ಸಬ್ದಾರ, ಜಹಗೀರರಾಗಿ ಕೊಡುತ್ತಿದ್ದರು ಎಂಬುದು ಮೊಗಲರ ಚರಿತ್ರಾ ಕೃತಿಗಳಿಂದ ತಿಳಿದುಬರುತ್ತದೆ. ಇದನ್ನೇ ಎಂ.ಎಸ್. ನರಸಿಂಹಮೂರ್ತಿಯವರು ಹೇಳಿದ್ದಾರೆ.[೧೦೬] ಇದರ ಪ್ರತಿಫಲವಾಗಿ ಸ್ಥಳೀಯ ನಾಯಕರು ಅಂದರೆ ಪಾಳೆಗಾರರು ಒಪ್ಪಂದದಂತೆ ನಿಗದಿತ ಕಾಲಕ್ಕೆ ಪೊಗದಿ ಕೊಡುತ್ತಿದ್ದರು ಎಂಬುದಾಗಿ ಎಂ.ವಿ. ಕೃಷ್ಣರಾವರವರು ತಿಳಿಸಿದ್ದಾರೆ. ಈ ಸುಲ್ತಾನರ ಪ್ರಬಲತೆ ಹೆಚ್ಚಾಗಿ ಸುಮಾರು ೧೬೮೭ರವರೆಗೆ ಅವಧಿಯಲ್ಲಿತ್ತು ಮತ್ತು ಈ ನಡುವೆ ಷಹಜಿಯ ಪ್ರಮುಖ ಆಡಳಿತ ಕೇಂದ್ರಗಳು ಮತ್ತು ವಾಸಸ್ಥಳಗಳು ಕೋಲಾರ, ಬೆಂಗಳೂರು ಪ್ರದೇಶಗಳಾಗಿದ್ದವು ಎಂಬುದಾಗಿ ಗ್ಯಾಸೆಟಿಯರನಲ್ಲಿ ತಿಳಿಸಿದೆ.[೧೦೭] ಈ ಅವಧಿಯಲ್ಲಿ ಸ್ಥಳೀಯವಾಗಿ ಗುಮ್ಮನಾಯಕನ ಪಾಳ್ಯೆಯ ಪಾಳೆಯಗಾರರು ಸೂಗಟೂರು ಪಾಳೆಗಾರರು, ಆವತಿಯನಾಡ ಪ್ರಭುಗಳು, ಚಿಕ್ಕಬಳ್ಳಾಪುರದ ಬೈರೇಗೌಡ

ಪಾಳೆಗಾರರು ಇರುವುದು ತಿಳಿದುಬರುತ್ತದೆ. ಷಹಜಿಯ ಮಗನಾದ ಪ್ರಸಿದ್ಧ ಮರಾಠರ ನಾಯಕ ಶಿವಾಜಿಯು ಮಹಾರಾಷ್ಟ್ರದಲ್ಲಿ ಪ್ರಬಲನಾಗುತ್ತಾ ಇದ್ದು ಸುಲ್ತಾನರಿಗೆ ಕಿರುಕುಳ ಕೊಡುತ್ತಿದ್ದನು. ಕೋಲಾರ ಪ್ರದೇಶವು ಇದಕ್ಕೆ ಹೊರತಾಗಿರಲಿಲ್ಲ. ಕ್ರಿ.ಶ. ೧೬೬೪ರಲ್ಲಿ ಷಹಜಿ ಮರಣ ಹೊಂದಿದಾಗ ಅವರ ಕಿರಿಯಮಗನಾದ ಏಕೋಜಿ ಅಂದರೆ ಶಿವಾಜಿಯ ಮಲತಾಯಿಯ ಮಗ ಮತ್ತು ತಮ್ಮನು ಷಹಜಿಯ ಆಸ್ತಿಗೆ ಅಧಿಪತಿಯಾಗಿ ಬಿಜಾಪುರ ಸುಲ್ತಾನರ ಜಹಾಗೀರನಾಗಿ ನಿಷ್ಠಾವಂತನಾಗಿ ಸೇವೆಸಲ್ಲಿಸಿದನು. ಇದು ಸಹಜವಾಗಿ ಕೋಲಾರ ಪ್ರದೇಶವು ಏಕೋಜಿಯ ಆಡಳಿತಕ್ಕೆ ಒಳಗಾಗಿದೆ. ಹೀಗಿದ್ದರೂ ಶಿವಾಜಿಯ ಅಧಿಕಾರ ವಿಸ್ತರಣೆ ಮತ್ತು ಷಹಜಿಯ ಆಸ್ತಿಪಾಲುಗಾರಿಕೆಯ ವಿಷಯವಾಗಿ, ಏಕೋಜಿಗೆ ಕೋಲಾರ ಪ್ರದೇಶದಲ್ಲಿ ಕಿರುಕುಳ ನೀಡುತ್ತಿದ್ದನು. ಈ ನಡುವೆ ತಂಜಾವೂರು ಏಕೋಜಿ (ವೆಂಕೋಜಿ)ಯ ಆಡಳಿತ ಕೇಂದ್ರವಾಗಿದ್ದು ಆ ಮೂಲಕವೇ ಕೋಲಾರ ಪ್ರದೇಶದ ಮೇಲೆ ನಿಯಂತ್ರಣ ಹೊಂದಿದನು ಮತ್ತು ಶಿವಾಜಿಯೊಂದಿಗೆ ಒಪ್ಪಂದ ಮಾಡಿಕೊಂಡು ಶಾಂತಿ ಬಯಸಿದನು ಎಂಬುದಾಗಿ ಗೆಜೆಟಿಯರನಲ್ಲಿ ತಿಳಿಸಿದೆ. ಇಷ್ಟೊತ್ತಿಗೆ ಬಿಜಾಪುರದ ಸುಲ್ತಾನರ ಅಧಿಕಾರ ಕುಗ್ಗುತ್ತಾ ಉತ್ತರ ಭಾರತದ ಮೊಗಲರು ದಕ್ಷಿಣ ಭಾರತದಾದ್ಯಂತ ಅಧಿಕಾರ ವಿಸ್ತರಣಾ ಕಾರ್ಯದಲ್ಲಿ ನಿರತರಾಗಿದ್ದರು. ಇದು ಶಿವಾಜಿ ಮತ್ತು ಮೊಗಲರ ನಡುವೆ ಘರ್ಷಣಾತ್ಮಕ ಚರಿತ್ರೆ ಪ್ರಾರಂಭವಾಗಲು ಕಾರಣವಾಯಿತು. ಈ ಇಬ್ಬರ ಅಧಿಕಾರ ವಿಸ್ತರಣೆ ಘರ್ಷಣೆಯಲ್ಲಿ ಕೋಲಾರ ಪ್ರದೇಶವು ಬಲಿಯಾಗಿದೆ. ಸ್ಥಳೀಯ ಪಾಳೆಯಪಟ್ಟುಗಳು ಈ ಇಬ್ಬರಿಗೂ ಪೊಗದಿ ನೀಡುವಂತಾಯಿತು ಎಂದು ಎಂ.ವಿ. ಕೃಷ್ಣರಾವ ಮತ್ತು ಕೇಶವಭಟ್ಟರು ಹೇಳಿದ್ದಾರೆ.

ಮೊಗಲರು

ಭಾರತದ ಚರಿತ್ರೆಯಲ್ಲಿ ಮೊಗಲರ ಆಡಳಿತ ಅದ್ಭುತವಾಗಿದೆ ಮತ್ತು ಸುದೀರ್ಘ ಚರಿತ್ರೆಯನ್ನು ಹೊಂದಿದೆ. ಇದರಿಂದ ಅವರ ರಾಜಕೀಯ ಆಡಳಿತದ ಕೊಡುಗೆ ಸಾಂಸ್ಕೃತಿಕ ಕೊಡುಗೆಗಳು ಅಪಾರವಾಗಿ ಕಂಡುಬರುತ್ತವೆ. ಇಷ್ಟಾದರೂ ಕೋಲಾರ ಪ್ರದೇಶದ ಇವರ ಆಡಳಿತದ ಬಗ್ಗೆ ಹೆಚ್ಚಿನ ಮಾಹಿತಿಗಳಲ್ಲಿಲ್ಲ ಎಂಬುದು ತಿಳಿದುಬರುತ್ತದೆ. ಕೆ. ಅಭಿಶಂಕರರವರ 'ಕೋಲಾರ ಜಿಲ್ಲಾ ಗೆಜೆಟಿಯರ', ಎಂ.ವಿ. ಕೃಷ್ಣರಾವರವರ 'ಕರ್ನಾಟಕ ಇತಿಹಾಸ ದರ್ಶನ', ಆ. ಗೋಪಾಲರವರ 'ಕೋಲಾರ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ', 'ಸಿರಿನಂದಿ', 'ಹೊಂಗಿರಣ' ಮುಂತಾದ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಪ್ರಕಟಣೆಗೊಂಡ ಕೃತಿಗಳಲ್ಲಿ ಇವರ ಬಗ್ಗೆ ವಿಶ್ಲೇಷಿಸಿವೆ. ಇವುಗಳ ಆಧಾರವಾಗಿ ಈ ಮೂಲಕ ಚರ್ಚಿಸಲಾಗಿದೆ.

ಬಿಜಾಪುರದ ಸುಲ್ತಾನರ ಅಧಿಪತ್ಯ ಕ್ರಿ.ಶ. ೧೬೮೬ರ ವೇಳೆಗೆ ಅಂತ್ಯವಾಗುತ್ತದೆ. ಮತ್ತು ಇದೇ ವೇಳೆಗೆ ಉತ್ತರ ಭಾರತದ ಮೊಗಲರು, ದಕ್ಷಿಣದಾದ್ಯಂತ ಅಧಿಕಾರ ವಿಸ್ತರಣಾ ನೀತಿ ಕಾರ್ಯ ಕೈಗೊಳ್ಳುತ್ತಾರೆ. ಅವರದು ದೆಹಲಿ ಮತ್ತು ಆಗ್ರಾಗಳು ರಾಜಧಾನಿಗಳಾದರು, ಅಧಿಕಾರ ವಿಸ್ತರಣೆಯ ನೀತಿ ನಿಲ್ಲಲಿಲ್ಲ. ವಿಜಯನಗರ ಸಾಮ್ರಾಜ್ಯದ ಪಾಳೆಯಪಟ್ಟುಗಳನ್ನು ಆಕ್ರಮಿಸಿ, ಅಳಿದುಳಿದ ಹಿಂದೂ ಸಾಮ್ರಾಜ್ಯವನ್ನು ವಿಂಗಡಿಸತೊಡಗಿ, ಕಪ್ಪಗಳನ್ನು ಪಡೆಯಲಾರಂಭಿಸಿದರು ಮತ್ತು ನಿರುಪಾಯವಾದ ಈ ಪಾಳೆಯಗಾರರು ಒತ್ತಾಯಕ್ಕೆ ಮಣಿಯದೆ ಗತ್ಯಂತರವಿರಲಿಲ್ಲ ಎಂಬುದಾಗಿ ಎಂ.ವಿ. ಕೃಷ್ಣರಾವ ಮತ್ತು

ಕೇಶವಭಟ್ಟರು ಅಭಿಪ್ರಾಯಪಟ್ಟಿದ್ದಾರೆ.[೧೦೮] ಈ ಸ್ಥಿತಿ ಔರಂಗಜೇಬನ ಕಾಲದಲ್ಲಿ ಅಧಿಕವಾಯಿತು. ಈ ದಾಳಿಯಲ್ಲಿ ಬಸವಪಟ್ಟಣ, ಬೂದಿಹಲ, ಸಿರಾ, ಪೆನುಗೊಂಡೆ, ದೊಡ್ಡಬಳ್ಳಾಪುರ ಮತ್ತು ಕೋಲಾರವು ೧೬೮೭ರ ಹೊತ್ತಿಗೆ ಸೇರಿಕೊಂಡವು. ಇವುಗಳ ಆಡಳಿತ ಕೇಂದ್ರ 'ಸೀರಾ' ಎಂಬುದಾಗಿತ್ತು ಎಂದು ಗೆಜೆಟಿಯರನಲ್ಲಿ ತಿಳಿಸಿದೆ.[೧೦೯] ಇವುಗಳ ಆಡಳಿತಕ್ಕಾಗಿ, ಮತ್ತು ಅವನ ಸಿಬ್ಬಂದಿ ಫೌಜುದಾರ, ದಿವಾನರು ನೇಮಕಗೊಂಡಿದ್ದರು. ಇವರ ಪ್ರಬಲತೆಯನ್ನು ತಡೆಯಲಾಗದ ಸ್ಥಳೀಯ ಪಾಳೆಪಟ್ಟುಗಳು, ಪೊಗದಿಯನ್ನು ನೀಡುವುದರ ಮೂಲಕ ತಮ್ಮ ಸ್ವಯತ್ತತೆಯನ್ನು ಉಳಿಸಿಕೊಳ್ಳಬೇಕಾಯಿತು ಎಂದು ಎಚ್.ಎಂ. ನಾಯಕ ಮತ್ತು ಸೂರ್ಯನಾಥ ಕಾಮತರವರು ಹೇಳಿದ್ದಾರೆ.[೧೧೦] ಇದಕ್ಕೆ ಪ್ರಮುಖ ಕಾರಣ ಸ್ಥಳೀಯರೂ ಆಂತರಿಕ ಗಲಭೆ ಮತ್ತು ಅಸೈನಿಕ ಸ್ಥಿತಿಯಲ್ಲಿದ್ದ ಅವರು ಪ್ರಬಲ ರಾಜರನ್ನು ವಿರೋಧಿಸುವಂತ ಶಕ್ತಿ ಹೊಂದಿರಲಿಲ್ಲ ಎಂಬುದಾಗಿ ಹೇಳಲಾಗುತ್ತದೆ. ಈ ಮಧ್ಯೆ ಮೊಗಲರು ನೀಡುತ್ತಿದ್ದ ಜಹಾಗೀರ, ಸುಬೇದಾರಗಳು ಮತ್ತು ಕೆಲವು ರಿಯಾಯಿತಿಗಳಿಂದ ಸ್ಥಳೀಯರು ತೃಪ್ತರಾಗ ಬಯಸಿದರು. ಇದನ್ನು ಮರಾಠರನ್ನು ಹೊರತುಪಡಿಸಿ ಹೇಳುವ ಮಾತಾಗಿದೆ. ಕೋಲಾರ ಪ್ರದೇಶದಲ್ಲಿ ಮೊಗಲರ ವಂಶದ ದುರ್ಗಾಹ ಬುಶಾನ ಮುಂತಾದವರು ದಾನಕಾರ್ಯಗಳು ಮಾಡಿರುವುದು ಸೂರ್ಯನಾಥ ಕಾಮತ ಹಾಗೂ ಎಂ.ವಿ. ಕೃಷ್ಣರಾವರವರು ಗುರುತಿಸಿದ್ದಾರೆ.[೧೧೧] ಅಲ್ಲದೆ, ಕೆ. ಮಹಮದ್ ಷರೀಪ್‌ರು ಇದನ್ನೇ ಹೇಳುತ್ತಾರೆ. ಕ್ರಿ.ಶ. ೧೭೦೭ರಲ್ಲಿ ಮೊಗಲರ ಆಡಳಿತ ಕುಸಿತ ಉಂಟಾಗಿದ್ದರೂ, ೧೭೫೭ರವರೆಗೆ ಕೋಲಾರ ಪ್ರದೇಶದಲ್ಲಿ ಅವರ ಆಡಳಿತ ಉಳಿಸಿಕೊಳ್ಳಲು ಯಶಸ್ಸು ಕಂಡಿದೆ ಎಂಬುದಾಗಿ ಕೋಲಾರ ಜಿಲ್ಲಾ ಗೆಜೆಟಿಯರನಲ್ಲಿ ಕೆ. ಅಭಿಶಂಕರರವರು ಉಲ್ಲೇಖಿಸಿದ್ದಾರೆ. ಇದು ಗೋಪಾಲರವರ ಕೃತಿಯಲ್ಲಿ ವ್ಯಕ್ತವಾಗಿದೆ.[೧೧೨] ಇದು ಕೋಲಾರ ಚರಿತ್ರೆಯಲ್ಲಿ ಪ್ರಾಮುಖ್ಯತೆ ಗಳಿಸಿರುವುದು ವ್ಯಕ್ತವಾಗುತ್ತದೆ. ಇದರ ಅಂತ್ಯದ ವೇಳೆಗೆ ಕೋಲಾರ ಪ್ರದೇಶದಲ್ಲಿ ಮರಾಠರು ಮೈಸೂರು ಒಡೆಯರುಗಳ ನಡುವೆ ಅಧಿಕಾರ ವಿಸ್ತರಣೆಗಾಗಿ ಘರ್ಷಣೆಗಳು ಉಂಟಾಗುತ್ತವೆ ಎಂಬುದು ಈ ಮುಂದೆ ಚರ್ಚಿಸಲಾಗಿದೆ.

ಮರಾಠರು

ಮರಾಠರ ಆಡಳಿತವು ಕೋಲಾರ ಪ್ರದೇಶದಲ್ಲಿ ಎರಡು ಹಂತಗಳಲ್ಲಿ ಕಂಡುಬರುತ್ತದೆ. ಮೊದಲನೆಯದಾಗಿ ಬಿಜಾಪುರ ಸುಲ್ತಾನರು ಮತ್ತು ಮೊಗಲರ ಕಾಲಾವಧಿಯಲ್ಲಿ ಮರಾಠರ ಆಕ್ರಮಣ ಆಡಳಿತ ಚರಿತ್ರೆ ಹಾಗೂ ಎರಡನೆಯದಾಗಿ ಮೈಸೂರು ರಾಜ್ಯದ ಹೈದರಾಲಿ ಹಾಗೂ ಟೀಪ್ಪುವಿನ ನಡುವಿನ ಹೋರಾಟಗಳ ನಡುವೆ ಕಂಡುಬರುವ ಹಂತವಾಗಿದೆ. ಈ ಎರಡನೇ ಹಂತ ಆಧುನಿಕ ಯುಗವಾಗಿದ್ದು ವಸಾಹತುಶಾಹಿಗಳ ಆಗಮನವು ಕಂಡುಬರುತ್ತದೆ. ಅಧ್ಯಯನ ದೃಷ್ಟಿಯಿಂದ ಮೊದಲನೆ ಹಂತವು ಪ್ರಸ್ತುತದಲ್ಲಿ ವಿವರಿಸುವುದಾಗಿದೆ.

ಮರಾಠರ ರಾಜಧಾನಿ ಮಹಾರಾಷ್ಟ್ರದ 'ರಾಯಗಡ', ಅದರ ನಾಯಕ ಶಿವಾಜಿ (೧೬೭೪-೮೦) ಕೋಲಾರದಲ್ಲಿ ಮರಾಠರ ಆಡಳಿತ ಕುರಿತಾಗಿ ಬಿ.ಎಲ್. ರೈಸರು ಸುಮಾರು '೧೫ ಶಾಸನ'ಗಳನ್ನು ಕೋಲಾರ ಪ್ರದೇಶದಲ್ಲಿ ಮತ್ತೆ ಮಾಡಿದ್ದಾರೆ ಮತ್ತು ಮರಾಠರು ಈ ಭಾಗದಲ್ಲಿ ಆಡಳಿತ ಮಾಡಿದ

ಕಾಲವನ್ನು ಕ್ರಿ.ಶ. ೧೬೩೭ರಿಂದ ೧೭೭೫ರವರೆಗೆ ಗುರುತಿಸಿದ್ದಾರೆ.[೧೧೬] ಮರಾಠರು ಕೋಲಾರ ಜಿಲ್ಲೆಗೆ ಪ್ರವೇಶ ಮಾಡಲು ಬಿಜಾಪುರದ ಸುಲ್ತಾನರ ಆಡಳಿತ ಕಾರಣವಾಗಿದೆ. ಅಂದರೆ ಬಿಜಾಪುರ ಸುಲ್ತಾನರ ಕಾಲದಲ್ಲಿ ಜಹಾಗೀರದಾರನಾದ ಷಹಜಿ ಬೌನ್ಸ್ಲೇರವರು ಈ ಭಾಗದ ಜಹಾಗೀರರಾಗಿ ಕಂದಾಯ ವಸೂಲಿ ಮಾಡುವುದರ ಮೂಲಕ ಆಡಳಿತಾಧಿಕಾರ ಹೊಂದಿದ್ದರು. ಷಹಜಿ ನಿಧನ ನಂತರ ಅವನ ೨ನೇ ಮಗನಾದ ಏಕೋಜಿಗೆ ಅವನ ಆಸ್ತಿ ವರ್ಗಾವಣೆಯಾಗುತ್ತದೆ. ಆಗ ಸಹಜವಾಗಿಯೇ ಕೋಲಾರದಲ್ಲಿ ಏಕೋಜಿಯ ಆಡಳಿತ ಮುಂದುವರಿಯುತ್ತದೆ. ಇವರಿಗೆ ಸ್ಥಳೀಯ ಪಾಳೆಗಾರರು 'ಚೌತ್‌ನ್ನು ನೀಡುವುದರ ಮೂಲಕ ತಮ್ಮ ಸ್ವತಂತ್ರ್ಯವನ್ನು ಉಳಿಸಿಕೊಂಡಿದ್ದರು. ಶಿವಾಜಿಯು ಮಹಾರಾಷ್ಟ್ರದಲ್ಲಿ ಪ್ರಬಲವಾಗುತ್ತಾ ದಕ್ಷಿಣದ ದಂಡಯಾತ್ರೆಗಳನ್ನು ಕೈಗೊಂಡಿದ್ದನು. ಈ ಅವಧಿಯಲ್ಲಿ ಮೈಸೂರು ಸಂಸ್ಥಾನದ ಮೇಲೆ ದಂಡೆತ್ತಿ ಹೋದಾಗ ಅಲ್ಲಿನ ಚಿಕ್ಕದೇವರಾಜ ಒಡೆಯರು ಸೋಲಲಿಲ್ಲವಾದರೂ ಶ್ರೀರಂಗಪಟ್ಟಣವು ಶಿವಾಜಿಯ ಲೂಟಿಗೆ ಕಾರಣವಾಯಿತು. ನಂತರ ಬೆಂಗಳೂರು, ಕೋಲಾರ, ಶೀರಾ, ಚಿಕ್ಕಬಳ್ಳಾಪುರಗಳು ಶಿವಾಜಿಯ ಅಧೀನಕ್ಕೆ ಒಳಗಾದವು. ಇದಾದನಂತರ ತನ್ನ ರಾಜ್ಯಕ್ಕೆ ಹಿಂತಿರುಗಿದನೆಂದು ಎಚ್.ವಿ. ಶ್ರೀನಿವಾಸ ಮತ್ತು ಆರ್. ರಾಮಕೃಷ್ಣರವರು ಹೇಳುತ್ತಾರೆ.[೧೧೭]

ಶಿವಾಜಿ ಮತ್ತು ವೆಂಕೋಜಿಯ ನಡುವೆ ಷಹಜಿಯ ಆಸ್ತಿಗಾಗಿ ಘರ್ಷಣೆ ಉಂಟಾದಾಗ ಗೋಲ್ಕಂಡವು ವೆಂಕೋಜಿಯು ರಾಜಧಾನಿಯಾಗಿ ಮಾಡಿಕೊಂಡು, ಚಿನ್ನದ ಆಭರಣಗಳು ಕೊಡುವುದರ ಮೂಲಕ ಶಿವಾಜಿಯೊಂದಿಗೆ ಶಾಂತಿ ಒಪ್ಪಂದ ಮಾಡಿಕೊಂಡನು ಮತ್ತು ತಂಜಾವೂರಿನಿಂದಲೇ ಕೋಲಾರ ಪ್ರದೇಶವನ್ನು ಆಡಳಿತ ಮಾಡಲಾರಂಭಿಸಿದನು. ಇದರಿಂದ ಕೋಲಾರದ ಪಶ್ಚಿಮ ಭಾಗವು ಸಡಿಲಗೊಂಡು ಆ ಭಾಗದಲ್ಲಿ ಪಾಳೆಗಾರರು ಪ್ರಬಲತೆಗೆ ಬರಲು ಕಾರಣವಾಯಿತು. ಅದೇ ವೇಳೆಗೆ ಮೊಗಲರ ದಾಳಿಯು ಆ ಭಾಗದಲ್ಲೇ ಉಂಟಾಯಿತು ಎಂದು ಗೆಜೆಟಿಯರಗಳಿಂದ ತಿಳಿದುಬರುತ್ತದೆ. ಸಮೀಪದ ಸಿರಾ ಮೊಗಲರ ರಾಜಧಾನಿಯಾಗಿಸಿಕೊಂಡು, ಬಸವಪಟ್ಟಣ, ಬೂದಿಹಾಲ, ಸೀರಾ, ಪೆನುಗೊಂಡ, ಹೊಸಕೋಟೆ, ಕೋಲಾರದ ಭಾಗಗಳು ಕಾಸಿಂಖಾನನ ವಶವಾದವು ಇದು ಮರಾಠ ಏಳಿಗೆಯನ್ನು ತಡೆಯಲ್ಪಟ್ಟಿರುವುದು ವ್ಯಕ್ತವಾಗುತ್ತದೆ. ಈ ಮುಂಚೆಯೇ ನಂದಿಬೆಟ್ಟವು ಮರಾಠರ ನೆಲೆವೀಡಾಗಿತ್ತು ಎಂದು ಅಲ್ಲಿನ ೧೬೮೦ರ ಕಾಲದ ಶಾಸನವೊಂದು ಹೇಳುತ್ತದೆ ಎಂದು ಗೆಜೆಟಿಯರನಲ್ಲಿ ತಿಳಿಸಿದೆ. ಶಿವಾಜಿಯ ಮಗನಾದ ಸಾಂಬಾಜಿ ಆಡಳಿತದಲ್ಲಿ ಆ ಪ್ರದೇಶ ಹೆಚ್ಚಿನ ಅಭಿವೃದ್ಧಿಯನ್ನು ಕಂಡಿತ್ತು. ಹಾಗೂ ಸಾಂಬಾಜಿಯು ಆಡಳಿತ ಮಾಡುತ್ತಿದ್ದಾಗ ಕೋಲಾರ ಪ್ರದೇಶದಲ್ಲಿ ಬಾಲಾಜಿಕೃಷ್ಣ ಮತ್ತು ರಂಗನಾಥ ಪಂಡಿತರು ಮಂತ್ರಿಗಳಾಗಿದ್ದರು ಎಂದು ಗೆಜೆಟಿಯರನಲ್ಲಿ ತಿಳಿಸಿದೆ.[೧೧೮] ಸಾಂಬಾರಾಯನ ಪತ್ನಿ ಜ್ಯೋತಿಬಾಯಿ ಹಾಗೂ ಅವನ ಮಗನಾದ ಮಲ್ಲಿಕೋಜಿ ನಂದಿಬೆಟ್ಟದ ಪ್ರದೇಶವನ್ನು ಆಡಳಿತದ ಕೇಂದ್ರವಾಗಿಸಿಕೊಂಡು ಅಲ್ಲಿ ಕೋಟೆಯನ್ನು ನಿರ್ಮಾಣ ಮಾಡಿದನು ಎಂದು ಗೆಜೆಟಿಯರನಲ್ಲಿ ತಿಳಿಸಿದೆ ಇದನ್ನೇ ವೇಮಗಲ್ ಸೋಮಶೇಖರ, ಎನ್. ಜಗನ್ನಾಥ ಪ್ರಕಾಶರವರು ಹೇಳುತ್ತಾರೆ. ಶಿವಾಜಿಯ ಸರ್ಕಾರದಲ್ಲಿ ಕೋಲಾರ ಪ್ರಾಂತ್ಯವು ನಾಡುಗಳಾಗಿ ವಿಂಗಡಿಸಿದ್ದು, ಶಿವಾಜಿಯ ಮಗ ಮಲ್ಲಿಕೋಜಿಯ ಆಡಳಿತಕ್ಕೆ ಅನುಕೂಲವಾಯಿತು. ಇಲ್ಲಿನ ಜನರ ಪರಿಸ್ಥಿತಿ, ಆರ್ಥಿಕ ಬೆಳವಣಿಗೆಯನ್ನು ತಿಳಿದು, ಭೂಕಂದಾಯವು ಅನೇಕ ಸಲ ಮುಕ್ತಗೊಳಿಸಿದ್ದಾರೆ

ಎಂದು ಎಂ.ಎಸ್. ಪುಟ್ಟಣ್ಣನವರು ತಿಳಿಸಿದ್ದಾರೆ.[೧೬] ಮರಾಠರು ಕೋಲಾರದ ಬಹುಭಾಗವು ಮಾಲೂರು ಮತ್ತು ಆದವಾನಿಯ ಬಸವಂತ ಜಂಗರ ಅವಧಿಯಲ್ಲಿ ವಶಪಡಿಸಿಕೊಂಡರು. ಮರಾಠರ ಚಿಂತಾಮಣಿರಾವ ಮತ್ತು ಅಂಬಾಜಿರಾವ್ ಪ್ರಾಂತ್ಯಾಡಳಿತಗಳಿಂದಾಗಿ ಚಿಂತಾಮಣಿ ನಗರವನ್ನು ಮತ್ತು ಅಂಬಾಜಿದುರ್ಗದ ಮೇಲೆ ಕೋಟೆಯೊಂದನ್ನು ನಿರ್ಮಿಸಿದರು. ಇದರಿಂದಾಗಿ ಅವರ ಹೆಸರುಗಳಿಂದಲೆ ಆ ಪ್ರದೇಶಗಳನ್ನು ಕರೆಯಲಾಗಿದೆ. ೧೮೭೩ರವರೆಗೂ ಸಹ ಚಿಂತಾಮಣಿಯನ್ನು ಅಂಬಾಜಿದುರ್ಗವೆಂದೇ ಕರೆಯಲಾಗಿತ್ತು ಎಂದು ಬಿ.ಜಯದೇವಪ್ಪನವರು ಹೇಳುತ್ತಾರೆ.[೧೭] ಮುಂದಿನ ೩ನೇ ಹಂತದಲ್ಲಿ ಹೈದರಾಲಿ ಮತ್ತು ಟೀಪುವಿನ ವಿರುದ್ಧ ನಡೆದ ಘಟನೆಗಳು ಕೋಲಾರ ಜಿಲ್ಲೆಯಲ್ಲಿ ಕಂಡುಬರುವುದಾದರೂ ಪ್ರಸ್ತುತ ಅಧ್ಯಯನವು ಮಧ್ಯಕಾಲೀನ ಚರಿತ್ರೆಗೆ ಮಾತ್ರ ಸೀಮಿತಗೊಳಿಸಿರುವುದರಿಂದ ಮರಾಠರ ಕುರಿತಾಗಿ ಇಲ್ಲಿಗೆ ವಿಶ್ಲೇಷಣೆಯು ಸೈದ್ಧಾಂತಿಕ ಹಿನ್ನಲೆಯಲ್ಲಿ ಮುಕ್ತಾಯ ಮಾಡಲಾಗಿದೆ. ಮರಾಠರ ಚರಿತ್ರೆಯು ಕರ್ನಾಟಕದಲ್ಲಿಯು ಪ್ರಾಮುಖ್ಯತೆ ಪಡೆದು, ಅದಕ್ಕಿಂತ ಹೆಚ್ಚಾಗಿ ಕೋಲಾರದ ಚರಿತ್ರೆಯಲ್ಲಿ ವಿಶೇಷತೆಯನ್ನು ಗಳಿಸಿದೆ. ಅವರ ರಾಜ್ಯದ ಗಡಿರೇಖೆಗಳು ಕೋಲಾರವನ್ನು ವ್ಯಾಪಿಸಿಕೊಂಡಿವೆ.

ಪಾಳೇಗಾರರು

ಪಾಳೇಗಾರರ ವಿಶೇಷತೆಯನ್ನು ತಿಳಿಯಲು ಹಲವಾರು ವಿದ್ವಾಂಸರ ಲೇಖನಿಗಳು ಮತ್ತು ಕೃತಿಗಳು ಲಭ್ಯವಾಗಿವೆ. ಎಂ.ವಿ. ವಾಸುರವರು ಸಂಪಾದಿಸಿರುವ 'ದಕ್ಷಿಣ ಕರ್ನಾಟಕದ ಅರಸು ಮನೆತನಗಳು' ಎಂಬ ಕೃತಿಯಲ್ಲಿ ಕೋಲಾರ ಪ್ರದೇಶದ ಪಾಳೆಗಾರರ ಚರಿತ್ರೆಗೆ ಸಂಬಂಧಿಸಿದ ವಿವರವಿದೆ. 'ಅವತಿನಾಡು ಪ್ರಭುಗಳು' ಎಂಬ ಲೇಖನವನ್ನು ಪಿ.ವಿ. ಕೃಷ್ಣಮೂರ್ತಿ, 'ಗುಮ್ಮನಾಯಕನಹಳ್ಳಿ ಪಾಳೆಯಗಾರರು' ಎಂಬ ಲೇಖನ, ಎನ್.ಶೇಕ್‌ಮಸ್ತಾನ, 'ಮಾಸ್ತಿನಾಡಿನ ಪಾಳೆಯಗಾರರು' ಎಂಬುದನ್ನು ಆಳ ಚಿರಂಜೀವಿ, 'ಮುಳಬಾಗಿಲು ಅರಸರು' ಹಾಗೂ 'ಸುಗಟೂರು ಪ್ರಭುಗಳು' ಎಂಬ ಲೇಖನವನ್ನು ಪಿ.ವಿ. ಕೃಷ್ಣಮೂರ್ತಿಯವರು ನೀಡಿರುವುದಾಗಿ ತಿಳಿದುಬರುತ್ತದೆ. ಇದಲ್ಲದೆ, ಎಂ.ವಿ. ಕೃಷ್ಣರಾಮ ಮತ್ತು ಎಂ. ಕೇಶವಭಟ್ಟರ ಕೃತಿಯಾದ 'ಕರ್ನಾಟಕ ಇತಿಹಾಸ ದರ್ಶನ ಸಂಪುಟ-೧' ರಲ್ಲಿ ಗುಮ್ಮನಾಯಕನ ಪಾಳೆಗಾರರು, ಚಿಕ್ಕಬಳ್ಳಾಪುರದ ಪಾಳೆಗಾರರ ಬಗ್ಗೆ ವಿವರಿಸಿದೆ. ಇವುಗಳಲ್ಲದೆ ಎಚ್.ಎಂ. ನಾಯಕರವರ 'ಕನ್ನಡ ವಿಶ್ವಕೋಶ'ವು ನೆರವಾಗಿದೆ. ಹಾಗೂ ಕೆ. ಅಭಿಶಂಕರರವರ 'ಕೋಲಾರ ಜಿಲ್ಲಾ ಗೆಜೆಟಿಯರ್'ನಲ್ಲಿ ಪಾಳೆಯಗಾರರ ಬಗ್ಗೆ ವಿವರಿಸಿದೆ. ಇವುಗಳಿಂದಾಗಿ ಅವತಿನಾಡಿ ಪಾಳೆಯಗಾರರು ಮತ್ತು ಅವರ ಆಡಳಿತದ ಶಾಖ ವಿಭಾಗಗಳು ಮತ್ತು ಅವರು ವಿಜಯನಗರದ ನೆರವು, ಆನಂತರ ಸ್ವತಂತ್ರ್ಯಕ್ಕಾಗಿ ಸೆಣಸಾಟದ ಬಗ್ಗೆ ವಿಶ್ಲೇಷಿಸಿದೆ.

ಕೋಲಾರ ಜಿಲ್ಲೆಯನ್ನು ಹಲವಾರು ಚಕ್ರಾಧಿಪತ್ಯಗಳು ಆಳಿರುವಂತೆ ಪಾಳೆಗಾರರ ವಂಶಪಾರಂಪರ್ಯ ಆಳ್ವಿಕೆ ಈ ಜಿಲ್ಲೆಯಲ್ಲಿ ಅತ್ಯಂತ ವೈಭವದಿಂದ ನಡೆದಿದೆ ಎಂಬುದಕ್ಕೆ ಅವರು ಕಟ್ಟಿರುವ ಕೋಟೆ-ಕೊತ್ತಲುಗಳು, ಗುಡಿ-ಗೋಪುರಗಳು, ಕೆರೆ-ಕುಂಟೆಗಳು ಇನ್ನು ಸಹ ಜೀವಕಳೆಯಾಗಿ ಉಳಿದಿವೆಯಲ್ಲದೆ ನೋಡುಗರನ್ನು ವಿಸ್ಮಯಗೊಳಿಸುತ್ತವೆ. ಈ ಪಾಳೆಯಗಾರರು ವಿಜಯನಗರ (ಸಂಸ್ಥಾನದ) ಅರಸರ

ಆಡಳಿತದ ಸಾಮಂತರಾಗಿ ಆಡಳಿತದ ಅಧೀನರಾಗಿದ್ದು ಪೊಗದಿ ಕೊಡುವುದರ ಮೂಲಕ ಸ್ವಾಯತ್ತತೆ ಉಳಿಸಿಕೊಂಡು ಆಡಳಿತ ನಡೆಸುತ್ತಿದ್ದರು. ವಿಜಯನಗರ ಅರಸರ ಆಡಳಿತ ಕ್ಷೀಣಿಸುತ್ತಿದ್ದಂತೆ ಪಾಳೆಯಗಾರರ ಸ್ವತಂತ್ರ್ಯ ಪ್ರವೃತ್ತಿ ಹೆಚ್ಚಾಗಿ ಬಹುಬೇಗ ಹಲವಾರು ಭಾಗಗಳಲ್ಲಿ ತಮ್ಮ ಸಂಸ್ಥಾನಗಳನ್ನು ಹುಟ್ಟುಹಾಕಿದ್ದಾರೆ.[೧೧೮] ಇಂತಹ ಕೋಲಾರ ಜಿಲ್ಲೆಯ ಪಾಳೆಯಗಾರರಲ್ಲಿ ಗುಮ್ಮನಾಯಕನಪಾಳ್ಯ ಖಾದ್ರಿಪತಿ ನಾಯಕರು, ಅವತಿ ನಾಡ ಪ್ರಭುಗಳು ಬೈರೇಗೌಡರು, ಸುಗುಟೂರು ತಮ್ಮೇಗೌಡರು, ಚಿಕ್ಕಬಳ್ಳಾಪುರದ ಮಲ್ಲಬೈರೇಗೌಡರು, ಸಾದಲಿ ರಾಜ್ಯದ ನಾಗೊಂಡು ಒಡೆಯರು, ಪರೇಸಂದ್ರದ ಪರೇನಾಯಕರು, ಮಾಸ್ತಿ ನಾಡಿನ ಪಾಳೆಯಗಾರರು, ಮುಳಬಾಗಿಲು ಅರಸರು ಮುಂತಾದವರು ಪ್ರಮುಖರು.

ಇವರ ಆಡಳಿತ-ರಾಜಕೀಯ ಚಟುವಟಿಕೆಗಳಿಂದಾಗಿ ವಿಜಯನಗರ ಸಾಮ್ರಾಜ್ಯ ಆಡಳಿತ ಚರಿತ್ರೆಯಷ್ಟೆ ಕೋಲಾರ ಪ್ರದೇಶದಲ್ಲಿ ಪ್ರಮುಖ ಚರಿತ್ರೆ ಎನಿಸಿಕೊಂಡಿದೆ ಎಂದರೆ ತಪ್ಪಾಗಲಾರದು. ಇವರ ಆಡಳಿತ ಹೋರಾಟದ ಬಗೆಗಳು ಕೋಲಾರ ಪ್ರದೇಶದ ಘನತೆಯನ್ನು ಹೆಚ್ಚಿಸಿದೆ. ಅಲ್ಲದೆ ಯಾವುದೇ ಪ್ರಬಲ ರಾಜವಂಶಗಳು ಗಂಗರ ನಂತರ ಈ ಪ್ರದೇಶದಲ್ಲಿ ಹುಟ್ಟದಿದ್ದರು ವಿಜಯನಗರ ಮತ್ತು ಆನಂತರ ಕಾಲಾವಧಿಯಲ್ಲಿ ಸ್ವತಂತ್ರ್ಯ ರಾಜನಾಯಕರಾಗಿ ಕೋಲಾರ ಪ್ರದೇಶದ ಚರಿತ್ರೆಗೆ ತಮ್ಮದೇಯಾದ ಕಾಣಿಕೆಗಳನ್ನು ನೀಡಿದ್ದಾರೆ ಎಂದು ಪಾಳೆಯಗಾರರ ಚರಿತ್ರೆಯಿಂದ ವ್ಯಕ್ತವಾಗುತ್ತದೆ.

ಅವತಿನಾಡು ಪಾಳೆಯಗಾರರು : ಪ್ರಾಥಮಿಕವಾಗಿ ಅವತಿ ಪಾಳೆಯಗಾರರು ಈ ಪ್ರದೇಶದಲ್ಲಿ ಪ್ರಬಲರಾಗಿ ಕಂಡುಬರುತ್ತಾರೆ. ಈ ವಂಶದ ಬಗ್ಗೆ ೧೪೩೪ಕ್ಕೆ ಸೇರಿದ ಚಿಕ್ಕಬಳ್ಳಾಪುರ ತಾಲೂಕನ ತಾಮ್ರಶಾಸನವೊಂದು ತಿಳಿಸುತ್ತದೆಂದು ಪಿ.ವಿ. ,ಕೃಷ್ಣಮೂರ್ತಿಯವರು ತಿಳಿಸಿದ್ದಾರೆ.[೧೧೯] (Ec.Vol.IX.CB40) ಈ ಶಾಸನದಲ್ಲಿ ಇವರ ಕುಲದೈವ ಭೈರವನೆಂದು, ಮನೆದೇವರು ಕರಗದಮ್ಮನೆಂದು ಹೇಳಿಕೊಂಡಿದ್ದಾರೆ.

ಅವತಿನಾಡ ಪ್ರಭುಗಳು ಪ್ರಾಥಮಿಕವಾಗಿ ಮದ್ರಾಸ್ ಪ್ರಾಂತ್ಯ ಯಣಮಂಜಿ ಪುತ್ತೂರುನಲ್ಲಿದ್ದರು ಎಂದು ಹೇಳಿದ್ದಾರೆ.[೧೨೦] ಬಂದಾಕೊಪ್ಪಲು ರೈತಾಪಿ ಕುಟುಂಬದವರಾಗಿದ್ದು ಮೊರಸು ಒಕ್ಕಲಿಗ ಎಂಬ ಹೆಸರಿನಿಂದ ಕರೆಯುತ್ತಿದ್ದರೆಂದು ಎಂ.ವಿ. ಕೃಷ್ಣರಾವ ಮತ್ತು ಗ್ಯಾಸೆಟಿಯರಗಳಿಂದ ತಿಳಿದುಬರುತ್ತದೆ. ಪ್ರಮುಖ ನಾಯಕ ರಣಬೈರೇಗೌಡನು ತನ್ನ ಮಗಳಾದ ದೊಡ್ಡಮ್ಮಳ ವಿವಾಹದಿಂದ ತನ್ನ ಸಹೋದರರೊಂದಿಗೆ ಕೋಲಾರದ ನಂದಿದುರ್ಗ ಬಳಿ ರಾಮಸ್ವಾಮಿ ಬೆಟ್ಟದ ಬಳಿ ಬಂದು ತಂಗಿದರು. ಅಲ್ಲಿಂದೇ ಅವರ ಪಾಳೇಯಪಟ್ಟು ಪ್ರಾರಂಭವಾಯಿತು ಎಂದು ಗ್ಯಾಸೆಟಿಯರುಗಳಲ್ಲಿ ತಿಳಿದುಬರುತ್ತದೆ. ಇದನ್ನೇ ಎಂ.ವಿ. ಕೃಷ್ಣರಾವ್[೧೨೧] ಪಿ.ವಿ. ಕೃಷ್ಣಮೂರ್ತಿಯವರು ಹೇಳಿದ್ದಾರೆ. ರಣಬೈರೇಗೌಡನ ಸಹೋದರ ಸ್ವತಂತ್ರ ಪಾಳೆಪಟ್ಟು ಕಟ್ಟುವ ಹಂಬಲದಿಂದಾಗಿ ಸಣ್ಣ ಬೈರೇಗೌಡ ಹೊಲವನಹಳ್ಳಿ ಮತ್ತು ಕೊಟಗೇರಿಯಲ್ಲಿ ಪಾಳೆಪಟ್ಟು ಕಟ್ಟಿದ. ಜಯಗೌಡ ಯಲಂಕದಲ್ಲಿ ನೆಲೆಸಿದ. ತಿಮ್ಮೇಗೌಡನು ಜಂಗಮಕೋಟೆಯ ಬಳಿ ಸುಗಟೂರಿಗೆ ತೆರಳಿ, ಕೋಲಾರ ಮತ್ತು ಪುಂಗನೂರು ಪ್ರಾಂತ್ಯಗಳ ಅರಸರಾಗಿ ಹೊಸಕೋಟೆ ಸ್ಥಾಪಿಸಿದ.[೧೨೨]

ಸೂಣ್ಣಪ್ಪ ಗೌಡಲಯ್ಯನವರು ಬೈರೇಗೌಡ, ಹಾವಳಿ ಬಯಪ್ಪ ಗೌಡ ಇಮ್ಮಡಿ ಹಾವಳಿ ಭೈರವ ಇಮ್ಮಡಿ ಬೈಚೇಗೌಡ, ಇಮ್ಮಡಿ ಸೂಣ್ಣ ಭೈರೇಗೌಡ, ಗೋಪಾಲಗೌಡ, ವೆಂಕಟನಾರಾಯಣಪ್ಪ ಗೌಡ, ರಾಮಸ್ವಾಮಿ ಮುಂತಾದವರು ಕೋಲಾರ ಪ್ರದೇಶದಲ್ಲಿ ಆಡಳಿತ ಮಾಡಿದ ಪ್ರಮುಖ ಅವನಿ ಪಾಳೆಗಾರರಾಗಿದ್ದಾರೆ ಎಂದು ಪಿ.ವಿ. ಕೃಷ್ಣಮೂರ್ತಿ, ಬಿ.ಎಲ್. ರೈಸ್‌ರ 'ಶಾಸನಗಳ ಸಂಪುಟ ೯ ಮತ್ತು ೧೦'ಗಳನ್ನು ಆಧರಿಸಲಾಗಿದೆ.

ವಿಜಯನಗರ ಅರಸು ೨ನೇ ವೆಂಕಟಪತಿರಾಯನ (೧೬೩೨-೪೨) ಕಾಲದಲ್ಲಿ ಬಿಜಾಪುರದ ಆದಿಲ್‌ಷಾಹಿಗಳ ದಾಳಿಯಲ್ಲಿ ಜಹಗೀರಾದ ಮರಾಠದ ಷಹಜಿಯಿಂದ ಇವರು ಕೋಲಾರ ಬೆಂಗಳೂರು ಕೆಲವು ಪ್ರದೇಶಗಳನ್ನು ಆಕ್ರಮಿಸಿದರು. ನಂತರ ೧೬೯೦ರಲ್ಲಿ ಹರಜಿಯು (ಮರಾಠಿ) ಹೊಂದಲಾಗಿ ಮತ್ತೆ ಅವತಿನಾಡು ಪಾಳೆಗಾರರು ಚಿಕ್ಕಬಳ್ಳಾಪುರ, ಶಿಡ್ಲಘಟ್ಟ, ಚಿಂತಾಮಣಿ ಮುಂತಾದ ತಾಲೂಕಗಳಲ್ಲಿ ತಮ್ಮ ಅಧಿಪತ್ಯ ಅಧೀನಗೊಂಡರು ಎಂದು ಪಿ.ವಿ. ಕೃಷ್ಣಮೂರ್ತಿಯವರ ಕೃತಿಯಿಂದ ವ್ಯಕ್ತವಾಗುತ್ತದೆ. ಇದೇ ವೇಳೆಗೆ ಕೋಲಾರ ಪ್ರದೇಶದ ವಿವಿಧ ಭಾಗಗಳಲ್ಲಿ ಇದೇ ವಂಶದವರು ಮತ್ತು ಇತರೆಯವರು ಆಡಳಿತ ಮಾಡುತ್ತಿದ್ದುದು ಕಂಡುಬರುತ್ತದೆ.

ಇದರಂತೆ ಚಿಕ್ಕಬಳ್ಳಾಪುರದ ಪಾಳೆಯಗಾರರು, ಗೊಮ್ಮನಾಯಕನ ಪಾಳೆಯಗಾರರು, ಸೂಗಟೂರು ಪಾಳೆಯಗಾರರು, ಮಾಸ್ತಿ ಪಾಳೆಯಗಾರರು, ವಿಜಯನಗರ ಸಾಮ್ರಾಜ್ಯ ಮತ್ತು ಅನಂತರ ಕಾಲದಲ್ಲಿ ಕಂಡುಬರುತ್ತದೆ. ಇವರ ಪ್ರಬಲತೆ, ರಾಜತ್ವ ಲಕ್ಷಣಗಳಿಂದ ಕೋಲಾರ ಚರಿತ್ರೆಯಲ್ಲಿ ವಿಶೇಷತೆಯನ್ನು ಪಡೆದುಕೊಂಡಿದೆ. ಇವರು ವಿಜಯನಗರ ಕಾಲದಲ್ಲಿ ವಿಜಯನಗರದ ಅರಸರಿಗೆ ಆಡಳಿತದಲ್ಲಿ ಆಪ್ತರಾಗಿದ್ದು ಅಲ್ಲದೆ, ಯುದ್ಧಗಳಲ್ಲಿ ನೆರವಾಗಿರುವವರು. ಇದರಿಂದ ವಿಜಯನಗರದ ಅರಸರು ಅವರ ಸ್ಥಾನಮಾನವನ್ನು ಅವರಿಗೆ ನೀಡುತ್ತಿದ್ದರು. ಈ ಅವಧಿಯಲ್ಲಿ ಮುಳಬಾಗಿಲಿನ ಚಿಕ್ಕರಾಯನಿಗೆ ವಿಜಯನಗರದ ವೆಂಕಟಪತಿರಾಯ ಚಿಕ್ಕರಾಯ ಎಂಬ ಬಿರುದನ್ನು ನೀಡಿ ಮುಳಬಾಗಿಲು ಪ್ರಭುವೆಂದು ನೇಮಕಮಾಡುತ್ತಾನೆ ಎಂದು ದೇ. ಸ್ಮಿತಾರೆಡ್ಡಿಯವರು ಹೇಳಿರುವುದು ಗಮನಿಸಲಾಗುತ್ತದೆ. ಹೀಗೆ ಪ್ರಬಲರಾಗಿದ್ದ ಪಾಳೆಯಗಾರರ ಕೋಲಾರ ಪ್ರದೇಶದಲ್ಲಿ ವಿವಿಧ ಭಾಗಗಳಲ್ಲಿ ಹಂಚಿಹೋಗಿದ್ದಾರೆ. ಮುಳಬಾಗಿಲು ಪಾಳೆಯಗಾರರು ಮುಳಬಾಗಿಲು ಪಾಳೆಗಾರರು ಮುಳಬಾಗಿಲು ಕೇಂದ್ರಸ್ಥಾನವಾಗಿ, ಮಾಸ್ತಿ ಪಾಳೆಯಗಾರರು ಮಾಸ್ತಿ, ಸೂಗಟೂರು ಪಾಳೆಯಗಾರರು ಸೂಗಟೂರು, ಗುಮ್ಮನಾಯಕನ ಪಾಳೆಗಾರರು ಗುಮ್ಮರೆಡ್ಡಿಪಾಳ್ಯ, ಚಿಕ್ಕಬಳ್ಳಾಪುರದ ಪಾಳೆಯಗಾರರು ಚಿಕ್ಕಬಳ್ಳಾಪುರಗಳನ್ನು ತಮ್ಮ ಕೇಂದ್ರಸ್ಥಾನಗಳಾಗಿ ಹೊಂದಿದ್ದರು. ಇವರಲ್ಲಿ ಅನೇಕರು ವಿಜಯನಗರದ ಮುಂಚಿತವಾಗಿ ವಂಶಪರಂಪರೆಯಾಗಿ ಬಂದವರು ಇದ್ದಾರೆ. ಅಂಥವರು ಮುಳಬಾಗಿಲು, ಗುಮ್ಮರೆಡ್ಡಿ ಪಾಳೆಗಾರರು ಪ್ರಮುಖರಾಗಿದ್ದಾರೆ ಎಂದು ಪಿ.ವಿ. ಕೃಷ್ಣಮೂರ್ತಿ, ಎಸ್. ಶೇಕ್‌ಮಸ್ತಾನರವರ ಲೇಖನಗಳಿಂದ ತಿಳಿದುಬರುತ್ತವೆ. ಕ್ರಿ.ಶ. ೧೬೩೮ರ ಸುಮಾರಿನಲ್ಲಿ ಬಿಜಾಪುರದ ಆದಿಲಷಾಹಿಗಳ ಆಕ್ರಮಣಕ್ಕೆ ಕೋಲಾರ ಪ್ರದೇಶದ ಬಹುಭಾಗ ಒಳಗಾಗಿತ್ತು. ಆಗ ಅವೆಲ್ಲವು ಬಿಜಾಪುರದ ಸೇನಾನಿ ಮರಾಠರ ಷಹಜಿಗೆ ಜಹಾಗೀರಾಗಿ ನೀಡಲ್ಪಟ್ಟವು. ಇಲ್ಲಿಗೆ ಪಾಳೆಯಗಾರರ ಪ್ರಬಲ್ಯ ಕುಸಿದು ಮರಾಠರು, ಹೈದಾರಾಲಿ ಹಾಗೂ ಟಿಪ್ಪುವಿನ ಆಕ್ರಮಣಗಳಿಗೆ

ಗುರಿಯಾದರು. ಅಲ್ಲದೆ ಬ್ರಿಟಿಷರ ಆಗಮನದಿಂದ ಅಳಿದುಹೋದ ತಮ್ಮ ಪ್ರದೇಶಗಳು ಬ್ರಿಟೀಷರ ನೆರವುನಿಂದ ಉಳಿಸಿಕೊಂಡರು ಎಂದು ಎಂ.ವಿ. ಕೃಷ್ಣಮೂರ್ತಿಯವರ ಲೇಖನಗಳಲ್ಲಿ ಕಂಡುಬರುತ್ತದೆ.[೨೫]

* * *

ಮಧ್ಯಕಾಲೀನ ಚರಿತ್ರೆಯಲ್ಲಿ ಬಹುತೇಕವಾಗಿ ಕೋಮುವಾದವನ್ನು ತುಂಬಿರುವುದು ವ್ಯಕ್ತವಾಗುತ್ತದೆ. ಹೊಯ್ಸಳರ ಕಾಲದಲ್ಲಿಯೇ ದೆಹಲಿ ಸುಲ್ತಾನರು ಮತ್ತು ಮೊಗಲರ ದಾಳಿಗಳು ಪ್ರಾರಂಭವಾಗಿ ಹಿಂದು ರಾಜ್ಯಗಳು ಮತ್ತು ಹಿಂದು ಸಂಸ್ಕೃತಿ ಕಲ್ಮಶವಾಯಿತೆಂದು ಹೇಳಲಾಗಿದೆ. ವಸಾಹತುಶಾಹಿಗಳು ಈ ರೀತಿ ತಿರುವು ನಿಲುವುಗಳು ರಾಷ್ಟ್ರೀಯ ಹೋರಾಟದಲ್ಲಿ ಮರು ಚಿಂತನೆಗಳಾದವು. ಇದು ಮಧ್ಯಕಾಲೀನ ಚರಿತ್ರೆಯ ರಚನೆಯ ಒಂದು ಸ್ವರೂಪವಾದರೆ, ಸ್ಥಳೀಯ ಆಡಳಿತಗಾರರು ಮತ್ತು ರಾಜ್ಯಗಳು ಪ್ರಬಲತೆಗೆ ಬಂದು ತದನಂತರ ಆತಂರಿಕ ಸಮಸ್ಯೆಗಳಲ್ಲಿಯೇ ಅವು ನಶಿಸಿ ಹೋಗುವುದು. ಅನಂತರ ಮತ್ತೊಂದು ರಾಜ್ಯ ಅಥವಾ ಬೇರೊಬ್ಬರ ಆಕ್ರಮಣಗಳಿಗೆ ನಾಂದಿ ಉಂಟಾಗಿರುವುದು ಮತ್ತೊಂದು ಸ್ವರೂಪವಾಗಿದೆ.

ಈ ನಡುವೆ ವಿಜಯನಗರ ಸಾಮ್ರಾಜ್ಯ ಮತ್ತು ಅದರ ಆಡಳಿತ ಹಾಗೂ ಅದರ ಅವನತಿ ಬಗ್ಗೆ ಹಲವಾರು ವಾದ ವಿವಾದಗಳು ನಡೆದಿವೆ. ಅಂತೆಯೇ ಹಲವು ದೃಷ್ಟಿಕೋನಗಳು ಹೊಂದಲಾಗಿದೆ. ಇದರ ಕೇಂದ್ರ ಹಂಪೆಯಾದರೆ ಅದರ ಆಡಳಿತ ಶಾಖೆಗಳು ಅದರ ಅಧೀನ ಪಾಳೆಗಾರರ ಸಂಸ್ಥೆಗಳಿಗೂ ಅವು ಸೇರ್ಪಡೆಗೊಂಡಿವೆ. ಹಾಗಾಗಿ ಕೋಲಾರ ಚರಿತ್ರೆ ರಚನೆಯಲ್ಲಿ ಇದು ಗಮನಿಸುವಂತಹುದಾಗಿದೆ. ರಾಬರ್ಟ್ ಸಿವೆಲ್ಲರ 'ಮರೆತುಹೋದ ಮಹಾಸಾಮ್ರಾಜ್ಯ' ಮತ್ತು ಸೂರ್ಯನಾರಾಯಣ ರಾವ್‌ರವರ 'ಮರೆಯಲಾಗದ ಸಾಮ್ರಾಜ್ಯ' ಎಂಬ ಎರಡು ಕೃತಿಗಳು ಪರಸ್ಪರ ತದ್ವಿರುದ್ಧ ವಾದಗಳಾಗಿರುವುದು ಈ ನಡುವೆ ಗಮನಿಸುವಂತಹುದಾಗಿದೆ. ಇದರಲ್ಲಿ ಸಿವೆಲ್ಲರು ಕೋಮು ನಿಲುವು ಹೊಂದಿದ್ದಾರೆ. ಸೂರ್ಯನಾರಾಯಣ ರಾವ್‌ರವರು ರಾಷ್ಟ್ರೀಯ ಮನೋಭಾವನೆ ಹೊಂದಿದ್ದಾರೆ. ಒಟ್ಟಿನಲ್ಲಿ ಸಿವೆಲ್ಲರು ಹುಟ್ಟು ಹಾಕಿದ ಹಿಂದು, ಮುಸ್ಲಿಂ ಬೇಧಭಾವಕ್ಕೆ ಸೂರ್ಯನಾರಾಯಣರಾವ ಅವರು ತಮಗೆ ಅರಿವಿಲ್ಲದೆ ರಾಷ್ಟ್ರೀಯತೆಯನ್ನು ಬೆಳೆಸುವ ಆವೇಶದ ಭರದಲ್ಲಿ ವಿಜಯನಗರ ಚರಿತ್ರೆಯನ್ನು ಹಿಂದು, ಮುಸ್ಲಿಂ ಭೇಧಭಾವಕ್ಕೆ ನೀರೆರೆದು ಬೆಳೆಸಿದಂತೆ ಕಂಡುಬರುತ್ತದೆ.

ವಿಜಯನಗರ ಸಾಮ್ರಾಜ್ಯದ ಪತನ ನಂತರ ಪಾಳೆಗಾರರ ಪ್ರಬಲತೆ ಕಂಡುಬರುತ್ತದೆ. ಕೋಲಾರ ಪ್ರದೇಶದ ಚರಿತ್ರೆಯಲ್ಲಿ ಪಾಳೆಗಾರರ ಚರಿತ್ರೆ ಹಿಂದಷ್ಟೇ ಪ್ರಖ್ಯಾತವಾಗಿದ್ದ ವಿಜಯನಗರದಷ್ಟೇ ಪ್ರಬಲ ಮತ್ತು ಬೃಹತ್ ಚರಿತ್ರೆಗೆ ನಾಂದಿ ಹಾಕಿದೆ. ಇವರಲ್ಲಿಯೂ ಸಹ ವಸಾಹತುಶಾಹಿ ಕಾಲದಲ್ಲಿ ಮತ್ತು ಆನಂತರದಲ್ಲಿ ರಚನೆಗೊಂಡ ಕೃತಿಗಳಲ್ಲಿ ಕೋಮುವಾರು, ರಾಷ್ಟ್ರೀಯತೆ ವಾದಗಳು ತುಂಬಿರುವುದು ವ್ಯಕ್ತವಾಗುತ್ತದೆ. ಅದಕ್ಕೆ ಆಗ ಉಂಟಾಗಿರುವ ಸನ್ನಿವೇಶ, ಪರಿಸ್ಥಿತಿಗಳೇ ಕಾರಣವೆನ್ನಲಾಗುತ್ತದೆ. ಅಂದರೆ ಮೊಗಲರು, ಸುಲ್ತಾನರ ಜೊತೆಗೆ ಮೈಸೂರು ರಾಜ್ಯವನ್ನು ಆಡಳಿತ ಮಾಡಿದ ಮುಸ್ಲಿಂ ಹೈದರಾಲಿ, ಟಿಪ್ಪು ಸುಲ್ತಾನರ ದಾಳಿಗಳಿಂದ ಮತ್ತು ಅಷ್ಟೊತ್ತಿಗೆ ಶಿವಾಜಿಯು ಹಿಂದು ಸಾಮ್ರಾಜ್ಯ ಪುನಃನಿರ್ಮಾಣ ಹಣೆಪಟ್ಟಿ ಕಟ್ಟಿ ಹೋರಾಟ ಮಾಡಿರುವುದು ಈ ಹಿನ್ನೆಲೆಯಲ್ಲಿ ಕಾಣಲಾಗಿದೆ.

ಕೋಲಾರದಲ್ಲಿ ಹೊಯ್ಸಳರ ಆಡಳಿತ ಕುರಿತಾಗಿ ಬಿ.ಎಲ್. ರೈಸ್, ಎಂ. ಶೇಷಾದ್ರಿ, ಕೆ. ಅಭಿಶಂಕರರವರ ಕೃತಿಗಳು ಬಹುಮುಖ ಅಧ್ಯಯನದ ಆಕರಗಳಾಗಿವೆ. ಟಿ. ದಯಾನಂದ ಪಟೇಲರ 'ಹೊಯ್ಸಳ ದೇವಾಲಯ' ಎಂಬ ಲೇಖನ ಮತ್ತು ಐ.ವಿ. ಕೃಷ್ಣಮೂರ್ತಿಯವರ 'ಪ್ರಾಚೀನ ಆಡಳಿತ ಘಟಕಗಳು' ಎಂಬ ಲೇಖನಗಳು ಅದಕ್ಕೆ ಸ್ಪಂದಿಸುವಂತಹ ಸಂಸ್ಕೃತಿ ಅಂಶಗಳನ್ನು ಒದಗಿಸಿವೆ. ಅದರಂತೆ ವಿಜಯನಗರ ಆಡಳಿತಕ್ಕೆ ಸಿ. ಅಶ್ವತ್ಥಮ್ಮನವರ 'ಕೋಲಾರದಲ್ಲಿ ವಿಜಯನಗರ ಆಡಳಿತ' ಎಂಬ ಕೃತಿ. ಬಿ. ಪಾಂಡುಕುಮಾರರವರ 'ವಿಜಯನಗರ ದೇವಾಲಯಗಳು' ಎಂಬ ಲೇಖನ ಸಾಂಸ್ಕೃತಿಕ ದೃಷ್ಟಿಯಲ್ಲಿ ಪ್ರಾಮುಖ್ಯತೆ ಗಳಿಸಿದೆ. ಅಲ್ಲದೆ ವೆಂಕಟರತ್ನ ಎಂಬ ಅವರ ವಿಜಯನಗರ ಸಾಮ್ರಾಜ್ಯದಲ್ಲಿ ಸ್ಥಳೀಯರು, ಸಿ.ಟಿ.ಎಂ. ಕೊಟ್ರಯ್ಯನವರ 'ವಿಜಯನಗರ ಕಾಲದ ನೀರಾವರಿ ವ್ಯವಸ್ಥೆ, ಸದ್ಯೋಂಜಾತ ಸ್ವಾಮೀಜಿಯವರ 'ವಿಜಯನಗರ ಕಾಲದ ಧಾರ್ಮಿಕ ಜೀವನ' ಎಂಬ ಕೃತಿ ವಿವಿಧ ದೃಷ್ಟಿಕೋನಗಳಲ್ಲಿ ಮತ್ತು ಪ್ರಭಾವಿ ಅಲೆಗಳ ಕೃತಿಗಳಾಗಿವೆ. ಇದಾದ ನಂತರ ಪಾಳೆಗಾರ ಚರಿತ್ರೆಗೆ, ಎಂ.ವಿ. ವಸುರವರ ಸಂಪಾದಿತ ಕೃತಿಯಾದ 'ದಕ್ಷಿಣ ಕರ್ನಾಟಕದ ಅರಸು ಮನೆತನಗಳು' ಮತ್ತು ಅದರಲ್ಲಿರುವ ಲೇಖನಗಳಿಂದ ಕೋಲಾರ ಪ್ರದೇಶದಲ್ಲಿನ ಪಾಳೆಗಾರರ ಚರಿತ್ರೆಗೆ ಹೊಸ ಆಯಾಮ ಒದಗಿಸಿದೆ. ಆದರೂ ಇವು ಯಾವುವೂ ಪರಿಪೂರ್ಣ ವಿವರಗಳನ್ನು ನೀಡುವುದಿಲ್ಲ ಮತ್ತು ಅವು ಬಹುತೇಕವಾಗಿ ಗೆಜೆಟಿಯರುಗಳು ಮತ್ತು ಶಾಸನಸಂಪುಟಗಳನ್ನು ಅವಲಂಬಿಸಿವೆ.

* * *

ಕೋಲಾರ ಪ್ರದೇಶದ ಪ್ರಾಚೀನ ಚರಿತ್ರೆಯನ್ನು ಕುರಿತಾಗಿ ಹಲವಾರು ಕೃತಿಗಳಲ್ಲಿ ಗುರುತಿಸಲಾಗಿದೆ. ಪ್ರಾಥಮಿಕವಾಗಿ ಬ್ರಿಟಿಷ್ ವಿದ್ವಾಂಸರು ಈ ಚರಿತ್ರೆಯನ್ನು ರಚಿಸಿದ್ದಾರೆ. ಬ್ರಿಟಿಷ್ ವಿದ್ವಾಂಸರು ಗೆಜೆಟಿಯರಗಳ ಮೂಲಕ ಶಾಸನಸಂಪುಟಗಳ ಮೂಲಕ ಕೋಲಾರ ಪ್ರದೇಶದ ಚರಿತ್ರೆಯನ್ನು ರಚಿಸಿದರು. ಇದರಿಂದ ಸ್ಥಳೀಯ ಜನರಿಗೆ ತಿಳಿಯಪಡಿಸಲು ಯತ್ನಿಸಲಾಗಿದೆ. ಆದರೂ ಗೆಜೆಟಿಯರಗಳ ಮೂಲ ಉದ್ದೇಶ ಬೇರೆಯಾಗಿತ್ತು. ಅಂದರೆ ಜನರ ಬೆಂಬಲ ಪಡೆದು ತಮ್ಮ ಸಾಮ್ರಾಜ್ಯವನ್ನು ಭದ್ರವಾಗಿ ತಳವೂರುವ ಕೆಲಸಕ್ಕಾಗಿ ಬಳಸಿಕೊಂಡರು. ಅಲ್ಲದೆ, ಗೆಜೆಟಿಯರಗಳನ್ನು ತಮ್ಮ ಅನುಕೂಲಕ್ಕೆ ತಕ್ಕಹಾಗೆ ರಚಿಸಿಕೊಂಡರು. ಅನಂತರ ಭಾರತೀಯ ವಿದ್ವಾಂಸರು ತಮ್ಮ ಕೃತಿಗಳ ಮೂಲಕ ಬ್ರಿಟಿಷ್ ವಸಾಹತುಶಾಹಿ ನೀತಿಯನ್ನು ವಿರೋಧಿಸಿ ಬರೆದರು. ವಸಾಹತೋತ್ತರ ಕಾಲದಲ್ಲಿ ಅನೇಕ ವಿದ್ವಾಂಸರು ಹಿನ್ನೆಲೆಯ ಕೃತಿಗಳನ್ನೇ ಬಳಸುತ್ತಾ ಮತ್ತಷ್ಟು ಚಿತ್ರಣ ಕೊಡಲು ಯತ್ನಿಸಿದರು. ಈ ಕಾಲಕ್ಕೆ 'ಕೋಲಾರ ಜಿಲ್ಲಾ ಗೆಜೆಟಿಯರ್', 'ಕರ್ನಾಟಕ ಹಾಗೂ ಮೈಸೂರು ಸ್ಟೇಟ್ ಗೆಜೆಟಿಯರ್'ಗಳಲ್ಲಿ ಕೋಲಾರ ಪ್ರದೇಶದ ರಾಜಕೀಯ ಚರಿತ್ರೆಯ ಜೊತೆಯಲ್ಲಿಯೇ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಹಾಗೂ ಆಡಳಿತಾತ್ಮಕ ವಿಷಯಗಳನ್ನು ವಿವರಿಸಿದ್ದಾರೆ. ಆದರೂ ಇವು ಬಿ.ಎಲ್. ರೈಸ್, ಎಂ. ಶೇಷಾದ್ರಿ ಅವರ 'ಕೋಲಾರ ಜಿಲ್ಲಾ ಶಾಸನ ಸಂಪುಟ'ಗಳನ್ನು ಅವಲಂಬಿಸಿವೆ ಎಂದಾಗಿದೆ. ಅಲ್ಲದೆ ಅವುಗಳನ್ನು ಬಳಸಿಕೊಂಡು ಬರೆಯಲಾದ ಬಿ. ಜಯದೇವಪ್ಪ ಅವರ 'ಚಿಂತಾಮಣಿ ತಾಲೂಕ ದರ್ಶನ' (೧೯೮೬), ಎಂ.ಎಸ್. ನರಸಿಂಹಮೂರ್ತಿಯವರ 'ಮಾಲೂರು ತಾಲೂಕು ದರ್ಶನ' (೧೯೮೭), ವೇಮಗಲ್ ಸೋಮಶೇಖರರವರ

'ಬಂಗಾರಪೇಟೆ ತಾಲೂಕ ದರ್ಶನ' ಮುಂತಾದವು. ರಾಜಕೀಯ ಚರಿತ್ರೆಯ ಜೊತೆಗೆ ಆರ್ಥಿಕ, ಸಾಮಾಜಿಕ ಹಾಗೂ ಶೈಕ್ಷಣಿಕ ಚರಿತ್ರೆಗಳನ್ನು ಸೂಕ್ಷ್ಮತೆಯಲ್ಲಿ ವಿವರಿಸಲು ಪ್ರಯತ್ನಿಸಿವೆ. ಇದಕ್ಕೆ ಪೂರಕವಾದಂತೆ ಕೋಲಾರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಇಲಾಖೆಯಿಂದ ಪ್ರಕಟಣೆಗೊಂಡಿರುವ ವಾರ್ಷಿಕ ಸಾಹಿತ್ಯ ಸಮ್ಮೇಳನ ಕೃತಿಗಳಲ್ಲಿ ಕೋಲಾರ ಪ್ರದೇಶದ ಚರಿತ್ರೆಯನ್ನು ಗುರುತಿಸಲು ಯತ್ನಿಸಿವೆ. ಈ ಪ್ರಯತ್ನಗಳಿಂದ 'ಹೊಂಗಿರಣ', 'ಹೊಸಪಥ', 'ಸಿರಿನಂದಿ' ಮುಂತಾದವುಗಳು ಹೊರಬಂದು ವಿವಿಧ ವಿದ್ವಾಂಸರುಗಳ ಲೇಖನಗಳು ಸಂಗ್ರಹವಾಗಿದ್ದು ಚರಿತ್ರೆಯನ್ನು ಪ್ರತಿಬಿಂಬಿಸಲ್ಪಟ್ಟಿವೆ.

ಕೆ. ಅಭಿಶಂಕರರವರ 'ಕರ್ನಾಟಕ ಪುರಾತತ್ತ್ವ ನೆಲೆಗಳು', ಅ. ಸುಂದರ, ಬಿ. ನರಸಿಂಹಯ್ಯನವರ ಶಿಲಾಯುಗದ ಲೇಖನಗಳಿಂದ ಕೋಲಾರ ಪ್ರದೇಶದಲ್ಲಿ ದೊರೆತ ಆದಿಮಾನವನ ನೆಲೆಗಳ ಬಗೆಗೆ ಉತ್ತಮವಾದ ವಿವರಣೆಯನ್ನು ಒದಗಿಸಿವೆ. ಇವರ ಪ್ರಯತ್ನಗಳಿಗಿಂತ ಮುಂಚಿನ ಕೃತಿಗಳಲ್ಲಿ ಸಂಪೂರ್ಣವಾದ ಆದಿಮಾನವ ನೆಲೆಗಳ ವಿವರಗಳು ದೊರೆಯುವುದಿಲ್ಲ ಎಂದು ಹೇಳಲಾಗುತ್ತದೆ. ಈ ಪ್ರಯತ್ನದಲ್ಲಿ ಸಂಪಾದಿಸಿದ ಆರ್. ಗೋಪಾಲರವರ 'ಕೋಲಾರ ಪ್ರದೇಶದ ಪುರಾತತ್ತ್ವ ನೆಲೆಗಳು' ಎಂಬ ಕೃತಿ ಹೆಚ್ಚಿನ ಪ್ರಾಮುಖ್ಯತೆ ಗಳಿಸಿದೆ. ಅಲ್ಲದೆ ಕೋಲಾರ ಪ್ರದೇಶ ಪ್ರಾಚೀನ ಚರಿತ್ರೆಯನ್ನು ವ್ಯಕ್ತಪಡಿಸುವ ಕೃತಿಗಳಲ್ಲಿ ವಿಶೇಷತೆಯನ್ನು ಗಳಿಸಿದೆ. ಇದರಲ್ಲಿ ಬಿ. ನರಸಿಂಹಯ್ಯ, ಎಂ.ವಿ. ಶ್ರೀನಿವಾಸ, ಜ್ಯೋತಿಬಾಯಿ, ಎಚ್. ಜಯಮ್ಮ ಕರಿಯಣ್ಣ, ಆರ್. ಶೇಷಾಶಾಸ್ತ್ರಿ, ಎಚ್.ಎಸ್. ಗೋಪಾಲರಾವ, ಪಿ.ವಿ. ಕೃಷ್ಣಮೂರ್ತಿ ಹಾಗೂ ಬಿ. ರಾಜಶೇಖರಪ್ಪನವರ ಲೇಖನಗಳು 'ಕೋಲಾರ ಪ್ರದೇಶದ ಪ್ರಾಚೀನ ಚರಿತ್ರೆ'ಯನ್ನು ವ್ಯಕ್ತಪಡಿಸಲು ನೆರವಾಗಿವೆ. ಆದರೂ ಇವೆಲ್ಲವೂ ಒಂದೇ ದೃಷ್ಟಿಕೋನ ಹೊಂದಿರದೆ, ಬೇರೆ ಬೇರೆ ದೃಷ್ಟಿಕೋನಗಳನ್ನು ಹೊಂದಿವೆ. ಅಂದರೆ ಶಾಸನಗಳು, ಐತಿಹ್ಯಗಳು, ಆಡಳಿತ ಘಟಕಗಳು, ಸಂಸ್ಕೃತಿ ಮುಂತಾದ ವಿಷಯಗಳನ್ನು ವಿವರಿಸಿವೆ. ಇವೆಲ್ಲವು ಶಾಸನಸಂಪುಟಗಳು, ಗೆಜೆಟಿಯರುಗಳನ್ನು ಅವಲಂಬಿಸಿದೆಯಲ್ಲದೆ ಹೊಸ ವಿಚಾರಗಳನ್ನು ವ್ಯಕ್ತಪಡಿಸಿವೆ ಎಂದು ಹೇಳಲಾಗುತ್ತದೆ. ಆದರೂ ಕೋಲಾರ ಪ್ರದೇಶದ ಪ್ರಾಚೀನ ಚರಿತ್ರೆಯನ್ನು ಸಂಪೂರ್ಣವಾಗಿ ವಿವರಿಸಲು ಯಾವೊಂದು ಕೃತಿಯ ಪ್ರಯತ್ನವು ನಡೆಸಿಲ್ಲವೆಂದು ಕಂಡುಬರುತ್ತದೆ.

ಕೋಲಾರ ಪ್ರದೇಶದ ಮಧ್ಯಕಾಲೀನ ಚರಿತ್ರೆಯನ್ನು ವ್ಯಕ್ತಪಡಿಸಲು ಬಿ.ಎಲ್. ರಾಯಿಸ, ಎಂ. ಶೇಷಾದ್ರಿರವರ 'ಕೋಲಾರ ಜಿಲ್ಲಾ ಶಾಸನ ಸಂಪುಟಗಳು' ಮತ್ತು ಕೆ. ಅಭಿಶಂಕರರವರ 'ಕೋಲಾರ ಜಿಲ್ಲಾ ಗೆಜೆಟಿಯರುಗಳು', ಸಿ. ಅಶ್ವತ್ಥಮ್ಮನವರ ಕೋಲಾರ ಪ್ರದೇಶದಲ್ಲಿ ವಿಜಯನಗರ ಸಾಮ್ರಾಜ್ಯದ ಆಡಳಿತ, ಎಂ.ವಿ. ವಸುರವರ 'ದಕ್ಷಿಣ ಕರ್ನಾಟಕದ ಅರಸು ಮನೆತನಗಳು' ಇವುಗಳ ಜೊತೆಗೆ 'ತಾಲೂಕ ದರ್ಶನಗಳು', ಕೋಲಾರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್‌ನಿಂದ ಪ್ರಕಟಣೆಗೊಳಿಸಿದ ಕೃತಿಗಳು ನೆರವಾಗಿವೆ. ಕೋಲಾರ ಪ್ರದೇಶದ ಮಧ್ಯಕಾಲೀನ ಚರಿತ್ರೆ ಹೊಯ್ಸಳರ ಆಡಳಿತ ಕಾಲದಿಂದ ಪ್ರಾರಂಭವಾಗಿದ್ದು. ಅವರ ಆಡಳಿತ ಹಾಗೂ ಸಾಂಸ್ಕೃತಿಕ ನೆಲೆಗಳನ್ನು ಟಿ. ದಯಾನಂದ, ಪಿ.ವಿ. ಕೃಷ್ಣಮೂರ್ತಿ, ಎಂ.ವಿ. ಶ್ರೀನಿವಾಸ, ಎಂ. ಕೇಶವಭಟ್ಟರು ವ್ಯಕ್ತಪಡಿಸಿದ್ದಾರೆ. ಇದರಿಂದ ತಮಿಳುನಾಡಿನ ಚೋಳರ ಪಾರುಪತ್ಯೆ ಅಂತ್ಯಗೊಳಿಸಿ ಕನ್ನಡನಾಡಿನ ಪರಮಾಧಿಕಾರ ಕೋಲಾರದಲ್ಲಿ ನೆಲೆಗೊಳ್ಳುವಂತೆ

ಆಯಿತು. ನಂತರದ ವಿಜಯನಗರ ಅರಸರ ಕಾಲದಲ್ಲಿ ಆಡಳಿತ ಕೋಲಾರ ಪ್ರದೇಶದ ಮುಳಬಾಗಿಲು ಅದರ ಉಪರಾಜಧಾನಿ ಎಂದೇ ಕರೆಯಲ್ಪಟ್ಟು, ಕೋಲಾರ ಚರಿತ್ರೆಯಲ್ಲಿ ಹೊಸ ಆಯಾಮವನ್ನುಂಟು ಮಾಡಿದೆ. ಲಕ್ಕಣದಂಡೇಶನ ಶಿವತತ್ವಕರ ಚಿಂತಾಮಣಿ, ಗಂಗಾದೇವಿಯ ಮಧುರವಿಜಯ ಮುಂತಾದ ಕೃತಿಗಳು ಈ ರಾಜವಂಶವು ಕೋಲಾರ ಪ್ರದೇಶದಲ್ಲಿ ಆಡಳಿತ ಮಾಡಿರುವುದರಲ್ಲಿ ದೃಢತೆ ತಂದಿವೆ. ಇತ್ತೀಚೆಗೆ ಸಿ. ಅಶ್ವತ್ಥಮ್ಮನವರ ಸಂಶೋಧನಾ ಕೃತಿಯಾದ 'ಕೋಲಾರ ಪ್ರದೇಶದಲ್ಲಿ ವಿಜಯನಗರ ಸಾಮ್ರಾಜ್ಯದ ಆಡಳಿತ' ಎಂಬ ಕೃತಿಯಿಂದ ಇನ್ನಷ್ಟು ಬೆಳಕು ಚೆಲ್ಲಿದೆ. ಈ ಹಿನ್ನೆಲೆಯಲ್ಲಿ ವಿಜಯನಗರ ಸಾಮ್ರಾಜ್ಯದ ಕುರಿತಾಗಿ ಪ್ರಕಟಣೆಗೊಂಡಿರುವ ರಾಬರ್ಟ್‌ಸಿವೆಲ್ಲರ 'ಮರೆತುಹೋದ ಸಾಮ್ರಾಜ್ಯ ವಿಜಯನಗರ' ಹಾಗೂ ಸೂರ್ಯನಾರಾಯಣರಾವರವರ 'ಮರೆಯಲಾಗದ ಸಾಮ್ರಾಜ್ಯ' ಎಂಬ ಕೃತಿಗಳು ಪ್ರಮುಖವಾಗಿದ್ದು ಅವೆರಡು ವಿರೋಧಾಭಾಸವನ್ನು ಹೊಂದಿವೆ. ಸಿವೆಲ್ಲರು ಹಿಂದು-ಮುಸ್ಲಿಂ ನಡುವೆ ಒಡುಕು ಉಂಟು ಮಾಡುವುದಕ್ಕಾಗಿಯೇ ರಚನೆಗೊಂಡು ಹಿಂದು-ಮುಸ್ಲಿಂರ ನಡುವೆ ಅಂತರ ತಂದಿದ್ದಾರೆ ಎಂಬ ವಾದಕ್ಕೆ ಅಸ್ಪದಿಸಿದ್ದಾರೆ. ಆದರೆ ಸೂರ್ಯನಾರಾಯಣರಾವರವರು ರಾಷ್ಟ್ರೀಯತೆಯ ಭಾವನೆಯನ್ನು ಉಂಟುಮಾಡಿದ್ದಾರೆ. ವಿಜಯನಗರವನ್ನು ವೈಭವೀಕರಿಸಿರುವುದರ ಮೂಲಕ ಬ್ರಿಟಿಷ್ ನೀತಿಯನ್ನು ಗುರುತಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಅವರ ರಾಷ್ಟ್ರೀಯ ಭಾವನೆ ತಿಳಿಸಬೇಕೆಂಬ ಹಂಬಲ ವಿಜಯನಗರ ಚರಿತ್ರೆಯಲ್ಲಿ ಕೋಮುಭಾವನೆ ತುಂಬಿದರು ಎಂಬ ವಾದಕ್ಕೆ ಅಸ್ಪದಿಸಿದ್ದಾರೆ. ಇದು ಒಂದು ವಿಧದಲ್ಲಿ ವಿಜಯನಗರ ರಾಜ್ಯದ ಕೇಂದ್ರಸ್ಥಾನಕ್ಕೆ ಅಲ್ಲದೆ ಅದರ ಅಧೀನ ರಾಜ್ಯಗಳು ಮತ್ತು ಪ್ರಾಂತ್ಯಗಳಿಗೂ ಅನ್ವಯಿಸುತ್ತದೆ ಎಂದರೆ ತಪ್ಪಾಗಲಾರದು.

ಅನಂತರ ವಿಜಯನಗರ ಸಾಮಂತರ/ಪಾಳೆಗಾರರು, ಮೊಗಲರು ಹಾಗೂ ಮರಾಠರೊಂದಿಗೆ ತಮ್ಮ ಅಮಿತ ಸಾಹಸ, ಸ್ವತಂತ್ರ್ಯತೆಯನ್ನು ವ್ಯಕ್ತಪಡಿಸಿರುವುದು. ಎಂ.ವಿ. ಶ್ರೀನಿವಾಸ, ಕೇಶವಭಟ್ಟರವರ ಇತಿಹಾಸ ದರ್ಶನ, ಎಂ.ವಿ. ಮೈಸುರವರ ದಕ್ಷಿಣ ಕರ್ನಾಟಕದ ಅರಸು ಮನೆತನಗಳು ಎಂಬ ಕೃತಿಗಳಿಂದ ವ್ಯಕ್ತವಾಗುತ್ತದೆ. ಗುಮ್ಮನಾಯಕನ ಪಾಳೆಯಗಾರರು, ಚಿಕ್ಕಬಳ್ಳಾಪುರದ ಪಾಳೆಗಾರರು, ಸುಗಟೂರು ಪಾಳೆಗಾರರು, ಅವತಿ ಪಾಳೆಗಾರರು, ಮಾಸ್ತಿ ಪಾಳೆಗಾರರು ಮುಂತಾದವರುಗಳ ಬಗ್ಗೆ ಷೇಕಮಸ್ತಾನ, ಪಿ.ವಿ. ಕೃಷ್ಣಮೂರ್ತಿ ಮುಂತಾದವರ ಲೇಖನಗಳು ಸೂಕ್ಷ್ಮತೆಯಲ್ಲಿ ವಿವರಿಸಲು ಯತ್ನಿಸಿವೆ. ಆದರೂ ಕೂಡ ಈ ಪಾಳೆಗಾರರು ತಮ್ಮ ಸ್ವಾತಂತ್ರ್ಯತೆಯನ್ನು ಉಳಿಸಿಕೊಳ್ಳಲು ಮೊಗಲರು, ಮರಾಠರ ವಿರುದ್ಧ ಹೋರಾಟ ನಡೆಸುವುದರ ಜೊತೆಗೆ ಆಂಗ್ಲರು ಸೇರಿ ಅನಂತರ ಅದೇ ಸ್ವಾಯತ್ತತೆ ಉಳಿಸಿಕೊಳ್ಳಲು ಸೆಣಸಾಡುವ ಕೃತ್ಯಕ್ಕೆ ಒಳಗಾದರು ಎಂಬುದು ಅಲ್ಲಗಳೆಯುವಂತಿಲ್ಲ ಎಂಬುದು ಈ ಕೃತಿಗಳ ಅವಲೋಕನದಿಂದಲೇ ವ್ಯಕ್ತವಾಗುತ್ತದೆ. ಹೀಗಿದ್ದರೂ ಮಧ್ಯಕಾಲೀನ ಚರಿತ್ರೆಯನ್ನು ವ್ಯಕ್ತಪಡಿಸುವ ಬಹುತೇಕ ಕೃತಿಗಳು ಬಿ.ಎಲ್. ರೈಸ್, ಎಂ. ಶೇಷಾದ್ರಿರವರ ಶಾಸನ ಸಂಪುಟಗಳು, ಕೆ. ಅಭಿಶಂಕರರವರ ಕೋಲಾರ ಜಿಲ್ಲಾ ಗೆಜೆಟಿಯರಗಳನ್ನು ಅವಲಂಬಿಸಲ್ಪಟ್ಟಿವೆ. ಅವುಗಳ ನೈಜತೆಯಲ್ಲಿ ನೋಡಿದಾಗ ಸಂಕ್ಷಿಪ್ತತೆಯಲ್ಲಿ ತಿಳಿಸಿವೆ ಎಂದಾಗಿ ಕಂಡುಬರುತ್ತದೆ.

ಟಿಪ್ಪಣಿಗಳು

೧. ಗೋಪಾಲ್ ಆರ್.(ಸಂ.), **ಕೋಲಾರ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ತ್ವ**, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳು, ನಿರ್ದೇಶನಾಲಯ, ಹೊಸಪೇಟೆ, ೨೦೦೪, ಪು. ೧೭

೨. ಅದೇ, ಪು. ೧೮

* ಆಂಗ್ಲ ಸಂಶೋಧಕ ಕೋಲ್ ಆರ್.ಎಂ., ರವರು ಶ್ರೀನಿವಾಸಪುರ, ಬಂಗಾರಪೇಟೆ, ಗುಡಿಬಂಡೆ, ಕೋಲಾರ, ಚಿಂತಾಮಣಿ ಪ್ರದೇಶ, ಹರಳಕೋಟೆ, ಗರುಡಪಾಳ್ಯ, ಮಾಳಳ್ಳಿ, ಮಾರ್ಗಲ್, ಹುನಗುಂದ, ಪರದನಹಳ್ಳಿ, ಮುರುಗಮಲ್ಲೆ ಮೊದಲಾದ ಪ್ರದೇಶಗಳನ್ನು ಶೋಧಿಸಿದ್ದಾರೆ.

* ಪೆರಿಸಂದ್ರದಲ್ಲಿ ಮಣ್ಣಿನ ಪಾತ್ರೆಗಳ ಗುಡ್ಡ ಶೋಧನೆ. ೧೯೧೪ರಲ್ಲಿ ಕಂಡ ಗರುಡನಹಳ್ಳಿ ಶೋಧನೆ. ೧೯೪೩ ಮತ್ತು ೧೯೫೫-೫೬ರಲ್ಲಿ ಪುರಾತತ್ತ್ವ ಇಲಾಖೆಯ ನಿರ್ದೇಶಕರಾಗಿದ್ದ ಮೈಸೂರು ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾಗಿದ್ದ ಎಂ. ಶೇಷಾದ್ರಿಯವರು ಕೊಂಗರಾಜಹಳ್ಳಿ ಮತ್ತು ಬೆಟ್ಟದಪುರ ಶೋಧನೆ ಮಾಡಿದ್ದಾರೆ. ೧೯೬೦ ದಶಕದಿಂದ ಕೇಂದ್ರ ಸರ್ಕಾರದ ಪುರಾತತ್ತ್ವ ಸರ್ವೇಕ್ಷಣ ಇಲಾಖೆಯು ಈ ಜಿಲ್ಲೆಯಲ್ಲಿ ಪ್ರತಿಯೊಂದು ಹಳ್ಳಿಯಲ್ಲಿ ಪುರಾತತ್ತ್ವ ಅನ್ವೇಷಣೆಯನ್ನು ನಡೆಸಿತು. ಇದರಿಂದ ೧೨೦ ನೆಲೆಗಳು ಹೊಸದಾಗಿ ಶೋಧಿಸಲ್ಪಟ್ಟವು. ಜಡಿಗೇನಹಳ್ಳಿಯ ಶವಕುಣಿಯಲ್ಲಿದ್ದಂತೆ ೧೨ ಕಾಲುಗಳು ಆಯತಾಕಾರದ ಮಣ್ಣಿನ ತೊಟ್ಟಿಯಿದ್ದಿರಬೇಕು.

೩. ದಿವಾಕರ ಆರ್.ಆರ್., **ಕರ್ನಾಟಕ ಪರಂಪರೆ ಸಂಪುಟ-೧**, ಸಾಹಿತ್ಯ ಸಂಸ್ಕೃತಿ ಇಲಾಖೆ, ಮೈಸೂರು, ೧೯೭೦, ಪು. ೧೦

೪. ಶಿವತಾರಕ ಕೆ.ಬಿ., **ಕರ್ನಾಟಕ ಪುರಾತತ್ತ್ವ ನೆಲೆಗಳು**, ೨೦೦೧, ಪು. ೪

೫. ಅದೇ, ಪು. ೧೧

೬. ಷೇಕಅಲಿ ಬಿ., **ಕರ್ನಾಟಕ ಚರಿತ್ರೆ ಸಂಪುಟ-೧**, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, ವಿದ್ಯಾರಣ್ಯ, ೧೯೯೩, ಪು. ೭

೭. ಶರ್ಮ ಆರ್.ಎಸ್., **ಪ್ರಾಚೀನ ಭಾರತ**, ಅನು ಶಂಕರ ನಾರಾಯಣರಾವ್, ಬೆಂಗಳೂರು, ೧೯೯೭, ಪು. ೩೯

೮. ಶಿವತಾರಕ ಕೆ.ಬಿ., **ಕರ್ನಾಟಕ ಪುರಾತತ್ತ್ವ ನೆಲೆಗಳು**, ಪು. ೧೨

೯. ಗೋಪಾಲ್ ಆರ್. (ಸಂ.), **ಕೋಲಾರ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ತ್ವ**, ಪು. ೧೯

೧೦. ಅದೇ..... ನರಸಿಂಹಯ್ಯ ವಿ., ಲೇಖನಿ ಪು. ೨೭

೧೧. ದಿವಾಕರ ಆರ್.ಆರ್., **ಕರ್ನಾಟಕ ಪರಂಪರೆ ಸಂಪುಟ-೧**, ಪು. ೧೦೭

೧೨. ಶಿವತಾರಕ ಕೆ.ಬಿ., **ಕರ್ನಾಟಕ ಪುರಾತತ್ತ್ವ ನೆಲೆಗಳು**, ಪು. ೧೭

೧೩. ದಿವಾಕರ ಆರ್.ಆರ್., **ಕರ್ನಾಟಕ ಪರಂಪರೆ ಸಂಪುಟ-೧**, ಪು. ೧೦೮

೧೪. ಗೋಪಾಲ್ ಆರ್. (ಸಂ.), **ಕೋಲಾರ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ**, ಪು. ೨೩

೧೬. ದಿವಾಕರ ಆರ್.ಆರ್. (ಸಂ.), **ಕರ್ನಾಟಕ ಪರಂಪರೆ ಸಂಪುಟ-೧**, ಪು. ೧೦೯

೧೭. ಗೋಪಾಲ್ ಆರ್., **ಕೋಲಾರ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ**, ಲೇ. ಐತಿಹ್ಯಗಳು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಹೊಸಪೇಟೆ, ೨೦೦೪, ಪು. ೩೫

೧೮. ಅಭಿಶಂಕರ ಕೆ., **ಕೋಲಾರ ಜಿಲ್ಲಾ ಗೆಜೆಟಿಯರ**, ಬೆಂಗಳೂರು, ೧೯೬೮, ಪು. ೩

೧೯. ದೇವರಾಜಯ್ಯ (ಸಂ.), ಸಿರಿನಂದಿ, ಕೋಲಾರ ಜಿಲ್ಲಾ ನಂದಿ ಉತ್ಸವ, ಚಿಕ್ಕಬಳ್ಳಾಪುರ, ೧೯೯೯, ಪು.೪೮

೨೦. ಗೋಪಾಲ್ ಆರ್., **ಕೋಲಾರ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ**, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಹೊಸಪೇಟೆ, ೨೦೦೪, ಪು. ೩೪

೨೧. ಅದೇ......ಪು೨೫೩

೨೨. ಬಸವರಾಜು ಎ.ಬಿ. (ಸಂ.), **ಹೊಂಗಿರಣ**, ಕೋಲಾರ ಜಿಲ್ಲೆಯ ಮೂರನೇ ಕನ್ನಡ ಸಾಹಿತ್ಯ ಸಮ್ಮೇಳನ, ಚಿಕ್ಕಬಲ್ಲಾಪುರ, ೧೯೯೨, ಪು. ೧-೨

೨೩. ಸೂರ್ಯನಾಥ ಕಾಮತ (ಸಂ.), ಲೇ. ಪಿ.ವಿ. ಕೃಷ್ಣಮೂರ್ತಿ, **ಇತಿಹಾಸ ದರ್ಶನ** ೧೦/೧೯೯೫, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು, ಪು. ೧೫೦

೨೪. ಗೋಪಾಲ್ ಆರ್. (ಸಂ.), **ಕೋಲಾರ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ**, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಹೊಸಪೇಟೆ, ೨೦೦೪, ಪು. ೨೫೪

೨೫. ದಿವಾಕರ ಆರ್.ಆರ್., **ಕರ್ನಾಟಕ ಪರಂಪರೆ-೧**, ಧಾರವಾಡ, ೧೯೭೦, ಪು.೧೫

೨೬. ಅಭಿಶಂಕರ ಕೆ., **ಗೆಜೆಟಿಯರ್ ಆಫ್ ಇಂಡಿಯಾ ಮೈಸೂರು ಸ್ಟೇಟ್**, ಕೋಲಾರ ಡಿಸ್ಟ್ರಿಕ್ಟ್ ಆಫ್, ಗೌವರ್ನಮೆಂಟ್ ಪ್ರೆಸ್, ಬೆಂಗಳೂರು, ೧೯೬೮, ಪು.೩೫

೨೭. ಲಕ್ಷ್ಮೀನಾರಾಯಣರಾಯರು ಎನ್., **ಕರ್ನಾಟಕ ಅರಸುಮನೆತನಗಳು**, ಕರ್ನಾಟಕ ಇತಿಹಾಸ ಸಂಶೋಧನ ಮಂಡಲಿ, ಧಾರವಾಡ, ೧೯೪೬, ಪು. ೨೨೪

೨೮. ಬಸವರಾಜು ಎ.ಬಿ. (ಸಂ.), ಲೇ. ಕೆ.ಎಲ್. ರಾಜಶೇಖರ, **ಹೊಂಗಿರಣ**, ಕೋಲಾರ ಜಿಲ್ಲೆಯ ೩ನೇ ಕನ್ನಡ ಸಾಹಿತ್ಯ ಸಮ್ಮೇಳನ, ಚಿಕ್ಕಬಲ್ಲಾಪುರ, ೧೯೯೨, ಪು. ೪೨

೨೯. ದಿವಾಕರ ಆರ್.ಆರ್., **ಕರ್ನಾಟಕ ಪರಂಪರೆ-೧**, ಧಾರವಾಡ, ಮೈಸೂರು ಸರ್ಕಾರ, ೧೯೭೦, ಪು.೧೫೮

೩೦. ಶ್ರೀಪಾದ ರಾಮಚಂದ್ರ ದೇಶಪಾಂಡೆ, **ಕರ್ನಾಟಕ ಸಾಮ್ರಾಜ್ಯ**, ಕನ್ನಡ ಅಧ್ಯಯನ ಕೇಂದ್ರ, ಧಾರವಾಡ, ೧೯೭೬, ಪು. ೬೨, ೬೩

೩೧. ಅದೇ...... ಪು.೬೩

೩೨. ಅಭಿಶಂಕರ ಕೆ., ಕೋಲಾರ ಜಿಲ್ಲಾ ಗೆಜೆಟಿಯರ್, ೧೯೬೮, ಪು. ೧೪೧

೩೩. ಬಸವರಾಜು ಎ.ಬಿ. (ಸಂ.), ಹೊಂಗಿರಣ, ಕೋಲಾರ ಜಿಲ್ಲಾ ಸಾಹಿತ್ಯ ಸಮ್ಮೇಳನ, ಚಿಕ್ಕಬಳ್ಳಾಪುರ, ೧೯೯೨, ಪು.೨

೩೪. ಶ್ರೀಪಾದ ರಾಮಚಂದ್ರ ದೇಶಪಾಂಡೆ, ಕರ್ನಾಟಕ ಸಾಮ್ರಾಜ್ಯ, ಮಾಳಮಡ್ಡಿ ಪ್ರಕಾಶನ, ಧಾರವಾಡ, ೧೯೭೬, ಪು. ೭೦

೩೫. ರೈಸ್ ಬಿ.ಎಲ್., ಗೆಜೆಟಿಯರ್ ಆಫ್ ಇಂಡಿಯಾ (ಮೈಸೂರು ಡಿಸ್ಟ್ರಿಕ್ಟ್), ಸಂ.೧, ೧೮೭೬, ಪು. ೧೦೫

೩೬. ಶೇಷಾದ್ರಿ ಎಂ., ಎಫಿಗ್ರಫಿಯ ಕರ್ನಾಟಕ, ಕೋಲಾರ ಜಿಲ್ಲೆ, ಮೈಸೂರು ರಾಜ್ಯ ಸರ್ಕಾರಿ ಮುದ್ರಣ, ೧೯೦೫, ಪು. ೨೬

೩೭. ಶ್ರೀಪಾದ ರಾಮಚಂದ್ರ ದೇಶಪಾಂಡೆ, ಕರ್ನಾಟಕ ಸಾಮ್ರಾಜ್ಯ, ಪು. ೧೩೦

೩೮. ಬಸವರಾಜು ಎ.ಬಿ. (ಸಂ.), ಎಂ.ಎಸ್. ವೆಂಕಟರಮಣಪ್ಪ, ಹೊಂಗಿರಣ, ಕನ್ನಡ ಸಾಹಿತ್ಯ ಸಮ್ಮೇಳನ, ಚಿಕ್ಕಬಳ್ಳಾಪುರ, ಪು. ೨

೩೯. ಅದೇ.....ಕೃತಿ, ರಾಜಶೇಖರ ಕೆ.ಎಲ್., ಲೇ. ಕೋಲಾರ ಜಿಲ್ಲಾ ಶಾಸನಗಳು, ಪು. ೮೨

೪೦. ಶ್ರೀಪಾದ ರಾಮಚಂದ್ರ ದೇಶಪಾಂಡೆ, ಕರ್ನಾಟಕ ಸಾಮ್ರಾಜ್ಯ, ೧೯೭೬, ಪು. ೬೯

೪೧. ಸೂರ್ಯನಾಥ ಕಾಮತ (ಸಂ.), ಪಿ.ವಿ. ಕೃಷ್ಣಮೂರ್ತಿ, ಇತಿಹಾಸ ದರ್ಶನ, ಸಂಪುಟ ೧೦/೧೯೯೫, ಕ.ಇ.ಅ. ಬೆಂಗಳೂರು, ಪು. ೧೫೭

೪೨. ಗೋಪಾಲ್ ಆರ್. (ಸಂ.), ಕೋಲಾರ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಹೊಸಪೇಟೆ, ೨೦೦೪, ಪು. ೨೫೨

೪೩. ಅಭಿಶಂಕರ ಕೆ., ಕೋಲಾರ ಜಿಲ್ಲಾ ಗೆಜೆಟಿಯರ್, ಸರ್ಕಾರಿ ಮುದ್ರಣ, ಬೆಂಗಳೂರು, ೧೯೬೮, ಪು. ೪೪

೪೪. ಅದೇ.... ಪು. ೧೫೧

೪೫. ನಾಯಕ ಎಚ್.ಎಂ., ಕನ್ನಡ ವಿಶ್ವಕೋಶ ಸಂಪುಟ-೫, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ೧೯೭೨, ಪು. ೪೨೮

೪೬. ಕೃಷ್ಣರಾವ ಎಂ.ವಿ. ಮತ್ತು ಕೇಶವಭಟ್ಟ ಎಂ. (ಸಂ.), ಕರ್ನಾಟಕ ಇತಿಹಾಸ ದರ್ಶನ, ಸಂಪುಟ-೧, ಲೇ. ಕೃಷ್ಣಮೂರ್ತಿ, ರಾಷ್ಟ್ರಕೂಟರು, ೧೯೭೦, ಪು. ೬೭

೪೭. ಅಭಿಶಂಕರ ಕೆ., ಕೋಲಾರ ಜಿಲ್ಲಾ ಗೆಜೆಟಿಯರ್, ೧೯೬೮, ಪು. ೪೩

೪೮. ರೈಸ್ ಬಿ.ಎಲ್., ಶಾಸನಗಳ ಸಂಪುಟ-೧೦, ಪು. ೧

೪೯. ಶ್ರೀನಿವಾಸಮೂರ್ತಿ ಎಚ್.ವಿ. ಮತ್ತು ರಾಮಕೃಷ್ಣನ್ ಆರ್., **ಸಮಗ್ರ ಕರ್ನಾಟಕ ಚರಿತ್ರೆ**, ಓರಿಯಂಟಲ್ ಲಾಂಗಮನ್ ಲಿಮಿಟೆಡ್, ಬೆಂಗಳೂರು, ೧೯೯೫, ಪು. ೭೧

೫೦. ರೈಸ್ ಬಿ.ಎಲ್., **ಕರ್ನಾಟಕ ಎಫಿಗ್ರಾಫಿ**, ೧೯೦೫, ಸಹಕಾರಿ ಮುದ್ರಣ, ಬೆಂಗಳೂರು, ಪು.XIV

೫೧. ಕೃಷ್ಣರಾವ ಎಂ.ವಿ. (ಸಂ.), **ಕರ್ನಾಟಕ ಇತಿಹಾಸ ದರ್ಶನ**, ಸಂಪುಟ ೧, ಲೇ. ಕೃಷ್ಣಮೂರ್ತಿ, ರಾಷ್ಟ್ರಕೂಟರು, ಪು. ೭೪, ೭೫, ೭೮

೫೨. ರೈಸ್ ಬಿ.ಎಲ್., **ಇ.ಸಿ. ಆಫ್ ಕೋಲಾರ್ ಡಿಸ್ಟ್ರಿಕ್ಟ್**, ಮಂಗಳೂರ್ ಬೆಸೆಲ್ ಮಿಷನ್ ಪ್ರೆಸ್, ೧೯೦೯, ಪು. XXIII

೫೩. ಕೃಷ್ಣರಾವ ಎಂ.ವಿ. ಮತ್ತು ಕೇಶವಭಟ್ಟ ಎಂ. (ಸಂ.), **ಕರ್ನಾಟಕ ಇತಿಹಾಸ ದರ್ಶನ, ಸಂಪುಟ-೧**, ೧೯೭೦, ಪು. ೯೮, ೧೦೧, ೧೧೦

೫೪. ನಾಗರಾಜ್ ಎಂ.ಜಿ. ಮತ್ತು ಕೃಷ್ಣಮೂರ್ತಿ ಪಿ.ವಿ., **ಇತಿಹಾಸ ದರ್ಶನ**, ೧೭/೨೦೦೨, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು, ಪು. ೧೯೪

೫೫. ಸೂರ್ಯನಾಥ ಕಾಮತ ಮತ್ತು ಪಿ.ವಿ. ಕೃಷ್ಣಮೂರ್ತಿ (ಸಂ.), **ಇತಿಹಾಸ ದರ್ಶನ**, ಸಂಪುಟ ೧೧/೧೯೯೬, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು, ಪು. ೨೦೭

೫೬. ಚಂದ್ರಶೇಖರಪ್ಪ ಟಿ.ಜಿ., **ಭಾರತದ ಇತಿಹಾಸ**, ಪೂರ್ಣ ಪ್ರಕಾಶನ, ಶಿವಮೊಗ್ಗ, ೨೦೦೨, ಪು. ೨೮

೫೭. ಸದಾಶಿವ ಕೆ., **ಭಾರತದ ಇತಿಹಾಸ**, ಪ್ರಿಯದರ್ಶಿನಿ ಪ್ರಕಾಶನ, ಮೈಸೂರು, ೧೯೯೬, ಪು. ೧೪೫

೫೮. ಅಭಿಶಂಕರ ಕೆ., ಕೋಲಾರ ಜಿಲ್ಲಾ ಗೆಜೆಟಿಯರ್, ೧೯೬೮, ಪು. ೪೩

೫೯. ವಸು ಎಂ.ವಿ., ರಾಜಪ್ಪ ದಳವಾಯಿ (ಸಂ.), **ದಕ್ಷಿಣ ಕರ್ನಾಟಕದ ಅರಸುಮನೆತನಗಳು**, ಕನ್ನಡ ವಿಶ್ವವಿದ್ಯಾನಿಲಯ, ಪ್ರಸಾರಾಂಗ, ೨೦೦೧, ಪು. ೧

೬೦. ದಿವಾಕರ ಆರ್.ಆರ್., **ಕರ್ನಾಟಕ ಪರಂಪರೆ**, ಸಂ.೧, ಪು. ೧೬೬, ಎಂ.ವಿ. ವಸು, ಲೇ. ರಾಜಪ್ಪ ದಳವಾಯಿ, ದಕ್ಷಿಣ ಭಾರತದ ಅರಸು ಮನೆತನಗಳು, ಕನ್ನಡ ವಿಶ್ವವಿದ್ಯಾಲಯ, ೨೦೦೧, ಪು. ೧, ೧೮

೬೧. ಗೋಪಾಲ್ ಆರ್. (ಸಂ.), **ಕೋಲಾರ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ**, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಹೊಸಪೇಟೆ, ೨೦೦೪, ಪು.೧೩

೬೨. ಅಭಿಶಂಕರ ಕೆ., **ಕೋಲಾರ ಜಿಲ್ಲಾ ಗೆಜೆಟಿಯರ್**, ೧೯೬೮, ಪು. ೪೩

೬೩. ನೆಲಮಂಗಲ ಲಕ್ಷ್ಮೀನಾರಾಯಣರಾಯರು, ಆರ್.ಎಸ್. ಪಂಚಮುಖಿ, ಕರ್ನಾಟಕದ ಅರಸು ಮನೆತನಗಳು, ಕರ್ನಾಟಕ ಇತಿಹಾಸ ಸಂಶೋಧನ ಮಂಡಳಿ, ಧಾರವಾಡ, ೧೯೪೬, ಪು. ೨೦೫

೬೪. ಅಭಿಶಂಕರ ಕೆ., **ಕೋಲಾರ ಜಿಲ್ಲಾ ಗೆಜೆಟಿಯರ್**, ೧೯೬೮, ಪು. ೪೩

೬೫. ಅಭಿಶಂಕರ ಕೆ., **ಕೋಲಾರ ಜಿಲ್ಲಾ ಗೆಜೆಟಿಯರ್**, ೧೯೬೮, ಪು. ೧೮

೬೬. ಗೋಪಾಲ್ ಆರ್. (ಸಂ.), ಎಚ್. ಜಯಮ್ಮ ಕರಿಯಣ್ಣ, **ಕೋಲಾರ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ**, ಪು. ೩

೬೭. ವಸು ಎಂ.ವಿ., **ದಕ್ಷಿಣ ಕರ್ನಾಟಕ ಅರಸು ಮನೆತನಗಳು**, ಪು. ೭

೬೮. ಅಭಿಶಂಕರ ಕೆ.,, **ಕೋಲಾರ ಜಿಲ್ಲಾ ಗೆಜೆಟಿಯರ್**, ೧೯೬೮, ಪು. ೪೪

೬೯. ಕೃಷ್ಣರಾವ ಎಂ.ವಿ., ಮತ್ತು ಕೇಶವಭಟ್ಟರು ಎಂ. (ಸಂ.), **ಕರ್ನಾಟಕ ಇತಿಹಾಸ ದರ್ಶನ**, ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರ, ಬೆಂಗಳೂರು, ೧೯೭೦, ಪು. ೧೪೫

೭೦. ಅಭಿಶಂಕರ ಕೆ., **ಕೋಲಾರ ಗ್ಯಾಸೆಟಿಯರ್**, ಪು. ೪೪

೭೧. ಸೂರ್ಯನಾಥ ಕಾಮತ್, **ಇತಿಹಾಸ ದರ್ಶನ**, ಸಂಪುಟ-೧೧/೧೯೯೬, ಪು. ೧೩-೧೪, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು

೭೨. ರೈಸ್ ಬಿ.ಎಲ್., ಶಾಸನ ಸಂಪುಟ ೧೦, ಪು..XXII

೭೩. ರಾಜಶೇಖರ್ ಎ.ಬಿ., ರಾಜಶೇಖರ್ ಕೆ.ಎಲ್. (ಸಂ.), **ಹೊಂಗಿರಣ**, ಕೋಲಾರ ಜಿಲ್ಲಾ ಸಾಹಿತ್ಯ ಸಮ್ಮೇಳನ, ಚಿಕ್ಕಬಳ್ಳಾಪುರ, ೧೯೯೨, ಪು. ೨

೭೪. ಅಭಿಶಂಕರ ಕೆ., **ಕೋಲಾರದಲ್ಲಿ ಗೆಜೆಟಿಯರು**, ೧೯೬೮, ಪು. ೪೫-೪೭

೭೫. ಸೂರ್ಯನಾಥ ಕಾಮತ್ (ಸಂ.), **ಇತಿಹಾಸ ದರ್ಶನ**, ಸಂಪುಟ-೧೦, ಕೃಷ್ಣಮೂರ್ತಿ ಪಿ.ಎ., ಚೋಳರು, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು, ೧೯೯೫, ಪು. ೧೫೦

೭೬. ಗೋಪಾಲ್ ಆರ್., **ಕೋಲಾರ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ**, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಹೊಸಪೇಟೆ, ೨೦೦೪, ಪು. ೨೦೦-೨೦೧

೭೭. ಸತ್ಯನಾಥ ಅಯ್ಯರ ಆರ್., **ಪ್ರಾಚೀನ ಭಾರತ**, ಕನ್ನಡ ಅಧ್ಯಯನ ಪೀಠ, ಧಾರವಾಡ, ೧೯೮೨, ಪು. ೫೭೨

೭೮. ಶೇಷಾದ್ರಿ ಎಂ., **ಕರ್ನಾಟಕ ಎಫಿಗ್ರಾಫಿ ಸಂಪುಟ-೧೭**, ಮೈಸೂರು, ೧೯೬೫, ಪು. ೮

೭೯. ಗೋಪಾಲ ಆರ್. (ಸಂ.), **ಕೋಲಾರ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ**, ಎಸ್. ಸ್ವಾಮಿನಾಥನ್, ಚೋಳರು, ೨೦೦೪, ಪು. ೫೧, ೫೩, ೫೫

೮೦. ಕೃಷ್ಣರಾವ ಎಂ.ವಿ. (ಸಂ.), **ಕರ್ನಾಟಕ ಇತಿಹಾಸ ದರ್ಶನ**, ಕರ್ನಾಟಕ ಸಹಕಾರಿ ಪ್ರಕಾಶನ, ಬೆಂಗಳೂರು, ೧೯೭೦, ಪು. ೨೧೮

೮೧. ಅದೇ, ಪು. ೨೧೯

೮೨. ಅಭಿಶಂಕರ ಕೆ., **ಕೋಲಾರ ಜಿಲ್ಲಾ ಗೆಜೆಟಿಯರು**, ೧೯೬೮, ಪು. ೪೭-೪೯

೮೩. ಎಂ.ವಿ. ಕೃಷ್ಣರಾವ (ಸಂ.), **ಇತಿಹಾಸ ದರ್ಶನ**, ೧೯೭೦, ಪು. ೨೨೭

೮೪. ಅಭಿಶಂಕರ ಕೆ., **ಕೋಲಾರದಲ್ಲಿ ಗೆಜೆಟಿಯರು**, ೧೯೬೮, ಪು. ೪೮

೮೫. ಎಂ.ವಿ. ಕೃಷ್ಣರಾವ, **ಇತಿಹಾಸ ದರ್ಶನ,** ೧೯೭೦, ಪು. ೨೩೩

೮೬. ಗೋಪಾಲ್ ಆರ್. (ಸಂ.), **ಕೋಲಾರ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ,** ಲೇ. ಟಿ. ದಯಾನಂದ ಪಟೇಲ, **ಹೊಯ್ಸಳ ದೇವಾಲಯ,** ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಹೊಸಪೇಟೆ, ೨೦೦೪, ಪು. ೯೭, ೨೦೧-೨೦೨

೮೭. ಅದೇ ಕೃತಿ, ಪು. ೧೪೯

೮೮. ಜಗನ್ನಾಥ ಪ್ರಕಾಶ ಎನ್., **ಕೋಲಾರ ಸಿರಿಸಂಪುಟ,** ಅಂತರಗಂಗಾ ಪ್ರಕಾಶನ, ೨೦೦೨, ಪು. ೧೪

೮೯. ಕೃಷ್ಣರಾವ ಎಂ.ವಿ. (ಸಂ.), **ಇತಿಹಾಸ ದರ್ಶನ,** (ಕೋಚಮಂಚನಹಳ್ಳಿ ಶಾಸನಕಾಲ ೧೧೮೦) ೧೯೭೦, ಪು. ೨೦೫, ೨೫೬, ೨೫೭, ೨೬೮

೯೦. ಕೃಷ್ಣರಾವ ಎಂ.ವಿ., (ಸಂ.), **ಇತಿಹಾಸ ದರ್ಶನ,** ೧೯೭೦, ಪು. ೨೭೨

೯೧. ಅದೇ.... ಪು.೨೭೫ (ECX Vol X: KL 239)

೯೨. ಅದೇ... ಪು.೨೭೬ (ECX; BP 25)

೯೩. ಕೃಷ್ಣರಾವ್ ಎಂ.ವಿ. (ಸಂ.), **ಕರ್ನಾಟಕ ಇತಿಹಾಸ ದರ್ಶನ,** ಕರ್ನಾಟಕ ಸಹಕಾರಿ ಮಂದಿರ, ಬೆಂಗಳೂರು, ೧೯೭೦, ಪು. ೩೬೦

೯೪. ಅಭಿಶಂಕರ ಕೆ., **ಕೋಲಾರ ಜಿಲ್ಲಾ ಗೆಜೆಟಿಯರ,** ೧೯೬೮, ಪುಟ. ೫೦

೯೫. ಅದೇ.....ಪು.೫೨

೯೬. ಕೃಷ್ಣರಾವ ಎಂ.ವಿ. (ಸಂ.), **ಕರ್ನಾಟಕ ಇತಿಹಾಸ ದರ್ಶನ,** ಪು. ೧೬೧, ೩೬೭, ೩೭೭, ೩೯೧

೯೭. ಅದೇ.... ಪು. ೩೭೭

೯೮. ಎನ್.ಗೋಪಾಲ್ ಆರ್. (ಸಂ.), **ಕೋಲಾರ ಜಿಲ್ಲೆಯ ಇತಿಹಾಸ ಪುರಾತತ್ವ,** ಲೇ. ಎನ್.ಎನ್. ಸ್ವಾಮಿ, ವಿಜಯನಗರ ಕಾಲದ ದೇವಾಲಯಗಳು, ೨೦೦೪, ಪು. ೬೦

೯೯. ಅದೇ... ೪೨೨

೧೦೦. ಅಶ್ವತ್ಥಮ್ಮ ಸಿ., **ಕೋಲಾರ ರಿಜನ್ ದ ವಿಜಯನಗರ ರೂಲ್,** ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಮಂಡಿಸಿದ ಎಂ.ಫಿಲ್. ನಿಬಂಧ, ಬೆಂಗಳೂರು, ೧೯೮೨, ಪು. ೧೩, ೨೧

೧೦೧. ನರಸಿಂಹನ್ ಕೆ.ಆರ್. (ಸಂ.), **ಮೂಡಲ ಕಿರಣ,** ಕನ್ನಡ ಸಾಹಿತ್ಯ ಪರಿಷತ್, ಮುಳಬಾಗಿಲು, ೨೦೦೩, ಪು. ೧೭

೧೦೨. ದೀಕ್ಷಿತ್ ಬಿ.ಎಸ್., **ಸಂಗಮರ ಕಾಲದ ವಿಜಯನಗರ,** ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ, ಬೆಂಗಳೂರು, ೧೯೮೮, ಪು. ೯೬

೧೦೩. ಗೋಪಾಲ್ ಆರ್., **ಕೋಲಾರ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ,** ಪ್ರಾಚ್ಯವಸ್ತು ಮತ್ತು

ಸಂಗ್ರಹಾಲಯಗಳ ನಿರ್ದೇಶನಾಲಯ, ಹೊಸಪೇಟೆ, ೨೦೦೪, ಪುಟ. ೬೦, ೨೦೨, ೨೦೩

೧೦೪. ವೆಂಕಟರತ್ನಂ ಎ.ವಿ., **ವಿಜಯನಗರ ಸಾಮ್ರಾಜ್ಯದ ಸ್ಥಳೀಯ ಸರ್ಕಾರಗಳು**, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ೧೯೭೪, ಪು. ೯೩

೧೦೫. ವಸು ಎಂ.ವಿ., ಕೃಷ್ಣಮೂರ್ತಿ ಪಿ.ವಿ. (ಸಂ.), **ದಕ್ಷಿಣ ಕರ್ನಾಟಕದ ಅರಸುಮನೆತನಗಳು**, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪ್ರಸಾರಾಂಗ, ೨೦೦೧, ಪು. ೩೬೭

೧೦೬. ನರಸಿಂಹಮೂರ್ತಿ ಎಂ.ಎಸ್., **ಮಾಲೂರು ತಾಲೂಕು ದರ್ಶನ**, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು, ೧೯೮೭, ಪು. ೪

೧೦೭. ಅಭಿಶಂಕರ ಕೆ, **ಕೋಲಾರ ಜಿಲ್ಲಾ ಗೆಜೆಟಿಯರ್**, ಸರ್ಕಾರಿ ಮುದ್ರಣ, ೧೯೬೮, ಪು. ೫೬

೧೦೮. ಕೃಷ್ಣರಾವ ಎಂ.ವಿ. (ಸಂ.), **ಕರ್ನಾಟಕ ಇತಿಹಾಸ ದರ್ಶನ**, ಪು. ೪೮೮-೮೯

೧೦೯. ಅಭಿಶಂಕರ ಕೆ, **ಕೋಲಾರ ಜಿಲ್ಲಾ ಗೆಜೆಟಿಯರ**, ೧೯೬೮, ಪುಟ. ೫೭

೧೧೦. ಸೂರ್ಯನಾಥ ಯು.ಕಾಮತ (ಸಂ.), **ಇತಿಹಾಸ ದರ್ಶನ ಸಂಪುಟ-೧೦**, ೧೯೭೫, ಬೆಂಗಳೂರು, ಪು. ೪೮೮

೧೧೧. ಕೃಷ್ಣರಾವ್ ಎಂ.ವಿ. (ಸಂ.), **ಕರ್ನಾಟಕ ಇತಿಹಾಸ ದರ್ಶನ**, ಕರ್ನಾಟಕ ಸಹಕಾರಿ ಮಂದಿರ, ಬೆಂಗಳೂರು, ೧೯೭೦, ಪು. ೪೬೨

೧೧೨. ಗೋಪಾಲ್ ಆರ್. (ಸಂ.), **ಕೋಲಾರ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ**, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಹೊಸಪೇಟೆ, ೨೦೦೪, ಪುಟ. ೨೩೪

೧೧೩. ರೈಸ್ ಬಿ.ಎಲ್., EC. Vol X, **ಮಂಗಳೂರು ಬೆಸೆಲ್**, ೧೯೦೫, ಪು. II

೧೧೪. ಶ್ರೀನಿವಾಸಮೂರ್ತಿ ಎಚ್.ವಿ. ಮತ್ತು ಆರ್. ರಾಮಕೃಷ್ಣ, **ಓರಿಯಂಟಲ್ ಲಾಂಗಮನ್ ಲಿಮಿಟೆಡ್**, ಬೆಂಗಳೂರು, ೧೯೯೫, ಪು. ೩೧೪

೧೧೫. ಅಭಿಶಂಕರ ಕೆ., **ಕೋಲಾರ ಜಿಲ್ಲಾ ಗೆಜೆಟಿಯರ**, ೧೯೬೮, ಪು. ೫೮

೧೧೬. ಪುಟ್ಟಣ್ಣ ಎಂ.ಎಸ್. (ಲೇ), **ಗುಮ್ಮನಾಯಕನ ಪಾಳೆಯಗಾರರು** (in Kannada), ೧೯೨೬, ಮೈಸೂರು ಗೆಜೆಟಿಯರ್, ೧೯೩೦, ಸಂ.೫, ಪು. ೩೨೦, ೩೨೨

೧೧೭. ಜಯದೇವಪ್ಪ ಬಿ., **ಚಿಂತಾಮಣಿ ತಾಲೂಕ ದರ್ಶನ**, ಐ.ಬಿ.ಹೆಚ್. ಪ್ರಕಾಶನ, ಬೆಂಗಳೂರು, ೧೯೮೬, ಪು. ೪೪-೪೫

೧೧೮. ದೇವರಾಜಯ್ಯ (ಸಂ.), ಸಿರಿನಂದಿ, **ಕೋಲಾರದಲ್ಲಿ ನಂದಿಉತ್ಸವ**, ಚಿಕ್ಕಬಳ್ಳಾಪುರ, ೧೯೯೯, ಪು. ೮೯

೧೧೯. ವಸು ಎಂ.ವಿ., ಕೃಷ್ಣಮೂರ್ತಿ ಪಿ.ವಿ., **ದಕ್ಷಿಣ ಕರ್ನಾಟಕದ ಅರಸುಮನೆತನಗಳು**, ಲೇ. ಕೃಷ್ಣಮೂರ್ತಿ ಪಿ.ವಿ., ಪಾಳೆಯಗಾರರು, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪ್ರಸಾರಾಂಗ, ೨೦೦೧, ಪು. ೩೨೫

೧೨೦. ಕೃಷ್ಣರಾವ ಎಂ.ವಿ., ಮತ್ತು ಕೇಶವಭಟ್ಟ ಎಂ. (ಸಂ.), **ಕರ್ನಾಟಕ ಇತಿಹಾಸ ದರ್ಶನ**, ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರ, ಬೆಂಗಳೂರು, ೧೯೭೦, ಪು. ೪೬೦

೧೨೧. ಅದೇ, ೪೬೧

೧೨೨. ವಸು ಎಂ.ವಿ., ಕೃಷ್ಣಮೂರ್ತಿ ಪಿ.ವಿ. (ಸಂ.), **ಕರ್ನಾಟಕ ಅರಸುಮನೆತನಗಳು**, ಪು. ೩೨೬-೩೨೯ (ECX ಗೌರಿಬಿದನೂರು 52), (ECX CB 27)

೧೨೩. ಸೂರ್ಯನಾಥ ಕಾಮತ (ಸಂ.), **ಕರ್ನಾಟಕ ಇತಿಹಾಸ ದರ್ಶನ, ಸಂಪುಟ ೧೦**, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು, ೧೯೯೫, ಪು. ೪೯೦

ಅಧ್ಯಾಯ ಮೂರು

ವಸಾಹತು ಕಾಲದ ಚಾರಿತ್ರಿಕ ಕೃತಿಗಳ ಅವಲೋಕನ

ಅ. ಪ್ರಾರಂಭ-ಅಧಿಕಾರ-ವಿಸ್ತರಣೆ

ಆ. ದಮನಿತರ ಹೋರಾಟಗಳು

ವಸಾಹತುಶಾಹಿಗಳ ಕಾಲದಲ್ಲಿ ಬ್ರಿಟಿಷರ ಆಡಳಿತಕ್ಕೆ ಬೇಕಾದ ಮಾಹಿತಿಯನ್ನು ಪ್ರಮುಖವಾಗಿ ದಾಖಲೆಗಳ ಪತ್ರಗಾರರನ್ನು ಅವಲಂಬಿಸಬೇಕಾಗುತ್ತದೆ. ಇವುಗಳಲ್ಲಿ 'ಗೆಜೆಟಿಯರಗಳು', ಬುಕಾನನ್‌ರವರ 'ಪ್ರವಾಸಿ ದಾಖಲೆಗಳು', ಬಿ.ಎಲ್. ರೈಸ್, ಫ್ಲೀಟ್, ಎಂ. ಶೇಷಾದ್ರಿಯವರ ಶಾಸನ ಸಂಪುಟಗಳು ಮುಖ್ಯವಾಗುತ್ತವೆ. ೨ನೆಯದಾಗಿ ಸ್ವದೇಶಿ ಬರಹಗಾರರು ವಸಾಹತುಶಾಹಿಗಳ ವಿರುದ್ಧ ನಿಲುವುಗಳ ಮೂಲಕ ಕೃತಿಗಳನ್ನು ಬರೆದಿದ್ದಾರೆ. ಅಂತಹ ಕೃತಿಗಳು ಎಂದರೆ, ಕೆ. ವೀರತಪ್ಪನವರ ಮೈಸೂರು ಸಂಸ್ಥಾನದ ಸ್ವಾತಂತ್ರ್ಯ ಚಳವಳಿ, ಡಿ.ಲಿಂಗಯ್ಯನವರ 'ಶಿವಪುರ ಸತ್ಯಾಗ್ರಹ', ಬಿ.ಎಸ್. ಮಹಾಬಳೇಶ್ವರಪ್ಪನವರ ಈಸೂರಿನ ವೀರಗಾಥೆ, ಬಿ.ಕೆ.ರಾಮಚಂದ್ರನ್‌ರವರ 'ಕರ್ನಾಟಕ ಜಲಿಯನ್ ವಾಲಿಬಾಗ್ ದುರಂತ', ವೆಂಕಟಕೃಷ್ಣಪ್ಪನವರ 'ಕೋಲಾರ ಜಿಲ್ಲೆಯ ಸ್ವತಂತ್ರ್ಯ ಹೋರಾಟಗಳು' ಮತ್ತು 'ಸ್ವಾತಂತ್ರ್ಯ ಹೋರಾಟದ ನೆನಪುಗಳು' ಮುಂತಾದವು ಈ ಪರಿಧಿಗೆ ಹೆಸರಿಸಲಾಗುತ್ತದೆ. ಇವು ಬ್ರಿಟಿಷರ ದಬ್ಬಾಳಿಕೆ, ಅವುಗಳ ವಿರುದ್ಧ ಹೋರಾಟ ಮತ್ತು ಸ್ವದೇಶಿ ಜನರನ್ನು ಇದಕ್ಕೆ ಪ್ರೇರಣೆಯನ್ನುಂಟು ಮಾಡುವಂತಹ ಕೃತಿಗಳಾಗಿವೆ ಎಂದು ಹೇಳಲಾಗುತ್ತದೆ.

ಏಕೀಕರಣ ನಂತರ ಬಂದ ಕೃತಿಗಳ ರಚನೆಯು ವಿವಿಧ ಮುಖಗಳಲ್ಲಿ ವಿಶಾಲ ದೃಷ್ಟಿಕೋನ ಹೊಂದಿದ್ದಲ್ಲದೆ ಅವು ಸ್ಥಳೀಯ ಸಮಾಜ ಮತ್ತು ಸಮಾಜದ ಜನರು ಹಾಗೂ ಪರಿಸರದ ಸ್ಥಿತಿಗತಿಗಳ ಮೇಲೆ ಬರೆಯಲ್ಪಟ್ಟಿವೆ. ಬಹುತೇಕವಾಗಿ ಇವುಗಳಲ್ಲಿ ವಸಾಹತುಕಾಲದ ವಿಚಾರಗಳನ್ನು ವಿಮರ್ಶೆ ಮಾಡುವುದರ ಮೂಲಕ ತಾತ್ವಿಕ ನಿಲವು ಕಾಣುವುದರಲ್ಲಿ ಪ್ರಯತ್ನ ಮಾಡಲಾಗಿದೆ. ಇಂತಹ ಕೃತಿಗಳೆಂದರೆ ಎಸ್. ಚಂದ್ರಶೇಖರ ಅವರ 'ದಕ್ಷಿಣ ಭಾರತದ ವಸಾಹತುಶಾಹಿ ರಾಷ್ಟ್ರೀಯತೆ ಮತ್ತು ಸಂಘರ್ಷ', ಇತಿಹಾಸ ದರ್ಶನಗಳು, ಎಂ.ವಿ. ವಸುರವರ 'ದಕ್ಷಿಣ ಕರ್ನಾಟಕದ ಅರಸುಮನೆತನಗಳು', 'ಇತಿಹಾಸ ಪರಂಪರೆಗಳು', ತಂಬಂಡ ವಿಜಯ್ ಪೂಣಚ್ಚ ಅವರ 'ಚರಿತ್ರೆ ವಿಶ್ವಕೋಶ' (ಸಂಪುಟ-೪), ಜಾನಕಿ ನಾಯರ ಅವರ 'ಮೈನರ್ಸ್ ಅಂಡ್ ಮಿಲ್‌ಹ್ಯಾಂಡ್ಸ್', ಎಂ. ಗೋವಿಂದಪ್ಪನವರ 'ಹಿಸ್ಟರಿ ಆಫ್ ಮೈನಿಂಗ್ ಇನ್ ಪ್ರಿನ್ಸಿಲೀ ಮೈಸೂರು ವಿತ್ ಸ್ಪೆಷಲ್ ರೆಫರೆನ್ಸ್ ಟು ಕೆ.ಜಿ.ಎಫ್.' (1881-1956) ಆರ್. ಗೋಪಾಲ್‌ರವರ 'ಕೋಲಾರ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ' ಎಂಬ ಕೃತಿ ಎನ್. ಜಗನ್ನಾಥ ಪ್ರಕಾಶರವರ 'ಕೋಲಾರ ಸಿರಿಸಂಪುಟ' ಮುಂತಾದವು ಈ ಪರಿಧಿಯಲ್ಲಿ ಹೆಸರಿಸಲಾಗುತ್ತದೆ. ದಲಿತರ ಚರಿತ್ರೆ ಕುರಿತಾಗಿ ಲಕ್ಷ್ಮೀಪತಿಯರು ಬರೆದಿರುವ ಮರಪನಪಲ್ಲಿ 'ದಲಿತರ ಹೋರಾಟ', ಬಿ. ಕೃಷ್ಣಪ್ಪನವರ 'ಚಳುವಳಿಗಳು ಮತ್ತು ಬರಹಗಳು', ಗಂಗಾಧರಮೂರ್ತಿಯವರ 'ನಾಗಸಂದ್ರ ಭೂ ಆಕ್ರಮಣ ಚಳವಳಿ', ಶ್ರೀಧರನ್ ಮತ್ತು ಆರ್. ಮುನಿಯಪ್ಪನವರ 'ಕಂಬಾಲಪಲ್ಲಿ ದಲಿತರ ಸಜೀವ ದಹನ' ಮುಂತಾದವುಗಳಲ್ಲಿ ವಸಾಹತುಕಾಲದ ಕೋಲಾರದ ಸಾಮಾಜಿಕ ಜೀವನದ ಚಿತ್ರಣಗಳನ್ನು

ಕಾಣಬಹುದು. ರೈತರ ಸಂಘಟನೆಗಳ ಬೆಳವಣಿಗೆಯನ್ನು ಗುರುತಿಸಿ ಎಚ್.ವಿ. ಸೋಮಶೇಖರರವರು ಬರೆದಿರುವ 'ಕೋಲಾರ ಜಿಲ್ಲೆಯ ಕಮ್ಯುನಿಸ್ಟರು', ದೇವರಾಜ್ಯನವರ 'ಸಿರಿನಂದಿ' ಮುಂತಾದ ಕೃತಿಗಳಲ್ಲಿ ರೈತರು, ಕಾರ್ಮಿಕರು, ದಲಿತರ ಬಗ್ಗೆ ವಿವರಗಳು ಕಂಡುಬರುತ್ತವೆ. ಕೋಲಾರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್‌ನಿಂದ ಕೋಲಾರ ಜಿಲ್ಲೆಯ ಚಳವಳಿಗಳು, ಆರ್ಥಿಕಾಭಿವೃದ್ಧಿ, ಬೆಳವಣಿಗೆ, ಇತಿಹಾಸ, ರಾಜಕೀಯ ಮುಂತಾದವುಗಳೆಲ್ಲವು ಸೇರಿಸಿ ಪ್ರತಿವರ್ಷವು ವಾರ್ಷಿಕ ಕೃತಿಗಳನ್ನು ಪ್ರಕಟಣೆ ಮಾಡುತ್ತವೆ. ಅಂತವುಗಳಲ್ಲಿ ಮೂರನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಪ್ರಕಟಣೆಗೊಂಡ 'ಹೊಂಗಿರಣ' (೧೯೯೨) ಎಂಬ ಸ್ಮರಣ ಸಂಚಿಕೆ, ಏಳನೇ ಕನ್ನಡ ಸಾಹಿತ್ಯ ಸಮ್ಮೇಳನದ 'ಹೊಸಪಥ' (೨೦೦೨) ಮುಂತಾದವು ಪ್ರಮುಖವಾಗಿವೆ. ಇವುಗಳಲ್ಲಿ ರಾಜಕೀಯ, ಸಾಮಾಜಿಕ, ಶೈಕ್ಷಣಿಕ ಮುಂತಾದ ಚರಿತ್ರೆಯ ದಾಖಲೆಗಳ ಮೂಲಕ ಕೃತಿಗಳು ಪ್ರಕಟಣೆಗೊಂಡಿವೆ. ಅಲ್ಲದೆ ಜನಗಣತಿ ಕೃತಿಗಳು ಪ್ರಮುಖವಾಗಿವೆ. ಇದರಲ್ಲಿ ಜನಗಣನೆ, ಭೂಪ್ರದೇಶ, ಆಡಳಿತದ ವಿಷಯಗಳು ತಿಳಿದುಬರುತ್ತವೆ. ಹೀಗೆ ವಸಾಹತೋತ್ತರ ಕಾಲ ಅನಂತರ ಕೃತಿಗಳ ವೈಶಿಷ್ಟ್ಯತೆ ಅವುಗಳ ಸ್ವರೂಪವನ್ನು ಗುರುತಿಸಲಾಗುತ್ತದೆ.

ಈ ಅಧ್ಯಾಯದಲ್ಲಿ ಕೋಲಾರ ಜಿಲ್ಲೆಯ ವಸಾಹತುಶಾಹಿಗಳ ಆಡಳಿತ ಮತ್ತು ಅವರು ಮಾಡಿದ ಸುಧಾರಣೆಗಳ ಬೆಳವಣಿಗೆ ಹಾಗೂ ಸ್ಥಳೀಯ ಜನರಲ್ಲಿ ಉಂಟಾದ ಸ್ವಾತಂತ್ರ್ಯ ಹೋರಾಟದ ಪ್ರವೃತ್ತಿಗಳು, ಸ್ವಾತಂತ್ರ್ಯದ ಸಮಯದಲ್ಲಿ ಮತ್ತು ಅನಂತರದಲ್ಲಿ ಉಂಟಾದ ಘಟನೆಗಳು ಹಾಗೂ ಆಡಳಿತದ ಬೆಳವಣಿಗೆಯ ಕುರಿತಾಗಿ ಅಧ್ಯಯನ ಮಾಡಲಾಗಿದೆ. ಅಧ್ಯಯನದ ಸರಳಗೊಳಿಸುವ ಸಲುವಾಗಿ ವಸಾಹತು ಕಾಲವನ್ನು ಎರಡು ಹಂತಗಳಾಗಿ ವಿಂಗಡಿಸಿದೆ. ಮತ್ತು ವಸಾಹತೋತ್ತರ ಕಾಲವನ್ನು ಸಹ ಎರಡು ಘಟ್ಟಗಳಾಗಿ ವಿಂಗಡಿಸಿದೆ. ಇವುಗಳ ಅಧ್ಯಯನವು ವಿವಿಧ ಕೃತಿಗಳು ಲೇಖನಿಗಳು ಹಾಗೂ ರಿಪೋರ್ಟ್‌ಗಳನ್ನು ಪರಿಶೀಲಿಸುವುದರ ಮೂಲಕ ಸೈದ್ಧಾಂತಿಕ ದೃಷ್ಟಿಕೋನದಲ್ಲಿ ವಿವರಿಸಲು ಯತ್ನಿಸಲಾಗಿದೆ. ಇದರಿಂದ ಇತರೆ ಜಿಲ್ಲಾ ಪ್ರದೇಶಗಳಂತೆ ಕೋಲಾರ ಚರಿತ್ರೆಯು ವಿಶಿಷ್ಟತೆ ಪಡೆದಿರುವುದು ಕಂಡು ಬರುತ್ತದೆ. ಇಂತಹ ಅಧ್ಯಯನವು ಈ ಕೆಳಕಂಡಂತೆ ವಿವಿಧ ಹಂತಗಳಲ್ಲಿ ವಿವರಿಸಲಾಗಿದೆ.

ಈ ಅಧ್ಯಯನವನ್ನು ಪ್ರಮುಖವಾಗಿ ಎರಡು ಹಂತದಲ್ಲಿ ವಿವರಿಸಲಾಗಿದೆ. ಪ್ರಥಮ ಹಂತದಲ್ಲಿ ಎರಡು ರೀತಿಯ ಬೆಳವಣಿಗೆಗಳು ಕಂಡುಬರುತ್ತವೆ. ವಸಾಹತುಶಾಹಿ ಆಡಳಿತ ಪ್ರಾರಂಭ ಮತ್ತು ಅಧಿಕಾರ ವಿಸ್ತಾರತೆ ಹಾಗೂ ಆರ್ಥಿಕಾಭಿವೃದ್ಧಿ ಬೆಳವಣಿಗೆಗಳನ್ನು ಒಳಗೊಂಡಿದೆ. ಎರಡನೆಯ ಹಂತದಲ್ಲಿ ಸ್ವಾತಂತ್ರ್ಯ ಹೋರಾಟಗಳಾದ ಸ್ವದೇಶಿ ಚಳುವಳಿ, ಗಾಂಧೀಜಿರವರ ಪ್ರವಾಸ, ವಿದುರಾಶ್ವತ್ಥ ದುರಂತ, ಕೆ.ಜಿ.ಎಫ್‌ನಲ್ಲಿ ಸತ್ಯಾಗ್ರಹ, ಕ್ವಿಟ್ ಇಂಡಿಯಾ ಚಳುವಳಿ, ಶಿಡ್ಲಘಟ್ಟ ಸ್ವಾತಂತ್ರ್ಯ ಚಳವಳಿಗಳ ವಿವರಗಳನ್ನು ಇಲ್ಲಿ ಚರ್ಚಿಸಲಾಗಿದೆ.

ಕೋಲಾರ ಪ್ರದೇಶದಲ್ಲಿ ವಸಾಹತುಶಾಹಿಗಳಿಗೆ ಸ್ಥಳೀಯರನ್ನು ತನ್ನ ಕೈವಶ ಮಾಡಿಕೊಳ್ಳುವಂತಹ ಸನ್ನಿವೇಶ ಉಂಟಾಗಿತ್ತು. ಅಲ್ಲದೆ ಕೋಲಾರ ಪ್ರದೇಶದಲ್ಲಿನ ಚಿನ್ನದ ಗಣಿ ಅಭಿವೃದ್ಧಿ ಮತ್ತು ಲಾಭದಿಂದಾಗಿ ಅವರ ಸ್ಥಿರ ನೆಲೆಯೂರಲು ಕಾರಣವಾಯಿತು. ಹಾಗೂ ಕೋಲಾರ ಹೆಚ್ಚಾಗಿ ಪ್ರದೇಶದಲ್ಲಿ

ಪಾಳೆಗಾರರು ಇದ್ದು ಅವರ ತಮ್ಮ ಆಂತರಿಕ ಕಲಹಗಳಲ್ಲಿ ನಿರತರಾಗಿದ್ದರು. ಇದು ಪರೋಕ್ಷವಾಗಿ ಮೂರನೇ ಪ್ರಬಲ ಶಕ್ತಿ ಪ್ರವೇಶ ಮಾಡಲು ಕಾರಣವಾಯಿತು.[೧] ಈ ವಸಾಹತುಶಾಹಿಗಳು ಸ್ಥಳೀಯ ಪಾಳೇಗಾರರಲ್ಲಿ ಆಮಿಷಗಳನ್ನು ಒಡ್ಡಿ ಹೈದರ, ಟಿಪ್ಪು ಮುಂತಾದವರ ವಿರುದ್ಧ ಎತ್ತಿಕಟ್ಟಿ ಅವರಿಂದಲೇ ನೆರವು ಪಡೆದುಕೊಂಡರು ಎಂದರೆ ತಪ್ಪಾಗಲಾರದು.

ವಸಾಹತುಶಾಹಿ ಚರಿತ್ರೆಯನ್ನು ಅಧ್ಯಯನ ಮಾಡಲು ಅನೇಕ ಕೃತಿಗಳು ಲಭ್ಯವಾಗಿವೆ. ವಸಾಹತುಶಾಹಿ ಕಾಲಕ್ಕೆ ಸಂಬಂಧಿಸಿದ ಲೇಖನಿಗಳು ಸರ್ಕಾರಿ ರಿಪೋರ್ಟ್‌ಗಳು ಸಹ ಪರವಾಗಿವೆ. ಕೆ. ಅಭಿಶಂಕರವರ ಸಂಪಾದಿಸಿರುವ 'ಕೋಲಾರ ಜಿಲ್ಲಾ ಗೆಜೆಟಿಯರ' (೧೯೬೮) ಮೈಸೂರು ರಾಜ್ಯದ ಗೆಜೆಟಿಯರು ಎಂ. ಗೋವಿಂದಪ್ಪನವರು ಸಂಶೋಧನೆ ಮಾಡಿರುವ 'ಹಿಸ್ಟರಿ ಆಫ್ ಮೈನಿಂಗ್ ಇನ್ ಪ್ರಿನ್ಸ್ಲಿ ಮೈಸೂರು ವಿತ್ ಸ್ಪೇಷಲ್ ರೆಫೆರೆನ್ಸ್ ಟು ಕೆ.ಜಿ.ಎಫ್.' (೧೮೮೧-೧೯೫೦) ಪ್ರಬಂಧ, ಬಿ.ಷೇಕ್‌ಅಲಿರವರು ಸಂಪಾದಿಸಿರುವ 'ಕರ್ನಾಟಕ ಚರಿತ್ರೆ ಸಂಪುಟ-೫' (೧೯೯೭), ಎಸ್. ಚಂದ್ರಶೇಖರರವರು ಸಂಪಾದಿಸಿರುವ 'ಕರ್ನಾಟಕ ಚರಿತ್ರೆ ಸಂಪುಟ-೭' (೧೯೯೭), ಜಾನಕಿ ನಾಯರ್‌ರವರ 'ಮೈನರ್ಸ್ ಅಂಡ್ ಮಿಲ್‌ಹ್ಯಾಂಡ್ಸ್' (೧೯೯೨), ಬಿ. ಜಯದೇವಪ್ಪನವರು ಬರೆದಿರುವ 'ಚಿಂತಾಮಣಿ ತಾಲ್ಲೂಕ ದರ್ಶನ' (೧೯೮೦), ಎಂ.ಎಸ್. ನರಸಿಂಹಮೂರ್ತಿರವರು ಬರೆದಿರುವ 'ಮಾಲೂರು ತಾಲ್ಲೂಕ ದರ್ಶನ' (೧೯೮೭), ಕೆ. ವೆಂಕಟಕೃಷ್ಣಪ್ಪನವರು ಬರೆದಿರುವ 'ಕೋಲಾರ ಜಿಲ್ಲಾ ಸ್ವಾತಂತ್ರ್ಯ ಹೋರಾಟಗಾರರು' (೧೯೯೮) ಮತ್ತು 'ಸ್ವಾತಂತ್ರ್ಯ ಹೋರಾಟದ ನೆನಪುಗಳು' (೧೯೯೩), ಸೂರ್ಯನಾಥ ಕಾಮತ್‌ರವರು ಸಂಪಾದಿಸಿರುವ 'ಸ್ವಾತಂತ್ರ್ಯ ಸ್ಮೃತಿಗಳು ಸಂಪುಟ ೧ ಮತ್ತು ಸಂಪುಟ ೨' ಮುಂತಾದವು ಅಧ್ಯಯನಕ್ಕೆ ನೆರವಾಗಿವೆ.

ಅ

ಪ್ರಾರಂಭ-ಅಧಿಕಾರ-ವಿಸ್ತರಣೆ

ಕೋಲಾರ ಪ್ರದೇಶವನ್ನು ಆಡಳಿತ ಮಾಡಿರುವ ವಸಾಹತುಶಾಹಿಗಳ ಪೈಕಿ ಬ್ರಿಟಿಷರು ಪ್ರಮುಖರಾಗಿದ್ದಾರೆ. ಅವರು ಈ ಪ್ರದೇಶದಲ್ಲಿ ಆಗಮನದ ವೇಳೆಗೆ ಭಾರತದಾದ್ಯಂತ ಇದ್ದ ಇತರೆ ಯುರೋಪಿನ ವಸಾಹತುಶಾಹಿಗಳಾದ ಫ್ರೆಂಚರು, ಪೋರ್ಚುಗೀಸರು, ಡಚ್ಚರನ್ನು ಭಾರತದಿಂದ ನಿರ್ಗಮಿಸುವಂತೆ ಮಾಡಿದ್ದರು. ಮತ್ತು ಮೂರನೇ ಮೈಸೂರು ಯುದ್ಧ ಪ್ರಾರಂಭವಾದಾಗ ಕೋಲಾರ ಪ್ರದೇಶದಲ್ಲಿ ಇವರ ಪ್ರವೇಶ ಉಂಟಾಗುತ್ತದೆ. ಅಲ್ಲಿಯವರೆಗೆ ಇತರೆ ಯಾವ ವಸಾಹತುಶಾಹಿಗಳು ಸುಳಿದಿರುವುದು ಚರಿತ್ರೆಯಲ್ಲಿ ಕಾಣಬರುವುದಿಲ್ಲ. ಇದು ಬ್ರಿಟಿಷರಿಗೆ ಸುಲಭವಾಗಿ ಪ್ರವೇಶವಾಗಲು ಕಾರಣವಾಯಿತು.

ಒಟ್ಟಾಗಿ ೧೭೬೮ರಲ್ಲಿ ಬ್ರಿಟಿಷ್ ಸೇನಾಧಿಕಾರಿಗಳಾದ ಕೋಲ್‌ಸ್ಮಿತ್ ಮತ್ತು ಕೋಲ್‌ವುಡ್ಡರ್ ಮದ್ರಾಸ ಪ್ರಾಂತ್ಯದ ಮೂಲಕದಿಂದ ಕೋಲಾರ ಮತ್ತು ಮುಳಬಾಗಿಲು ಪ್ರದೇಶಗಳನ್ನು ಆಕ್ರಮಿಸಿದರು.

ಆ ವೇಳೆಗೆ ಆ ಪ್ರದೇಶ ಹೈದರಾಲಿಯ ಉತ್ತರಾಧಿಕಾರಿಯಾದ ಟಿಪ್ಪುವಿನ ವಶದಲ್ಲಿತ್ತು. ಇದು ವಸಾಹತುಶಾಹಿಗಳು ಕೋಲಾರ ಪ್ರದೇಶದಲ್ಲಿ ಪ್ರಥಮ ಬಾರಿಗೆ ಪ್ರವೇಶಿಸಲು ಕಾರಣವಾಗಿದೆ. ಇದಾದ ಕೆಲವೇ ದಿನಗಳಲ್ಲಿ ಕೋಲಾರ ಪ್ರದೇಶ 'ಹಾರ್ಲೇರಿ' ಎಂಬಲ್ಲಿ ಬ್ರಿಟಿಷರಿಗೂ ಮತ್ತು ಹೈದರಾಲಿಗೂ ನಡುವೆ ಭೀಕರ ಕದನ ನಡೆಯಿತು. ಈ ಕದನದಲ್ಲಿ ಒಬ್ಬ ಕ್ಯಾಪ್ಟನ್ ೬ ಜನ ಸಬಾಲ್ಟರ್ನರು, ೧೨ ಯುರೋಪಿಯನ್ನರು ಮತ್ತು ೨೦೦ ಸಿಪಾಯಿಗಳು ಸಾವಿಗೀಡಾದರು ಎಂದು ಗೆಜೆಟಿಯರ್‌ನಲ್ಲಿ ತಿಳಿಸಿದೆ.[೨] ಇದಕ್ಕೆ ನೆರವಾಗಲು ಕೋಲಾರದ ಪೂರ್ವದಲ್ಲಿರುವ ವೆಂಕಟಗಿರಿಯಿಂದ ಮೇಜರ್ ಫಿಟ್ಜ್‌ರವರು ಬ್ರಿಟಿಷರಿಗೆ ಸಹಕರಿಸಿದನು. ಇದರಿಂದ ರಾತ್ರಿ ಪೂರ್ತಿ ಕಾಳಗ ನಡೆಯಿತು. ಬ್ರಿಟಿಷರೇ ಇದರಲ್ಲಿ ಮೇಲುಗೈ ಸಾಧಿಸಿದರು. ನಂತರ ಈ ಪ್ರದೇಶದಲ್ಲಿ ಬ್ರಿಟಿಷರು ನಿರುತ್ಸಾಹ ತೋರ್ಪಡಿಸಿ ಬೆಂಗಳೂರುನತ್ತ ಗಮನಹರಿಸಿದರು. ಇದು ಹೈದರಾಲಿ ಮತ್ತು ಕೋಲಾರ ಪ್ರದೇಶದಲ್ಲಿ ಪ್ರಬಲರಾಗಲೂ ಕಾರಣವಾಯಿತು. ಹೀಗಾಗಿ ಚಿಕ್ಕಬಳ್ಳಾಪುರ, ಸುಗಟೂರು, ಗುಮ್ಮನಾಯಕನಪಾಳ್ಯ ಮುಂತಾದ ಕೋಲಾರದ ಪೂರ್ವ ತಾಲ್ಲೂಕು ಪಾಳೆಗಾರರ ಪ್ರದೇಶಗಳನ್ನು ನಿಯಂತ್ರಿಸಲು ಅನುಕೂಲವಾಯಿತೆಂದು ಕನ್ನಡ ವಿಶ್ವಕೋಶದಲ್ಲಿ ತಿಳಿಸಿದೆ.[೩]

ಈ ಪ್ರದೇಶದಲ್ಲಿ ಈ ವೇಳೆಗೆ ಮರಾಠರು ನೆಲೆಗೊಂಡಿದ್ದರು ಮತ್ತು ಹೈದರಾಲಿಯ ವಿರುದ್ಧ ಸದಾ ಘರ್ಷಣೆಕ್ಕಿಳಿದಿದ್ದರು. ೧೭೭೧ರಲ್ಲಿ ಮರಾಠ ದಾಳಿಕಾರರು ಕೋಲಾರ ಪ್ರದೇಶಗಳಲ್ಲಿ ಕೊಳ್ಳೆಹೊಡೆದರು. ಮರಾಠ ಪೇಶ್ವೆಮಾಧವರಾಯ್ ಹಾಗೂ ಅವನ ಮಂತ್ರಿ ಅಥವಾ ಸೇನಾ ಮುಖಂಡರಾದ ತ್ರಯಂಬಕಮಾಮ್‌ರವರು ಕಂಡುಬರುತ್ತಾರೆ. ಇದರಿಂದಾಗಿ ಮತ್ತು ಬ್ರಿಟಿಷರ ದಾಳಿಗಳನ್ನು ಎದುರಿಸಲಾಗದ ಹೈದರಾಲಿಯು ಮರಾಠರ ಸ್ನೇಹ ಬಯಸಿ ಅವರೊಂದಿಗೆ ಒಪ್ಪಂದ ಮಾಡಿಕೊಂಡನು. ಮರಾಠ ಅಪ್ಪಾಜಿರಾವ್‌ನೊಂದಿಗೆ ೩೨ ಲಕ್ಷ ರೂ. ಪರಿಹಾರ ನೀಡುವುದರ ಮೂಲಕ ಕೋಲಾರ, ದೊಡ್ಡಬಳ್ಳಾಪುರ, ಸೀರಾ ಪ್ರದೇಶಗಳನ್ನು ಬಳಸಿಕೊಂಡನು ಎಂದು ಗೆಜೆಟಿಯರ್‌ನಲ್ಲಿ ತಿಳಿಸಿದೆ. ಇದನ್ನೆ ಬಿ. ಷೇಕಅಲಿಯವರ 'ಕರ್ನಾಟಕ ಚರಿತ್ರೆ ಸಂಪುಟ-೫'ರಲ್ಲಿ ತಿಳಿಸಿದೆ.[೪] ಇಂತಿಷ್ಟು ಬಿಟ್ಟರೆ ಹೆಚ್ಚಿನ ಮಾಹಿತಿಗಳು ವಸಾಹತುಶಾಹಿಯಲ್ಲಿ ಇಲ್ಲಿಯವರೆಗೆ ತಿಳಿದುಬರುವುದಿಲ್ಲ. ೧೭೯೧ರಲ್ಲಿ ಮೂರನೇ ಮೈಸೂರು ಯುದ್ಧ ಪ್ರಾರಂಭವಾದಾಗ ಬ್ರಿಟೀಷ ಸೈನ್ಯಾಧಿಕಾರಿಯಾದ ಕಾರ್ನವಾಲಿಸನು ಕೋಲಾರ ಪ್ರದೇಶವನ್ನು ಆಕ್ರಮಿಸಿದನು ಮತ್ತು ನಂದಿದುರ್ಗವನ್ನು ಟಿಪ್ಪುಸುಲ್ತಾನನಿಂದ ಖಂಡಿಸಿ ಸ್ಥಳೀಯ ಪಾಳೆಗಾರನಾದ ನಾರಾಯಣಗೌಡನಿಗೆ ವಹಿಸಿದನು ಎಂದು, ಎಂ.ವಿ. ಕೃಷ್ಣರಾವ್ ಮತ್ತು ಎಂ. ಕೇಶವಭಟ್ಟರು ಹೇಳಿದ್ದಾರೆ.[೫] ಇದನ್ನೇ 'ಕನ್ನಡ ವಿಶ್ವಕೋಶ ಸಂಪುಟ-೫'ರಲ್ಲಿ ತಿಳಿಸಿದೆ. ಅಲ್ಲದೆ, ಬಿ. ಶೇಕಅಲಿಯವರು ಹೇಳಿದ್ದಾರೆ. ಈ ಯುದ್ಧವು ಅಂತ್ಯವಾಗಿ '೧೭೯೨ರ ಮಾರ್ಚ್‌ನಲ್ಲಿ ಶ್ರೀರಂಗಪಟ್ಟಣ ಒಪ್ಪಂದ'ವಾಯಿತು. ಇದರಲ್ಲಿ ಕೋಲಾರ ಪ್ರದೇಶವು ಬ್ರಿಟಿಷರ ವಶವಾಯಿತು. ಅಲ್ಲದೆ ನಂತರ ಮೈಸೂರು ರಾಜ್ಯದ ಒಂದು ಭಾಗವಾಯಿತು. ಎಂದು ಗೆಜೆಟಿಯರನಲ್ಲಿ ತಿಳಿಸಿದೆ.[೬] ಇದನ್ನೇ ಎಂ.ವಿ. ಕೃಷ್ಣಮೂರ್ತಿ, ಹೆಚ್.ಎಂ. ನಾಯಕ, ಎನ್. ಜಗನ್ನಾಥ ಪ್ರಕಾಶರವರು ಹೇಳಿದ್ದಾರೆ. ಇಲ್ಲಿಂದ

ಬ್ರಿಟಿಷರು ಈ ಪ್ರದೇಶದಲ್ಲಿ ನೆಲೆಯೂರಿ ೧೯೪೭ರವರೆಗೂ ರಾಜಕೀಯ ಶಕ್ತಿಯ ಪ್ರಯೋಗವನ್ನು ಮಾಡಿದರು. ಪ್ರಾರಂಭದಲ್ಲಿ ಸ್ಥಳೀಯ ಪಾಳೆಗಾರರು ಬ್ರಿಟಿಷರಿಗೆ ನೆರವಾಗಿದ್ದರಿಂದ ಆ ಪ್ರದೇಶಗಳಲ್ಲಿ ಅವರಿಗೆ ಪೌಜುದಾರಗಳು, ಜಹಾಗೀರಗಳಾಗಿ ನೀಡಿದರು. ಅಂತಹವುಗಳಲ್ಲಿ ಕೋಲಾರದ ಸುತ್ತಲಿನ ಪ್ರದೇಶವನ್ನು ಕೆಂಪೇಗೌಡನಿಗೆ ಚಿಕ್ಕಬಳ್ಳಾಪುರವನ್ನು ನಾರಾಯಣಗೌಡನಿಗೆ, ಗುಮ್ಮನಾಯಕಪಾಳ್ಯವನ್ನು ನರಸನಾಯಕನಿಗೆ ನಿಯೋಜಿಸಲಾಯಿತು ಎಂದು ಆಹ್ಲ ಚಿರಂಜೀವಿಯವರ ಲೇಖನಗಳಲ್ಲಿ ಹೇಳುತ್ತಾರೆ.[೭]

ಈ ಗುಮ್ಮನಾಯಕನ ಪಾಳ್ಯಗಾರರು ಹೈದರಾಲಿಯ ಆಕ್ರಮಣಕಾರಿ ನೀತಿಯಲ್ಲಿ ಬೇಸತ್ತರು, ೧೭೯೯ರ ನಾಲ್ಕನೇ ಮೈಸೂರು ಯುದ್ಧ ನಡೆದಾಗ ನರಸಿಂಹನಾಯಕ ಇಂಗ್ಲಿಷರ ಜನರಲ್ ಹ್ಯಾರಿಸ್‌ನೊಡನೆ ಒಪ್ಪಂದವನ್ನು ಮಾಡಿಕೊಂಡು ಆಂಗ್ಲರೊಡನೆ ಸಹಕರಿಸಿ ಟಿಪ್ಪುವಿನ ವಿರುದ್ಧ ಹೋರಾಡಿದ. ಅಲ್ಲದೆ ಶ್ರೀರಂಗಪಟ್ಟಣದ ಮುತ್ತಿಗೆಯ ಸಮಯದಲ್ಲಿ ಗುಮ್ಮನಾಯಕನ ಪಾಳೆಯ ಸೈನಿಕರು ಆಂಗ್ಲರ ಪರ ಹೋರಾಡಿದರು ಎಂದು ಬಿ.ಆರ್. ಕೃಷ್ಣ, ಶೇಕ ಮಸ್ತಾನರವರು ಹೇಳಿದ್ದಾರೆ.[೮] ಈ ವೇಳೆಗೆ ಅಂದರೆ ೧೭೯೯ರಲ್ಲಿ ಟಿಪ್ಪುವಿನ ಮರಣದೊಂದಿಗೆ ನಾಲ್ಕನೇ ಮೈಸೂರು ಯುದ್ಧ ಕೊನೆಗೊಂಡು ಮೈಸೂರು ರಾಜ್ಯವು ಬ್ರಿಟಿಷರ ನೆರವಿನಿಂದ ಮೈಸೂರು ಒಡೆಯರಿಗೆ ಸೇರಿತು. ಆದರೆ ಅದರ ಆಡಳಿತ ಮತ್ತು ಸೈನಿಕ ಕಾರ್ಯಾಚರಣೆಯಲ್ಲಿ ಬ್ರಿಟಿಷರ ಹತೋಟಿಯಲ್ಲಿದ್ದ, ಅದಕ್ಕೆ ಪ್ರತಿಯಾಗಿ ಮೈಸೂರು ರಾಜ್ಯ ಬ್ರಿಟಿಷರಿಗೆ ಪ್ರತಿವರ್ಷ ಒಪ್ಪಂದದಂತೆ ಪೊಗದಿ ನೀಡಬೇಕಾಯಿತು. ಅಲ್ಲದೆ ಬ್ರಿಟಿಷರ ಸಹಾಯಕ ಸೈನಿಕ ಪದ್ಧತಿಗೆ ಒಪ್ಪಿಕೊಂಡಿದ್ದು ಅದರ ವೆಚ್ಚವೆಲ್ಲ ಮೈಸೂರು ರಾಜ್ಯವೇ ಭರಿಸಬೇಕಾಯಿತು. ಜಾನಕಿನಾಯರ್‌ರವರು ಈ ವೆಚ್ಚದ ಮೊತ್ತ ೨೪.೫ ಲಕ್ಷವನ್ನು ಮೀರಿಸಿದೆ ಎಂದು ಹೇಳಿದ್ದಾರೆ. ಓೀಗಾಗಿ ಕೋಲಾರ ಪ್ರದೇಶದಲ್ಲಿ ಮೈಸೂರು ರಾಜ್ಯ ಮತ್ತು ಬ್ರಿಟಿಷರ ಆಡಳಿತ ಮುಂದುವರಿದು ದ್ವಿಆಡಳಿತ ನೀತಿಯನ್ನು ಅನುವುಗೊಂಡಿತ್ತು. ಇದರಲ್ಲಿ ಹೆಚ್ಚಿನ ಬಲ ಬ್ರಿಟಿಷರದೇ ಆಗಿದ್ದರಿಂದ ಸ್ಥಳೀಯ ಪಾಳೆಗಾರರ ಸ್ವಾತಂತ್ರ್ಯಕ್ಕೆ ಕುಂದುಂಟಾಯಿತು ಎಂಬುದು ಮುಂದಿನ ಚರಿತ್ರೆಯಲ್ಲಿ ಕಂಡುಬರುತ್ತದೆ. ಮುಮ್ಮಡಿ ಕೃಷ್ಣರಾಜ ಒಡೆಯರು ೧೮೦೦-೧೮೯೧ ಮೈಸೂರು ರಾಜ್ಯದ ಸಿಂಹಾಸನವೇರಿದಾಗಿ ರಾಜಪ್ರತಿನಿಧಿಯಾಗಿ ದಿವಾನ್ ಪೂರ್ಣಯ್ಯನವರು ರಾಜ್ಯಾಡಳಿತವನ್ನು ನೋಡಿಕೊಂಡರು. ಬ್ರಿಟಿಷ ರೆಸಿಡೆಂಟುಗಳು ಅಧಿಕಾರ ಸೂತ್ರ ನೀಡುವುದಾದರು ಪ್ರಥಮ ರೆಸಿಡೆಂಟ್ ಬ್ಯಾರಿಕ್ಲೋಸನು ಸಹಾಯಕ ಸೈನಿಕ ನೀತಿಗೆ ಮೈಸೂರು ಒಡೆಯರಿಂದ ಸಹಿ ಪಡೆದು ಪ್ರತಿಜಿಲ್ಲೆಯಲ್ಲಿಯೂ ಸೈನಿಕ ಠಾಣೆಗಳನ್ನು ಪ್ರಾರಂಭಿಸಿದರು. ಕೋಲಾರ ಮತ್ತು ಅದರ ಉಪಭಾಗವಾದ ನಂದಿದುರ್ಗದಲ್ಲಿ ಸೈನಿಕ ಪಡೆಗಳು ಇಟ್ಟು ಸೈನಿಕ ಠಾಣೆಗಳನ್ನು ಪ್ರಾರಂಭಿಸಿದರು ಎಂದು ಗೆಜೆಟಿಯರನಲ್ಲಿ ತಿಳಿಸಿದೆ. ಇದನ್ನೆ ಜಗನ್ನಾಥಪ್ರಕಾಶರವರು ಹೇಳಿದ್ದಾರೆ.[೯] ಸ್ಥಳೀಯ ಆಡಳಿತಕ್ಕಾಗಿ ಬ್ರಿಟಿಷರೇ ನಿರ್ಧರಿಸಿದ ವ್ಯಕ್ತಿಗಳನ್ನು ಆಯ್ಕೆ ಮಾಡಿಲಾಗಿತ್ತು ಮತ್ತು ಅವರು ಶಿಸ್ತುಬದ್ಧತೆಗಳ ಮೂಲಕ ಕಾರ್ಯ ನಿರ್ವಹಿಸುವಂತಾಯಿತು.

ಓೀಗೆ ಕೋಲಾರ ಪ್ರದೇಶದಲ್ಲಿ ವಸಾಹತುಶಾಹಿಗಳ ಆಗಮನ ಮತ್ತು ಅಧಿಕಾರ ವಿಸ್ತರಣೆ ಉಂಟಾಗುತ್ತದೆ. ಇದಾದ ನಂತರ ಬ್ರಿಟಿಷರು ತಮ್ಮ ವ್ಯಾಪಾರ-ವಾಣಿಜ್ಯ ಅಭಿವೃದ್ಧಿಗೆ ಮತ್ತು

ಆಡಳಿತವನ್ನು ಸರಳವಾಗಿಸಲು ಅನೇಕ ಸುಧಾರಣೆ ಕಾರ್ಯಗಳು ಕೈಗೊಂಡರು ಎಂಬುದು ಅಧ್ಯಯನದ ಎರಡನೇ ಭಾಗದಲ್ಲಿ ತಿಳಿಸಲಾಗಿದೆ.

೨.೧. ವಸಾಹತುಶಾಹಿ ಆಡಳಿತ ಅಭಿವೃದ್ಧಿ ಕಾರ್ಯಗಳು

ಬ್ರಿಟಿಷರ ಆಡಳಿತ ಚರಿತ್ರೆ ಕೇವಲ ಒಂದು ದೃಷ್ಟಿಕೋನವಲ್ಲದೆ, ಅದು ಅನೇಕ ದೃಷ್ಟಿಕೋನಗಳ ಚರಿತ್ರೆಯನ್ನು ಹೊಂದಿದೆ. ಅಂದರೆ ರಾಜಕೀಯ ವಿಸ್ತರಣೆಯೊಂದಿಗೆ ಆಡಳಿತ ಅಭಿವೃದ್ಧಿ ಕಾರ್ಯಗಳು, ಆರ್ಥಿಕಾಭಿವೃದ್ಧಿ ಕಾರ್ಯಗಳು ಕಂಡುಬರುತ್ತವೆ. ಈ ಎಲ್ಲ ಬೆಳವಣಿಗೆಗಳು ಯುರೋಪನ ಸಂಸ್ಕೃತಿ, ಸಂಪ್ರದಾಯದ ಲಕ್ಷಣಗಳಲ್ಲಿ ಪ್ರತಿಬಿಂಬಿಸುತ್ತವೆ ಎಂದರೆ ಅತಿಶಯೋಕ್ತಿಯೇನಿಲ್ಲ. ಇವು ಆಧುನಿಕ ಕಾಲಕ್ಕೆ ಒಂದು ರೀತಿಯಲ್ಲಿ ಉತ್ತಮವಾಗಿದ್ದವು. ಮೌಢ್ಯತೆ, ಅವೈಜ್ಞಾನಿಕ ಸಂಪ್ರದಾಯಗಳನ್ನು ಹೊಂದಿದ್ದ ಭಾರತೀಯ ಸಮಾಜವು ಸುಧಾರಣೆಯಾಗಲು ನಾಂದಿ ಉಂಟಾಯಿತು. ವಸಾಹತುಶಾಹಿಗಳಿಂದ ರಸ್ತೆ ಅಭಿವೃದ್ಧಿ, ರೈಲ್ವೆ ನಿರ್ಮಾಣ, ನೀರಾವರಿ ಅಭಿವೃದ್ಧಿ ಕೈಗಾರಿಕೆಗಳ ಬೆಳವಣಿಗೆ, ಗಣಿಗಾರಿಕೆ ಬೆಳವಣಿಗೆಗಳು ಉಂಟಾದವು. ಇದಷ್ಟೆ ಅಲ್ಲದೆ ಉತ್ತಮ ಆಡಳಿತ ಪದ್ಧತಿಗಳು ಕಂಡುಬಂದವು.

ಕೋಲಾರ ಜಿಲ್ಲೆಯಲ್ಲಿ ಈ ಎಲ್ಲ ಲಕ್ಷಣಗಳು ೧೯ನೇ ಶತಮಾನದ ಅಂತ್ಯಭಾಗ ಮತ್ತು ೨೦ನೇ ಶತಮಾನದ ಮೊದಲಾರ್ಧ ಭಾಗದಲ್ಲಿ ಕಂಡುಬಂದಿದೆ. ೧೮೬೪ರಲ್ಲಿ ಬೆಂಗಳೂರುನಿಂದ ಮದ್ರಾಸ ಕಡೆಗೆ ರೈಲ್ವೆ ಮಾರ್ಗ ನಿರ್ಮಿಸಲಾಯಿತು. ಇದು ಕೋಲಾರ ಪ್ರದೇಶದ ಮೂಲಕ ಸಾಗಿಹೋಗಿದೆ. ಇದರಿಂದ ಈ ಎರಡು ರಾಜ್ಯಗಳ ನಡುವೆ ಸಂಪರ್ಕ ಉಂಟಾಗುವುದಲ್ಲದೆ ಸಂಸ್ಕೃತಿ ಸಮ್ಮಿಲನ ಮತ್ತು ವ್ಯಾಪಾರ-ವಾಣಿಜ್ಯವು ಉತ್ತಮವಾಗಲು ನೆರವಾಯಿತು. ಇದೇ ರೈಲ್ವೆ ಲೈನ್ ಕೋಲಾರದ ಚಿನ್ನದ ಗಣಿಗೆ ಸಂಪರ್ಕ ಕಲ್ಪಿಸಲಾಗಿದೆ. ಅಂದರೆ ಕೋಲಾರದಿಂದ ಬೌರಿಂಗಪೇಟೆಗೆ ನ್ಯಾರೋಗೇಜ್ ಲೈನ್ ನಿರ್ಮಿಸಲಾಗಿದೆ (೧೯೧೩) ಚಿಕ್ಕಬಳ್ಳಾಪುರದಿಂದ ಯಲಹಂಕದವರೆಗೆ ಮೊದಲಿಗೆ ರೈಲ್ವೆ ಲೈನ ನಿರ್ಮಾಣವಾಗಿ (೧೯೧೫) ನಂತರ ೧೯೧೮ರ ವೇಳೆಗೆ ಬೆಂಗಳೂರಿಗೆ ಸಂಪರ್ಕ ಕಲ್ಪಿಸಲಾಯಿತು ಎಂದು ಗೆಜೆಟಿಯರನಲ್ಲಿ ತಿಳಿಸಿದೆ.[೧೦] ಇದು ಸರ್.ಎಂ. ವಿಶ್ವೇಶ್ವರಯ್ಯನವರ ದಿವಾನಗಿರಿಯಲ್ಲಿ ಹೆಚ್ಚಿನ ಅಭಿವೃದ್ಧಿಗೊಂಡಿತು ಎಂದು ಸಂಪಂಗಿರಾವರವರು ಹೇಳಿದ್ದಾರೆ.[೧೧] ಬೆಂಗಳೂರುನಿಂದ ಬಳ್ಳಾರಿ ಪ್ರದೇಶದ ಗುಂತಕಲ್ಲು ರೈಲ್ವೆಲೈನ್ ನಿರ್ಮಾಣವಾಗಿ, ಅದು ಕೋಲಾರದ ಗೌರಿಬಿದನೂರು ತಾಲೂಕಿನಲ್ಲಿ ಹಾದುಹೋಗಿದೆ ಎಂದು ಕನ್ನಡ ವಿಶ್ವಕೋಶದಲ್ಲಿ ತಿಳಿಸಿದೆ. ೧೮೮೧ರಿಂದ ಕೋಲಾರದ ಚಿನ್ನದ ಗಣಿ ಕಾರ್ಯ ಅಭಿವೃದ್ಧಿಯತ್ತ ಸಾಗಿದೆ. ಇದರಿಂದ ಅನೇಕರಿಗೆ ಉದ್ಯೋಗಗಳು ದೊರೆಯಿತು ಎಂದು ಗೆಜೆಟಿಯರನಲ್ಲಿ ತಿಳಿಸಿದೆ. ಎಂ. ಶೇಷಾದ್ರಿ ಮತ್ತು ಬೌರಿಂಗರ ಕಾಲದಲ್ಲಿ ಈ ಬೆಳವಣಿಗೆ ಇನ್ನಷ್ಟು ಬೆಳೆಯಿತು.[೧೨] ದಿವಾನ ಪೂರ್ಣಯ್ಯನವರು ಕೋಲಾರದ ಚಿತ್ರಾವತಿ ನದಿಗೆ ಆಣೆಕಟ್ಟೆಯನ್ನು ನಿರ್ಮಿಸಿದರು, ರಾಮಸಮುದ್ರದ ಕೆರೆಗೆ ಕಟ್ಟೆ ದುರಸ್ತಿಗೊಳಿಸಿದರು. ಬೆಂಗಳೂರು ಮತ್ತು ಚಿಕ್ಕಬಳ್ಳಾಪುರದ ನಡುವೆ ಹೆದ್ದಾರಿ ನವೀಕರಿಸಲಾಯಿತು ಎಂದು ಎಚ್.ಎಂ. ನಾಯಕರು ಹೇಳಿದ್ದಾರೆ.[೧೩] ೧೯೬೪ರಲ್ಲಿ ರಾಬರ್ಟ್‌ಸನ್‌ರ ನೇತೃತ್ವದಲ್ಲಿ ಕೆ.ಜಿ.ಎಫ್.ನಲ್ಲಿ ರಾಬರ್ಟ್‌ಸನ್‌ಪೇಟೆ ನಿರ್ಮಾಣವಾಯಿತು ಎಂದು ವಿಶ್ವಕೋಶದಲ್ಲಿ ತಿಳಿಸಿದೆ.

ಆಡಳಿತ ದೃಷ್ಟಿಯಿಂದ ನೋಡಿದಾಗ ಕೋಲಾರ ಪ್ರದೇಶದಲ್ಲಿ ಹತ್ತು ಹಲವು ಸುಧಾರಣೆಗಳನ್ನು ಕಂಡಿತು. ೧೭೯೯-೧೮೧೧ರಲ್ಲಿ ಬೆಂಗಳೂರು ಸುಬೇದಾರರು ಕೋಲಾರ ಪ್ರದೇಶದಲ್ಲಿ ಆಡಳಿತ ಮಾಡುತ್ತಿದ್ದರು.[೧೪] ೧೮೮೧ರಲ್ಲಿ ಮೈಸೂರು ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲಕ್ಕೆ ಬೆಂಗಳೂರು ಮತ್ತು ಕೋಲಾರ ಜಿಲ್ಲೆಗಳಿಗೆ ಒಬ್ಬ ಫೌಜುದಾರಿ ವ್ಯಾಪ್ತಿಗೆ ಸೇರಿತು. ೧೮೩೪ರಲ್ಲಿ ಮೈಸೂರು ಪ್ರಾಂತ್ಯವನ್ನು ನಾಲ್ಕು ವಿಭಾಗಗಳನ್ನಾಗಿ ಮಾರ್ಪಡಿಸಿ ಅದಕ್ಕೆ ಓರ್ವ ಯೂರೋಪಿಯನ್ ಸೂಪರಿನ್‌ಟೆಂಡೆಂಟ್ ಅಧೀನದಲ್ಲಿ ಕಾರ್ಯನಿರ್ವಹಿಸಿತು. (ಬೆಂಗಳೂರು ನಗರ, ಚಿತ್ರದುರ್ಗ) ಕೋಲಾರ ಪ್ರದೇಶವು ಬೆಂಗಳೂರು ವಿಭಾಗಕ್ಕೆ ಸೇರ್ಪಡೆಯಾಯಿತು. ೧೮೬೨-೬೩ರ ಅವಧಿಯಲ್ಲಿ ಮೈಸೂರು ರಾಜ್ಯವನ್ನು ಎಂಟು ಜಿಲ್ಲೆಗಳನ್ನಾಗಿ ಮಾಡಿದಾಗ ನಂದಿದುರ್ಗ ಡಿವಿಜನ್‌ಗೆ ಕೋಲಾರವನ್ನು ಸೇರಿಸಲಾಯಿತು. ೧೮೬೯ರಲ್ಲಿ ಇದಕ್ಕೆ ಚೀಫ್ ಕಮೀಷನರ್‌ನನ್ನು ನೇಮಿಸಲಾಯಿತು. ೧೮೭೯ರಲ್ಲಿ ಕಮೀಷನರ್ ಹುದ್ದೆ ರದ್ದುಗೊಳಿಸಿ ಜಿಲ್ಲೆಗಳಿಗೆ ಜಿಲ್ಲಾಧಿಕಾರಿಗಳನ್ನು, ಕಂದಾಯ ಉಪವಿಭಾಗಗಳಿಗೆ ಅಸಿಸ್ಟೆಂಟ್ ಕಮಿಷನರ್‌ಗಳನ್ನು, ತಾಲೂಕಗಳಿಗೆ ಅಮಲ್ದಾರರನ್ನು ನೇಮಿಸಿ ಹೊಸ ಪದ್ಧತಿಯನ್ನು ಜಾರಿಗೊಳಿಸಲಾಯಿತು ಎಂದು ಎನ್. ಜಗನ್ನಾಥ ಪ್ರಕಾಶನವರು ಗೆಜೆಟಿಯರನ್ನು ಆಧರಿಸಿ ಹೇಳಿದ್ದಾರೆ. ೧೯೦೩ರಲ್ಲಿ ಕೋಲಾರ ಜಿಲ್ಲೆಯಲ್ಲಿ ಮೂರು ಉಪವಿಭಾಗಗಳಾಗಿ ಪ್ರಾರಂಭಿಸಲಾಯಿತು. ಕೋಲಾರ ಕೇಂದ್ರಸ್ಥಳವಾಗಿರುವ ಕೋಲಾರ ವಿಭಾಗಕ್ಕೆ ಚಿಂತಾಮಣಿ, ಕೋಲಾರ, ಶ್ರೀನಿವಾಸಪುರ, ಚಿಕ್ಕಬಳ್ಳಾಪುರ ಕೇಂದ್ರಸ್ಥಳಕ್ಕೆ ಗೌರಿಬಿದನೂರು, ಚಿಕ್ಕಬಳ್ಳಾಪುರ, ಬಾಗೇಪಲ್ಲಿ ಮತ್ತು ಕೋಲಾರದ ಇನ್ನೊಂದು ವಿಭಾಗವಾದ ಬೌರಿಂಗಪೇಟೆ, ಮಾಲೂರು, ಮುಳಬಾಗಿಲು ವಿಂಗಡಿಸಿ ರಚಿಸಲಾಯಿತು. ೧೯೨೨ರಲ್ಲಿ ಕೋಲಾರ ಜಿಲ್ಲೆಯನ್ನು ಮತ್ತೆ ಎರಡು ಉಪವಿಭಾಗಗಳಾಗಿ ಮಾಡಲಾಯಿತು. ಕೋಲಾರ ಕೇಂದ್ರಸ್ಥಾನವಾಗಿ ಅದರ ಉಪವಿಭಾಗ ಚಿಕ್ಕಬಳ್ಳಾಪುರವನ್ನು ಮಾಡಲಾಯಿತು. ಕೋಲಾರ ವಿಭಾಗಕ್ಕೆ ಆರು ತಾಲೂಕುಗಳನ್ನು ಸೇರಿಸಲಾಯಿತು. ಅವು ಚಿಂತಾಮಣಿ, ಮಾಲೂರು, ಶ್ರೀನಿವಾಸಪುರ, ಮುಳಬಾಗಿಲು, ಬಂಗಾರಪೇಟೆ, ಚಿಕ್ಕಬಳ್ಳಾಪುರ ಉಪವಿಭಾಗಕ್ಕೆ ಐದು ತಾಲೂಕುಗಳು ಸೇರಿಸಲಾಯಿತು. ಅವು ಗೌರಿಬಿದನೂರು, ಶಿಡ್ಲಘಟ್ಟ, ಬಾಗೆಪಲ್ಲಿ, ಗುಡಿಬಂಡೆ ಸೇರಿಸಲಾಯಿತು.

ಜಿಲ್ಲೆಯ ಸ್ಥಳೀಯ ಸ್ವಯಂ ಆಡಳಿತ ಸಂಸ್ಥೆಗಳಲ್ಲಿ ಪುರಸಭೆಗಳೇ ಹಳೆಯವು ೧೮೫೦ರಲ್ಲಿ ಬ್ರಿಟಿಷ್ ಆಳ್ವಿಕೆಯು ಭಾರತ ಸರ್ಕಾರವು ಇಂತಹ ಸಂಸ್ಥೆಗಳ ಶಾಸನವೊಂದರಲ್ಲಿ ಹೊರಡಿಸಿದ್ದು ಅದರ ಆಧಾರದ ಮೇಲೆ ಮಹಾರಾಜರ ಸರ್ಕಾರ ೧೮೬೨ರಲ್ಲಿ ಸ್ಥಳೀಯ ಸಂಸ್ಥೆಗಳ ನವೀಕರಿಸಲಿಕ್ಕೆ ರಚನೆಗೆ ಆದೇಶ ಹೊರಡಿಸಿತು. ಇದರ ಅನ್ವಯ ೧೮೬೪-೬೫ರಲ್ಲಿ ಜಿಲ್ಲಾ ಕೇಂದ್ರವಾದ ಕೋಲಾರದಲ್ಲಿ ಪೌರಸಮಿತಿಯನ್ನು ಪ್ರಾರಂಭಿಸಲಾಯಿತು. ೧೮೮೧-೮೨ ರಿಂದ ೧೮೮೫-೮೬ರ ಅವಧಿಯಲ್ಲಿ ಮೈಸೂರು ಆಡಳಿತ ವರದಿ ಪ್ರಕಾರ ಜಿಲ್ಲೆಯಲ್ಲಿ ೧೩ ಪುರಸಭೆಗಳು ಕೆಲಸ ಮಾಡುತ್ತಿದ್ದವು. ಕೋಲಾರ, ರಾಬರ್ಟ್‌ಸನ್‌ಪೇಟೆ, ಬಂಗಾರುಪೇಟೆ, ಮಾಲೂರು, ಮುಳಬಾಗಿಲು, ಶ್ರೀನಿವಾಸಪುರ, ಚಿಂತಾಮಣಿ, ಶಿಡ್ಲಘಟ್ಟ, ಚಿಕ್ಕಬಳ್ಳಾಪುರ, ಗೌರಿಬಿದನೂರು, ಮರಾಕೇನಹಳ್ಳಿ, ಬಾಗೇಪಲ್ಲಿ, ಗುಡಿಬಂಡೆಗಳಲ್ಲಿ ಪುರಸಭೆಗಳಿದ್ದರೆ, ಕೆ.ಜಿ.ಎಫ್.ನಲ್ಲಿ ಸ್ಯಾನಿಟರಿ ಬೋರ್ಡ್ ಕಾರ್ಯನಿರ್ವಹಿಸುತ್ತಿದ್ದವು.

ಮೈಸೂರು ಅರಸರ ಆಳ್ವಿಕೆಯಲ್ಲಿ ೧೯೧೯ರ ಸುಮಾರಿಗೆ ಗ್ರಾಮಪಂಚಾಯಿತಿ ವ್ಯವಸ್ಥೆಗೆ ಮರುಜೀವ ಬಂತು. ಸ್ವಾತಂತ್ರ್ಯ ನಂತರ ಪಂಚಾಯತ ವ್ಯವಸ್ಥೆಗೆ ಹೆಚ್ಚಿನ ಬಲ ತುಂಬಲು ಸಂವಿಧಾನದಲ್ಲಿ ಗ್ರಾಮಸ್ವರಾಜ್ಯದ ವಿಷಯವನ್ನು ಸಂವಿಧಾನದ ನಲ್ವತ್ತನೇ ವಿಧಿಯಂತೆ ಒಪ್ಪಿಕೊಳ್ಳಲಾಯಿತು. ೧೯೫೯ರಲ್ಲಿ ಮೈಸೂರು ಗ್ರಾಮಪಂಚಾಯಿತಿಗಳು ಮತ್ತು ಸ್ಥಳೀಯ ಸಂಸ್ಥೆಗಳ ಕಾಯ್ದೆ ಜಾರಿಗೆ ಬಂತು. ಪಂಚಾಯ್ತಿ ಆಡಳಿತದ ವ್ಯವಸ್ಥೆಯಲ್ಲಿ ಮೂರು ಹಂತಗಳಲ್ಲಿ ರಚನೆಗೊಂಡವು. ಅವುಗಳಲ್ಲಿ ಗ್ರಾಮಪಂಚಾಯಿತಿ, ತಾಲೂಕು ಅಭಿವೃದ್ಧಿ ಮಂಡಲಿ ಮತ್ತು ಜಿಲ್ಲಾ ಅಭಿವೃದ್ಧಿ ಸಮಿತಿಗಳಾಗಿ ಅಸ್ತಿತ್ವಕ್ಕೆ ಬಂದವು.

* * *

ಕ್ರಿ.ಶ. ೧೯೪೭ರಲ್ಲಿ ಭಾರತಕ್ಕೆ ಸ್ವಾತಂತ್ರ್ಯ ಬಂದಾಗ ವಸಾಹತುಶಾಹಿ ಚರಿತ್ರೆ ಮುಕ್ತಾಯವಾಗುತ್ತದೆ. ಭಾರತೀಯರಿಗೆ ಸ್ವತಂತ್ರ್ಯ ಸಂವಿದಾನವನ್ನು ಅಳವಡಿಸಿಕೊಳ್ಳುವುದರ ಮೂಲಕ ವಸಾಹತುಗಳನ್ನು ಆಡಳಿತ ನೀತಿಗಳಿಂದ ಮುಕ್ತತೆಯನ್ನು ಹೊಂದುತ್ತಾರೆ. ಆದುದರಿಂದ ಕ್ರಿ.ಶ. ೧೯೪೭ ಸ್ವಾತಂತ್ರ್ಯ ಗಳಿಸುವ ಸಂದರ್ಭಕ್ಕೆ ಪ್ರಸ್ತುತ ಅಧ್ಯಾಯನವನ್ನು ಮುಕ್ತಾಯಗೊಳಿಸಿದೆ. ಮುಂದಿನ ಅಧ್ಯಯನದಲ್ಲಿ ಸ್ವಾತಂತ್ರ್ಯ ಹೋರಾಟದ ವಿವಿಧ ಆಯಾಮಗಳಾದ ಕೆಳವರ್ಗದ ಜನರ ಚರಿತ್ರೆ, ದಲಿತರ ಚರಿತ್ರೆ, ಮಹಿಳಾ ಚರಿತ್ರೆ ಹಾಗೂ ರೈತರು, ಕಾರ್ಮಿಕರ ಚರಿತ್ರೆ ಎಂಬುದಾಗಿ ವಿಂಗಡಿಸಿ ವಿಶ್ಲೇಷಿಸುವುದಾಗಿದೆ.

೩.೨. ದ್ವಿತೀಯ ಹಂತ ಸ್ವಾತಂತ್ರ್ಯ ಹೋರಾಟಗಳು

೨೦ನೇ ಶತಮಾನದ ಚರಿತ್ರೆ ಲೇಖನಶಾಸ್ತ್ರದಲ್ಲಿ ಪ್ರಮುಖ ಲಕ್ಷಣವಾಗಿ ಕಂಡುಬಂದಿರುವ ರಾಷ್ಟ್ರೀಯತೆ ಸ್ವಾತಂತ್ರ್ಯ ಹೋರಾಟದ ಚರಿತ್ರೆ ಪ್ರಾಮುಖ್ಯತೆಯನ್ನು ಹೊಂದಿದೆ. ಕೋಲಾರ ಪ್ರದೇಶದಲ್ಲಿ ಅನೇಕ ಸ್ವತಂತ್ರ್ಯ ಹೋರಾಟಗಳು ನಡೆದಿವೆ. ಅವುಗಳನ್ನು ಈ ಕೆಳಕಂಡಂತೆ ಹೆಸರಿಸಿ ವಿವರಿಸಲಾಗಿದೆ.

೧. ಸ್ವದೇಶಿ ಚಳವಳಿ ೨. ಗಾಂಧೀಜಿ ಪ್ರವಾಸ ೩. ವಿದುರಾಶ್ವತ್ಥ ದುರಂತ ೪. ಕೆ.ಜಿ.ಎಫ್‌ನಲ್ಲಿ ಸ್ವತಂತ್ರ್ಯ ಸತ್ಯಾಗ್ರಹ ೫. ಕ್ವಿಟ್‌ಇಂಡಿಯಾ ಚಳವಳಿ ೬. ಶಿಡ್ಲಘಟ್ಟದ ಸ್ವತಂತ್ರ್ಯ ಚಳವಳಿ ೭. ಮೈಸೂರು ಚಲೋ ಚಳವಳಿ

ಇಂತಹ ಚರಿತ್ರೆಯನ್ನು ಅಧ್ಯಯನ ಮಾಡಲು ಅನೇಕ ಕೃತಿಗಳು, ಲೇಖನಗಳು ಲಭ್ಯವಾಗಿವೆ. ಅವುಗಳಲ್ಲಿ ಮುಖ್ಯವಾಗಿ ಈ ಕೆಳಕಂಡಂತೆ ತಿಳಿಸಲಾಗಿದೆ.

ಸೂರ್ಯನಾಥ ಕಾಮತ್‌ರು ಸಂಪಾದಿಸಿರುವ 'ಸ್ವತಂತ್ರ್ಯ ಸಂಗ್ರಾಮದ ಸ್ಮೃತಿಗಳು ಸಂಪುಟ ೧ ಮತ್ತು ೨' ಎಂಬ ಕೃತಿಯಲ್ಲಿ ಕೋಲಾರ ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಾರರ ಅನುಭವದ ಹೇಳಿಕೆಗಳನ್ನು ಸಂಗ್ರಹಿಸಲಾಗಿದೆ. ಇದರಿಂದಾಗಿ ಕೋಲಾರದ ಸ್ವತಂತ್ರ್ಯ ಹೋರಾಟದ ಘಟನೆಗಳು ತಿಳಿಯಲು ಸಹಾಯಕವಾಗಿದೆ. ಇದೇ ರೀತಿ ಚಿಕ್ಕಬಳ್ಳಾಪುರದ ಹಿರಿಯ ಸ್ವತಂತ್ರ್ಯ ಹೋರಾಟಗಾರ ಕೆ.

ವೆಂಕಟಕೃಷ್ಣಪ್ಪನವರು ಬರೆದಿರುವ 'ಕೋಲಾರ ಜಿಲ್ಲೆಯ ಸ್ವತಂತ್ರ್ಯ ಹೋರಾಟಗಾರರು' (೧೯೯೮) ಹಾಗೂ 'ಸ್ವತಂತ್ರ್ಯ ಹೋರಾಟದ ನೆನಪುಗಳು' (೧೯೯೩) ಎಂಬ ಕೃತಿಗಳಿಂದ ಕೋಲಾರ ಜಿಲ್ಲೆಯ ಸ್ವತಂತ್ರ್ಯ ಹೋರಾಟಗಾರರ ಮಾಹಿತಿಯೊಂದಿಗೆ ಪ್ರಮುಖ ಘಟನೆಗಳನ್ನು ವಿವರಿಸಲಾಗಿದೆ. ಇದರಿಂದ ಸ್ವತಂತ್ರ್ಯ ಹೋರಾಟಕ್ಕೆ ಚಿನ್ನದ ನಾಡಿನ ಕೊಡುಗೆಯನ್ನು ಸ್ಮರಿಸಲಾಗಿದೆ. ಇದಲ್ಲದೆ ಕೆ. ವೆಂಕಟಕೃಷ್ಣಪ್ಪನವರು ಈ ಕುರಿತಾಗಿ ಬರೆದ 'ಲಾವಣಿ' (೧೯೯೭), ಸ್ವತಂತ್ರ್ಯ ಹೋರಾಟದ ಅಮರಗೀತೆಯಂತಿದ್ದು ಅಂದಿನ ಸಮಾಜದ ಸ್ಥಿತಿಗತಿಗಳನ್ನು ತಿಳಿಸುತ್ತದೆ. ಕೆ. ಅಭಿಶಂಕರರವರು ಸಂಪಾದಿಸಿರುವ ಕೋಲಾರ ಜಿಲ್ಲೆಯ ಗೆಜೆಟಿಯರ (೧೯೬೮) ಮತ್ತು ಮೈಸೂರು ರಾಜ್ಯದ ಗೆಜೆಟಿಯರುಗಳಿಂದ ಅಂದಿನ ಆಡಳಿತದ ಬೆಳವಣಿಗೆ, ಸ್ವತಂತ್ರ್ಯ ಹೋರಾಟಗಳು, ಆರ್ಥಿಕ ಹಾಗೂ ಸಾಮಾಜಿಕ ಸಂಗತಿಗಳು ವ್ಯಕ್ತಪಡಿಸುತ್ತವೆ. ಜಾನಕಿ ನಾಯರ್‌ರವರು ಬರೆದಿರುವ 'ಮಿನರ್ಸ್ ಅಂಡ್ ಮಿಲ್‌ಹ್ಯಾಂಡ್ಸ್' (೧೯೯೮) ಕೃತಿಯಿಂದ ಕೋಲಾರದ ಚಿನ್ನದ ಗಣಿಯ ಕಾರ್ಮಿಕರು, ಚಿನ್ನದ ಗಣಿ ಇತಿಹಾಸ, ಕೆಳವರ್ಗದವರ ಸ್ಥಿತಿಗಳು ಹಾಗೂ ಅವರ ಹೋರಾಟಗಳನ್ನು ವ್ಯಕ್ತಪಡಿಸುತ್ತದೆ. ಇದೇ ರೀತಿ ಎಂ. ಗೋವಿಂದಪ್ಪನವರ ಸಂಶೋಧನೆ ಕೃತಿಯಾದ 'ಹಿಸ್ಟರಿ ಆಫ್ ಮೈನಿಂಗ್ ಇನ್ ಪ್ರಿನ್ಸಿಲೀ ಮೈಸೂರು ವಿತ್ ಸ್ಪೆಷಲ್ ರೆಫರೆನ್ಸ್ ಟು ಕೆ.ಜಿ.ಎಫ್.' (೨೦೦೨) ಎಂಬ ಕೃತಿಯು ೧೮೮೧ರಿಂದ ೧೯೫೬ರವರೆಗೆ ಸರ್ಕಾರ ಕೈಗೊಂಡ ಅಭಿವೃದ್ಧಿಗಳು ಮತ್ತು ಚಿನ್ನದ ಗಣಿಯ ಚರಿತ್ರೆ ಮತ್ತು ಮೈಸೂರು ರಾಜ್ಯದ ಆಡಳಿತವನ್ನು ವ್ಯಕ್ತಪಡಿಸುತ್ತದೆ. ಫ್ರಾನ್ಸಿಸ್ ಬುಕಾನನ್ ಅವರು ಬರೆದಿರುವ 'ಎ ಜರ್ನಿ ಫ್ರಮ್ ಮದ್ರಾಸ್ ಥ್ರೂ ದಿ ಮೈಸೂರು' ಸಂಪುಟ ೧ ಮತ್ತು ೨ (೧೯೯೯)ಗಳಿಂದ ಅಂದಿನ ಆರ್ಥಿಕ ಸ್ಥಿತಿಗತಿಗಳು ತಿಳಿಯಲು ಸಾಧ್ಯವಾಗಿದೆ. ಎಸ್. ಚಂದ್ರಶೇಖರರವರು ಬರೆದಿರುವ 'ದಕ್ಷಿಣ ಭಾರತ, ವಸಾಹತುಶಾಹಿ, ರಾಷ್ಟ್ರೀಯತೆ ಮತ್ತು ಸಂಘರ್ಷ' (೨೦೦೦) ಎಂಬ ಕೃತಿಯಲ್ಲಿ ದಕ್ಷಿಣ ಭಾರತೀಯ ಅಂದರೆ, ಮದ್ರಾಸ ಮತ್ತು ಮೈಸೂರು ಸಂಸ್ಥಾನ ಸಮಾಜದ ಜನರ ಹೋರಾಟಗಳನ್ನು ಕುರಿತು ತಿಳಿಸುತ್ತದೆ. ಇದು ಕೋಲಾರ ಜಿಲ್ಲೆಯಲ್ಲಿನ ಲಕ್ಷಣಗಳನ್ನು ಹೊಂದಿದೆ. ಶ್ರೀ ಸಿದ್ದವ್ವನಹಳ್ಳಿ ಕೃಷ್ಣಶರ್ಮರವರು ಬರೆದಿರುವ 'ಗಾಂಧೀ ಮತ್ತು ಕರ್ನಾಟಕ' (೧೯೭೦) ಎಂಬ ಕೃತಿಯಲ್ಲಿ ಕೋಲಾರ ಜಿಲ್ಲೆಯಲ್ಲಿ ಗಾಂಧೀಜಿಯವರ ಪ್ರವಾಸ ಮತ್ತು ಸ್ವತಂತ್ರ್ಯ ಚಳವಳಿ ಚುರುಕಾಗಿಸಿದ ವಿಷಯವು ವ್ಯಕ್ತವಾಗುತ್ತದೆ. ಎಸ್. ಚಂದ್ರಶೇಖರರವರು ಬರೆದಿರುವ 'ಕರ್ನಾಟಕ ಚರಿತ್ರೆ ಸಂಪುಟ-೭', ಬಿ. ಜಯದೇವಪ್ಪನವರು ಬರೆದಿರುವ 'ಚಿಂತಾಮಣಿ ತಾಲೂಕ ದರ್ಶನ' (೧೯೮೬), ಎಂ.ಎಸ್. ನರಸಿಂಹಮೂರ್ತಿಯವರು ಬರೆದಿರುವ 'ಮಾಲೂರು ತಾಲೂಕ ದರ್ಶನ' (೧೯೮೭), ಡಿ. ಲಿಂಗಯ್ಯನವರು ಬರೆದಿರುವ 'ಶಿವಪುರ ಧ್ವಜಸತ್ಯಾಗ್ರಹ' (೧೯೭೯), ಗೊರೂರು ರಾಮಸ್ವಾಮಿ ಅಯ್ಯಂಗಾರರು ಬರೆದಿರುವ 'ಭಾರತದ ಭಾಗ್ಯವಿಧಾತ' (೧೯೫೫), ಎನ್. ಜಗನ್ನಾಥ ಪ್ರಕಾಶನರವರು ಬರೆದಿರುವ 'ನಂದಿಬೆಟ್ಟ' (೧೯೯೩) ಮತ್ತು 'ಕೋಲಾರ ಸಿರಿಸಂಪುಟ', ವೇಮಗಲ್ ಸೋಮಶೇಖರ ಬರೆದಿರುವ 'ಕೋಲಾರ ಜಿಲ್ಲೆಯಲ್ಲಿ ಮಹಾತ್ಮಗಾಂಧೀಜಿ' (೨೦೦೪), ಬಿ.ಎಸ್. ಮಹಾಬಲೇಶ್ವರಪ್ಪನವರು ಬರೆದಿರುವ 'ಈಸೂರಿನ ವೀರಗಾಥೆ' (೨೦೦೩), ಕೆ. ವೀರತಪ್ಪನವರು ಬರೆದಿರುವ 'ಮೈಸೂರು ಸಂಸ್ಥಾನದ ಸ್ವತಂತ್ರ್ಯ ಚಳವಳಿ' (೧೯೭೭) ಮುಂತಾದವು ಕೋಲಾರ ಜಿಲ್ಲೆಯ ಸ್ವತಂತ್ರ್ಯ ಹೋರಾಟದ ಚರಿತ್ರೆಯ ಕುರಿತಾಗಿ ಅಧ್ಯಯನ ಮಾಡಲು ಸಹಾಯಕವಾಗಿವೆ.

ಇವುಗಳ ಆಧಾರದ ಮೇಲೆ ಸೈದ್ಧಾಂತಿಕ ದೃಷ್ಟಿಯಲ್ಲಿ ವಿಶ್ಲೇಷಿಸಲು ಈ ಕಿರುಪ್ರಯತ್ನ ಮಾಡಲಾಗಿದೆ. ಕೋಲಾರ ಪ್ರದೇಶದ ರಾಷ್ಟ್ರೀಯ ಚಳವಳಿಗಳ ವಿಷಯ ವಿವರಿಸುವುದರ ಮುನ್ನ ಅಂದಿನ ಸಮಾಜದ ಸ್ಥಿತಿಗತಿಗಳು ಸ್ವಲ್ಪ ತಿಳಿಯುವುದು ಅಗತ್ಯವಾಗಿದೆ. ಇದಕ್ಕಾಗಿ ಹಲವು ಕೃತಿಗಳು ಹೇಳುತ್ತವೆ. ಇವುಗಳಿಂದಾಗಿ ದೇಶದ ಆರ್ಥಿಕ ವ್ಯವಸ್ಥೆ, ಸಮಾಜವನ್ನು ಗ್ರಹಿಸಲು ಸಾಧ್ಯವಾಗಿದೆ. ಅಂದರೆ ಸಮಾಜದ ಪ್ರಧಾನ ವರ್ಗವಾದ ರೈತ ಸಮುದಾಯ, ಕಾರ್ಮಿಕ ಸಮುದಾಯ, ಕೆಳವರ್ಗದ ಸಮುದಾಯವು ಪ್ರತಿಬಿಂಬಿಸುತ್ತವೆ. ಈ ಇಂತಹ ಲಕ್ಷಣಗಳು ಈ ರೀತಿ ವಿವರಿಸಲಾಗುತ್ತದೆ. ರೈತರು ಧರ್ಮಪರರು, ಸುಸಂಸ್ಕೃತರು, ಅವರಿಗೆ ರಾಜಕೀಯದ ಮೇಲೆ ಆಸಕ್ತಿ ಇಲ್ಲ ಆದರೆ ದೇಶದ ಆರ್ಥಿಕಾಭಿವೃದ್ಧಿಯಲ್ಲಿ ಅವರದು ಬಹುಪಾಲು ಶ್ರಮವಿದೆ. ಗ್ರಾಮೀಣ ಜೀವನ ಅವರಿಗೆ ಒಂದು ತೃಪ್ತಕರವಾಗಿದೆ. ಹಳ್ಳಿಹಳ್ಳಿಯು ಒಂದು ಸ್ವತಂತ್ರ್ಯ ಗಣತಂತ್ರವಾಗಿತ್ತು. ವ್ಯಾಪಾರ ಉದ್ಯೋಗ ಯಾವುದರಲ್ಲಿಯೂ ರಾಜಕೀಯ ಬಂಧನ ಇರಲಿಲ್ಲ ರೈತರಲ್ಲಿ ದುಡ್ಡು ಕಡಿಮೆ. ಆದರೆ ಅದರ ವ್ಯಾಮೋಹ ಅವರಲ್ಲಿ ಇರಲಿಲ್ಲ.[೧೫] ಧಾನ್ಯ ಹೆಚ್ಚಾಗಿತ್ತು. ಇಂತಹ ಸಮೃದ್ಧಿ ದೇಶದಲ್ಲಿ ವಿದೇಶಿಯರ ಪ್ರವೇಶದಿಂದ ಕುಂಠಿತವಾಯಿತು. ಇದು ಪ್ರಾಥಮಿಕವಾಗಿ ತಿಳಿಯದಿದ್ದರು ೨೦ನೇ ಶತಮಾನದ ವೇಳೆಗೆ ಅರಿವಾಯಿತು. ರಾಷ್ಟ್ರೀಯ ನಾಯಕರು, ಕ್ರಾಂತಿಕಾರಿಗಳು, ವೃತ್ತಪತ್ರಿಕೆಗಳು, ಸಮಾಜ ಸುಧಾರಕರು ಇದಕ್ಕೆ ಕಾರಣರಾದರು. ಮತ್ತು ಇವರ ಪ್ರಯತ್ನದಿಂದಾಗಿ ರಾಷ್ಟ್ರೀಯತೆಯು ಮೊಳೆಯಿತು. ಆದರೆ ಅನಕ್ಷರಸ್ಥರ ಬೀಡಾದ ಕೋಲಾರ ಪ್ರದೇಶದಲ್ಲಿ ರಾಷ್ಟ್ರೀಯತೆ ಬೆಳೆಯಲು ನಿಧಾನವಾಯಿತು. ಮತ್ತು ಸ್ಥಳೀಯ ಪಾಳೆಗಾರರು ಬ್ರಿಟಿಷರ ಆಮಿಷಗಳಿಗೆ ಜೋತುಬಿದ್ದುದ್ದು ಇದಕ್ಕೆ ಕಾರಣವಾಗಿದೆ.

ಈ ಜಮೀನ್ದಾರರು, ಪಾಟೇಲರು, ಶಾನುಭೋಗರು ಮುಂತಾದ ಪ್ರಬಲ ವರ್ಗದ ಜನರು ಬ್ರಿಟಿಷರ ಕೈಯಾಳುಗಳಾಗಿದ್ದರು. ಬ್ರಿಟಿಷರು ಸೈನಿಕರಲ್ಲಿ ಸ್ಥಳೀಯ ರೈತರು ಸೇರಿದ್ದರಲ್ಲದೆ, ಬ್ರಿಟಿಷ ಪೊಲೀಸರ ಅಧಿಕಾರಿಗಳಿಗೆ ಅಧೀನರಾಗಿ ಕೆಲಸ ಮಾಡುತ್ತಿದ್ದರು. ಇವರ ವಾಸಸ್ಥಳ ಅದೇ ಆಗಿತ್ತು. ಕಾಲಕ್ರಮೇಣ ಪಾಳೆಯಗಾರರ ಸ್ವತಂತ್ರ್ಯವು ಅಳಿದು ಹೋಯಿತು. ಕೆಲವರು ನಿವೃತ್ತಿ ವೇತನ ತೆಗೆದುಕೊಂಡು ವಿಶ್ರಾಂತಿ ಪಡೆದರೆ, ಕೆಲವರು ಸೈನಿಕ ಮತ್ತು ಇತರೆ ಇಲಾಖೆಗಳಲ್ಲಿ ಅಧಿಕಾರಿಗಳಾಗಿ ಜೀವನ ಸಾಗಿಸಿದರು. ಭೂಕಂದಾಯವನ್ನು ನಿಗದಿಮಾಡಿ ಅದರ ವಸೂಲಿ ಕೆಲಸವನ್ನು ಅಮೀಲ್ದಾರರಿಗೆ ನಿಯೋಜಿಸಲಾಯಿತು. ಪೊಲೀಸ ಇಲಾಖೆಯು ವ್ಯವಸ್ಥಿತವಾಗಿ ಪೊಲೀಸ ರಾಜ್ಯವಾಗಿ ಮಾರ್ಪಾಡಯಿತು. ಇದರಿಂದ ಸ್ಥಳೀಯರ ಮೇಲೆ ನಿಯಂತ್ರಣ ನೀತಿ ಬಲವಾಯಿತು. ಸ್ಥಳೀಯ ಸೈನಿಕ ಸಹಾಯದಿಂದಲೇ ದೇಶವನ್ನು ಗೆದ್ದ ಬಹು ಬುದ್ಧಿಜೀವಿಗಳು ವಸಾಹತುಶಾಹಿಗಳಾದರು ಎಂದು ಎಂ.ವಿ. ಕೃಷ್ಣರಾವ ಮತ್ತು ಎಂ. ಕೇಶವಭಟ್ಟರು ಹೇಳಿದ್ದಾರೆ.[೧೬] ದೇಶದ ಆರ್ಥಿಕ ಸಂಪತ್ತು ಅದರಲ್ಲಿ ಕೋಲಾರದ ಚಿನ್ನವೆಲ್ಲ ಇಂಗ್ಲೆಂಡಿಗೆ ಹರಿದುಹೋಯಿತು ಎಂದು ತಿಳಿಯಲು ೨೦ನೇ ಶತಮಾನದ ಗಡಿಮುಟ್ಟ ಬೇಕಾಯಿತು. ೧೮೩೧ರಿಂದ ೧೮೮೧ರವರೆಗೆ ನೇರ ಆಡಳಿತ ವಹಿಸಿಕೊಂಡ ಬ್ರಿಟಿಷರ ಆಡಳಿತ ಮಾದರಿಯಲ್ಲಿ ಇಂತಹ ಸ್ಥಿತಿ ಹೆಚ್ಚಾಗಿ ಕಂಡುಬಂತು. ೧೮೮೧ರಲ್ಲಿ ಪುನಃ ಮೈಸೂರು ರಾಜ್ಯಕ್ಕೆ ಮೈಸೂರು ಒಡೆಯರು ರಾಜರಾಣಿಯರು ಅಧಿಕಾರ ರೊಹಣವಾದರು. ಆದರೆ ಅಧಿಕಾರದ ಬಲವೆಲ್ಲ ಬ್ರಿಟಿಷರ ಅಧಿಕಾರಿಗಳಲ್ಲಿ

ಕೇಂದ್ರಿಕೃತವಾಗಿತ್ತು. ಇಂತಹ ವೇಳೆ ಕೋಲಾರದ ಮೇಲೆ ನಿಯಂತ್ರಣ ಸಾಧಿಸಲು ಅನುಕೂಲವಾಯಿತು ಎಂದು ಗೆಜೆಟಿಯರನಲ್ಲಿ ತಿಳಿಸಿದೆ. ಇದು ಜಗನ್ನಾಥ ಪ್ರಕಾಶನ, ಎಂ.ವಿ. ಕೃಷ್ಣರಾವ, ಜಾನಕಿ ನಾಯರರವರ ಅಭಿಪ್ರಾಯದಲ್ಲಿಯೂ ಸಹ ಸಹ ವ್ಯಕ್ತವಾಗುತ್ತದೆ.

ಹೀಗೆಲ್ಲ ಇರುವಾಗ ರಾಷ್ಟ್ರೀಯತೆ ಉತ್ತರ ಭಾರತದಲ್ಲೆಲ್ಲ ಹರಡಿ ಅದರ ಪ್ರಭಾವ ದಕ್ಷಿಣ ಭಾರತ ಹರಡಿದಂತೆ ಕೋಲಾರ ಪ್ರದೇಶದ ಮೇಲೆಯು ಬೀರಿತು. ಇದರಿಂದ ಚೇತರಿಕೆಗೊಂಡ ಕೋಲಾರ ಜಿಲ್ಲೆಯ ಸ್ವತಂತ್ರ್ಯವರ್ತಿಗಳು ಮತ್ತು ರೈತರು ನಾಯಕರ ಹೆಗಲಿಗೆ ಹೆಗಲು ಕೊಟ್ಟು ಮುಂದಾದರು. ಆಗ ಅವರು ಮಾಡಿದ ತ್ಯಾಗ, ಬಲಿದಾನಗಳಲ್ಲಿನ ಒಂದೊಂದು ಅಂಶವು ಕೂಡ ಕರ್ನಾಟಕದ ಪ್ರದೇಶದ ಪ್ರತಿಯೊಂದು ಜಿಲ್ಲೆಯ ಜನರು ಮೇಲೆಲ್ಲ ಸ್ಪಂದಿಸುವಂತಾದರು.[೧೬]

೧೮೮೫ರಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪ್ರಾರಂಭವಾಯಿತು. ಇದರಿಂದ ಪತ್ರಿಕೆಗಾರರು, ಸಮಾಜಿಕ ಸುಧಾರಕರು, ಸಾಹಿತಿಗಳು, ಸ್ವಯಂಸಂಘಟನಾಕಾರರ ಚಟುವಟಿಕೆಗಳು ಹೆಚ್ಚಾದವು. ೧೯೦೭ರಲ್ಲಿ ಲೆಜಿಸ್ಲೆಟಿವ್ ಕೌನ್ಸಿಲ್‌ಗಳ ಕಾರ್ಯಗಳು ನವೀಕರಣಗೊಂಡವು ಎಂದು ಗೆಜೆಟಿಯರನಲ್ಲಿ ತಿಳಿಸಿದೆ. ೧೯೨೦ರಲ್ಲಿ ಧಾರವಾಡದಲ್ಲಿ ಆಲ್ ಕರ್ನಾಟಕ ಪೊಲಿಟಿಕಲ್ ಕಾನ್ಪರೆನ್ಸ್ ನಡೆಯಿತು. ಇದು ಎಲ್ಲ ಕನ್ನಡಿಗರ ಒಕ್ಕೂಟವನ್ನುಂಟು ಮಾಡಲು ನಡೆದ ಪ್ರಾಥಮಿಕ ಸಮ್ಮೇಳವಾಗಿದೆ. ಮತ್ತು ಇದರಿಂದ ರಾಷ್ಟ್ರೀಯ ನಾಯಕರು ಸ್ವತಂತ್ರ್ಯ ಹೋರಾಟದ ಗೊತ್ತುಗುರಿಗಳನ್ನು ಸ್ಪಷ್ಟಪಡಿಸಿಕೊಂಡು, ಎಲ್ಲ ಜಿಲ್ಲಾಕೇಂದ್ರಗಳಲ್ಲಿ ರಾಷ್ಟ್ರೀಯ ಸಂಘಟನೆಗಳು ಪ್ರಾರಂಭಿಸಲು ಕ್ರಮ ಕೈಗೊಂಡರು. ಮೈಸೂರು ಮಹಾರಾಜರೊಂದಿಗೆ ಜವಾಬ್ದಾರಿ ಸರ್ಕಾರ ಬೇಡಿಕೆ ವಿಷಯವಾಗಿ ಕೋಲಾರದ ಕೆ.ಸಿ. ರೆಡ್ಡಿಯವರು ಶ್ರೀ ಟಿ. ರಾಮಚಾರ್ಯ, ಕೆ. ಸಂಪಂಗಿ ರಾಮಯ್ಯ, ಎಚ್.ಎಸ್. ತಿಮ್ಮರೆಡ್ಡಿ, ಎನ್.ಸಿ. ನಾಗಯ್ಯರೆಡ್ಡಿ ಮುಂತಾದವರು ಚರ್ಚಿಸಿದರು. ಅದೇ ಕಾಲಕ್ಕೆ ಮೈಸೂರು ಲೆಜಿಸ್ಲೆಟಿವ್ ಕೌನ್ಸಿಲ್‌ಗೆ ಕೋಲಾರದ ಕೆ.ಸಿ. ರೆಡ್ಡಿಯವರು ಆಯ್ಕೆಯಾದರು. ೧೯೧೮ರಲ್ಲಿ ಪ್ರಜಾಮಿತ್ರ ಮಂಡಳಿ ಸ್ಥಾಪನೆಗೊಂಡು ಹಿಂದುಳಿದ ವರ್ಗಗಳು ಸಮಿತಿಯ ನಾಯಕರಾಗಿ ಎಚ್. ಚಿನ್ನಯ್ಯ, ಬಸವಯ್ಯ, ಎಂ. ಸುಬ್ಬಯ್ಯ ಮುಂತಾದವರು ನಿಯೋಜಿತರಾದರು. ಡಿ.ಎಸ್. ಮಲ್ಲಪ್ಪನವರ ನೇತೃತ್ವದಲ್ಲಿ ಪ್ರಜಾಪ್ರಕಾಶ ಪಕ್ಷ ಸ್ಥಾಪನೆಗೊಂಡಿತು. ನಂತರ ಈ ಎರಡು ಸಂಘಟನೆಗಳು ಸೇರಿ ಪ್ರಜಾಸಮ್ಯುಕಪ್ರಕಾಶ ಸಂಘಟನೆ ಎಂಬುದಾಗಿ ಸ್ಥಾಪನೆಗೊಂಡಿತು. ಇದರ ಅಧ್ಯಕ್ಷ ಎಚ್.ಬಿ. ಗೋವಿಂದಗೌಡರು ನಿಯೋಜಿತರಾದರು. ಈ ಎಲ್ಲ ಘಟನೆಗಳಿಂದ ಕೋಲಾರ ಜಿಲ್ಲೆಯ ಸ್ವತಂತ್ರ್ಯ ಹೋರಾಟಕ್ಕೆ ಹೊಸ ಆಯಾಮವನ್ನುಂಟು ಮಾಡಿದೆ ಎಂದು ಗೆಜೆಟಿಯರಗಳಿಂದ ತಿಳಿದುಬರುತ್ತದೆ. ಇದಿಷ್ಟು ಹಿನ್ನೆಲೆಯಾದರೆ, ಈ ಮುಂದೆ ಕೋಲಾರದಲ್ಲಿ ನಡೆದ ಸ್ವತಂತ್ರ್ಯ ಹೋರಾಟಗಳನ್ನು ಕ್ರಮವಾಗಿ ವಿವರಿಸಲಾಗಿದೆ.

೩.೩. ಸ್ವದೇಶಿ ಚಳವಳಿ

ಕೋಲಾರ ಜಿಲ್ಲೆಯ ಸ್ವತಂತ್ರ್ಯ ಹೋರಾಟದ ಲಕ್ಷಣಗಳು ೧೯೨೦ರ ನಂತರ ಕಂಡುಬರುತ್ತವೆ. ಗಾಂಧೀಜಿಯವರು ಕೈಗೊಂಡ ರಾಷ್ಟ್ರೀಯ ರಚನಾತ್ಮಕ ಕಾರ್ಯಗಳಿಂದಾಗಿ ಜಿಲ್ಲೆಯಲ್ಲಿ ಭಾರತದ

ರಾಷ್ಟ್ರೀಯ ಕಾಂಗ್ರೆಸ್ ಸಂಸ್ಥೆಯ ಶಾಖೆ ಪ್ರಾರಂಭವಾಯಿತು. ಗಾಂಧೀಜಿಯವರು ೧೯೧೫, ೧೯೩೪ರಲ್ಲಿ ಕೋಲಾರ ಜಿಲ್ಲೆಗೆ ಭೇಟಿ ಕೊಟ್ಟ ಫಲವಾಗಿ ಕೋಲಾರದ ಸ್ವತಂತ್ರ್ಯದ ಕಿಡಿಹತ್ತಿಕೊಂಡಿತು ಎಂದರೆ ತಪ್ಪಾಗಲಾರದು. ಇದಾದನಂತರ ಕೋಲಾರದ ವಿವಿಧ ಭಾಗಗಳಲ್ಲಿ ಸ್ವತಂತ್ರ್ಯ ಹೋರಾಟದ ಘಟನೆಗಳು ನಡೆದವು. ಅವುಗಳಲ್ಲಿ ಮುಖ್ಯವಾಗಿ ಸ್ವದೇಶಿ ಚಳವಳಿ, ಗಾಂಧೀಜಿ ಪ್ರವಾಸ, ವಿದುರಾಶ್ವತ್ಥದ ದುರಂತ, ಕೆ.ಜಿ.ಎಫ್.ನಲ್ಲಿ ಸತ್ಯಗ್ರಹ, ಕ್ವಿಟ್ ಇಂಡಿಯ ಚಳವಳಿ, ಶಿಡ್ಲಘಟ್ಟ ತಾಲೂಕಿನ ಸತ್ಯಗ್ರಹ, ಮೈಸೂರು ಚಲೋ ಚಳವಳಿ ಹಾಗೂ ೧೯೪೭ರ ಸ್ವತಂತ್ರ್ಯ ಕಾಲವನ್ನು ಕ್ರಮವಾಗಿ ಈ ಮೂಲಕ ವಿಶ್ಲೇಷಿಸಲಾಗಿದೆ.

ಕೋಲಾರದ ಸ್ವತಂತ್ರ್ಯ ಹೋರಾಟದ ಪ್ರಥಮ ಚಳವಳಿ ಇದಾಗಿದೆ. ಇದಕ್ಕೆ ಗಾಂಧೀಜಿಯವರ ರಚನಾತ್ಮಕ ಕಾರ್ಯಗಳ ಪ್ರಭಾವವೇ ಮುಖ್ಯಕಾರಣವಾಗಿದೆ. ಈ ವೇಳೆಗಾಗಲೇ ಜಿಲ್ಲೆಯ ಬಹುಸಂಖ್ಯಾತ ಜನರು ಮತ್ತು ಅಧಿಕಾರಿ ವರ್ಗದವರು ಬ್ರಿಟಿಷರ ಆಡಳಿತದಿಂದ ಬೇಸತ್ತಿದ್ದರು. ಬ್ರಿಟಿಷರ ಪ್ರತಿಯೊಂದು ದಬ್ಬಾಳಿಕೆ, ಆಡಳಿತ ನೀತಿಯು ಇವರ ಸ್ವತಂತ್ರ್ಯಕ್ಕೆ ಅಡ್ಡಿಯಾಗುತ್ತಿದ್ದವು. ಇದರ ವಿರುದ್ಧ ಹೋರಾಟ ಮಾಡಲು ೧೯೩೨ರ ಸ್ವದೇಶಿ ಚಳವಳಿ ಸುಸಮಯವಾಗಿ ಒದಗಿಬಂತು.

ಈ ಸ್ವದೇಶಿ ಚಳವಳಿಯಲ್ಲಿ ನ್ಯಾಯಾಧೀಶರು, ವಿದ್ಯಾರ್ಥಿಗಳು, ಸ್ವಯಂ ಸಂಘಟನಕಾರರು, ಕೆಲವು ಸರ್ಕಾರಿ ವೃತ್ತಿಗಾರರು, ಮಹಿಳೆಯರು ಮುಂತಾದವರು ಭಾಗವಹಿಸಿದರು. ೧೯೩೨ರ ವೇಳೆಗೆ ಈ ಸ್ವದೇಶಿ ಚಳವಳಿ ಜಿಲ್ಲಾದ್ಯಂತ ಹರಡಿತು. ಚಿಕ್ಕಬಳ್ಳಾಪುರ ಮತ್ತು ಬಂಗಾರಪೇಟೆಗಳಲ್ಲಿ ಹರತಾಳ ಪ್ರಾರಂಭವಾಯಿತು. ಗಾಂಧೀಜಿಯವರ ಬಂಧನ ತಿಳಿದ ಕೋಲಾರ ಜಿಲ್ಲಾ ರಾಷ್ಟ್ರೀಯ ನಾಯಕರು ತೀವ್ರ ಪ್ರತಿಭಟನೆ ನಡೆಸಿದರು. ಗಾಂಧಿ ಮತ್ತು ಭಗತಸಿಂಗರ ಭಾವಚಿತ್ರಗಳನ್ನು ಮೆರವಣಿಗೆ ಮಾಡಿದರು. ಬಹಿರಂಗಸಭೆಗಳು ನಡೆಸಿದರು ಎಂದು ಗೆಜೆಟಿಯರನಲ್ಲಿ ತಿಳಿಸಿದೆ. ಇದು ಪ್ರಮುಖವಾಗಿ ಕೋಲಾರ, ಚಿಂತಾಮಣಿ, ಚಿಕ್ಕಬಳ್ಳಾಪುರ ತಾಲೂಕುಗಳಲ್ಲಿ ನಡೆಯಿತು.

೧೯೩೨ರಲ್ಲಿ ಶಾಲಾ ವಿದ್ಯಾರ್ಥಿಗಳು ವಸಾಹತುಶಾಹಿಗಳ ಶಾಲೆಗಳನ್ನು ತೊರೆದು ವಿದೇಶಿ ವಸ್ತುಗಳು, ಟೋಪಿಗಳನ್ನು ಸುಟ್ಟುಹಾಕಿದರು. ಗಾಂಧಿ ಟೋಪಿಗಳನ್ನು ಹಾಕಿಕೊಂಡು ವಿದೇಶಿ ವಸ್ತುಗಳು ಇದ್ದ ಅಂಗಡಿಗಳ ಮುಂದೆ ಪಿಕಿಟಿಂಗ್ ಮಾಡಲಾರಂಭಿಸಿದರು. ಕೋಲಾರ, ಚಿಂತಾಮಣಿ, ಬಂಗಾರಪೇಟೆ ಮುಂತಾದ ಕಡೆ ಈ ಲಕ್ಷಣಗಳು ಕಂಡುಬಂದವು. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಸಂಸ್ಥೆಯ ಕಾರ್ಯದರ್ಶಿಗಳಾದ ಎಂ. ದೊರೆಸ್ವಾಮಿ, ಗಂಗಿರೆಡ್ಡಿ, ಕೆ. ಪಟ್ಟಾಭಿರಾಮನ, ಟಿ. ರಾಮಚಾರ, ಕೆ.ಸಿ. ರೆಡ್ಡಿಯವರು ಗಾಂಧೀಜಿಯ ರಚನಾತ್ಮಕ ಕಾರ್ಯಗಳನ್ನು ಜಿಲ್ಲಾದದ್ಯಾಂತ ಕೈಗೊಂಡರು. ಮಹಿಳೆಯರು ಸಾರಾಯಿ ಅಂಗಡಿಗಳ ಮುಂದೆ ಪಿಕೆಟಿಂಗ್ ಮಾಡಿದರು. ಬಾಲಾಗಂಗಾಧರ ತಿಲಕರವರ ನಿಧಿಗೆ ನೆರವುಕೊಟ್ಟರು. ರೈತರು ಕಂದಾಯ ಕೊಡಲು ನಿರಾಕರಿಸಿದರು. ಬ್ರಿಟಿಷರ ಆಡಳಿತಕ್ಕೆ ಅಡೆತಡೆಗಳುಂಟಾದವು ಎಂದು ಗೆಜೆಟಿಯರ ತಿಳಿಸಿದೆ.[೧೮] ಆದರೆ, ಇದೇ ಅವದಿಯಲ್ಲಿ ಆರ್ಥಿಕ ಮಟ್ಟ ಕುಸಿದು ರೈತರು ಭೂ ಕಂದಾಯಗಳು ಹೊರಲಾರದೆ ಹೋದರು ಎಂದು ಕೆ. ವೀರತಪ್ಪನವರು ಹೇಳಿದ್ದಾರೆ.[೧೯] ಇದರಿಂದ ಕ್ರಾಂತಿಕಾರಿಗಳನ್ನು ನಿಗ್ರಹಿಸುವಂತೆ ಬ್ರಿಟಿಷ ಸರ್ಕಾರ ಮೈಸೂರು ಒಡೆಯರ ಮೇಲೆ ಒತ್ತಡ ಹೇರಿ

ಕರಾಳ ಕಾನೂನುಗಳನ್ನು ಜಾರಿಗೆ ತಂದರು.[೨೦] ಇದರಿಂದ ಪ್ರಜಾಪ್ರತಿನಿಧಿ ಸಭೆಗಳು, ಸರ್ಕಾರವನ್ನು ಮತ್ತಷ್ಟು ಟೀಕೆ ಮಾಡಲಾರಂಭಿಸಿದಲ್ಲದೆ ಸರ್ಕಾರದ ಬಗ್ಗೆ ಇದ್ದ ಗೌರವಗಳು ಕಳೆದುಹೋದವು ಎಂದು ಕೆ. ವೀರತಪ್ಪನವರು ಹೇಳುತ್ತಾರೆ. ಜಿಲ್ಲಾದ್ಯಾಂತ ಹರತಾಳಗಳು ಪ್ರಾರಂಭವಾದವು. ಚಿಕ್ಕಬಳ್ಳಾಪುರ, ಚಿಂತಾಮಣಿ, ಬಂಗಾರಪೇಟೆ, ಕೋಲಾರಗಳಲ್ಲಿ ಇಂತಹ ಕೃತ್ಯಗಳು ನಡೆದು ಸ್ವತಂತ್ರ್ಯ ಹೋರಾಟಗಾರರಲ್ಲಿ ಅನೇಕರು ಬಂಧನಕ್ಕೆ ಒಳಗಾದರು. ಚಿಕ್ಕಬಳ್ಳಾಪುರ, ಕೋಲಾರ, ಬಂಗಾರಪೇಟೆಗಳಲ್ಲಿನ ಕೊಳೆತ ಕಾರಗೃಹಗಳಲ್ಲಿ ಅಲ್ಲದೆ ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿ ದನಗಳನ್ನು ದನ ಕೊಟ್ಟಿಗೆಗಳಿಗೆ ಸೇರಿಸಿದಂತೆ ಹೋರಾಟಗಾರರು ಸೇರಿದರು ಎಂದು ಗೆಜೆಟಿಯರನಲ್ಲಿ ತಿಳಿಸಿದೆ. ಹರತಾಳಗಳು ಚಿಂತಾಮಣಿ, ಕೋಲಾರ, ರಾಬರ್ಟ್‌ಸನ್‌ಪೇಟೆ, ಮುಂತಾದ ಕಡೆ ನಡೆದು ಗಾಂಧೀಜಿಯ ಬಂಧನ ವಿರುದ್ಧ ಪ್ರತಿಭಟನೆ ಸಭೆಗಳು ನಡೆದವು ಎಂದು ಪ್ರಹ್ಲಾದರಾವ ಅವರು ಹೇಳುತ್ತಾರೆ.[೨೧] ಗಾಂಧೀಜಿ ಮತ್ತು ಭಗತಸಿಂಗ್‌ರ ಪ್ರತಿಮೆಗಳನ್ನು ಮೆರವಣಿಗೆ ಮಾಡಿ ಸ್ವದೇಸಿ ಚಳವಳಿಯನ್ನು ಹುರಿದುಂಬಿಸಿದರು ಎಂದು ಗೆಜೆಟಿಯರ ತಿಳಿಸಿದೆ. ಕೋಲಾರ ಜಿಲ್ಲೆಯ ಚಿನ್ನದ ಗಣಿಯಲ್ಲಿನ ಚಿನ್ನ ಹೆಚ್ಚು ಪ್ರಮಾಣದಲ್ಲಿ ಇಂಗ್ಲೆಂಡಿಗೆ ಹೋಗುತ್ತಿತ್ತು ಮತ್ತು ಉದ್ಯೋಗಕ್ಕಾಗಿ ಬಂದ ಬಹುತೇಕ ಕಾರ್ಮಿಕರು ದಿನೇ ದಿನೇ ಹೆಚ್ಚಾಗಿ ಕಾರ್ಮಿಕರು ಈ ಚಳವಳಿಯಲ್ಲಿ ಭಾಗವಹಿಸಲು ಕಾರಣವಾಯಿತು ಎಂದು ಪಿ. ಪುಷ್ಪಂನವರ ಹೇಳಿಕೆಯನ್ನು ಸೂರ್ಯನಾಥ ಕಾಮತರು ಸ್ವತಂತ್ರ್ಯ ಸಂಗ್ರಾಮದ ಸ್ಮೃತಿಗಳ ಸಂಪುಟದಲ್ಲಿ ನಮೂದಿಸಿದ್ದಾರೆ. ಅದೇ ಕೃತಿಯಿಂದ ಮುಳಬಾಗಿಲಿನ ಕರುಬಚನಹಳ್ಳಿ ಎಂಬಲ್ಲಿ ಈಚಲ ಮರದ ಅಡವಿಯಲ್ಲಿ ತೆಗೆಯುತ್ತಿದ್ದ ಹೆಂಡದ ಕುಂಡಗಳನ್ನು ಗ್ರಾಮದ ೩೦೦ ಜನ ಹೋಗಿ ಹೊಡೆದು ಹಾಕಿದರು, ಪೊಲೀಸರನ್ನು ತಳ್ಳಿದರು ಎಂದು ಪಿ. ರಾಮಗೌಡರು ಹೇಳಿರುವುದು ಗಮನಕ್ಕೆ ಬರುತ್ತದೆ. ಇದೇ ರೀತಿ ಆರ್ಥಿಕ ವಲಯದಲ್ಲಿ ಕುಸಿತ ಮತ್ತು ಕಾರ್ಮಿಕಗ ಸ್ಥಿತಿ ಅಧೋಗತಿಗೆ ಇಳಿಯಿತು. ಈ ನಡುವೆ (೧೯೩೦ರಲ್ಲಿಯೇ) ಕೋಲಾರ ಚಿನ್ನದ ಗಣಿಯ ಕಾರ್ಮಿಕರು ಚಳವಳಿಯಲ್ಲಿ ಭಾಗವಹಿಸಿದರು ಎಂದು ಜಾನಕಿ ನಾಯರ್ ಮತ್ತು ಗೋವಿಂದಪ್ಪನವರು ಹೇಳಿದ್ದಾರೆ.[೨೨]

ಹೀಗೆ ಕೋಲಾರ ಜಿಲ್ಲೆಯಲ್ಲಿ ಸ್ವದೇಶಿ ಚಳವಳಿ ನಡೆದು, ವಿದೇಶಿಯ ವಸ್ತುಗಳ ಬಳಕೆಯನ್ನು ತಡೆದು ಸ್ವದೇಶಿ ವಸ್ತುಗಳ ಬಳಕೆ ಮಾಡುವಂತಹ ಒತ್ತಡಗಳು ಹೇರಿ, ದೇಶದ ಆಂತರಿಕ ಆರ್ಥಿಕ ಸುಧಾರಣ ಸ್ಥಿತಿಗಳತ್ತ ಗಮನಿಸುವಂತಾಯಿತು.

೩.೪. ಕೋಲಾರ ಜಿಲ್ಲೆಯಲ್ಲಿ ಗಾಂಧೀಜಿ ಪ್ರವಾಸ

ಸ್ವತಂತ್ರ್ಯ ಸಂಗ್ರಾಮದ ವೇಳೆಯಲ್ಲಿ ಮಹಾತ್ಮಗಾಂಧೀಜಿಯವರು ಕೋಲಾರ ಜಿಲ್ಲೆಗೆ ಎರಡು ಬಾರಿ ಭೇಟಿಕೊಟ್ಟಿದ್ದರು. ಮೊದಲನೆಯ ಬಾರಿಗೆ ಅವರ ಆರೋಗ್ಯ ಸುಧಾರಣೆಗೆಂದು ಕೋಲಾರದ ನಂದಿಗಿರಿಧಾಮಕ್ಕೆ (೧೯೧೫) ಬಂದು ತಂಗಿದ್ದರು. ನಂತರ ೧೯೩೪ರಲ್ಲಿ ಖಾದಿ ಪ್ರಚಾರ ಎಂಬ ಕಾರ್ಯಕ್ರಮದಲ್ಲಿ ಭಾಗವಹಿಸಲು ಎರಡನೇ ಬಾರಿಗೆ ಕೋಲಾರ ಜಿಲ್ಲೆಯ ಎಲ್ಲ ತಾಲೂಕುಗಳಲ್ಲಿ ಪ್ರವಾಸ ಮಾಡಿದರು. ಇದು ಕೋಲಾರ ಸ್ವತಂತ್ರ್ಯ ಹೋರಾಟದ ಚರಿತ್ರೆಗೆ ಹೊಸ ಆಯಾಮವನ್ನು

ತಂದುಕೊಟ್ಟಿತು. ಈ ವಿಷಯವಾಗಿ ವೇಮಗಲ್ ಸೋಮಶೇಖರರವರು, ಎನ್. ಜಗನ್ನಾಥ ಪ್ರಕಾಶನ, ಗೊರೂರು ರಾಮಸ್ವಾಮಿ ಅಯ್ಯಂಗರ, ಸಿದ್ದವ್ವನಹಳ್ಳಿ ಕೃಷ್ಣಶರ್ಮ ಮುಂತಾದವರು ಪ್ರತಿಪಾದಿಸಿದ್ದಾರೆ.

೧೯೧೫ರಲ್ಲಿ ಗಾಂಧೀಜಿಯವರು ಕಸ್ತೂರಿಬಾ ಅವರೊಂದಿಗೆ ಬಂದಾಗ ಬಂಗಾರಪೇಟೆಯ ರೈಲ್ವೆ ನಿಲ್ದಾಣದಲ್ಲಿ ಪುಟ್ಟ ಸ್ವಾಗತ ನಡೆಯಿತು. ಇದು ಪ್ರಾಥಮಿಕ ಕರ್ನಾಟಕ ಪ್ರದೇಶಕ್ಕೆ ಗಾಂಧೀಜಿ ಬಂದಿರುವುದು ಮತ್ತು ಅವರಿಗೆ ಸನ್ಮಾನಿಸಿದ ಕೀರ್ತಿ ಕೋಲಾರ ಜಿಲ್ಲೆಗೆ ಸಲ್ಲುತ್ತದೆ ಎಂದು ವೇಮಗಲ್ ಸೋಮಶೇಖರರವರು ಹೇಳಿದ್ದಾರೆ.[೨೩] ನಂದಿಗಿರಿಯಲ್ಲಿ ತಂಗಿದ್ದ ಗಾಂಧೀಜಿಯವರ ಆರೋಗ್ಯ ಸುಧಾರಣೆಯಾಗುವುದಲ್ಲದೆ, ಜಿಲ್ಲೆಯ ರಾಷ್ಟ್ರನಾಯಕರಿಗೆ ಸೂಕ್ತ ಮಾರ್ಗದರ್ಶನ ದೊರೆಯಿತು. ಇದು ಅವರ ಖಾದಿ ಪ್ರಚಾರ ಕೈಗೊಂಡ ಕಾಲವು ಹೌದು (೧೯೨೭) ಎಂದು ಸಿದ್ದವ್ವನಹಳ್ಳಿ ಕೃಷ್ಣಶರ್ಮರವರು ಹೇಳುತ್ತಾರೆ.[೨೪] ಇದನ್ನು 'ಯಂಗ್ ಇಂಡಿಯಾ' ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತಿತ್ತು. ಇವರನ್ನು ಮೈಸೂರು ದಿವಾನರಾದ ಮಿರ್ಜಾ ಇಸ್ಮಾಯಿಲರು, ಸರ್ ಎಂ. ವಿಶ್ವೇಶ್ವರಯ್ಯನವರು ಸಂದರ್ಶಿಸಿ ಅಭಿವೃದ್ಧಿ ವಿಚಾರಗಳ ಬಗ್ಗೆ ಚರ್ಚಿಸುತ್ತಿದ್ದರು[೨೫] ಎಂದು ಸಿದ್ದವ್ವನಹಳ್ಳಿ ಕೃಷ್ಣಶರ್ಮರು ಹೇಳಿದ್ದಾರೆ. ಮಹಾನ್ ಆರ್ಥಿಕ ಚಿಂತಕ, ಇಂಜಿನೀಯರ್ ಮತ್ತು ರಾಷ್ಟ್ರೀಯ ಹೋರಾಟಗಾರನನ್ನು ಸಂಪರ್ಕಿಸುವ ಭಾಗ್ಯ ಕೋಲಾರ ಜಿಲ್ಲೆಯ ನಂದಿಗಿರಿಧಾಮಕ್ಕೆ ಸಲ್ಲುತ್ತದೆ. ವಿಶ್ವೇಶ್ವರಯ್ಯನವರು ಈ ಗಿರಿಧಾಮದ ಅಭಿವೃದ್ಧಿ ಕ್ರಮಕೈಗೊಂಡರು. ಅಲ್ಲದೆ ಬ್ರಿಟಿಷರ ಬೇಸಿಗೆ ಕಾಲದ ತಂಗುದಾಣ ಮತ್ತು ಸೈನಿಕ ಆಡಳಿತಕೇಂದ್ರ ಎನಿಸಿಕೊಂಡಿತು. ಎಲ್ಲಕ್ಕಿಂತ ಮಿಗಿಲಾಗಿ ಗಾಂಧೀಜಿಯವರ ಅಚ್ಚುಮೆಚ್ಚಿನ ತಾಣವಾಗಿದೆ ಎಂದು ಗಾಂಧೀಜಿಯವರು ಹೇಳಿಕೆಯನ್ನು ಎನ್. ಜಗನ್ನಾಥ ಪ್ರಕಾಶರು ಹೇಳುತ್ತಾರೆ.[೨೬] ಪ್ರಗತಿಪರ ರಾಜ ನಾಲ್ವಡಿ ಕೃಷ್ಣರಾಜ ಒಡೆಯರ ಗಾಂಧೀಜಿಯ ಪ್ರವಾಸಕ್ಕೆ ಅನುಕೂಲ ಮಾಡಿಕೊಟ್ಟರು. ಇದಲ್ಲದೆ ಗಾಂಧೀಜಿಯವರು ನಿತ್ಯಕಾರ್ಯಗಳು ಸುಲಭಗೊಳ್ಳಲು ಅನುಕೂಲ ಒದಗಿಸಿಕೊಟ್ಟರು. ಅಂದರೆ ಸರ್ಕಾರಿ ವರದಿಗಳು, ಹೊಸಬಗೆಯ ಪಕ್ಷಗಳು, ಕಾಂಗ್ರೆಸ್ ದೂರುಗಳು, ಜೈಲು ಮುಷ್ಕರ ವಿವರಗಳು ಗಾಂಧಿಗೆ ತಲುಪಿದ್ದಂತೆ ಅವುಗಳನ್ನು ವಿವರಿಸಿ ಕೊಟ್ಟ ಸೂಕ್ತಸಲಹೆಗಳ ಕಾರ್ಯಗತವು ಸುಲಭವಾಗುತ್ತಿತ್ತು ಎಂದು ಗೊರೂರು ರಾಮಸ್ವಾಮಿ ಅಯ್ಯಂಗಾರರವರ ಕೃತಿಗಳಿಂದ ತಿಳಿದುಬರುತ್ತದೆ.[೨೭] ಇದಲ್ಲದೆ ಜಿಲ್ಲೆಯ ಮಹತ್ವದ ವಿಷಯವಾದ ಹರಿಜನರ ಸುಧಾರಣೆ ಕಾರ್ಯಗಳು, ಹರಿಜನರ ದೇವಾಲಯಗಳ ಪ್ರವೇಶ ಮಾಡುವುದು ಮುಂತಾದ ಕಾರ್ಯಗಳನ್ನು ಕೈಗೊಂಡರು ಎಂದು ಬಿ.ಎನ್.ಎಸ್. ರೆಡ್ಡಿಯವರು ಹೇಳುತ್ತಾರೆ.[೨೮]

ದ್ವಿತೀಯ ಬಾರಿಗೆ ಗಾಂಧೀಜಿಯವರು 'ಹರಿಜನ ಪ್ರವಾಸ' (೧೯೩೬) ಮತ್ತು 'ಖಾದಿ ಪ್ರಚಾರ' ಕಾರ್ಯಕ್ರಮಗಳು ಹಮ್ಮಿಕೊಂಡು ಕೋಲಾರ ಜಿಲ್ಲೆಗೆ ಭೇಟಿಕೊಟ್ಟರು. ಆಗಲೂ ಅವರು ನಂದಿಗಿರಿಧಾಮದಲ್ಲಿ ತಂಗಿದ್ದರು. ಇದರಿಂದ ಅವರು ತಂಗಿದ್ದ ಬಂಗಲೆಗೆ ಗಾಂಧಿಭವನ ಎಂತಲೇ ಕರೆಯಲು ರೂಢಿಗೆ ಬಂತು. ಈ ಅವಧಿಯಲ್ಲಿ ಪ್ರಸಿದ್ಧ ಹೋರಾಟಗಾರನಾದ ನೀಲಕಂಠ ಬ್ರಹ್ಮಚಾರಿಗಳು, ಗಾಂಧೀಜಿಯವರನ್ನು ಭೇಟಿಮಾಡಿ ಹೋರಾಟದ ವಿಚಾರಗಳು ಮತ್ತು ದೇಶದ ಸ್ಥಿತಿಗತಿಗಳ ಬಗ್ಗೆ

ಚರ್ಚಿಸಿದರು. ಶ್ರೀ ವಲ್ಲಭಬಾಯಿ ಪಟೇಲರು, ಮಹಾದೇವ ದೇಸಾಯಿ, ಶ್ರೀಕುಮಾರಪ್ಪನವರು ಗಾಂಧಿಯೊಂದಿಗೆ ಇದ್ದರು.[೨೯] ಇವರೂ ಚಿಕ್ಕಬಳ್ಳಾಪುರ, ಶಿಡ್ಲಘಟ್ಟ, ಚಿಂತಾಮಣಿ, ಕೋಲಾರ, ಬಂಗಾರಪೇಟೆ, ಮಾಲೂರುಗಳಿಗೆ ಭೇಟಿಕೊಟ್ಟು ಅಲ್ಲಿನ ಸ್ಥಿತಿಗತಿಗಳು ವಿಚಾರಿಸಿದರು[೩೦] ಎಂದು ಎನ್. ಜಗನ್ನಾಥ ಪ್ರಕಾಶ, ಸಿ. ಕೃಷ್ಣಮೂರ್ತಿ, ವೇ. ಸೋಮಶೇಖರರವರು ಹೇಳುತ್ತಾರೆ. ಬೋಗ ನಂದಿಶ್ವರ ದೇವಾಲಯಕ್ಕೆ ಹರಿಜನರ ಪ್ರವೇಶ ಮಾಡಲು ಅವಕಾಶ ಕೊಡಲು ಗಾಂಧೀಜಿಯವರು ಕಾರ್ಯಕ್ರಮ ಕೈಗೊಂಡರು ಎಂದು ವೇ. ಸೋಮಶೇಖರರವರು ಹೇಳುತ್ತಾರೆ.[೩೧] ಇದನ್ನೇ ಗೆಜೆಟಿಯರ್‌ನಲ್ಲಿ ಕೃಷ್ಣಶರ್ಮರವರು ಹೇಳುತ್ತಾರೆ.

೩.೫. ವಿದುರಾಶ್ವತ್ಥ ದುರಂತ

ಕೋಲಾರದ ಸ್ವಾತಂತ್ರ್ಯ ಹೋರಾಟದ ಚರಿತ್ರೆಯ ಅತಿ ಪ್ರಮುಖ ಘಟನೆ ಎಂದರೆ ವಿದುರಾಶ್ವತ್ಥ ಎಂಬಲ್ಲಿ ನಡೆದ ಧ್ವಜಸತ್ಯಾಗ್ರಹ ಮತ್ತು ಅದರ ದುರಂತ ಸಂಗತಿ ಎಂದರೆ ತಪ್ಪಾಗಲಾರದು. ಇದು ಕೋಲಾರ ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಾರರ ಮೇಲೆ ಅಲ್ಲದೆ, ಕರ್ನಾಟಕದ ಸ್ವಾತಂತ್ರ್ಯ ಚಳುವಳಿಗಾರರ ಮೇಲೆ ತೀವ್ರ ಪ್ರಭಾವ ಬೀರಿದೆ. ಇಂತಹ ಚರಿತ್ರೆಯ ಘಟನೆ ಅನೇಕ ವಿದ್ವಾಂಸರ ಗಮನ ಸೆಳೆದಿದೆ. ಬಿ.ಕೆ. ರಾಮಚಂದ್ರರವರು ಇದನ್ನು 'ಕರ್ನಾಟಕ ಜಲಿಯನ್ ವಾಲಾಬಾಗ' ಎಂದೇ ಕರೆದಿದ್ದಾರೆ. ಇದೇ ರೀತಿ ತಿರುಮಲೆ ಶ್ರೀರಂಗಾಚಾರ್ಯರವರು, ಡಿ.ಲಿಂಗಯ್ಯ, ಬಿ.ಸಿ. ಮಹಾಬಳೇಶ್ವರಪ್ಪನವರು ಹೇಳಿದ್ದಾರೆ. ಕೆ. ವೀರತಪ್ಪ, ಬಿ.ಷೇಕಅಲಿ, ಎಸ್.ಚಂದ್ರಶೇಖರ, ಎಂ.ವಿ. ಕೃಷ್ಣರಾಮ ಮತ್ತು ಎಂ. ಕೇಶವಭಟ್ಟರವರು ಇದರ ಬಗ್ಗೆ ವಿಶ್ಲೇಷಣೆ ಮಾಡಿದ್ದಾರೆ. ಅಲ್ಲದೆ ಕೆ. ವೆಂಕಟಕೃಷ್ಣಪ್ಪನವರು ಸ್ವಾತಂತ್ರ್ಯ ಹೋರಾಟಗಾರರಾಗಿದ್ದು ವಿದುರಾಶ್ವತ್ಥ ದುರಂತದ ಬಗ್ಗೆ ಇಂದಿಗೂ ಹೇಳುವರಾಗಿದ್ದಾರೆ. ಇವರು ಬರೆದ ಕೃತಿಗಳು, ಲೇಖನಗಳು ಇದರ ಬಗ್ಗೆ ಅಧ್ಯಯನ ಮಾಡಲು ನೆರವಾಗಿದೆ. ಮತ್ತು ಈ ಒಂದು ಘಟನೆ ನಡೆದ ರೀತಿ ಮತ್ತು ಅದರ ಪರಿಣಾಮಗಳನ್ನು ಈ ಮೂಲಕ ವಿಶ್ಲೇಷಣೆ ಮಾಡಲಾಗಿದೆ.

ಜವಾಬ್ದಾರಿ ಸರ್ಕಾರ ಬೇಡಿಕೆಗಾಗಿ ೧೯೩೭ ಮೇ ೩ರಂದು ಹೋರಾಟ, ಪ್ರತಿಭಟನೆಗಳು ನಡೆಯುತ್ತಲೆ ಇದ್ದವು[೩೨] ಗಾಂಧೀಜಿಯ ಪ್ರವಾಸದಿಂದಾಗಿ ಈ ಪ್ರಕ್ರಿಯೆ ಇನ್ನಷ್ಟು ಹೆಚ್ಚಾಯಿತು. ೧೯೩೮ ಏಪ್ರೀಲ್ ೧೮ರಂದು ಶಿವಪುರ ಧ್ವಜಸತ್ಯಾಗ್ರಹ ಕಾರ್ಯಕ್ರಮ ಕೈಗೊಂಡಾಗ ಕೋಲಾರದ ಎಂ. ದೊರೆಸ್ವಾಮಿ, ಟಿ. ರಾಮಾಚಾರ, ಸಂಪಂಗಿ ರಾಮಯ್ಯ, ಕೆ.ಟಿ. ಬಾಷ್ಯಂ, ಕೆ. ವೆಂಕಟಕೃಷ್ಣಪ್ಪ, ಎನ್.ವಿ. ಕೃಷ್ಣಮಾಚಾರಿ ಮುಂತಾದವರು ಭಾಗವಹಿಸಿದರು. ಇಂತಹ ಸತ್ಯಾಗ್ರಹ ಕೋಲಾರದಲ್ಲಿ ಹಮ್ಮಿಕೊಳ್ಳುವ ನಿರ್ಧಾರ ಈ ಸ್ವಾತಂತ್ರ್ಯ ಹೋರಾಟಗಾರರಲ್ಲಿ ಭಾವನೆ ಬಂತು ಎಂದು ಸೂರ್ಯನಾಥ ಕಾಮತ, ಡಿ. ಲಿಂಗಯ್ಯ ಬಿ.ಎಸ್. ಮಹಾಬಲೇಶ್ವರಪ್ಪನವರು ಹೇಳಿದ್ದಾರೆ. ಈ ಕಾರ್ಯಕ್ರಮಕ್ಕೆ ಸೂಕ್ತವಾದ ಕಾಲ ಮತ್ತು ಸ್ಥಳ ಹುಡುಕುವಾಗ ಗಮನಕ್ಕೆ ಬಂದಿದ್ದು ವಿದುರಾಶ್ವತ್ಥ ಎಂಬ ಯಾತ್ರಾಸ್ಥಳ. ಈ ವೇಳೆಗೆ ವಿದುರಾಶ್ವತ್ಥದಲ್ಲಿ ಜಾತ್ರೆ ನಡೆಯುತ್ತಿತ್ತು. ಇದು ರಾಷ್ಟ್ರೀಯ ಕಾರ್ಯಕ್ರಮ ಜನರಲ್ಲಿ ಪ್ರತಿಬಿಂಬಿಸಲು ಮತ್ತು ಜನರನ್ನು ಕಲೆ ಹಾಕಲು ಸೂಕ್ತವಾದ ಸ್ಥಳ ಮತ್ತು ಕಾಲ ಎನಿಸಿತು.

ಇದರಿಂದಾಗಿ ಈ ಸ್ಥಳದಲ್ಲಿಯೇ ಧ್ವಜಸತ್ಯಾಗ್ರಹ ಕಾರ್ಯಕ್ರಮವನ್ನು ಹಮ್ಮಿಕೊಂಡರು. ಇದರ ನಾಯಕರು ಅಥವಾ ಕಾರ್ಯಕರ್ತರಾದ ಎನ್.ಸಿ. ನಾಗಯ್ಯರೆಡ್ಡಿ, ಎನ್.ಸಿ. ತಿಮ್ಮರೆಡ್ಡಿ, ಎಸ್.ಸಿ. ಶ್ರೀನಿವಾಸ, ರಾಮಸ್ವಾಮಿ, ಜಿ. ವೆಂಕಟಸ್ವಾಮಿಗೌಡ ಮುಂತಾದವರು. ಇವರಲ್ಲಿ ಕಾರ್ಯಕ್ರಮದ ಮುನ್ನ ಜಿಲ್ಲಾದ್ಯಾಂತ ಪ್ರವಾಸ ಕೈಗೊಂಡು ಪ್ರಚಾರ ಮಾಡಿದರು. ಈ ವೇಳೆಗೆ ಸರ್ಕಾರ ಪ್ರತಿಬಂಧಿಕಾಜ್ಞೆಯನ್ನು ಜಾರಿಗೆ ತಂದಿದ್ದರಿಂದ ಕೋಲಾರ ಜಿಲ್ಲೆಯಲ್ಲಿ ಜಿಲ್ಲಾಧಿಕಾರಿಗಳು ಇದನ್ನು ಅನುಮೋದಿಸಿದರು. ಇದೇ ರೀತಿ ಜಿಲ್ಲಾ ವ್ಯಾಪ್ತಿಗೆ ಸೇರಿದ ಗೌರಿಬಿದನೂರು ತಾಲ್ಲೂಕಿನ ಅಮಲ್ದಾರ ಜೆ. ಅಪ್ಪಾಜಿಗೌಡರರು ಮ್ಯಾಜಿಸ್ಟ್ರೇಟರು ೧೪೪ನೇ ಸೆಕ್ಷನ್ ಅನ್ವಯ ವಿದುರಾಶ್ವತ್ಥದಲ್ಲಿ ರಾಷ್ಟ್ರೀಯ ಧ್ವಜಾರೋಹಣ ಮಾಡಲಾಗದು, ಸಾರ್ವಜನಿಕ ಸಭೆ ನಡೆಸಲಾಗದು ಎಂದು ನಿಷೇಧಾಜ್ಞೆ ಹೊರಡಿಸಿದರು. ಇದು ಜಾತ್ರೆಯ ಕಾಲದಲ್ಲಿ ಕಾಂಗ್ರೆಸ್ಸಿನವರು ಆಯೋಜಿಸಲು ನಿಶ್ಚಿಯಿಸಿದ ಚಳುವಳಿಯ ಬುಡಮೇಲು ಸಂಬಂಧವಾಗಿ ಜಾರಿಯಾದ ಆಜ್ಞೆ, ೨೨.೪.೧೯೩೮ ರಂದು ೧೦ ಮಂದಿ ನಿಷೇಧಾಜ್ಞೆಯನ್ನು ಮುರಿದು ಧಿಕ್ಕರಿಸಿದ್ದರಿಂದ ಅವರನ್ನು ಬಂಧಿಸಿ ಸೆಕ್ಷನ್ ಐಪಿಸಿ ೧೮೮ ಅನ್ವಯ ಛಾರ್ಜ್‌ಷೀಟ್ ಹಾಕಲಾಯಿತು ಎಂದು ತಿರುಮಲೆ ಶ್ರೀರಂಗಾಚಾರರವರು ಹೇಳಿದ್ದಾರೆ.[೩೩] ಕಾಂಗ್ರೆಸಿನವರು ಸರ್ಕಾರವನ್ನು ಹೀನಾಯವಾಗಿ ಖಂಡಿಸಿ ಭಾಷಣಗಳನ್ನು ಮಾಡಿದರು. ಜನರನ್ನು ಕಲೆ ಹಾಕಿದರು. ಇದರ ಪ್ರಮಾಣ ಸುಮಾರು ೧೫,೦೦೦ ಜನರು ಇರಬೇಕೆಂದು ಡಿ.ಲಿಂಗಯ್ಯನವರು ಲೆಕ್ಕ ಹಾಕಿದ್ದಾರೆ.[೩೪] ಸುಮಾರು ನೂರು ಜನರ ಕೈಯಲ್ಲಿ ಬಾವುಟಗಳು ಹಾರಾಟಗೊಂಡವು. ಎನ್.ಸಿ. ನಾಗಯ್ಯ, ಪಾಲಯ್ಯ, ರಾಮಸ್ವಾಮಿ, ವೆಂಕಟಸ್ವಾಮಿ ಮುಂತಾದವರು ಬಂಧನಕ್ಕೆ ಒಳಗಾದರು ಎಂದು ಬಿ.ಎಸ್. ಮಹಾಬಳೇಶ್ವರಪ್ಪನವರು ಹೇಳಿದ್ದಾರೆ.[೩೫] ಪೋಲೀಸ್ ಇನ್ಸಪೆಕ್ಟರ್ ಬಸಪ್ಪ ಜಿಲ್ಲಾ ಪೋಲೀಸ್ ಸೂಪರಿನ್‌ಟೆಂಡೆಂಟ್ ಎಸ್. ಬಲೀಮ್, ಸಬ್‌ಡಿವಿಜನಲ್ ಆಫೀಸರ ಎಂ. ಶಾಮಣ್ಣ ಅಮಲ್ದಾರು ರಾಜಶೇಖರ ಒಡೆಯರು ವಿದುರಾಶ್ವತ್ಥದ ಧ್ವಜಸತ್ಯಾಗ್ರಹ ದಿನದಂದು ಹಾಜರಾಗಿದ್ದರು ಎಂದು ಗೆಜೆಟಿಯರನಲ್ಲಿ ತಿಳಿಸಿದೆ. ಸಮೀಪದ ವಿದುರನಾರಾಯಣ ದೇವಾಲಯದ ಹಿಂಬಾಗದಲ್ಲಿ ಕಾಂಗ್ರೆಸಿನ ನಾಯಕ ಶ್ರೀನಿವಾಸರಾವ್‌ರವರಿಂದ ಧ್ವಜಾರೋಹಣ ನಡೆಯಿತು ಎಂದು ಬಿ.ಕೆ. ರಾಮಚಂದ್ರರವರು ಹೇಳಿದ್ದಾರೆ.[೩೬] ಶಾಂತಿಯಿಂದಲೆ ನಡೆದು ನಂತರ ಶ್ರೀ ಸೂರಣ್ಣ, ಎಂ. ನಾರಾಯಣಸ್ವಾಮಿರವರು ಬಂಧನಕ್ಕೆ ಒಳಗಾಗಿ ಕಾಂಗ್ರೆಸ್ಸಿಗರ ನಡುವೆ ಜಿಲ್ಲಾ ಮ್ಯಾಜಿಸ್ಟ್ರೇಟರ್ ಸೌಜನ್ಯ ಮಾತುಗಳನ್ನಾಡಿ ಹಿಂತಿರುಗಿದರು. ಅಷ್ಟರಲ್ಲಿಯೇ ಕೆಲವು ಪುಂಡಾಡಿಗಳು ಕಾಂಗ್ರೆಸ್ಸಿಗರು ಸರಿಯಾದ ರೀತಿಯಲ್ಲಿ ಧ್ವಜಾರೋಹಣ ಮಾಡಲಿಲ್ಲ. ಆದ್ದರಿಂದ ನಾವು ಸರಿಯಾದ ರೀತಿಯಲ್ಲಿ ಧ್ವಜಾರೋಹಣ ಮಾಡುತ್ತೇವೆಂದು ಗಲಾಟೆ ಎಬ್ಬಿಸಿದರು. ಇದು ಪೋಲೀಸರ ನಡುವೆ ಘರ್ಷಣೆ ಉಂಟಾಯಿತು. ಗಲಾಟೆಗಳನ್ನು ನಿಯಂತ್ರಿಸಲಾಗದೆ ಪೋಲೀಸರು ಗೋಲಿಬಾರ್ ಕಾರ್ಯಚರಣೆ ಕ್ರಮ ಕೈಗೊಂಡರು ಎಂದು ಡಿ. ಲಿಂಗಯ್ಯ, ಬಿ.ಎಸ್. ಮಹಾಬಳೇಶ್ವರಪ್ಪ ಹಾಗೂ ಸೂರ್ಯನಾಥ ಕಾಮತರು ಹೇಳಿದ್ದಾರೆ. ಸೂಚನೆಗಳಿಲ್ಲದೆ ಜನರ ಮೇಲೆ ಗುಂಡುಗಳ ಸುರಿಮಳೆ ಉಂಟಾಯಿತು. ಎಂದು ಬಿ.ಸಿ. ಮಹಾಬಳೇಶ್ವರಪ್ಪನವರು ಹೇಳಿದ್ದಾರೆ. ಈ ಗುಂಡುಗಳ ಮೊತ್ತ ೯೨ರನ್ನು ಮುಟ್ಟಿವೆ. ಇದರ ಮೊದಲು ಪ್ರಯತ್ನಗಾರ ಪೊಲೀಸ್ ಸೂಪರ್‌ಡೆಂಟ್ ಎಲ್. ಖಲೀಪರು ನಂತರ ಇತರೆ ಪೋಲೀಸರು

ಅವರನ್ನು ಅನುಸರಿಸಿದರು. ಎಂದು ಡಿ. ಲಿಂಗಯ್ಯನವರು ಹೇಳಿದ್ದಾರೆ. ಮತ್ತು ವೇಪಾರಮೇಶಂರವರ ವರದಿ ನೀಡಿದೆ. ಈ ಕಾರ್ಯ ಒದಗಿ ಸುಮಾರು ೧೦ ನಿಮಿಷಗಳಾಗಿದ್ದಿರಬೇಕು ರಾಮಾಚಾರ್ಯರು ಈ ಘಟನೆ ಬಗ್ಗೆ ತಾವೇ ಪತ್ರಿಕೆಗಳಿಗೆ ಸುದ್ದಿ ಕೊಟ್ಟರು, ೩೨ ಮಂದಿ ಸತ್ತರು, ೪೮ ಮಂದಿ ಗಾಯಗಳಾದರು ಎಂದು ತಿಳಿಸಿದ್ದಾರೆ. ಇದು ನಿಜವಲ್ಲ, ೧೦ ಮಂದಿ ಸತ್ತು, ಆರು ಮಂದಿ ಗಾಯಗೊಂಡರು. ಅನೇಕ ಪೋಲೀಸರಿಗೂ ಗಾಯಗಳಾದವು ಎಂದು ತಿರುಮಲೆ ಶ್ರೀರಂಗಾಚಾರರವರು ಹೇಳಿದ್ದಾರೆ. ಇಡಗೂರು ಭೀಮಯ್ಯ, ಅಶ್ವತ್ಥ ನಾರಾಯಣಶೆಟ್ಟಿ, ನರಸಪ್ಪ, ಹನುಮಂತಪ್ಪ ಚೋಳೂರು ನರಸಪ್ಪ, ಗಚ್ಚನ್ನಗಾರಿ ನರಸಪ್ಪ, ಕಾರಂಡಹಳ್ಳಿ ಮಲ್ಲಯ್ಯ, ವೆಂಕಟಗಿರಿಯಪ್ಪ, ಶ್ರೀಮತಿ ಗೌರಮ್ಮನವರು ಪೋಲೀಸರ ಗುಂಡುಗಳಿಗೆ ಬಲಿಯಾದರು ಎಂದು ಡಿ.ಲಿಂಗಯ್ಯ, ಬಿ.ಸಿ. ಮಹಾಬಳೇಶ್ವರಪ್ಪ, ಬಿ.ಕೆ. ರಾಮಚಂದ್ರ, ಜಮುನಾರವರು ಹೇಳಿದ್ದಾರೆ. ಈ ಅವಧಿಯಲ್ಲಿ ಪತ್ರಿಕಾ ನಿಷೇಧ ಕಾಯಿದೆ ಜಾರಿಗೆಯಲ್ಲಿದ್ದು 'ವಿಶ್ವಕರ್ನಾಟಕ', 'ತಾಯಿನಾಡು', 'ನವಜೀವನ' ಮುಂತಾದ ರಾಷ್ಟ್ರೀಯ ವಾರಪತ್ರಿಕೆಗಳು ನಿಷೇಧಗೊಂಡವು.[೬೭] ಇದರಿಂದ ಈ ವಿಷಯವನ್ನು ರುಮಾಲೆ ಚನ್ನಬಸಪ್ಪ ಹಾಗು ನಂಜುಂಡರಾವರವರು ಗುಪ್ತವಾಗಿ ಬೆಂಗಳೂರು ಸುದ್ದಿ ಕೇಂದ್ರಕ್ಕೆ ತಲುಪಿದರು. ತಕ್ಷಣವೇ ವಿದುರಾಶ್ವತ್ಥ ಧ್ವಜಸತ್ಯಾಗ್ರಹದಲ್ಲಿ ೩೨ ಜನರ ಸಾವು, ೪೮ ಜನ ಗಾಯಗೊಂಡಿದ್ದಾರೆ ಎಂಬುದಾಗಿ ಬಾನುಲಿಗಳಲ್ಲಿ ಪ್ರಸಾರವಾಯಿತು ಎಂದು ಬಿ.ಕೆ. ರಾಮಚಂದ್ರನರವರು ಮತ್ತು ಬಿ.ಸಿ. ಮಹಾಬಳೇಶ್ವರಪ್ಪನವರು ಹೇಳುತ್ತಾರೆ. ಕೊನೆಗೆ ೯ ಜನರ ಸಾವು ಖಚಿತವಾಗಿದೆ ಎಂದು ಸರ್ಕಾರದ ದಾಖಲೆಗಳಲ್ಲಿ ತಿಳಿಸಲಾಗಿದೆ. ನಿಜವಾಗಿಯು ಸತ್ಯಾಗ್ರಹ ಮಾಡಿದ ಕಾಂಗ್ರೆಸ್ ನಾಯಕರು ಸ್ಥಳದಲ್ಲಿ ಇರಲಿಲ್ಲ. ಬದಲಿಗೆ ಅಲ್ಲಿ ನೆರೆದಿದ್ದ ಹಳ್ಳಿಯ ಯಾತ್ರಾತಿಗಳು, ಅಮಾಯಕರು ಈ ವಿಸ್ಮಯ ಆಹುತಿಗೆ ಬಲಿಯಾದರು, ಎಂದು ಡಿ. ಲಿಂಗಯ್ಯನವರು ಹೇಳಿದ್ದಾರೆ. ಶಿವಪುರ ಧ್ವಜಸತ್ಯಾಗ್ರಹದಲ್ಲಿ ನಡೆಯಬೇಕಾದ ಈ ದುರ್ಘಟನೆ ಇಲ್ಲಿ ನಡೆದು ಹೋಯಿತು. ಅಲ್ಲಿ ಪೋಲೀಸರು ಕೈಗೊಂಡಿದ್ದ ಪ್ರತೀಕಾರ ಇಲ್ಲಿ ತೀರಿಸಿಕೊಂಡರು ಎಂದು ಬಿ.ಸಿ. ಮಹಾಬಳೇಶ್ವರಪ್ಪ, ಡಿ. ಲಿಂಗಯ್ಯನವರು ಹೇಳಿದ್ದಾರೆ. ಹಿಂದೆ ಪಂಜಾಬಿನಲ್ಲಿ ನಡೆದ ಜಲಿಯನ್ ವಾಲಾಬಾಗ್ ದುರಂತವನ್ನು ಈ ಘಟನೆಯು ಸಂಪೂರ್ಣವಾಗಿ ಹೋಲುತ್ತದೆಯಲ್ಲದೆ, ಆಗಿನ ಕಾಲದ ಅಧಿಕಾರಿಗಳ ಪೈಶಾಚಿಕ ಮನೋಭಾವನೆಯನ್ನು ಎತ್ತಿ ತೋರಿಸುತ್ತದೆ ಎಂದು ಸ್ವಾತಂತ್ರ್ಯ ಹೋರಾಟಗಾರ ಕೆ. ವೆಂಕಟಕೃಷ್ಣಪ್ಪನವರು ಹೇಳಿದ್ದಾರೆ.[೬೮] ಇದೇ ರೀತಿ ಬಿ.ಕೆ. ರಾಮಚಂದ್ರನ, ಕೆ. ವೀರತಪ್ಪನವರು 'ಕರ್ನಾಟಕ ಜಲಿಯನ್ ವಾಲಬಾಗ್' ಎಂದು ಕರೆದರೆ ಡಿ. ಲಿಂಗಯ್ಯನವರು 'ಮೈಸೂರು ಜಲಿಯನ್ ವಾಲಾಬಾಗ್' ಎಂದು ಕರೆದಿದ್ದಾರೆ.

ಇಂತಹ ದುರ್ಘಟನೆಯು ಕೋಲಾರ ಜಿಲ್ಲೆಯ ಜನರ ಮೇಲಲ್ಲದೆ ಕರ್ನಾಟಕದ್ಯಾಂತ ಪ್ರಭಾವ ಬೀರಿತು. ಮೈಸೂರು ರಾಜ್ಯ 'ರಾಮರಾಜ್ಯ' ಎಂದು ಕರೆದಿರುವ ಗಾಂಧೀಜಿಯವರು ಇದನ್ನು ಖಂಡಿಸಿ ವಿಚಾರಣೆಗಾಗಿ ಸಮಿತಿ ಸೇರಿಸಿದರು ಇದರಂತೆ ಸರ್ದಾರ ವಲ್ಲಭಾಯಿಪಟೇಲ್, ಆಚಾರ್ಯ ಕೃಪಲಾನಿಯವರು ನಿಯೋಜಿತರಾಗಿ ವಿದುರಾಶ್ವತ್ಥಕ್ಕೆ ಭೇಟಿಕೊಟ್ಟರು ಎಂದು ಬಿ.ಸಿ. ಮಹಾ ಬಳೇಶ್ವರಪ್ಪನವರು (ಪುಟ

೨೯) ತಿರುಮಲೆ ಶ್ರೀರಂಗಾಚಾರ (ಪುಟ ೨೭೬) ರವರು ಹೇಳಿದ್ದಾರೆ. ಸರ್ಕಾರದ ಮೇಲೆ ಟೀಕೆಗಳು ಪ್ರತಿಭಟನೆಗಳು ಹೆಚ್ಚಾದಂತೆ ಸರ್ಕಾರವು ಇದರ ವಿಚಾರಣೆಗೆ ಒಂದು ಸಮಿತಿ ನೇಮಿಸಿತು. ಸರ್ಕಾರದ ಪರವಾಗಿ ಹೈಕೋರ್ಟ್ ನ್ಯಾಯಾಧೀಶ ಸರ್. ದೀಪರಾಮೇಶಂ ಮತ್ತು ಡಿಸೋಜಾ, ಎ.ಆರ್. ನಾಗೇಶ್ವರ ಐಯ್ಯರ್‌ರವರು ಸ್ಥಳಕ್ಕೆ ಭೇಟಿಕೊಟ್ಟು, ೫ ೧/೨ ತಿಂಗಳಲ್ಲಿ ೧೪೭ ಜನರ ಸಾಕ್ಷಿಯೊಂದಿಗೆ ವರದಿ ಮಾಡಿತು ಎಂದು ಗೆಜೆಟಿಯರನಲ್ಲಿ ತಿಳಿಸಿದೆ. ಇದನ್ನೇ ಕೆ. ವೀರತಪ್ಪನವರು ಹೇಳಿದ್ದಾರೆ.[೬೯] ಈ ಘಟನೆಯಿಂದಾಗಿ ಕರ್ನಾಟಕದಲ್ಲಿ ಮತ್ತು ದೇಶದ ಇತರ ಭಾಗದ ಕಾಂಗ್ರೆಸ್ಸಿಗರ ಮೇಲೆ ತೀವ್ರ ಪ್ರಭಾವ ಬೀರಿತು. ಅವರ ರಾಷ್ಟ್ರೀಯ ಹೋರಾಟಕ್ಕೆ ಇನ್ನಷ್ಟು ಉತ್ತೇಜನ ದೊರೆಯಿತು ಎಂದು ಎಸ್. ಚಂದ್ರಶೇಖರರವರು ಹೇಳಿದ್ದಾರೆ.[೭೦] ಮೈಸೂರು ಕಾಂಗ್ರೆಸ್ ಕಾರ್ಯದರ್ಶಿಗಳು ಎಲ್ಲಾ ಸಮಿತಿಗಳಲ್ಲಿ ಸುತ್ತೋಲೆ ಕಳುಹಿಸಿ ೨೦.೫.೩೮ ರಂದು 'ವಿದುರಾಶ್ವತ್ಥ ದಿನ' ಎಂದು ಆ ದಿನ ಮೆರವಣಿಗೆ, ಸಭೆ, ಹರತಾಳಗಳನ್ನು ಕೈಗೊಳ್ಳಬೇಕೆಂದು ನಿರ್ಣಯಿಸಿ ೨೦.೧೦.೩೮ರಂದು ವಿದುರಾಶ್ವತ್ಥ ದಿನಾಚಾರಣೆಯಲ್ಲಿ ಮಾಡಿ, ಸರ್ಕಾರದ ನೀತಿಗಳನ್ನು ಖಂಡಿಸಿದರು ಎಂದು ಗೆಜೆಟಿಯರನಲ್ಲಿ ತಿಳಿಸಿದೆ.[೭೧] ಇದನ್ನೇ ತಿರುಮಲೆ ಶ್ರೀರಂಗಾಚಾರ್, ಡಿ.ಲಿಂಗಯ್ಯ, ಕೆ. ವೀರತಪ್ಪನವರು ಹೇಳಿದ್ದಾರೆ.

೧೯೮೭ ಆಗಸ್ಟ ೭ರಂದು ೪೭ರ ಸ್ವಾತಂತ್ರ್ಯ ಉತ್ಸವ ಸ್ಮರಣಾರ್ಥವಾಗಿ ವಿದುರಾಶ್ವತ್ಥದ ಪವಿತ್ರ ಮಣ್ಣನ್ನು ವಿಶೇಷ ಕಲಶದಲ್ಲಿ ಎನ್.ಸಿ.ತಿಮ್ಮರೆಡ್ಡಿಯವರು ಮತ್ತು ಶ್ರೀಮತಿ ಅನ್ನಪೂರ್ಣದೇವಿಯವರು ಸಂಗ್ರಹಿಸಿ, ಬೆಂಗಳೂರು ವಿಧಾನಸೌಧಕ್ಕೆ ತಲುಪಿಸಿ, ಅಲ್ಲಿಂದ ಪವಿತ್ರ ಮಣ್ಣನ್ನು ೧೯೮೭ ಆಗಸ್ಟ್ ೧೫ರಂದು ಸ್ವಾತಂತ್ರ್ಯ ಪಕ್ಷ ಬೆಳೆಸಲು ದೆಹಲಿಗೆ ಕಳುಹಿಸಲಾಯಿತು ಎಂದು ಬಿ.ಕೆ. ರಾಮಚಂದ್ರನವರು ಹೇಳಿದ್ದಾರೆ. ಇಂತಹ ಮಹತ್ವದ ಘಟನೆಯ ಸ್ಥಳದಲ್ಲಿ ಸತ್ತವರ ಸ್ಮರಣೆಗಾಗಿ ನಡೆಸಿದ ಸ್ವಾತಂತ್ರ್ಯ ಸ್ತಂಭ ಇಂದಿಗೂ ವಿದುರಾಶ್ವತ್ಥದಲ್ಲಿ ರಾರಾಜಿಸುತ್ತಿದೆ.

೩.೬. ಕೆ.ಜಿ.ಎಫ್. ಸತ್ಯಾಗ್ರಹ

ಕೋಲಾರದ ಚಿನ್ನದ ಗಣಿ ಪ್ರದೇಶವನ್ನು ಕೆ.ಜಿ.ಎಫ್. ಎಂದು ಕರೆಯುತ್ತಾರೆ. (ಕರ್ನಾಟಕ ಗೋಲ್ಡ್ ಫೀಲ್ಡ್) ಸ್ವತಂತ್ರ್ಯ ಹೋರಾಟದ ಸಂದರ್ಭದಲ್ಲಿ ಇಲ್ಲಿ ಚಳುವಳಿಗಳು ಎರಡು ದೃಷ್ಟಿಕೋನ ಹೊಂದಿವೆ. ಒಂದು ಕಾರ್ಮಿಕರ ಸ್ಥಿತಿಗತಿ ಸುಧಾರಣೆಗಳು ಪಡೆಯುವುದು, ಮತ್ತೊಂದು ಸ್ವತಂತ್ರ್ಯ ಗಳಿಸಲು ಆದ್ಯತೆ, ಪ್ರೋತ್ಸಾಹ ಒದಗಿಸುವುದು. ಇಂತಹ ಪ್ರತಿಭಟನೆಗಳು ೧೯೩೦, ೧೯೩೯, ೧೯೪೬ರಲ್ಲಿ ಹೆಚ್ಚಾಗಿ ಕಂಡುಬಂದವು. ಇದರ ಬಗ್ಗೆ ಅಧ್ಯಯನ ಮಾಡಲು ಜಾನಕಿ ನಾಯರ್, ಗೋಪಿಂದಪ್ಪ, ತಿರುಮಲೆ ಶ್ರೀರಂಗಾಚಾರ್ಯರು, ಸೂರ್ಯನಾಥ ಕಾಮತರ 'ಸ್ವತಂತ್ರ್ಯ ಸಂಗ್ರಾಮದ ಸ್ಮೃತಿಗಳು', ಕೆ. ವೆಂಕಟಕೃಷ್ಣಪ್ಪನವರ 'ಕೋಲಾರ ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಾರರು' ಮೊದಲಾದ ಕೃತಿಗಳು ಸಹಕಾರಿಯಾಗಿವೆ.

೧೯೩೦ರಲ್ಲಿಯೇ ಸುಮಾರು ೨೧ ದಿನಗಳ ಕಾಲ ಕಾರ್ಮಿಕರು ತಮ್ಮ ಸೌಲಭ್ಯಗಳ ಸುಧಾರಣೆಗಾಗಿ ಮುಷ್ಕರ ಹೂಡಿದರು. ಇವರ ಸಂಖ್ಯೆ ಸುಮಾರು ೮೦,೦೦೦ ರಷ್ಟು ಮೀರಿದೆ ಎಂದು

ಜಾನಕಿನಾಯರ್‌ರವರು ಹೇಳಿದ್ದಾರೆ.[೪೨] ಮೈಸೂರು ಸಂಸ್ಥಾನ ಕಾರ್ಮಿಕರ ಫೆಡರೇಶನ್ ಅಧ್ಯಕ್ಷ ಭಾಷ್ಯ ಅವರಿಗೆ ಬೆಂಬಲಿಗರಾಗಿ ಕೆ.ಸಿ. ರೆಡ್ಡಿಯವರು ಕೆ.ಜಿ.ಎಫ್.ನ ಚಾಂಪಿಯನ್ ರೀತಿ ಕಾರ್ಮಿಕ ಸಂಘವನ್ನು ಸಂಘಟಿಸಿದರು. ಕಾರ್ಮಿಕರ ತೀವ್ರ ಗಲಭೆಗಳಿಂದಾಗಿ ಪೊಲೀಸರ ಗುಂಡಿಗೆ ಮುನಿಸ್ವಾಮಿ ಎಂಬ ಕಾರ್ಮಿಕನೊಬ್ಬನು ಬಲಿಯಾದನು ಎಂದು ಸೂರ್ಯನಾಥ ಕಾಮತರ ಸ್ವತಂತ್ರ್ಯ ಸಂಗ್ರಾಮ ಸ್ಮೃತಿಗಳು ಸಂಪುಟ-೨ ರಿಂದ ವ್ಯಕ್ತವಾಗುತ್ತದೆ.[೪೩] ೧೯೩೯ರಲ್ಲಿ ಕೆ.ಜಿ.ಎಫ್.ನಿಂದ ೫ ಮೈಲು ದೂರದಲ್ಲಿ ವಿ.ವಿ.ಗಿರಿ, ಶರ್ಮರವರ ನಾಯಕತ್ವದಲ್ಲಿ ಒಂದು ಕಾರ್ಮಿಕ ಸಂಘಟನೆ ಸ್ಥಾಪನೆಗೊಂಡಿತು. ಈ ವೇಳೆಗೆ ಸಿ.ಟಿ.ಲಕ್ಷ್ಮಣ್ ಮೊದಲಿಯರ್, ಕೆ. ವಜ್ರವೇಲುರವರು ಗಣಿಕಾರ್ಮಿಕರನ್ನು ಸಭೆ ಸೇರಿಸಿ ಭಾಷಣಗಳು ಮಾಡಲಾರಂಭಿಸಿದರು ಎಂದು ಸಿ.ಟಿ.ಲಕ್ಷ್ಮಣ್‌ರವರು ಹೇಳಿದ್ದಾರೆ.[೪೪] ಇದು ಪ್ರತಿಭಟನೆಗೆ ತಿರುಗಿ ರೈಲ್ವೆಗಳ ಮೇಲೆ ತ್ರಿವರ್ಣ ಧ್ವಜವನ್ನು ಕಾಂಗ್ರೆಸ್ಸಿಗರು ಹಾರಿಸಿದರು. ಇದರಿಂದ ಪೊಲೀಸರ ಬಂಧನಕ್ಕೆ ಒಳಗಾಗಬೇಕಾಯಿತು. ಅಂದಿನ ಜಿಲ್ಲಾಧಿಕಾರಿಯಾದ ಸುಂದರಂರವರು ಸತ್ಯಾಗ್ರಹದ ಹಾದಿಯನ್ನು ತಪ್ಪಿಸಲು ಶತಪ್ರಯತ್ನ ಮಾಡಿದರು. ಕಾಂಗ್ರೆಸ್ ಮುಖಂಡರಾಗಿದ್ದ ಶ್ರೀಗಳಾದ ಕೆ.ಸಿ.ರೆಡ್ಡಿ, ಕೆ.ಟಿ.ಭಾಷ್ಯಂ, ಅಯ್ಯಂಗಾರ, ಕೆ. ಪಟ್ಟಾಭಿರಾಮನ, ಕೆ.ಸಂಪಂಗಿ ರಾಮಯ್ಯ, ಎಚ್.ಸಿ.ದಾಸಪ್ಪ, ಟಿ.ಸುಬ್ರಮಣ್ಯ, ಎಚ್.ಸಿದ್ದಪ್ಪನವರು ಕೋಲಾರ ಜಿಲ್ಲೆಯಿಂದಲೇ ಪ್ರಜಾ ಆಂದೋಲನ ಪ್ರಾರಂಭಿಸಲು ನಿರ್ಧರಿಸಿದರು. ಅದರಂತೆ ಚಿನ್ನದ ಗಣಿ ಪ್ರದೇಶದಲ್ಲಿದ್ದ ಪ್ರತಿಬಂಧಕ ಆಜ್ಞೆಯನ್ನು ಉಲ್ಲಂಘಿಸಿದಾಗ ಪೊಲೀಸರು ಈ ಎಲ್ಲರನ್ನು ದಸ್ತಗಿರಿ ಮಾಡಿದರು. ಇದೇ ರೀತಿ ದಿನೇ ದಿನೇ ಬಂಧನಗಳು ಹೆಚ್ಚಾಗಿ, ರಾತ್ರಿ ವೇಳೆ ಬಂಧಿತರನ್ನು ಪೊಲೀಸ ವ್ಯಾನ್‌ಗಳಲ್ಲಿ ತುಂಬಿ ಒಬ್ಬೊಬ್ಬರನ್ನಾಗಿ ಕಾಡುಗಳಲ್ಲಿ ಬಿಡುತ್ತಿದ್ದರು ಎಂದು ಕೆ. ವೆಂಕಟಕೃಷ್ಣಪ್ಪನವರು ಹೇಳಿದ್ದಾರೆ.[೪೫] ಇಂತಹ 'ಸ್ವತಂತ್ರ್ಯ ಹೋರಾಟಗಾರರು ಮತ್ತೆ ಸ್ವತಂತ್ರ್ಯ ಹೋರಾಟ ಶಿಬಿರಕ್ಕೆ ಸೇರಿದಾಗ ಪ್ರಥಮದರ್ಜೆ ನ್ಯಾಯಾಧೀಶರು ಒಂದು ತಿಂಗಳು ಶಿಕ್ಷೆ ವಿಧಿಸಿ, ತಲಾ ೨೦೦ ರೂ.ಗಳು ದಂಡ ವಿಧಿಸಿದರು ಎಂದು ಸ್ವತಂತ್ರ್ಯ ಸಂಗ್ರಾಮ ಸ್ಮೃತಿಗಳಿಂದ ತಿಳಿದುಬರುತ್ತದೆ. ಸೆಕ್ಷನ್ ೩೯, ಎಂ.ಪಿ.ಆರ್. ಸೆಕ್ಷನ್ ೪೩, ಎಂ.ಪಿ. ಆಕ್ಟ್ ಅನ್ವಯ ಕಾಂಗ್ರೆಸ್ ನಾಯಕರನ್ನು ಅದರ ಸುತ್ತಲು ೫ ಮೈಲು ಫಾಸಲೆಗೆ ಪ್ರವೇಶಿಸಬಾಗದು ಎಂದು ಸೂಚಿಸಿದರು. ಅದರ ಗಣನೆಗೆ ತೆಗೆದುಕೊಂಡಿಲ್ಲ. ಕಾಂಗ್ರೆಸ್‌ಜಿಲ್ಲಾ ಸಮಿತಿ ಅಧ್ಯಕ್ಷ ರಾಜಾಆದಿನಾರಾಯಣಶೆಟ್ಟಿ ಸ್ವಯಂಸೇವಕರಿಗೆ ಹಣದ ನೆರವು ನೀಡುತ್ತಿದ್ದರು. ಇದರಲ್ಲಿ ಮಹಿಳೆಯರು ಒಳಗೊಂಡು ಸುಮಾರು ೧೦೦ ಕ್ಕೂ ಹೆಚ್ಚು ಸ್ವಯಂಸೇವಕರು ಕಾನೂನುಭಂಗ ಮಾಡಲು ಸಿದ್ಧರಾಗಿದ್ದರು ಎಂದು ತಿರುಮಲೆ ಶ್ರೀರಂಗಾಚಾರ್ಯರವರು ಹೇಳಿದ್ದಾರೆ.[೪೬]

ಸೆಕ್ಷನ್ ೩೯- ಎಂ.ಪಿ.ಆರ್. ಅನ್ನು ಉಲ್ಲಂಘಿಸಿದ ಮತ್ತು ಮೈಸೂರು ಮೈನ್ಸ ಆಕ್ಟ್ ಅನ್ನು ವಿರೋಧಿಸಿ ಎಂಬ ಭಿತ್ತಿಪತ್ರಗಳನ್ನು ಹಿಡಿದ ೧೬ ಸ್ವಯಂಸೇವಕರನ್ನು ಬೌರಿಂಗಪೇಟೆಯಿಂದ ಬಂಧಿಸಿ ಪೊಲೀಸ್ ವ್ಯಾನುಗಳ ಮೂಲಕ ರಾಯಲ್ಪಾಡಿಗೆ ಒಯ್ದು ಬಿಟ್ಟುಬಿಡಲಾಯಿತು. ಇದೇ ರೀತಿ ಕೆ.ಜಿ.ಎಫ್. ಸತ್ಯಾಗ್ರಹ ೧೯೩೯ ಸೆಪ್ಟೆಂಬರ್ ೨೬ರವರೆಗೆ ನಡೆದು, ಅನೇಕ ಸತ್ಯಾಗ್ರಹಿಗಳು ಬಂಧನಕ್ಕೊಳಗಾದರು. ಮತ್ತು ವಿವಿಧ ಶಿಕ್ಷೆಗಳನ್ನು ಅನುಭವಿಸಿದರು ಎಂದು ಗೆಜೆಟಿಯರ್‌ಗಳಿಂದ ತಿಳಿದುಬರುತ್ತದೆ.[೪೭] ಇದನ್ನೆ

ತಿರುಮಲೆ ಶ್ರೀರಂಗಾಚಾರ್ಯ, ಕೆ. ವೆಂಕಟಕೃಷ್ಣಪ್ಪ, ಸೂರ್ಯನಾಥ ಯು.ಕಾಮತ್‌ರು ಹೇಳಿದ್ದಾರೆ. ಬಂಧಿತರಾದವರು ಕಾರಾಗೃಹದಲ್ಲಿ ಇರುವಾಗಲೇ ಅವರಿಗೆ ದಂಡ ವಿಧಿಸಿ ಅದನ್ನು ವಸೂಲಿ ಮಾಡಲು ಅವರ ಮನೆಗಳನ್ನು ಜಪ್ತಿ ಮಾಡಿ ಮನೆಗಳಲ್ಲಿದ್ದ ಹಸು, ಎಮ್ಮೆ ಮುಂತಾದ ರಾಸುಗಳನ್ನು ಇತರೆ ಚರಸ್ವತ್ತುಗಳನ್ನು ಜಪ್ತಿ ಮಾಡಿ ಹರಾಜು ಹಾಕುವುದರ ಮೂಲಕ ದಂಡದ ಹಣ ವಸೂಲಿ ಮಾಡುತ್ತಿದ್ದರು ಎಂದು ಕೆ. ವೆಂಕಟಕೃಷ್ಣಪ್ಪನವರು ಹೇಳಿದ್ದಾರೆ. ಇದಾದನಂತರ ೧೯೪೬ರಲ್ಲಿ ಕೆ.ಜಿ.ಎಫ್.ನಲ್ಲಿ ಕಮ್ಯುನಿಷ್ಟನ ಮುಷ್ಕರ ನಡೆದು, ೫ ಜನ ಪೊಲೀಸರ ಗುಂಡುಗಳಿಗೆ ಬಲಿಯಾದರು ಎಂದು ಜಾನಕಿ ನಾಯರರವರು ಹೇಳಿದ್ದಾರೆ.[೪೮]

ಇಂತಹ ಬಲತ್ಕಾರಗಳು, ಹೋರಾಟಗಳು ಸತ್ಯಾಗ್ರಹ ಕಾರ್ಯಕ್ರಮದಲ್ಲಿ ನಡೆದರು ಸಂಸ್ಥಾನ ಸರ್ಕಾರ ಹಾಗೂ ಕೋಲಾರ ಜಿಲ್ಲಾ ಅಧಿಕಾರಗಳಲ್ಲಿ ಯಾವುದೇ ಬದಲಾವಣೆಗಳು ಕಂಡುಬರಲಿಲ್ಲ ಎಂದು ಹೇಳಲಾಗುತ್ತದೆ. ಮತ್ತು ಕೆ.ಜಿ.ಎಫ್. ಸತ್ಯಾಗ್ರಹ ಕುರಿತಾಗಿ ಇನ್ನಷ್ಟು ಕೃತಿಗಳು, ಲೇಖನಗಳು ಇದ್ದರು ಅವೆಲ್ಲ ಇದೇ ವಿಷಯವನ್ನು ವ್ಯಕ್ತಪಡಿಸುತ್ತವೆ ಎಂದರೆ ತಪ್ಪಾಗಲಾರದು. ಇದಾದನಂತರ ಕೋಲಾರ ಜಿಲ್ಲೆಯಲ್ಲಿ ಬಹುಮುಖ್ಯ ಘಟನೆ ಎಂದರೆ ಕ್ವಿಟ್ ಇಂಡಿಯಾ ಚಳುವಳಿ. ಇದು ಮುಂದಿನ ಅಧ್ಯಾಯದ ಭಾಗದಲ್ಲಿ ವಿವರಿಸಲು ಪ್ರಯತ್ನಿಸಿದೆ.

೩.೭. ಕೋಲಾರದಲ್ಲಿ ಕ್ವಿಟ್ ಇಂಡಿಯಾ ಚಳವಳಿ

೨ನೇ ಜಾಗತಿಕ ಮಹಾಯುದ್ಧಗಳು ನಡೆಯುತ್ತಿದ್ದ ಸಂದರ್ಭದಲ್ಲಿ ಭಾರತದಲ್ಲಿ ಕ್ರಿಪ್ಸ್‌ನ ಆಯೋಗ ಬಂದು, ಭಾರತೀಯ ಆಶೋತ್ತರಕ್ಕೆ ವಿರುದ್ಧವಾಗಿದ್ದರಿಂದ ತೀವ್ರ ಪ್ರತಿಭಟನೆಗಳು ನಡೆಯುತ್ತಿದ್ದವು. ಅದೇ ವೇಳೆಗೆ ಗಾಂಧೀಜಿಯವರು ಕ್ವಿಟ್ ಇಂಡಿಯಾ ಚಳವಳಿ ಕೈಗೊಂಡರು. ಈ ವಿಚಾರ ಪ್ರತಿ ಜಿಲ್ಲಾಕೇಂದ್ರಗಳಿಗೂ ತಲುಪಿ ಕಾಂಗ್ರೆಸ್ಸಿಗರು ಈ ಚಳುವಳಿಯನ್ನು ಸ್ವಾಗತಿಸಿದರು. ಕೋಲಾರ ಜಿಲ್ಲೆಯಲ್ಲಿ ೧೯೪೨ರ ಕ್ವಿಟ್ ಇಂಡಿಯಾ ಚಳವಳಿ ಆಗಸ್ಟ್ ೧೦-೧೨ರ ನಂತರ ವ್ಯಾಪಕವಾಗಿ ನಡೆಯಿತು. ವಿದ್ಯಾರ್ಥಿಗಳು ಶಾಲೆಗಳನ್ನು ಬಹಿಷ್ಕರಿಸಿದರು, ಮೆರವಣಿಗೆಗಳಲ್ಲಿ ಭಾಗವಹಿಸಿದರು, ಹರತಾಳಗಳಾದವು ಎಂದು ತಿರುಮಲೆ ಶ್ರೀರಂಗಾಚಾರ್ಯರವರು ಹೇಳಿದ್ದಾರೆ.[೪೯] ಗಾಂಧೀಜಿಯವರ 'ಮಾಡು ಇಲ್ಲವೆ ಮಡಿ' ಎಂಬ ಧೋರಣೆಯು ಎಲ್ಲಾ ಕಾಂಗ್ರೆಸ್ಸಿಗರ ಹೃದಯ ಮುಟ್ಟಿತು. ಕೋಲಾರ, ಚಿಕ್ಕಬಳ್ಳಾಪುರದಲ್ಲಿ ಪ್ರತಿಭಟನೆಗಳು ನಡೆದವು. ಸರ್ಕಾರದ ದಮನಕಾರೀ ನೀತಿಯ ಖಂಡನೆ ಮತ್ತು ಮೈಸೂರು ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರದ ಸ್ಥಾಪನೆಗಾಗಿ ಮೈಸೂರು ಸ್ಟೇಟ್ ಕಾಂಗ್ರೆಸ್ ಒತ್ತಾಯ ಮಾಡುತ್ತಲೇ ಇತ್ತು. ಆದರೆ ಮಹಾರಾಜ ಅದಕ್ಕೆ ಸ್ಪಂದಿಸಲಿಲ್ಲ ಎಂದು ಗೆಜೆಟಿಯರ್‌ನಲ್ಲಿ ತಿಳಿಸಿದೆ.[೫೦] ಈ ಚಳವಳಿಯಲ್ಲಿ ರೈತರು, ಕಾರ್ಮಿಕರು, ವಿದ್ಯಾರ್ಥಿಗಳು, ಮಹಿಳೆಯರು, ಕಾಂಗ್ರೆಸ್ಸಿಗರು ಎಲ್ಲರು ಸೇರಿ ತೀವ್ರ ಪ್ರತಿಭಟನೆ ನಡೆಸಿದರು. ಈ ವೇಳೆಯಲ್ಲಿ ಗೌರಿಬಿದನೂರು, ಬಂಗಾರಪೇಟೆ ರೈಲ್ವೆ ಹಳಿಗಳನ್ನು ಕೀಳಲಾಯಿತು. ಕೆ.ಜಿ.ಎಫ್.ನಲ್ಲಿ ೧,೦೦೦ ಕಾರ್ಮಿಕರ ಮೇಲೆ ಮೊಕದ್ದಮೆ ಹೂಡಲಾಯಿತು.

ಕೆ.ಸಂಪಂಗಿ ರಾಮಯ್ಯ, ಕೆ.ಪಟ್ಟಾಭಿರಾಮ, ಟಿ.ರಾಮಾಚಾರ, ಕೆ.ಸಿ.ರೆಡ್ಡಿಯವರು ಪೊಲೀಸರಿಂದ ಬಂಧಿತರಾದರು ಎಂದು ಕೆ.ಸಂಪಂಗಿ ರಾಮಯ್ಯನವರು ಹೇಳಿದ್ದಾರೆ.[೫೧] ಅನೇಕ ಐ.ಎಸ್.ಸಿ.ಗರು ಭೂಗತ ಕಾರ್ಯಗಳಲ್ಲಿ ನಿರತರಾದರು. ಜನರಲ್ಲಿ ಸ್ಫೂರ್ತಿ ತುಂಬಲು ಚಿಕ್ಕಬಳ್ಳಾಪುರದ ಲಕ್ಷ್ಮೀನಾರಾಯಣರು ಗುಪ್ತವಾಗಿ ರಾತ್ರಿಯಲ್ಲಿ ರಾಜಮುದ್ರದಲ್ಲಿ ಪತ್ರಿಕೆಗಳನ್ನು ಮುದ್ರಿಸಿ ಐ.ಎಸ್.ಸಿ.ಗರಿಗೆ ಕೊಡುತ್ತಿದ್ದರು ಎಂದು ಕೆ.ವೆಂಕಟಕೃಷ್ಣಪ್ಪನವರು ಹೇಳಿದ್ದಾರೆ.[೫೨] ವಿದೇಶಿ ವಸ್ತುಗಳ ಬಹಿಷ್ಕಾರ, ಹೆಂಡದಂಗಡಿಗಳ ಪಿಕೆಟಿಂಗ್, ತಂತಿ ಸಂಪರ್ಕ ಮಾಧ್ಯಮಗಳು ದಮನ ಮಾಡಲಾಗಿ ಸರ್ಕಾರ ಡಿಫೆನ್ಸ್ ಆಫ್ ಇಂಡಿಯನ್ ಆ್ಯಕ್ಟ ಜಾರಿಗೆ ತಂದಿತು ಎಂಬ ಹೇಳಿಕೆಯನ್ನು ಸೂರ್ಯನಾಥ ಕಾಮತರು ಹೇಳಿದ್ದಾರೆ.[೫೩]

ಪೊಲೀಸ್ ದಬ್ಬಾಳಿಕೆಯನ್ನು ಖಂಡಿಸಿ ಶ್ರೀನಿವಾಸಪುರದ ಕೆಲವು ಪಟೇಲರು ರಾಜೀನಾಮೆ ಕೊಡಲು ಬೆದರಿಕೆ ಹಾಕಿದರು ಎಂದು ಜಿ. ನಾರಾಯಣಗೌಡರು ಹೇಳಿದ್ದಾರೆ. ಪೊಲೀಸರಿಂದ ತಲೆತಪ್ಪಿಸಿಕೊಂಡವರನ್ನು ಹಿಡಿಯಲು ೫೦೦ ರೂ. ಬಹುಮಾನ ಹಣ ಘೋಷಿಸಿದರು ಎಂದು ಕೆ.ವೆಂಕಟರಾಯಪ್ಪನವರು ಹೇಳಿಕೆಯನ್ನು ಸೂರ್ಯನಾಥ ಕಾಮತರು ಹೇಳಿದ್ದಾರೆ.[೫೪] ಇದೇ ಹೇಳಿಕೆಯನ್ನು ಕೆ.ವೆಂಕಟಕೃಷ್ಣಪ್ಪನವರು ಹೇಳುತ್ತಾ ಚಿಕ್ಕಬಳ್ಳಾಪುರದ ಟೌನ್‌ಹಾಲ್‌ನಲ್ಲಿ ಹೆಂಡದಂಗಡಿಗಳ ಮುಂದೆ ಪಿಕೆಟಿಂಗ್ ಮಾಡಿ, ಐ.ಎಸ್.ಸಿ.ಗರು ಸಭೆ ಸೇರಿ, ಭಾಷಣ ಮಾಡಿದರು ಎಂದು ಹೇಳಿಕೆಯನ್ನು ಸೂರ್ಯನಾಥ ಕಾಮತರು ಹೇಳಿದ್ದಾರೆ.[೫೫] ಈ ಅವಧಿಯಲ್ಲಿ ಕೆ.ಜಿ.ಎಫ್.ನಲ್ಲಿನ ಸ್ಥಿತಿ ಬೇರೆಯಾಗಿದ್ದು ಅಲ್ಲಿನ ಕಾರ್ಮಿಕರಿಗೆ ಕಮ್ಯುನಿಷ್ಟರ ಬೆಂಬಲವಿತ್ತು. ಚಾಂಪಿಯನದೀಫ ಗಣಿಯಲ್ಲಿ ಮಾತ್ರ ಕೆ.ಸಿ. ರೆಡ್ಡಿಯವರ ನೇತೃತ್ವದಲ್ಲಿ ಕಾರ್ಮಿಕರ ಮುಷ್ಕರ ನಡೆಯಿತು ಎಂದು ಜಾನಕಿ ನಾಯರ್‌ರವರು ಹೇಳಿದ್ದಾರೆ.[೫೬] ಇನ್ನಿತರರು ಈ ಅವಧಿಯಲ್ಲಿ ಬಂಗಾರಪೇಟೆ, ಬೇತಮಂಗಲ, ಚಿಕ್ಕಬಳ್ಳಾಪುರಗಳಲ್ಲಿ ಪ್ರತಿಭಟನೆಗಳು ನಡೆಸಿದ್ದಲ್ಲದೆ, ಅವರಿಗೆ ಜಿಲ್ಲಾದ್ಯಾಂತ ಬೆಂಬಲವಿತ್ತು. ಇದರಿಂದ ಮುಷ್ಕರಗಳು, ಹರತಾಳಗಳು ಸಾಮಾನ್ಯವಾಗಿ ಹೋದವು. ವಿದ್ಯಾರ್ಥಿಗಳ ನಾಯಕ ಎಂ.ವಿ. ಕೃಷ್ಣಪ್ಪನವರು ಪೊಲೀಸರ ಕಣ್ಣುತಪ್ಪಿಸಿ ಕಾಂಗ್ರೆಸ್‌ಗೆ ಹಲವು ರೀತಿಯಲ್ಲಿ ನೆರವಾಗಿದ್ದರು ಮತ್ತು ಕನಕಪುರ ಮತ್ತು ಕೆ.ಜಿ.ಎಫ್. ನಡುವೆ ಇದ್ದ ವಿದ್ಯುತ್ ಜಾಲವನ್ನು ಕಡಿಯಲಾಯಿತು ಎಂದು ಪ್ರಹ್ಲಾದರಾವರವರು ಹೇಳಿದ್ದಾರೆ.[೫೭] ಆದರೆ ಗಾಂಧೀಜಿಯವರು ಅಹಿಂಸೆ ನೀತಿ ಇದರಲ್ಲಿ ಉಲ್ಲೇಖಿಸಿದ್ದರಿಂದ ಅನೇಕ ಭೀಕರ ಕೃತ್ಯಗಳು ನಡೆದು ೧೯೪೨ರಲ್ಲಿ ಗಾಂಧೀಜಿಯವರೆ ಕೊನೆಗೆ ಈ ಚಳವಳಿಯನ್ನು ಹಿಂತೆಗೆದುಕೊಂಡರು ಎಂದು ಎಚ್.ವಿ. ಶ್ರೀನಿವಾಸಮೂರ್ತಿ ಮತ್ತು ಆರ್. ರಾಮಕೃಷ್ಣನವರು ಹೇಳಿದ್ದಾರೆ.[೫೮] ಆದರೂ ಸ್ವಾತಂತ್ರ್ಯ ಸಮರದಲ್ಲಿ ಈ ದೇಶಾಭಿಮಾನಿಗಳು ಪ್ರಕಟಿಸಿದ ಅದ್ಭುತ ಧೈರ್ಯಶೌರ್ಯಗಳು ಅವರ ವೀರಗಾಥೆಯಾಗಿ ಜನಮನದಲ್ಲಿ ಚಿರಕಾಲ ಉಳಿಯುವಂಥಾಗಿದೆ ಎಂದು ಎಂ.ವಿ. ಕೃಷ್ಣರಾವ ಮತ್ತು ಎಂ. ಕೇಶವಭಟ್ಟರು ಹೇಳಿದ್ದಾರೆ.[೫೯]

೩.೮. ಶಿಡ್ಲಘಟ್ಟದಲ್ಲಿ ಧ್ವಜಸತ್ಯಾಗ್ರಹ

೧೯೩೮ರಲ್ಲಿ ನಡೆದ ವಿದುರಾಶ್ವತ್ಥ ಹತ್ಯಾಕಾಂಡದ ರೀತಿಯಲ್ಲಿಯೇ ೧೯೪೭ರಲ್ಲಿ ಶಿಡ್ಲಘಟ್ಟದ ತಾಲೂಕ ಕಚೇರಿ ಮುಂದೆ ಸತ್ಯಾಗ್ರಹ ನಡೆಯಿತು. ಇದು ಸ್ವತಂತ್ರ್ಯ ಗಳಿಕೆಯ ಸಮಯವಾಗಿತ್ತು.

ಮತ್ತು ಬ್ರಿಟಿಷ್ ಸರ್ಕಾರ ದಬ್ಬಾಳಿಕೆ ನೀತಿ ತೀವ್ರಗತ ಸ್ವರೂಪವೊಂದಿತ್ತು. ಸ್ವತಂತ್ರ್ಯ ಚಳವಳಿಯಲ್ಲಿ ಇದರ ವಿಶೇಷ ಕೊಡುಗೆ ಎಂಬುದು ಕಂಡುಬರುತ್ತದೆ. ಇದರಿಂದಾಗಿ ಇದರ ವಿಶ್ಲೇಷಣೆ ಈ ಮೂಲಕ ವಿವರಿಸಲಾಗಿದೆ.

ಸರ್ಕಾರದ ದಮನಕಾರಿ ನೀತಿಯನ್ನು ಸಹಿಸದ ಕಾಂಗ್ರೆಸ್ಸಿಗರು ಕೆ.ಜಿ.ಎಫ್.ನಲ್ಲಿ ನಡೆದ ಪ್ರತಿಭಟನೆಯ ಹಿನ್ನೆಲೆಯಲ್ಲಿ ಶಿಡ್ಲಘಟ್ಟದ ಟೌನ್‌ಹಾಲ್‌ನಲ್ಲಿ ಧ್ವಜಸತ್ಯಾಗ್ರಹ ಪ್ರಾರಂಭಿಸಿದರು. ಅಂದಿನ ತಾಲೂಕ್ ಕಚೇರಿ ಕಾರ್ಯಗಳು ಪೂರ್ಣವಾಗಿ ನಿಂತುಹೋದವು. ಧ್ವಜಸತ್ಯಾಗ್ರಹವನ್ನು ಶಿಡ್ಲಘಟ್ಟ ತಾಲೂಕಿನ ಕಾಂಗ್ರೆಸ್ ಅಧ್ಯಕ್ಷರಾದ ಮೇಲೂರು ಎಂ.ಎಸ್. ವೀರಪ್ಪ ಮತ್ತು ಕಾರ್ಯದರ್ಶಿ ಭಕ್ತಿರಹಳಿಯ ವೆಂಕಟರಾಯಪ್ಪನವರ ನೇತೃತ್ವದಲ್ಲಿತ್ತು. ೧೦ ದಿನಗಳ ಕಾಲ ಇದು ನಿರಂತರವಾಗಿ ನಡೆದ ಚಳವಳಿಯಲ್ಲಿನ ಅಂತಿಮದಿನದಂದು ತಿಪ್ಪೇನಹಳ್ಳಿಯಿಂದ ಸತ್ಯಾಗ್ರಹಿಗಳಿಗೆ ಬಂಡಿಗಳಲ್ಲಿ ಊಟವನ್ನು ತಂದಿದ್ದನ್ನು ಕಂಡು, ಜಿಲ್ಲಾಧಿಕಾರಿಗಳು (ಜಾರ್ಜ್‌ಮ್ಯಾಥನ್) ರೇಗಿಹೋದರು ಎಂದು ಬಿ. ವೆಂಕಟರಾಯಪ್ಪನವರು ಹೇಳಿದ್ದಾರೆ.[೬೦] ಇದು ಚಳುವಳಿಯನ್ನು ಪ್ರೋತ್ಸಾಹ ನೀಡುವುದಾಗಿದೆ ಎಂದು ತಿಳಿದು ಪೊಲೀಸರಿಂದ ಲಾಠಿಚಾರ್ಜ್ ಮಾಡಿಸಿದರು. ಅದು ವಿಫಲವಾಗಿ ಗೋಲಿಬಾರ್ ಕಾರ್ಯ ಕೈಗೊಂಡರು. ಇದರಿಂದ ಕುಂಬಾರ ನಾರಾಯಣಪ್ಪ ಮತ್ತು ರಂಗಪ್ಪ ಎಂಬ ಸ್ವತಂತ್ರ್ಯ ಹೋರಾಟಗಾರರು ಸ್ಥಳದಲ್ಲೇ ಮೃತಪಟ್ಟರು ಎಂದು ಕೆ.ವೆಂಕಟಕೃಷ್ಣಪ್ಪನವರು ಹೇಳಿದ್ದಾರೆ.[೬೧]

ಈ ಘಟನೆಯನ್ನು ಖಂಡಿಸಲು ನಡೆದ ಬೃಹತ್ ಸಾರ್ವಜನಿಕ ಸಭೆ ನಡೆಸಲಾಯಿತು. ಜಿಲ್ಲಾ ಮುಖಂಡರಾದ ಕೆ. ಪಟ್ಟಾಭಿರಾಮನರವರು ದೇಶಪ್ರೇಮಿಗಳನ್ನು ಬಲಿಕೊಟ್ಟ ಈ ಮಹಾಗ್ರಾಮವನ್ನು 'ದೇಶ ಭಕ್ತರಹಳ್ಳಿ' ಎಂದು ನಾಮಕರಣ ಮಾಡಿದರು.

೩.೯. ಮೈಸೂರು ಚಲೋ ಚಳವಳಿ

ಭಾರತಕ್ಕೆ ಸ್ವಾತಂತ್ರ್ಯ ಗಳಿಸುವುದರ ಸಂದರ್ಭದಲ್ಲಿ ಮೈಸೂರು ಸಂಸ್ಥಾನದಲ್ಲಿ ಮೈಸೂರು ಚಲೋ ಎಂಬ ಚಳವಳಿ ನಡೆಯಿತು. ಇದು ಪ್ರಮುಖವಾಗಿ ಜವಾಬ್ದಾರಿ ಸರ್ಕಾರ ಪಡೆಯುವ ಉದ್ದೇಶ ಹೊಂದಿತ್ತು. ಇದಕ್ಕೆ ಕೋಲಾರ ಪ್ರದೇಶದ ಕಾಂಗ್ರೆಸ್ಸಿಗರು ಹಿಂದೆ ಹೋಗಲಿಲ್ಲ. ಇವರ ಜೊತೆಗೆ ವಿದ್ಯಾರ್ಥಿಗಳು, ಕಾರ್ಮಿಕರು ತೀವ್ರ ಪ್ರತಿಭಟನೆ ವ್ಯಕ್ತಪಡಿಸಿದರು. ಇದರಿಂದ ಚರಿತ್ರೆ ಲೇಖನಶಾಸ್ತ್ರದಲ್ಲಿ ಇದು ಒಂದಷ್ಟು ಪ್ರಾಮುಖ್ಯತೆ ಗಳಿಸಿದೆ.

೧೯೪೬-೪೭ರ ವೇಳೆಗೆ ಅಖಿಲ ಭಾರತದಲ್ಲಾದ ಬ್ರಿಟಿಷ್ ನಿಯೋಗ ಅಧಿಕಾರ ಹಸ್ತಾಂತರದ ಪ್ರಸ್ತಾಪನೆ ಮತ್ತು ಮುಸ್ಲಿಂಲೀಗಿನ ಪಾಕಿಸ್ತಾನ ಬೇಡಿಕೆ ನಡೆದ ಹಿನ್ನೆಲೆಯಲ್ಲಿ ಮೈಸೂರು ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರದ ಸ್ಥಾಪನೆ ಆಗಬೇಕೆಂದು ಒತ್ತಾಯಿಸಿ ಮತ್ತೆ ಸುಭಾಷನಗರ (ಬೆಂಗಳೂರು)ನಲ್ಲಿ ಅಧಿವೇಶನ ನಡೆಯಿತು. ಅನಂತರ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆ ಬೌರಿಂಗಪೇಟೆಯಲ್ಲಿ ಮಾರ್ಚ್

೨೯, ೩೦ ೧೯೪೭ರಂದು ಸಭೆ ಸೇರಿ `‘ಚಲೋ ಮೈಸೂರು’ ಚಳವಳಿಗೆ ಕರೆಕೊಡುವ ತೀರ್ಮಾನ ಮಾಡಿತು ಎಂದು ತಿರುಮಲೆ ಶ್ರೀರಂಗಾಚಾರ್ಯರವರ ಲೇಖನದಿಂದ ತಿಳಿಸಿದ್ದಾರೆ.[೬೨] ಇದಕ್ಕೆ ಜಿಲ್ಲಾದ್ಯಾಂತ ವ್ಯಾಪಕ ಬೆಂಬಲ ದೊರೆಯಿತು. ೨೪.೯.೧೯೪೭ ರಾಬರ್ಟ್‌ಸನ್ ಪೇಟೆಯಲ್ಲಿ ೧೦,೦೦೦ ಕಾರ್ಮಿಕರು, ವಿದ್ಯಾಂಸರ ಗುಂಪುಸಭೆ ಸೇರಿತು. ಪೊಲೀಸರು ಅವರನ್ನು ಚದುರಿಸಲು ಲಾಠಿಪ್ರಹಾರ ಮಾಡಿ, ವಿಫಲವಾಗಿ ಗುಂಡು ಹಾರಿಸಿದರು. ಇದರಿಂದ ಸ್ಥಳದಲ್ಲೇ ಒಬ್ಬ ಸತ್ತ ಎಂದು ಕೆ. ವೆಂಕಟಕೃಷ್ಣಪ್ಪನವರು ಮತ್ತು ತಿರುಮನೆ ಶ್ರೀರಂಗಾಚಾರ್ಯರು ಹೇಳಿದ್ದಾರೆ. ಟಿ.ಕೆ. ಗಂಗಿರೆಡ್ಡಿಯವರು ಆಂಧ್ರದ ಗಡಿಯಲ್ಲಿ ಕೆಲವೊಂದು ಸ್ವತಂತ್ರ್ಯ ಹೋರಾಟಗಾರರನ್ನು ಕಲೆಹಾಕಿ ಭೂಗತ ಕಾರ್ಯದಲ್ಲಿ ತೊಡಗಿದರು. ಪೊಲೀಸ ಠಾಣೆಗಳ ಮೇಲೆ ದಾಳಿ ಮಾಡಿ ಲೂಠಿ ಮಾಡಿದರು. ‘ಮೈಸೂರು ಚಲೋ’ ಎಂಬ ಪತ್ರಿಕೆಯನ್ನು ಮುದ್ರಿಸಿ, ಪ್ರಚಾರಗೈದರು. ಅಲ್ಲದೆ ‘ಮೈಸೂರು ಚಲೋ’ಗೆ ತನ್ನ ಸಂಬಂಧಿಯನ್ನು ವ್ಯವಸ್ಥೆ ಮಾಡಿ ಕಳಿಸಿದರು ಎಂದು ಸೂರ್ಯನಾಥ ಕಾಮತರ ಸ್ವತಂತ್ರ್ಯ ಸ್ಮೃತಿಗಳು ಎಂಬ ಕೃತಿಯಲ್ಲಿ ವ್ಯಕ್ತವಾಗುತ್ತದೆ.[೬೩]

ಈ ವೇಳೆಗೆ ದಿವಾನ್ ಮಾಧವರಾಯರು ನಿವೃತ್ತರಾಗಿ ಮಹಾರಾಜರಿಂದ ಮದರಾಸಿನ ಅರ್ಕಾಟ್ ರಾಮಸ್ವಾಮಿ ಮೊದಲಿಯರರವರು ದಿವಾನರಾಗಿ ನಿಯುಕ್ತರಾಗುತ್ತಾರೆ. ಆದರೆ ಇವರು ಚಳುವಳಿಯ ವಿರುದ್ಧವಾಗಿದ್ದರಿಂದ ‘ಅರ್ಕಾಟ್ ಬಾಯ್ಕಾಟ-ಚಲೋ ಮೈಸೂರು’ ಎಂದು ಘೋಷಣೆಗಳು, ಮೆರವಣಿಗೆಗಳು, ಸಭೆಗಳು ನಾಡಿನಾದ್ಯಾಂತ ನಡೆದವು. ಈ ವೇಳೆಗೆ ಕೋಲಾರ ಜಿಲ್ಲೆಯ ಕೆ.ಸಿ. ರೆಡ್ಡಿಯವರು ಕಾಂಗ್ರೆಸ ಸಮಿತಿಯ ಅಧ್ಯಕ್ಷರಾಗಿದ್ದರು ಎಂದು ಕೆ. ವೀರತಪ್ಪನವರು ಹೇಳಿದ್ದಾರೆ.[೬೪]

ಈ ಘಟನೆಯು ಚರಿತ್ರೆಯಲ್ಲಿ ಹೆಚ್ಚಿನ ವಿಶೇಷತೆಯನ್ನು ಹೊಂದಲಿಲ್ಲವಾದರೂ ಮೈಸೂರು ಸಂಸ್ಥಾನವು ಭಾರತದ ಒಕ್ಕೂಟಕ್ಕೆ ಸೇರಲು ಮತ್ತು ಕನ್ನಡಿಗರ ರಾಜ್ಯ ಹಾಗೂ ಜನಪ್ರಿಯ ಸರ್ಕಾರ ಸ್ಥಾಪನೆಗೆ ಸ್ಫೂರ್ತಿಕೊಟ್ಟಿತು.

೧೯೪೭ ಅಕ್ಟೋಬರ್ ೨೪ ರಂದು ಜನಪ್ರಿಯ ಸರ್ಕಾರ ಸ್ಥಾಪನೆಯಾಗಿ ಮೈಸೂರು ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೈಸೂರಿನ ನೂತನ ಮಂತ್ರಿಗಳ ಹೆಸರುಗಳು ಪ್ರಕಟವಾದವು. ಕೋಲಾರದ ಕೆ.ಸಿ.ರೆಡ್ಡಿಯವರು ಮೈಸೂರು ರಾಜ್ಯಕ್ಕೆ ಪ್ರಥಮ ಮುಖ್ಯಮಂತ್ರಿಗಳಾಗಿ ಆಯ್ಕೆಗೊಂಡರು. ಮತ್ತು ಎಚ್.ಎಸ್.ದಾಸಪ್ಪ, ಕೆ.ಟಿ.ಭಾಷ್ಯಂ ಮುಂತಾದವರು ಮಂತ್ರಿಮಂಡಲದ ಸದಸ್ಯರಾದರು. ಇಲ್ಲಿಗೆ ಬ್ರಿಟಿಷರ ಅಧಿಪತ್ಯ ಅಂತ್ಯವಾಗಿ ಭಾರತದಲ್ಲಿ ಸ್ವತಂತ್ರ್ಯ ಉಂಟಾಯಿತು. ಅಂತೆಯೇ ಕೋಲಾರ ಪ್ರದೇಶದ ವಸಾಹತುಶಾಹಿಗಳ ಚರಿತ್ರೆ ಮುಕ್ತಾಯಗೊಂಡಿತು ಎಂದು ಗೆಜೆಟಿಯರ್‌ನಿಂದ ತಿಳಿಯಲಾಗುತ್ತದೆ.[೬೫] ಅಲ್ಲದೆ, ಕೆ.ವೆಂಕಟಕೃಷ್ಣ, ಸೂರ್ಯನಾಥ ಕಾಮತರು ಇದನ್ನೇ ಹೇಳುತ್ತಾರೆ. ಸ್ವತಂತ್ರ್ಯ ಭಾರತದಲ್ಲಿ ಮೈಸೂರು ಲೀನವಾಗಿ ಮುಂದೆ ‘ಕರ್ನಾಟಕ’ ರೂಪತಾಳಿತು. ಇದಿಷ್ಟು ಕೋಲಾರ ಪ್ರದೇಶದ ವಸಾಹತುಶಾಹಿ ಚರಿತ್ರೆ ಎಂದು ಪರಿಗಣಿಸಲಾಗುತ್ತದೆ. ಇನ್ನು ಮುಂದಿನ ಅಧ್ಯಾಯವು ಸ್ವಾತಂತ್ರ್ಯೋತ್ತರ ಕಾಲದ ಚರಿತ್ರೆಯನ್ನು ಮುಂದಿನ ಅಧ್ಯಾಯದಲ್ಲಿ ವಿವರಿಸಲ್ಪಟ್ಟಿದೆ.

೬

ದಮನಿತರ ಹೋರಾಟಗಳು

ಆಧುನಿಕ ಚರಿತ್ರೆ ಲೇಖನಶಾಸ್ತ್ರವು ವಿವಿಧ ಜನರು ಮತ್ತು ಜನಸಮುದಾಯಗಳ ನಡುವೆ ಅಧ್ಯಯನಗಳು ಮಾಡಲಾರಂಭಿಸಿದ. ಇದಕ್ಕೆ ಪ್ರಮುಖ ಕಾರಣಗಳೆಂದರೆ ಆಧುನಿಕ ಕಾಲದಲ್ಲಿ ವಸಾಹತುಶಾಹಿಗಳ ಬೆಳವಣಿಗೆ ಮತ್ತು ಅವರ ಸಂಸ್ಕೃತಿ ವಿಸ್ತರಣೆಯಿಂದ ಸ್ಥಳೀಯ ಪ್ರದೇಶದಲ್ಲಿ ಉಂಟಾದ ಬದಲಾವಣೆಗಳು, ಸಾಮಾಜಿಕ ಸುಧಾರಕರು, ಸಂಘಟನೆಗಳು, ಸುಧಾರಣೆಗಳು, ರಾಷ್ಟ್ರೀಯತೆ ಮುಂತಾದವುಗಳ ಪ್ರಭಾವಗಳಾಗಿವೆ. ಇವೆಲ್ಲವು ೧೯ ಮತ್ತು ೨೦ನೇ ಶತಮಾನದಲ್ಲಿ ಏಕಕಾಲದಲ್ಲಿ ನಡೆದಿರುವುದರಿಂದ ಇದಕ್ಕೆ ತಕ್ಕಂತೆ ಚರಿತ್ರೆ ಲೇಖನಾಶಾಸ್ತ್ರದ ಧೋರಣೆಯು ಸಹ ಬದಲಾಯಿಸಿಕೊಂಡಿದೆ. ಅಂದರೆ, ಚರಿತ್ರೆ ಲೇಖನಶಾಸ್ತ್ರ ಪ್ರಬಲ ರಾಜವಂಶಗಳು, ಪ್ರಬಲ ಶಕ್ತಿ ಸಂಘಟನೆಗಳನ್ನು ಅಧ್ಯಯನ ಮಾಡುವುದಲ್ಲದೆ ಅವುಗಳ ಜತೆಯಲ್ಲಿಯೆ ಇತರೆ ಪ್ರಾಮುಖ್ಯತೆ ಗಳಿಸಿರುವ ಜನಸಮುದಾಯ ಚರಿತ್ರೆಗಳನ್ನು ಅಧ್ಯಯನ ಮಾಡಿದೆ. ಅಂತಹ ಜನ ಸಮುದಾಯಗಳಾದ ದಲಿತ ಚರಿತ್ರೆ, ಕೆಳವರ್ಗದವರ ಚರಿತ್ರೆ, ಮಹಿಳಾ ಚರಿತ್ರೆ, ರೈತರು, ಕಾರ್ಮಿಕರ ಚರಿತ್ರೆ ಮುಂತಾದವುಗಳಾಗಿವೆ.

ಈ ಎಲ್ಲಾ ಚರಿತ್ರೆಗಳು ಆಧುನಿಕ ಯುಗದಲ್ಲಿ ಕಂಡುಬಂದದ್ದು ಪ್ರಾಮುಖ್ಯತೆ ಹಾಗೂ ವಿಶೇಷತೆಯನ್ನು ಪಡೆದಿವೆ. ಇವುಗಳಲ್ಲದರ ಪರಿಜ್ಞಾನದಿಂದ ಚರಿತ್ರೆಯನ್ನು ವಾಸ್ತವತೆಯನ್ನು ತಿಳಿಯಲು ಅನುಕೂಲಕರವಾಗಿದೆ. ವಿವಿದ ವಿದ್ವಾಂಸರು, ಲೇಖಕರು, ಸಂಶೋಧನಕಾರರು, 'ಹಲವು ವಿಜ್ಞಾನ-ಜ್ಞಾನ ಶಾಖೆಗಳಲ್ಲಿ ತಮ್ಮ ಪ್ರತಿನಿಧಿಯನ್ನು ವ್ಯಕ್ತಪಡಿಸುವಾಗ ಚರಿತ್ರೆ ಎಂಬ ಜ್ಞಾನಶಾಖೆ ಗರ್ಭದಲ್ಲಿ ಅವೆಲ್ಲವು ಅಂತರ್‌ಗತಗೊಳ್ಳುವುದು ಎಲ್ಲರಿಗೂ ತಿಳಿದ ವಿಷಯ. ಇದರಂತೆ ಚರಿತ್ರೆಲೇಖನ ಶಾಸ್ತ್ರವು ಪುನರ್‌ಕರಣಗೊಂಡಿರುವುದು ಸಹಜವಾಗಿದೆ. ಇದು ಒಂದು ರಾಷ್ಟ್ರ, ದೇಶ ರಾಜ್ಯದ ಚರಿತ್ರೆಗಳಲ್ಲಿ ಅಲ್ಲದೆ ಜಿಲ್ಲೆಗಳಲ್ಲಿಯೂ ಸಹ ಅಧ್ಯಯನ ಮಾಡುವಾಗ ಅದರದೇ ಎಲ್ಲೆ, ಪರಿಮಿತಿಯಲ್ಲಿ ಕಂಡುಬರುತ್ತದೆ. ಈ ಹಿನ್ನೆಲೆಯಲ್ಲಿ ಹೋರಾಟ ಪ್ರದೇಶದ ಸ್ವಾತಂತ್ರ್ಯ ಹೋರಾಟ ಘಟ್ಟ ಅಥವಾ ವಸಾಹತುಶಾಹಿ ಆಡಳಿತ ಕಾಲದ ಚರಿತ್ರೆಯನ್ನು ಅಧ್ಯಯನ ಮಾಡುವಾಗ ಇಂತಹ ಚರಿತ್ರೆ ಲೇಖನಶಾಸ್ತ್ರದ ವಿವಿಧ ಅಯಾಮಗಳು ದೃಷ್ಟಿಕೋನಗಳು ಕಂಡುಬಂದಿದ್ದು ಪ್ರಸ್ತುತ ಅಧ್ಯಾಯ ಮೂರು ಮತ್ತು ಅಧ್ಯಾಯ ನಾಲ್ಕರಲ್ಲಿ ವಿವರಿಸುವ ಪ್ರಯತ್ನ ಮಾಡಲಾಗಿದೆ.

ಈ ಚರಿತ್ರೆಯ ವಿವಿಧ ಆಯಾಮಗಳನ್ನು ಅಧ್ಯಯನ ಮಾಡುವ ಮುನ್ನ ಸ್ಥಳೀಯ ಆಡಳಿತ ಬೆಳವಣಿಗೆ ತಿಳಿಯುವುದು ಅಗತ್ಯವಾಗಿದೆ. ಈ ಕುರಿತಾಗಿ ಅಧ್ಯಯನಕಾರರಲ್ಲಿ ತಿಳಿಸಿದರು ಕೂಡ ಕೆಲವೊಂದು ಮುಖ್ಯಾಂಶಗಳು ಗಮನಿಸುವುದಾಗಿದೆ. ೧೭೯೨ರಲ್ಲಿ ಬ್ರಿಟೀಷ್ ಆಡಳಿತಶಾಹಿ ಟಿಪ್ಪುವನ್ನು ಸೋಲಿಸುವುದರ ಮೂಲಕ ಮೈಸೂರು ರಾಜ್ಯದ ಮೇಲೆ ಅಧಿಕಾರ ಸಾಧಿಸಿತು. ಇದೇ ಹಿನ್ನೆಲೆಯಲ್ಲಿಯೇ ಕೋಲಾರ ಪ್ರದೇಶವು ಮೈಸೂರು ರಾಜ್ಯದ ಒಂದು ಭಾಗವಾಯಿತು.[೬] ೧೮೮೧ರ ನಂತರ ಬ್ರಿಟೀಷ್ ಕಮಿಷನರ್‌ಗಳಿಂದ ಮತ್ತು ಮೈಸೂರು ಒಡೆಯರ ನೇರ ಆಡಳಿತ ಹೊಂದಿದೆಯಾದರೂ ಬ್ರಿಟಿಷರ ಅಧೀನದಲ್ಲಿಯೇ ಆಡಳಿತದ ನೀತಿ ನಿಯಮಗಳೆಲ್ಲವೂ ಮುಂದುವರೆದವು. ಇದು ದ್ವಿಮುಖ ಸರ್ಕಾರ ಆಡಳಿತ ಎಂದೆನಿಸಿತು. ದಿವಾನರು ಈ

ಆಡಳಿತದ ಸೂತ್ರದಾರಿಗಳಾಗಿದ್ದರು.[೬೬] ಈ ಆಡಳಿತದ ಕಾನೂನು, ನೀತಿಗಳೆಲ್ಲವು ಕೋಲಾರ ಪ್ರದೇಶದಲ್ಲಿ ಮುನ್ನಡೆದಿವೆ. ಅವುಗಳಲ್ಲಿ ಯಾವುದೇ ರೀತಿಯ ವ್ಯತ್ಯಾಸಗಳು ಕಂಡುಬರುವುದಿಲ್ಲ ಎಂಬುದಾಗಿ ಗೆಜೆಟಿಯರ್‌ಗಳಿಂದ ಹಾಗೂ ಮೈಸೂರು ಆಡಳಿತ ಚರಿತ್ರೆ ಕೃತಿಗಳಿಂದ ವ್ಯಕ್ತವಾಗುತ್ತದೆ. ೨೦ನೇ ಶತಮಾನದಲ್ಲಿ ಅಂದರೆ ೧೯೨೦ರ ನಂತರವೇ ಕೋಲಾರ ಪ್ರದೇಶದಲ್ಲಿ ಸ್ವಾತಂತ್ರ್ಯ ಹೋರಾಟದ ಲಕ್ಷಣ ಪ್ರಬಲವಾಗಿ ಕಂಡುಬಂದಿದ್ದು,[೬೭] ಈ ಹೋರಾಟ ಘಟ್ಟದಲ್ಲಿ ಸೇರ್ಪಡೆಯಾದ ಹಲವು ಜನಸಮುದಾಯಗಳ ಚರಿತ್ರೆಯನ್ನು ಪ್ರಸ್ತುತ ಅಧ್ಯಯನಗಳಲ್ಲಿ ವಿವರಿಸಲಾಗಿದೆ. ಅಂದರೆ ಸ್ವಾತಂತ್ರ್ಯ ಹೋರಾಟ ಘಟ್ಟದಲ್ಲಿನ ದಲಿತ ಚರಿತ್ರೆ, ಮಹಿಳಾ ಚರಿತ್ರೆ, ರೈತರು ಕಾರ್ಮಿಕರ ಚರಿತ್ರೆ ಎಂಬುದಾಗಿ ವಿಂಗಡಿಸಿ ಕ್ರಮಾನುಗತವಾಗಿ ವಿವರಿಸಲಾಗಿದೆ. ಈ ಪ್ರತಿಯೊಂದು ಚರಿತ್ರೆಯಲ್ಲಿ ಆ ಸಮುದಾಯಗಳ ಸ್ಥಿತಿಗತಿಗಳು, ಹೋರಾಟಗಳು ಹಾಗೂ ಅದರ ಸ್ಥಿತಿಗತಿಗಳನ್ನು ಚರಿತ್ರೆ ಲೇಖನಾ ಶಾಸ್ತ್ರದಲ್ಲಿ ವಿವರಿಸಲು ಯತ್ನಿಸಲಾಗಿದೆ. ಇದರಿಂದ ಆಧುನಿಕ ಚರಿತ್ರೆ ಲೇಖನಶಾಸ್ತ್ರವು ಹೊಸ ಆಯಾಮಗಳನ್ನು ಹೊಂದಿದ್ದು ವೈಶಿಷ್ಟ್ಯತೆಯನ್ನು ಪಡೆದಿದೆ ಎಂಬುದನ್ನು ವ್ಯಕ್ತವಾಗುತ್ತದೆ.

೩.೧೦. ದಲಿತ ಚರಿತ್ರೆ

ಸಾಮಾಜಿಕ, ಸಾಂಸ್ಕೃತಿಕ ಮತ್ತು ಆರ್ಥಿಕ ಹಿನ್ನೆಲೆಯಲ್ಲಿ ದಲಿತ ಚರಿತ್ರೆ ಮತ್ತು ಕೆಳವರ್ಗದ ಚರಿತ್ರೆಗಳು ಹೋರಾಟ ಘಟ್ಟದಲ್ಲಿ ಕಂಡುಬಂದಿರುವುದರ ಮೂಲಕ ಪ್ರಾಮುಖ್ಯತೆ ಮತ್ತು ವಿಶೇಷತೆ ಗಳಿಸಿವೆ. ಪ್ರಾಯಶಃ ಇವು ಚರಿತ್ರೆಯ ಹೊಸ ಆಯಾಮಗಳಾಗಿವೆ ಎಂದರೆ ತಪ್ಪಾಗಲಾರದು. ಪ್ರಸ್ತುತ ಅಧ್ಯಯನ ಭಾಗದಲ್ಲಿ ಈ ಚರಿತ್ರೆಗಳನ್ನು ಸರಳವಾಗಿ ವಿವರಿಸುವ ಸಲುವಾಗಿ ಮೊದಲಿಗೆ ದಲಿತ ಚರಿತ್ರೆಯನ್ನು ಅನಂತರ ಕೆಳವರ್ಗದ ಚರಿತ್ರೆಯನ್ನು ವಿವರಿಸಲಾಗಿದೆ. ಆಧುನಿಕ ಚರಿತ್ರೆಯಲ್ಲಿ ಉಂಟಾದ ಹೊಸ ತಿರುವು ವಿಶ್ಲೇಷಣೆಗಳಲ್ಲಿ ದಲಿತರ ಚರಿತ್ರೆ ಪ್ರಾಮುಖ್ಯತೆ ಗಳಿಸಿದೆ. ಅದರಂತೆ ಬಹುವ್ಯಾಪಕ ಚರಿತ್ರೆಯನ್ನು ಹೊಂದಿದೆ. ಆದರೂ ಈ ಅಧ್ಯಯನ ವ್ಯಾಪ್ತಿ ಹಾಗೂ ಸ್ವರೂಪ ದೃಷ್ಟಿಯಿಂದ ಕೋಲಾರ ಪ್ರದೇಶದ ದಲಿತ ಚರಿತ್ರೆಯ ದಲಿತರ ಸಾಮಾಜಿಕ ಹಾಗೂ ಆರ್ಥಿಕ ಸ್ಥಿತಿಗತಿಗಳು, ಸುಧಾರಣೆಗಳು ಹಾಗೂ ಸ್ವಾತಂತ್ರ್ಯ ಹೋರಾಟದಲ್ಲಿ ಅವರ ಪಾತ್ರ ಮತ್ತು ಮಹತ್ವಗಳನ್ನು ಮಾತ್ರ ವಿವಿಧ ಕೃತಿಗಳು, ಲೇಖನಿಗಳನ್ನು ಅವಲೋಕಿಸುವುದರ ಮೂಲಕ ಸೈದ್ಧಾಂತಿಕವಾಗಿ ವಿವರಿಸಲು ಈ ಕೆಳಕಂಡಂತೆ ಕಿರುಪ್ರಯತ್ನ ಮಾಡಲಾಗಿದೆ.

ಕೋಲಾರ ಪ್ರದೇಶದ ಸ್ವಾತಂತ್ರ್ಯ ಹೋರಾಟ ಘಟ್ಟದಲ್ಲಿ ದಲಿತರ ಚರಿತ್ರೆಯನ್ನು ಅಧ್ಯಯನ ಮಾಡಲು ಹಲವಾರು ಕೃತಿಗಳು ಲಭ್ಯವಾಗಿವೆ. ಅವುಗಳಲ್ಲಿ ಪ್ರಮುಖವಾಗಿ ಫ್ರಾನ್ಸಿಸ್ ಬುಕಾನನರವರ ಪ್ರವಾಸಿ ದಾಖಲಾತಿ ಕೃತಿಗಳು. ಬಿ.ಎಲ್. ರೈಸ್‌ರವರ '೧೮೭೭ರ ಗೆಜೆಟಿಯರ್', ಪದ್ಮನಾಭರವರ ಸಂಪಾದಿಸಿರುವ '೧೯೭೧ರ ಜನಗಣತಿ' ಎಂಬ ಕೃತಿ. ವಿ.ಎನ್.ನರಸಿಂಹ ಅಯ್ಯಂಗಾರ್‌ರವರ ಸಂಪಾದಿಸಿರುವ '೧೯೯೧ರ ಜನಗಣತಿ' ಕೃತಿ. ಎಸ್. ಚಂದ್ರಶೇಖರ್‌ರವರ 'ದಕ್ಷಿಣ ಭಾರತ ವಸಾಹತುಶಾಹಿ: ರಾಷ್ಟ್ರೀಯತೆ ಮತ್ತು ಸಂಘರ್ಷ' ಎಂಬ ಕೃತಿ ಹಾಗೂ 'ಕರ್ನಾಟಕ ಚರಿತ್ರೆ ಸಂಪುಟ ೭' ಸಿದ್ದವ್ವನಹಳ್ಳಿ ಕೃಷ್ಣಶರ್ಮರವರ 'ಗಾಂಧಿ ಮತ್ತು ಕರ್ನಾಟಕ' ಎಂಬ ಕೃತಿ, ವೇಮಗಲ್ ಸೋಮಶೇಖರ್‌ರವರ 'ಕೋಲಾರ ಜಿಲ್ಲೆಯಲ್ಲಿ ಮಹಾತ್ಮ ಗಾಂಧಿ' ಎಂಬ ಕೃತಿ. ಸೂರ್ಯನಾಥ ಕಾಮತ್‌ರು ಸಂಪಾದನ ಕೃತಿಗಳಾದ 'ಸ್ವಾತಂತ್ರ್ಯ

ಸಂಗ್ರಾಮದ ಸ್ಮೃತಿಗಳು' ಎಂಬ ಸಂಪುಟಗಳು. ಜಾನಕಿ ನಾಯರ್‌ರವರ 'ಮೈನರ್ಸ್ ಅಂಡ್ ಮಿಲ್‌ಹ್ಯಾಂಡ್ಸ್' ಎಂಬ ಕೃತಿ. ಬಿ. ಜಯದೇವಪ್ಪ ಅವರ 'ಚಿಂತಾಮಣಿ ತಾಲೂಕು ದರ್ಶನ', ದೇವರಾಜಯ್ಯನವರ 'ಸಿರಿನಂದಿ', ಚಾಂಡಾಳರವರ 'ಕರ್ನಾಟಕ ದಲಿತ ಚಳುವಳಿ ಮತ್ತು ಅಂಬೇಡ್ಕರ'. ಡಿ. ಲಿಂಗಯ್ಯನವರ 'ಶಿವಪುರ ಧ್ವಜ ಸತ್ಯಾಗ್ರಹ', ಎಚ್.ಎಂ.ವಿ. ಕೃಷ್ಣರಾವ್ ಮತ್ತು ಎಂ. ಕೇಶವಭಟ್ಟ ಅವರ 'ಕರ್ನಾಟಕ ಇತಿಹಾಸ ದರ್ಶನ' ಎ.ಆರ್. ರಾಜಶೇಖರಯ್ಯನವರ ಸಂಪಾದನ ಕೃತಿಗಳಾದ 'ಡಾ. ಬಾಬಾಸಾಹೇಬ ಅಂಬೇಡ್ಕರ ಬರಹಗಳು ಮತ್ತು ಭಾಷಣಗಳು' ಮುಂತಾದ ಕೃತಿಗಳು ಪ್ರಸ್ತುತ ಅಧ್ಯಯನಕ್ಕೆ ನೆರವಾಗಿವೆ.

I

ಪ್ರಬಲ ವರ್ಗಗಳಿಂದ ತುಳಿತಕ್ಕೆ ಒಳಗಾದವರು, ಶೋಷಣೆಗೆ ಒಳಗಾದವರು ಮತ್ತು ಎಲ್ಲಾ ಧರ್ಮ, ಜಾತಿಗಳಲ್ಲಿರುವ ಬಡವರು, ಕೂಲಿಕಾರರು, ಕಾರ್ಮಿಕರು, ಪರಿಶಿಷ್ಟ ಜಾತಿ ವರ್ಗದವರು 'ದಲಿತರು' ಎಂದು ಬಿ. ಕೃಷ್ಣಪ್ಪನವರು ಮಾರ್ಕ್ಸ್‌ವಾದಿ ಹಿನ್ನೆಲೆಯಲ್ಲಿ ದಲಿತರು ಎಂಬುದನ್ನು ಅರ್ಥೈಸಿದ್ದಾರೆ.[೬೯] ಪ್ರಾಚೀನ ಕಾಲದಿಂದಲೂ ಅನುಕರಣೆಯಾಗಿ ಬಂದ ವರ್ಣಪದ್ಧತಿಯಂತೆ ಅಸ್ಪೃಶ್ಯರನ್ನು (ದಲಿತರು) ಜಾತೀಯ ಹೊರಗಿನವರು ಎಂದು ಕರೆಯುತ್ತಾರೆ ಅರವಿಂದ ಮಾಲಗತ್ತಿಯವರು ಅಂಬೇಡ್ಕರ್‌ರವರ ವಾದ ಸರಣಿಯಲ್ಲಿ ಹೇಳಿದ್ದಾರೆ.[೭೦] ಕೃಷಿಕರು, ಕಾರ್ಮಿಕರಾಗಿ ದುಡಿಯುತ್ತಿದ್ದು, ಜಾತಿ ವ್ಯವಸ್ಥೆಯಿಂದ ಕೆಳಸ್ತರದವರಾದವರೆ ದಲಿತರು. ಅವರನ್ನು ನಿಮ್ನ ವರ್ಗದವರೆಂದು ಸಹ ಕರೆಯುತ್ತಾರೆ. ಇಂತಹ ಜನರನ್ನು ಕೇರಳದಲ್ಲಿ ಪುಲಿಯ, ತಿಯ್ಯ ಪರೆಯ ಹಾಗೂ ಈಳವ ಎಂದಾಗಿ, ಕರ್ನಾಟಕದಲ್ಲಿ ಹೊಲೆಯ, ಮಾಲ, ಮಾದಿಗರೆಂದು ತಮಿಳುನಾಡಿನಲ್ಲಿ ಪಲ್ಲರು ಪರೆಯರು ಎಂದಾಗಿ ಕರೆಯಲ್ಪಟ್ಟಿದ್ದಾರೆ ಎಂದು ಎಸ್. ಚಂದ್ರಶೇಖರರವರು ಹೇಳಿದ್ದಾರೆ.[೭೧] ಇದನ್ನೇ ಪದ್ಮನಾಭ ವಿ.ಎನ್. ನರಸಿಂಹ ಅಯ್ಯಂಗಾರ್ ಅವರು ಬಿ.ಎಲ್. ರೈಸ್‌ರವರ ಕೃತಿಗಳಲ್ಲಿ ಕಾಣಲಾಗಿದೆ. ಒಟ್ಟಾರೆ ದಲಿತರೆಂದರೆ ಸಮಾಜದ ಕೆಳಸ್ತರದವರು ಜಾತಿಯ ಹೊರಗಿನವರು, ಅಸ್ಪೃಶ್ಯರು, ಅಂತ್ಯಜರು, ನಾಮಶೂದ್ರರು ಎಂಬುದಾಗಿ ಕರೆಯುತ್ತಾರೆ ಎಂದು ಮಂಗ್ಳೂರ ವಿಜಯ್‌ರವರು ಗುರುತಿಸಿದ್ದಾರೆ.[೭೨]

ಇಂತಹ ದಲಿತರಲ್ಲಿ ಹಲವು ಬಗೆಯ ಒಳಗುಂಪುಗಳಿದ್ದು, ಬಹುತೇಕವಾಗಿ ಆಂಧ್ರಪ್ರದೇಶ, ತಮಿಳುನಾಡಿನಿಂದ ಬಂದಿರುವುದಾಗಿದ್ದಾರೆ ಎಂದು ಫ್ರಾನ್ಸಿಸ್ ಬುಕಾನನವರ ಪ್ರವಾಸಿ ದಾಖಲಾತಿ ಕೃತಿಗಳು, ಎಂ.ವಿ. ಕೃಷ್ಣರಾವ ಮತ್ತು ಎಂ. ಕೇಶವಭಟ್ಟ ರವರ ಕೃತಿಯಾದ ಕರ್ನಾಟಕ ಇತಿಹಾಸ ದರ್ಶನ ಹಾಗೂ ಜಾನಕಿ ನಾಯರ್‌ರವರ 'ಮಿನರ್ಸ್ ಆ್ಯಂಡ್ ಮಿಲ್‌ಹ್ಯಾಂಡ್' ಎಂಬ ಕೃತಿಗಳಿಂದ ವ್ಯಕ್ತವಾಗುತ್ತದೆ. ಇಂತಹ ಜನರನ್ನು ವಡ್ಡರು, ಉಳ್ಳಿತಿಗಳು, ಅಗಸರು, ಹೊಲೆಯರು ಮುಂತಾದ ಹೆಸರುಗಳಿಂದ ಗುರುತಿಸಿದ್ದಾರೆ.[೭೩] ಇಂತಹ ಜನರು ಹೆಚ್ಚಾಗಿ ವೈಷ್ಣವ ಧರ್ಮವರಾಗಿದ್ದು, ತಿರುಪತಿಯಲ್ಲಿರುವ ಕೆಂಪುಮಲ್ಲಾರಿ ಐನಾರು ಸಾತನನ ಎಂಬ ಗುರುವನ್ನು ಹೊಂದಿದ್ದಾರೆ ಎಂದು ಬುಕಾನನರವರು ಹೇಳಿದ್ದಾರೆ. ಇದನ್ನೇ ಶ್ರೀಮತಿ ಯಶೋಧರವರು ಹೇಳಿದ್ದಾರೆ. ಪಲ್ಲಿವಾನಲು ಎಂಬ ದಲಿತ ಜನರು ಮೈಸೂರು ಒಡೆಯರ ಕಾಲದಲ್ಲಿಯೇ ಕೋಲಾರ, ಬೆಂಗಳೂರು ಪ್ರದೇಶಗಳಲ್ಲಿ ವಲಸೆ ಬಂದು, ನೆಲೆಸಿದ್ದಾರೆ. ಮೋಚಿ ಎಂಬುದು ಇವರ ಇನ್ನೊಂದು ಶಾಖೆಯಾಗಿದೆ ಎಂದು ಎಂ.ವಿ. ಕೃಷ್ಣರಾವ್ ಮತ್ತು ಎಂ. ಕೇಶವಭಟ್ಟರು ಹೇಳಿದ್ದಾರೆ.[೭೪] ಈ

ಎಲ್ಲ ಜನರನ್ನು ೧೯೮೧ರಲ್ಲಿ ನಡೆದ ಜನಗಣತಿಯಲ್ಲಿ ರೀಪೋರ್ಟ್‌ನಲ್ಲಿ ೧೯೩೧ರ ಕೋಲಾರ ಪ್ರದೇಶದ ಜನಸಂಖ್ಯೆಯಲ್ಲಿ ರಿಪೋರ್ಟ್‌ನಲ್ಲಿ ೧೯೩೧ರ ಕೋಲಾರ ಪ್ರದೇಶದ ಜನಸಂಖ್ಯೆಯಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದವರೆಂದು ಎರಡು ಗುಂಪುಗಳಾಗಿ ವಿಂಗಡಿಸಿರುವುದು ಕಂಡುಬರುತ್ತದೆ.[೨೦] ಪರಿಶಿಷ್ಟ ವರ್ಗದ ಗುಂಪಿನಲ್ಲಿ ಆದಿಯಾನ, ಬಾರಡ, ಚೆಂಡು, ಗಾಂಡ, ನಾಯಕಪಡ, ರಾಜುಗಂಡ, ಗಾಡಲ, ಹಕ್ಕಿ ಪುಕ್ಕಿ, ಇಲೂರರು, ಜೆನ ಶುರುಭ. ಗೌಡಲ, ಕಾತೋಡಿ, ಕಾತ್ತು ನಾಯಕ, ಕೊರಮಾಮ್, ಮೆಲ್ಯೆಕೊಡಿ, ಮಲಸೂರು ಮುಂತಾದವರ ಸೇರಿಸಿದ್ದಾರೆ. ಪರಿಶಿಷ್ಟ ಜಾತಿ ಗುಂಪಿನಲ್ಲಿ ಆದಿದ್ರುವಿಡ್, ಆದಿಆಂದ್ರ, ಆದಿಕರ್ನಾಟಕ, ಅದೇ ಮೇಲೆ, ಖೈರಾ, ಲಂಬಾಣಿ, ಜಂಗಮ, ಭೋವಿ, ಬಂದಿಲಾ, ಚಲವಾದಿ, ಚೆನ್ನಯ್ಯ, ಚೆನ್ನಿದಾಸಲು, ಹೊಲೆಯ, ಡೊಂಬರು, ಕೊರಬ, ಕೊರಮ, ಮಹಿಯ, ಸಿದ್ದಯ್ಯ, ತೋಟಿ, ತಲರಾ, ನೀರುಗಂಟೆ ಮುಂತಾದವರನ್ನು ಸೇರಿದ್ದಾರೆ.

ಇದರ ಹಂಚಿಕೆಯಲ್ಲಿ ನೋಡಿದಾಗ ಹೊಲೆಯರು ೫೭,೬೦೫, ಮಾದಿಗರು ೩೯,೬೦೭, ಕೊರಬರು ೩೫.೩೦೪ ಮುಂತಾಗಿ ಕಂಡು ಬರುತ್ತಾರೆ ಎಂದು ಬಿ.ಎಲ್. ಜೋಯಿಸ್ ಅಂದಾಜು ಮಾಡಿದ್ದಾರೆ.[೨೧] ಇವರ ಒಟ್ಟಾರೆ ಬೆಳವಣಿಗೆಯಲ್ಲಿ ಗುರುತಿಸುವದಾದರೆ (ಸಾವಿರಗಳಲ್ಲಿ) ೧೦.೦೦೦ ದಿಂದ ೨೦.೦೦೦ ರವರೆಗೆ (೪ನೇ ವರ್ಗದವರೆಂದು) ೫೦೦೦ ರಿಂದ ೧೦೦೦೦೦ ದವರೆಗೆ (೫ನೇ ವರ್ಗದವರೆಂದು) ಎಂದು ೧೯೦೧ರ ಜನಗಣತಿಯ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರ ಕಾಲಂನಲ್ಲಿ ತಿಳಿಸಲಾಗಿದೆ. ೧೯೦೧ರ ಜನಗಣತಿಯ ಆಧಾರದ ಮೇಲೆ ತಾಲ್ಲೂಕು ಮಟ್ಟದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರ ಹಂಚಿಕೆಯನ್ನು ಈ ಕೆಳಕಂಡಂತೆ ಗುರುತಿಸಲಾಗಿದೆ.[೨೨]

ತಾಲೂಕುಗಳು	ಪರಿಶಿಷ್ಟ ಜಾತಿ		ಪರಿಶಿಷ್ಟ ವರ್ಗ	
	ಪುರುಷ	ಮಹಿಳೆಯರು	ಪುರುಷ	ಮಹಿಳೆಯರು
ಬಾಗೇಪಲ್ಲಿ	೩೭೯	೩೦೯	--	--
ಬಂಗಾರಪೇಟೆ	೧೦೯೮	೧೦೫೬	--	--
ಚಿಕ್ಕಬಳ್ಳಾಪುರ	೧೮೯೪	೧೭೯೦	--	--
ಚಿಂತಾಮಣಿ	೧೩೧೧	೧೩೪೪	೧೧	--
ಗೌರಿಬಿದನೂರು	೮೫೩	೭೧೪	--	--
ಗುಡಿಬಂಡೆ	೧೯೭	೧೮೦	--	--
ಕೋಲಾರ	೧೯೨೫	೧೭೪೧	--	--
ಕೆ.ಜಿ.ಎಫ್.	೪೯೫	೫೩೪	೬೦೪	೫೨೪
ಮಂಚನಬಲೆ	೮೨೫	೭೪೫	--	--
ಶಿಡ್ಲಘಟ್ಟ	೮೧೫	೮೨೫	--	--
ಶ್ರೀನಿವಾಸಪುರ	೪೯೩	೩೫೫	೩	೩

ಈ ಎರಡು ಗುಂಪುಗಳು ಪರಿಶಿಷ್ಟ ಜಾತಿಯವರು ಹೆಚ್ಚಾಗಿ ಕಂಡುಬರುತ್ತಾರೆ. ಅಲ್ಲದೆ ಮಹಿಳಾ ವರ್ಗದವರ ಪುರುಷರಿಗಿಂತ ಕಡಿಮೆ ಪ್ರಮಾಣದಲ್ಲಿದ್ದಾರೆ. ಈ ಎರಡು ಗುಂಪಿನವರು ಆರ್ಥಿಕವಾಗಿ ಹಿಂದುಳಿದವರಾಗಿದ್ದು, ಹೊಲೆಯರ ೬ ರೂ.ಗಳಿಂದ ೧೫೧ ರೂ.ಗಳವರೆಗೆ ಮಾದಿಗರು ೧ ರೂ. ನಿಂದ ೬೬ ರೂಗಳವರೆಗೆ ತೆರಿಗೆ ಕಟ್ಟುವ ಸಾಮರ್ಥ್ಯ ಹೊಂದಿದ್ದಾರೆ ಎಂದು ಎ.ಎನ್. ನರಸಿಂಹ ಅಯ್ಯಂಗಾರ್‌ರವರು ಹೇಳಿದ್ದಾರೆ.[೬೮]

ಇವರ ವೃತ್ತಿಗಳು ಹೆಚ್ಚಾಗಿ ಕೆಳಸ್ತರದ ವೃತ್ತಿಗಳೇ ಆಗಿದ್ದು ಸಮಾಜದ ಮೇಲ್‌ಸ್ತರದವರ ಎಲ್ಲರೂ ಹೇಳಿದ ಕೆಲಸಗಳನ್ನು ಮಾಡುತ್ತಿದ್ದರು. ಅವು ಅವರ ವಂಶ ಪರಂಪರೆಯಾಗಿ ಬಂದಿರುವ ವೃತ್ತಿಗಳಾಗಿವೆ. ಅಗಸರು ಬಟ್ಟೆ ಒಗೆಯುವುದು, ಹೊಲೆಯ ತೋಟಿಗಳಾಗಿ ಗ್ರಾಮದ ನೈರ್ಮಲೀಕರಣ ಕಾರ್ಯ, ತಳವಾರ ಗ್ರಾಮದ ಕಾವಲುಗಾರನಾಗಿ, ಸತ್ತ ದನಗಳು, ನಾಯಿಗಳು ಮುಂತಾದ ಪ್ರಾಣಿಗಳನ್ನು ತೆಗೆಯುವುದು, ಸತ್ತವರ ಸಂಸ್ಕಾರದಲ್ಲಿ ಹೆಣಗಳಿಗೆ ಗುಣಿ ತೋಡುವುದು, ಶವ ಸಂಸ್ಕಾರ ಮಾಡುವುದು, ಹಜಾಮರು ಕ್ಷೌರ ಮಾಡುವುದು, ಚಮ್ಮಾರಿಕೆ ಮುಂತಾದ ಕೆಲಸಗಳು ದಲಿತರಿಗೆ ಮೀಸಲಾಗಿತ್ತು. ಅಲ್ಲದೆ, ಗ್ರಾಮಗಳಲ್ಲಿ ಸರ್ಕಾರಿ ಇಲಾಖೆಗಳಲ್ಲಿ ಇತರೆ ಪ್ರತಿನಿಧಿಗಳ ಸೇವೆಗೆ ಸೇರಿಸಿಕೊಳ್ಳುತ್ತಿದ್ದರೆಂದು ಎಸ್. ಚಂದ್ರಶೇಖರರವರು ಹೇಳಿದ್ದಾರೆ.[೬೯] ಇವುಗಳ ಜತೆಗೆ ಹೊಲಗದ್ದೆಗಳಲ್ಲಿ ಕೃಷಿಕರಾಗಿ ದುಡಿಯುತ್ತಿದ್ದಾರೆ. ಆದಿವಾಸಿಗಳು ವ್ಯವಸಾಯ ಮಾಡುವುದು ಕಡಿಮೆ ಮಾಡುವುದಾದರೂ, ಪಶುಪಾಲನೆ ಇಲ್ಲದ ಗೊಲ್ಲಿನಿಲ್ಲ ಎಂದು ಕಂಡುಬರುತ್ತದೆ.[೭೦] ಮಹಿಳೆಯರು ಕಷ್ಟಪಟ್ಟು ದುಡಿಯುತ್ತಾರೆ, ದಲಿತ ಸಮಾಜದಲ್ಲಿ ಅವರಿಗೆ ಹೆಚ್ಚಾಗಿ ಕಟ್ಟುಪಾಡುಗಳೇನು ಇವೆಯಾದರೂ ಅವರ ಬದುಕು ಕಷ್ಟಕರವಾಗಿತ್ತು. ಬೆಳಗಿನಿಂದ ಸಾಯಂಕಾಲದವರೆಗೆ ದುಡಿಯುತ್ತಾರೆ.[೭೧] ಕೋಲಾರ ಪ್ರದೇಶದ ಚಿನ್ನದ ಗಣಿಗಾರಿಕೆಯಲ್ಲಿ ಹೆಚ್ಚಾಗಿ ಆದಿ ದ್ರಾವಿಡ ಜನರು ಇದ್ದರು (೪೦ %) ಮತ್ತು ಅತಿ ಕಡಿಮೆ ಕೂಲಿಗೆ ಮಹಿಳೆಯರು ಬಾಲ ಮಹಿಳಾ ಕಾರ್ಮಿಕರು ದುಡಿಯುತ್ತಿದ್ದರು ಎಂದು ಎಂ. ಗೋವಿಂದಪ್ಪನವರು ಹೇಳಿದ್ದಾರೆ.[೭೨] ಇದನ್ನೇ ಜಾನಕಿ ನಾಯರ, ಎಸ್. ಚಂದ್ರಶೇಖರವರು ಹೇಳಿದ್ದಾರೆ. ಈ ದಲಿತರು ಊರಿನ ಒಳಭಾಗಗಳಲ್ಲಿ ಮನೆ ಕಟ್ಟಿಕೊಳ್ಳುವುದಿಲ್ಲ. ಬ್ರಾಹ್ಮಣರು ಹೊಲೆಯರ ಕೇರಿಗೂ ಹೆಜ್ಜೆ ಇಡುವುದಿಲ್ಲ. ಅವರನ್ನು ಮುಟ್ಟಿಸಿಕೊಳ್ಳುವುದಿಲ್ಲ. ಒಂದು ವೇಳೆ ಮುಟ್ಟಿದರೆ ತಲೆಗೆ ಸ್ನಾನಮಾಡಿ ಹೊಸ ಜನಿವಾರ ಹಾಕಿಕೊಳ್ಳುತ್ತಿದ್ದರು. ಕೈಯಾರೆ ದಲಿತರಿಗೆ ಏನನ್ನು ಕೊಡುವುದಿಲ್ಲ. ಕೊಡುವ ವಸ್ತುಗಳನ್ನು ನೆಲದ ಮೇಲೆ ಹಾಕಿದ ನಂತರವೆ ಹೊಲೆಯರು ಅದನ್ನು ನೆಲದ ಮೇಲಿನಿಂದ ತೆಗೆದುಕೊಳ್ಳುತ್ತಿದ್ದರು.

ಇವರ ಮದುವೆ ನಾಮಕರಣ, ಸಾವು ಸಂಸ್ಕಾರ, ಪಿತೃದಿನಗಳಿಗೆ ಯಾವ ಪುರೋಹಿತರು ಬರುವುದಿಲ್ಲ. ಧರ್ಮರಾಜ, ಮಾರಮ್ಮ, ಕರಗಮ್ಮ, ಗಂಗಮ್ಮ ದೇವತೆಗಳನ್ನು ಪೂಜಿಸುತ್ತಾರೆ. ಭೂತ ಪ್ರೇತಗಳಲ್ಲಿ ನಂಬಿಕೆಯನ್ನು ಹೊಂದಿದ್ದು, ಅವುಗಳಿಗೆ ಪ್ರಾಣಿಬಲಿ ನೀಡಿ ನಂತರ ಅದನ್ನು ಪ್ರಸಾದವಾಗಿ ಸ್ವೀಕರಿಸುತ್ತಿದ್ದರು. ಮಾದಕ ದ್ರವ್ಯಗಳನ್ನು ಸ್ವೀಕರಿಸುತ್ತಿದ್ದರು ಎಂದು ಕ್ರಿ.ಶ. ೧೮೦೦ರಲ್ಲಿಯೇ ಫ್ರಾನ್ಸಿಸ್ ಬುಕಾನನರವರು ಕೋಲಾರ ಪ್ರದೇಶದಾದ್ಯಂತ ಪ್ರವಾಸ ಮಾಡುವುದರ ಮೂಲಕ ಅವರ ಸಾಮಾಜಿಕ, ಆರ್ಥಿಕ ಲಕ್ಷಣಗಳನ್ನು

ತಮ್ಮ ಕೃತಿಗಳಲ್ಲಿ ದಾಖಲಿಸಿದ್ದಾರೆ. ಅಲ್ಲದೆ ಶ್ರೀಮತಿ ಯಶೋಧರವರು ತಮ್ಮ ಲೇಖನಗಳಲ್ಲಿ ಇದನ್ನೇ ಹೇಳಿದ್ದಾರೆ.[೮೩] ಪ್ರಾಚೀನ ಕಾಲದಿಂದಲೂ ಹಿಂದುಧರ್ಮದಲ್ಲಿ ಇಂತಹ ಕಟ್ಟುಪಾಡುಗಳು ಧರ್ಮದ ನೀತಿಗಳೆಂದು, ಪ್ರತಿಯೊಬ್ಬ ಗುಂಪಿಗೂ ಅವರದೆ ಆದ ಧರ್ಮ ಪದ್ಧತಿಗಳು ನಿರ್ಧರಿಸಲ್ಪಟ್ಟಿದ್ದು ಮೈಸೂರು ಒಡೆಯರ ಕಾಲದಲ್ಲಿಯೂ ಅದನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದರು. ಈ ಧರ್ಮಪಾಲನೆಗಳನ್ನು ಉಲ್ಲಂಘಿಸಿದರೆ, ದಲಿತರನ್ನು ಗ್ರಾಮ ಸಮಾಜದಿಂದ ಬಹಿಷ್ಕಾರ ಹಾಕುತ್ತಿದ್ದರು. ದಂಡ ವಿಧಿಸುತ್ತಿದ್ದರು ಎಂದು ಎಂ.ವಿ. ಕೃಷ್ಣರಾವ್ ಮತ್ತು ಎಂ. ಕೇಶವಭಟ್ಟರು ಹೇಳಿದ್ದಾರೆ.[೮೪] ಇದನ್ನೇ ಸಮಾತಾ ಬಿ. ದೇಶಮಾನ, ಮೊಗಳ್ಳಿ ಗಣೇಶ್, ಅರವಿಂದ ಮಾಲಗತ್ತಿರವರು ಹೇಳಿದ್ದಾರೆ.

II

ಬ್ರಿಟೀಷ್ ಆಡಳಿತ ಪ್ರಾರಂಭವಾದ ಪ್ರಾಥಮಿಕ ಹಂತದಲ್ಲಿಯೂ ಕೂಡ ದಲಿತರಿಗೆ ಸಾರ್ವಜನಿಕ ಸೇವಾ ಹುದ್ದೆಗಳಲ್ಲಿ ಸೇರಲು ಅವಕಾಶವಿರಲಿಲ್ಲ. ಕಾರಣ, ದಲಿತರು ಅವಿದ್ಯಾವಂತರು, ಅವಮಾನಿತರು ಮತ್ತು ಅಸ್ಪೃಶ್ಯರಾಗಿದ್ದರು. ಹೀಗಾಗಿ ದಲಿತರು ತಮ್ಮ ವಂಶ ಪರಂಪರೆಯಾಗಿ ಬಂದ ವೃತ್ತಿಗಳನ್ನೇ ಅವಲಂಬಿಸಬೇಕಾಯಿತು ಎಂದು ಮಂಗ್ಳೂಳ್ಳರ ವಿಜಯರವರು ಹೇಳಿದ್ದಾರೆ.[೮೫] ಇದಲ್ಲದೆ ಸಮಾಜದ ಪ್ರತಿಯೊಂದು ಅಧಿಕಾರ ವಿಭಾಗದಲ್ಲಿ ಬ್ರಾಹ್ಮಣರ ಏಕಸ್ವಾಮ್ಯ ಹೊಂದಿದ್ದು, ಶಿಕ್ಷಣ, ಅಧಿಕಾರ ಹಾಗೂ ಆಡಳಿತ ನಿಯಂತ್ರಣಗಳಲ್ಲಿ ಅವರೆ ಹೆಚ್ಚಾಗಿದ್ದರು. ದಲಿತರು ಅವರ ಹೇಳಿದ ಕೆಲಸಗಳನ್ನೂ ಮಾಡುತ್ತಿದ್ದರು ಎಂದು ಎಸ್. ಚಂದ್ರಶೇಖರರವರು ಹೇಳಿದ್ದಾರೆ.[೮೬] ಕಾಲಾಂತರ ಬ್ರಿಟೀಷ್ ಆಡಳಿತ ಅಧಿಕಾರಿಗಳು ತಮ್ಮ ಧೋರಣೆಗಳನ್ನು ಬದಲಾಯಿಸಿದರು. ಅವರ ಸಂಸ್ಕೃತಿ, ನೀತಿ ನಿಯಮಗಳನ್ನು ಭಾರತದಲ್ಲಿಯೂ ಅಳವಡಿಸಿದರು. ಅವೈಜ್ಞಾನಿಕ, ಮೌಢ್ಯತೆಗಳನ್ನು ತಡೆಯಲು ಯತ್ನಿಸಿದರು. ಇದಕ್ಕೆ ಮೈಸೂರು ಒಡೆಯರು ಸ್ಪಂದಿಸಿದರು. ಅಲ್ಲದೆ, ಸಾಮಾಜಿಕ ಸುಧಾರಣಾ ಸಂಘಟನೆಗಳು ಈ ವೇಳೆಗೆ ಬೆಳಕಿಗೆ ಬಂದವು. ಅಂತಹವುಗಳಲ್ಲಿ 'ಸೌತ್ ಇಂಡಿಯನ್ ಬುದ್ಧಿಷ್ಟ್ ಅಸೋಷಿಯಸನ್' ಎಂಬ ಸಂಘವನ್ನು ಮದ್ರಾಸಿನ ಪಂಡಿತರಾಮ ದಾಸರವರು ೧೯೧೦ರಲ್ಲಿಯೇ ಕೆ.ಜಿ.ಎಫ್.ನಲ್ಲಿ ಸ್ಥಾಪಿಸಿದರು. ನಂತರ ಅಪ್ಪಾಯಿದೊರೆಯರು ಇದರ ಸದಸ್ಯತ್ವ ಹೊಂದಿದ್ದು, 'ತಮಿಳಿಯನ್' ಎಂಬ ಪತ್ರಿಕೆಯನ್ನು ಪ್ರಕಟಿಸುವುದರ ಮೂಲಕ ಜಾತಿಪದ್ಧತಿಗಳನ್ನು ಖಂಡಿಸಿದರು. ಇ.ವಿ. ರಾಮಸ್ವಾಮಿ ನಾಯಕರವರ ಸಹಾಯ ಪಡೆಯದೆ, ಸಂಘಟನೆಗಳನ್ನು ಆಕರ್ಷಿಸಲ್ಪಡಲಾಯಿತು.

ಇಂತಹ ಸಂಘಟನೆಗಳು, ಜನಸಮುದಾಯಗಳ ಒತ್ತಡಗಳಿಂದ ಮತ್ತು ಬ್ರಿಟಿಷ್ ಆಧುನಿಕ, ವೈಜ್ಞಾನಿಕ ನೀತಿಗಳ ಒತ್ತಡಗಳಿಂದ ಮೈಸೂರು ಒಡೆಯರು ಇದರ ಸುಧಾರಣಾ ಕ್ರಮಗಳು ಕೈಗೊಂಡರು. ಆಗ ಬ್ರಾಹ್ಮಣೇತರರ ಸಮುದಾಯದ ಅರ್ಹ ಅಭ್ಯರ್ಥಿಗಳಿಗೆ ಸರ್ಕಾರಿ ಉದ್ಯೋಗಗಳಲ್ಲಿ ನೇಮಿಸಿಕೊಳ್ಳಲು ಆದೇಶ ಪ್ರಕಟಣೆಗೊಂಡಿತು ಎಂದು ಪಿ.ವಿ. ನಂಜರಾಜ್ ಅರಸ ಮತ್ತು ಎಸ್.ಕೆ. ಚಂದ್ರಶೇಖರ್ ಅರಸರವರು ಹೇಳಿದ್ದಾರೆ.[೮೭] ಈ ವೇಳೆಗೆ ಕೋಲಾರ ಪ್ರದೇಶದಲ್ಲಿ ಮಹಾತ್ಮ ಗಾಂಧೀಜಿಯವರ ಪ್ರವಾಸ ಉಂಟಾಯಿತು. ಇದರಿಂದ ದಲಿತ ಸಮುದಾಯಗಳನ್ನು ರಾಷ್ಟ್ರೀಯ ಚಳುವಳಿಯತ್ತ ಸೆಳೆಯಲಾಯಿತು.

ಅಂದರೆ ಮಹಾತ್ಮಾಗಾಂಧೀಜಿಯವರು ೧೯೨೭ರಲ್ಲಿಯೇ ಪ್ರಥಮ ಬಾರಿಗೆ ಕೋಲಾರ ಪ್ರದೇಶದ ನಂದಿಗಿರಿ ಧಾಮಕ್ಕೆ ಆರೋಗ್ಯ ಸುಧಾರಣಾ ಸಲುವಾಗಿ ಬಂದು ತಂಗಿದ್ದಾಗ ಅಲ್ಲಿನ (ಸುಲ್ತಾನಪೇಟೆ) ಕ್ಷೌರಿಕ ವೆಂಕಟಪ್ಪನವರು ಪ್ರತಿ ವಾರಕ್ಕೆ ಒಂದು ಸಲ ಗಾಂಧೀಜಿಯುವರಿಗೆ ಕ್ಷೌರ ಮಾಡುತ್ತಿದ್ದರು. ಇದರಲ್ಲಿಯೇ ರಾಷ್ಟ್ರೀಯ ಹೋರಾಟಕ್ಕೆ ದಲಿತ ಜನರು ಪರೋಕ್ಷವಾಗಿಯಾದರೂ ಪ್ರೋತ್ಸಾಹ ಬೆಂಬಲಗಳನ್ನು ನೀಡುತ್ತಿದ್ದರು ಎಂದು ತಿಳಿದುಬರುತ್ತದೆ.[೮೮]

III

ಗಾಂಧೀಜಿಯವರು ಕೇವಲ ರಾಷ್ಟ್ರೀಯ ಚಳುವಳಿಯತ್ತ ಗಮನ ನೀಡುವುದಲ್ಲದೆ, ದಲಿತರ (ಹರಿಜನ ಎಂಬ ಹೊಸ ಹೆಸರನ್ನು ನೀಡಿ) ಉದ್ಧಾರಕ್ಕೆ ಶ್ರಮಿಸಿದ್ದಾರೆ. ವರದಿ ಗಿರಿಧಾಮದ ಶ್ರೀಯೋಗಿ ನಂದೀಶ್ವರ ದೇವಾಲಯಕ್ಕೆ ಹರಿಜನರ ಪ್ರವೇಶ ಕಲ್ಪಿಸಿಕೊಟ್ಟರು. ಈ ಬಗ್ಗೆ ದಿವಾನ ಮಿರ್ಜಾ ಇಸ್ಮಾಯಲ್, ಸರ್ ಎಂ.ವಿ. ವಿಶ್ವೇಶ್ವರಯ್ಯನವರೊಂದಿಗೆ ಆಗಿದೆ. ಪದ ವಿಚಾರಗಳು ಚರ್ಚಿಸಿದ್ದಾರೆ. ೧೯೩೬ರಲ್ಲಿ ಎರಡನೇ ಬಾರಿಗೆ ಕೋಲಾರ ಪ್ರದೇಶದಾದ್ಯಂತ ಹರಿಜನ ಕಲ್ಯಾಣ ಪ್ರವಾಸ ಕೈಗೊಂಡಾಗ ಹರಿಜನ ಸೇವಾಕಲ್ಯಾಣ ನಿಧಿಗೆ ವಿದುರಾಶ್ವತ್ಥದ ಎಸ್.ಪಿ. ನಾಗಯ್ಯನವರು ೫೦೦ ರೂ. ಹಾಗೂ ಕೆ.ಸಿ.ರೆಡ್ಡಿಯವರು ೧೬೦೦ ರೂ.ಗಳನ್ನು ಜನರ ಮುಖಾಂತರ ವಂತಿಗೆ ಸಂಗ್ರಹಿಸಿ ಕೊಟ್ಟರು. ಸಭೆಗಳಲ್ಲಿ ಗಾಂಧೀಜಿಯವರ ಮಾಡಿದ ಭಾಷಣಗಳನ್ನು ಎ. ವೆಂಕಟಸ್ವಾಮಿ ಹಾಗೂ ಬ್ರಿಟಿಷ್ ಅಧಿಕಾರಿಯಾದ ಇಸ್ಮಾಯಿಲ್ ಶರೀಫ್‌ನವರು ಭಾಷಾಂತರಿಸಿದರು ಎಂದು ಸಿದ್ದವ್ವನಹಳ್ಳಿ ಕೃಷ್ಣಶರ್ಮರವರು ಹೇಳಿದ್ದಾರೆ.[೮೯] ಇಲ್ಲಿ ಮುಖ್ಯವಾಗಿ ಹರಿಜನರ ಸ್ಥಿತಿಗತಿಗಳು ಗಾಂಧೀಜಿಯವರು ತಿಳಿದಿದ್ದರು. ಅವನ್ನು ಹೇಳದೆ ಸ್ವಾತಂತ್ರ್ಯ ಮತ್ತು ರಾಷ್ಟ್ರೀಯತೆ ಬಗ್ಗೆ ವಿಶೇಷವಾಗಿ ವ್ಯಾಖ್ಯಾನ ಮಾಡುವುದರ ಮೂಲಕ ಜನರ ಮನಗೆದ್ದರು ಎಂದು ಮೊಗಳ್ಳಿ ಗಣೇಶ್‌ರವರು ಹೇಳಿದ್ದಾರೆ.[೯೦] ಅಂದರೆ "ಪ್ರಸ್ತುತವಾಗಿ ಹರಿಜರನ್ನು ಅಪ್ಪಿಕೊಂಡರೆ ಸಾಲದು, ನಂತರ ಮರೆತು ಹೋದರೆ ಪ್ರಯೋಜನವೇನು... ಹಿಂದುಗಳ ನಡುವೆ ಐಕ್ಯತೆ ಸಾಧಿಸುವುದಲ್ಲದೆ ಮುಸ್ಲಿಂ, ಸಾಧಿಸಲು ಯತ್ನಿಸುತ್ತಿದ್ದೇನೆ" ಎಂದು ಹೇಳಿದ್ದಾರೆ.[೯೧] ಜನರು ಸಹ ಉಪ್ಪಿಗಾಗಿ ಹೋರಾಟ ನಡೆಸಿದವನನ್ನು ನಂಬಿದರು. ಗಾಂಧೀಜಿಯವರು ಅದನ್ನು ಸಮರ್ಪಕವಾಗಿ ಬಳಸಿಕೊಂಡರು ಎಂದು ಎಸ್. ಚಂದ್ರಶೇಖರ ಹಾಗೂ ಸೂರ್ಯನಾಥ ಕಾಮತರು ಹೇಳಿದ್ದಾರೆ.[೯೨] ಇಷ್ಟಾದರೂ ಕಾಲಕ್ರಮೇಣ, ಕಾಂಗ್ರೆಸ್‌ನಲ್ಲಿ ಬ್ರಾಹ್ಮಣರು ಪ್ರಬಲರಾಗಿದ್ದು, ದಲಿತ ಸಮುದಾಯಗಳ ನಡುವೆ ಅಂತರ ಹೆಚ್ಚಾಯಿತು. ಆದಿದ್ರಾವಿಡ ಸಂಘದ ನಾಯಕರಾದ ರಾಮದಾಸರು ಇದ್ದು, ಜೆ.ಸಿ.ಆದಿಮಾಲನ್ ಅವರು ಪರಿಯರ್ ಸಂಘವನ್ನು ಕೆ.ಜಿ.ಎಫ್.ನಲ್ಲಿ ತೆರೆದರು.[೯೩] ಕೆ.ಸಿ. ರೆಡ್ಡಿಯವರು ಈ ನಡುವೆ ಬ್ರಾಹ್ಮಣೇತರ ಚಳುವಳಿಯಲ್ಲಿ ಭಾಗವಹಿಸಿ ದಲಿತರನ್ನು ಚಳುವಳಿಯತ್ತ ಸೆಳೆಯಲು ಯತ್ನಿಸಿದ್ದಾರೆ. ಎ. ಮುನಿಯಪ್ಪ ಮುಂತಾದ ಹರಿಜನ ನಾಯಕರು ಇದರಲ್ಲಿ ಪಾಲ್ಗೊಂಡಿದ್ದರು ಎಂದು ಕೆ. ವೆಂಕಟಕೃಷ್ಣಪ್ಪನವರು ಹೇಳಿದ್ದಾರೆ.

ಹೀಗೆ ಕೋಲಾರ ಪ್ರದೇಶದಲ್ಲಿ ಸ್ವಾತಂತ್ರ್ಯ ಹೋರಾಟ ಘಟ್ಟದಲ್ಲಿ ದಲಿತರ ಚರಿತ್ರೆಯು ಒಂದೆಡೆ ಸ್ವಾಭಿಮಾನ, ಮತ್ತೊಂದೆಡೆ ರಾಷ್ಟ್ರೀಯತೆ ಹಿನ್ನಲೆ ಕಂಡುಬರುತ್ತದೆ. ಡಾ. ಅಂಬೇಡ್ಕರ್‌ರರ ಪ್ರಭಾವ,

ಆದಿದ್ರಾವಿಡ ಸಂಘಗಳ ಉದಯ, ಪರಿಯರ ಸಂಘಗಳ ಉದಯಗಳಿಂದ ದಲಿತರು ತಮ್ಮ ಸ್ಥಾನಮಾನ ಉಳಿಸಿಕೊಳ್ಳಲು ಯತ್ನಿಸುವುದು. ಗಾಂಧೀಜಿಯವರು ರಾಷ್ಟ್ರೀಯತೆ ಚಳುವಳಿಯಿಂದ ಸ್ವಾತಂತ್ರ್ಯ ಘಳಿಗೆಯನ್ನು ವೀಕ್ಷಿಸುವಂತಾಯಿತು. ಪ್ರಸ್ತುತ ಅಧ್ಯಯನಕ್ಕೆ ದೊರೆತ ಕೃತಿಗಳ ಅವಲೋಕನದ ಮೂಲಕ ಸೈದ್ಧಾಂತಿಕವಾಗಿ ೧೯೪೭ರವರೆಗೆ ವಿವರಿಸಲು ಕಿರುಪ್ರಯತ್ನ ತೊಡಲಾಗಿದೆ. ಈ ಒಂದು ಘಟ್ಟವನ್ನು ಅಂದರೆ ೧೯೦೦-೧೯೪೭ರವರೆಗೆ ದಲಿತರ ಸಂಕ್ರಮಣ ಕಾಲ, ಪರ್ವಕಾಲವೆಂದು ಅರವಿಂದ ಮಾಲಗತ್ತಿಯವರು ಹೇಳಿದ್ದಾರೆ. ಈ ಕಾಲದಲ್ಲಿ ದಲಿತರು, ತಮ್ಮ ಪರಂಪರೆಯಾಗಿ ಬಂದ ಕಟ್ಟು ಸಂಪ್ರದಾಯಗಳ ವಿರುದ್ಧ ಸೆಣಸಾಡುವಂತಾಗಿದೆ ಮತ್ತು ವೈಜ್ಞಾನಿಕ ನಾಗರಿಕ ಜೀವನ ದತ್ತ ಸಾಗುವಂತಾಯಿತು ಎಂದು ಹೇಳಲಾಗುತ್ತದೆ.

೩.೧೧. ಮಹಿಳಾ ಚರಿತ್ರೆ

ಸ್ವಾತಂತ್ರ್ಯ ಹೋರಾಟ ಘಟ್ಟದಲ್ಲಿ ಪ್ರಾಮುಖ್ಯತೆಗೆ ಒಳಗಾದ ಚರಿತ್ರೆ ಲೇಖನಾಶಾಸ್ತ್ರದ ಬಹುಮುಖ್ಯ ಚರಿತ್ರೆಗಳಲ್ಲಿ ಮಹಿಳಾ ಚರಿತ್ರೆಯು ಒಂದಾಗಿದೆ. ಇದರಿಂದ ಕೋಲಾರ ಪ್ರದೇಶದ ಸ್ವಾತಂತ್ರ್ಯ ಹೋರಾಟ ಘಟ್ಟದಲ್ಲಿ ಮಹಿಳೆಯರ ಚರಿತ್ರೆಯನ್ನು ವಿಶ್ಲೇಷಿಸುವಾಗ ಮಹಿಳಾ ಸಮಾಜದ ಸ್ಥಿತಿಗತಿಗಳು, ಸುಧಾರಣೆಗಳು ಹಾಗೂ ಸ್ವಾತಂತ್ರ್ಯ ಹೋರಾಟದಲ್ಲಿ ಅವರ ಪಾತ್ರ ಮತ್ತು ಮಹತ್ವಗಳನ್ನು ಕುರಿತಾಗಿ ವಿವಿಧ ಕೃತಿಗಳು, ಲೇಖನಗಳನ್ನು ಅವಲೋಕಿಸುವುದರ ಮೂಲಕ ಸೈದ್ಧಾಂತಿಕವಾಗಿ ವಿವರಿಸಲು ಈ ಕೆಳಕಂಡಂತೆ ಕಿರುಪ್ರಯತ್ನ ಮಾಡಲಾಗಿದೆ.

I

ಪ್ರಾಚೀನ ಕಾಲದಿಂದಲೂ ಭಾರತದಲ್ಲಿ ಹಿಂದು ಸಂಪ್ರದಾಯಗಳು ಕಟ್ಟುನಿಟ್ಟಾಗಿ ಪಾಲಿಸಿಕೊಂಡು ಬಂದಿವೆ. ಈ ಸಂಪ್ರದಾಯಗಳು ಮಹಿಳೆಯರನ್ನು ಅಸ್ವಾತಂತ್ರ್ಯಗೊಳಿಸಿವೆ ಮತ್ತು ನಾನಾ ಕಟ್ಟುಪಾಡುಗಳಲ್ಲಿ ಒದ್ದಾಡುವಂತೆ ಮಾಡಿವೆ. ಬಾಲ್ಯ ವಿವಾಹ ಪದ್ಧತಿ ಇದ್ದು, ಇದರಿಂದಾಗಿ ಹೆಣ್ಣನ್ನು ಹೆಚ್ಚಿನ ವಯಸ್ಸು ಇರುವ ಗಂಡಿಗೆ ಕೊಟ್ಟು ವಿವಾಹ ಮಾಡಿಸುತ್ತಿದ್ದರು.[೧೪] ಸಹಗಮನ ಪದ್ಧತಿ (ಸತಿ ಪದ್ಧತಿ) ಮಾಯವಾದರೂ ಕ್ರಮೇಣ ಗೊಡ್ಡು ಸಂಪ್ರದಾಯಗಳು ಬೆಳಕಿಗೆ ಬಂದವು.[೧೫] ಬ್ರಾಹ್ಮಣ ವರ್ಗದಲ್ಲಿ ವಿಧವೆಯರು ವಿಶೇಷವಾಗಿ ಬಾಲ ವಿಧುವೆಯರು ಅಸಂಖ್ಯಾತವಾಗಿದ್ದರೆಂದು ವಿದೇಶಿ ಪ್ರವಾಸಿಗರ ಬುಕನನ್ ಮತ್ತು ಅಬೆ-ದೊಬಾಯಿರವರ ಹೇಳಿಕೆಗಳನ್ನು ಗಮನಿಸಲಾಗುತ್ತಿದೆ.[೧೬] ಇವರಿಗೆ ಸಮಾಜದಲ್ಲಿ ಗೌರವವಿರಲಿಲ್ಲ. ವರದಕ್ಷಿಣೆ,[೧೭] ಕುಡಿತ, ಜೀತ ಪದ್ಧತಿಗಳು ಮಹಿಳೆಯರನ್ನು ಶೋಷಣೆ ಮಾಡುವ ಮಹಾ ಅಸ್ತ್ರಗಳಾಗಿದ್ದವು ಎಂದು ಎಂ.ಎಸ್. ಶಂಕರ್ ಅವರು ಹೇಳಿದ್ದಾರೆ.[೧೮] ಹಿಂದೂ ಸಮಾಜದ ಜಾತಿಪದ್ಧತಿಗಳು ವರ್ಣನೀತಿಗಳಿಂದ ಮೂಢನಂಬಿಕೆಗಳು, ಅಂಧಾನುಕರಣೆಗಳು ಪ್ರಚಲಿತವಾಗಿದ್ದು, ಅಂತರಜಾತೀಯ ವಿವಾಹಗಳು ಧರ್ಮಕ್ಕೆ ಅಪವಿತ್ರವಾಗಿದ್ದವು ಮತ್ತು ಸ್ಮೃತಿಯಲಂತೂ, ಪ್ರಾಚೀನ ಕಾಲದಿಂದಲೂ ಹಿಂದೂ ಸಮಾಜದಲ್ಲಿ ಮಹಿಳೆಯರು ಸ್ವಾತಂತ್ರ್ಯಕ್ಕೆ ಯೋಗ್ಯಳಲ್ಲ ಎಂದು ಪರಿಗಣಿಸಲಾಗಿತ್ತು ಎಂದು ಹೇಳಿರುವುದು ಡಾ. ಬಾಬಾ ಸಾಹೇಬ ಅಂಬೇಡ್ಕರ್‌ರವರ ಬರಹಗಳು ಮತ್ತು ಭಾಷಣಗಳು ಎಂಬ ಕೃತಿಗಳಿಂದ ವ್ಯಕ್ತವಾಗುತ್ತದೆ.[೧೯]

ವಸಾಹತು ಆಡಳಿತ ಆರಂಭದ ಅವಧಿಯವರೆಗೂ ಮತ್ತು ವಸಾಹತು ಶಾಹಿಯಲ್ಲಿಯೂ ಲಿಂಗಭೇದ ತಾರತಮ್ಯ ದೃಷ್ಟಿಯೊಂದಿಗೆ ಮಹಿಳಾ ಸ್ಥಾನ ಪುರುಷರಿಗಿಂತ ಕಡಿಮೆ ಸ್ಥಾನ ಹೊಂದಿತ್ತು.[೧೦೦] ಪ್ಲಾಂಟೇಷನ್‌ಗಳಲ್ಲಿ, ಕಾರ್ಖಾನೆಗಳಲ್ಲಿ ಗಣಿಗಳಲ್ಲಿ ದುಡಿಯುವವರ ಬಗ್ಗೆ ತಿಳಿಯಲು ವಸಾಹತುಕಾಲದವರೆಗೂ ಒಂದು ಲೇಖನವೂ ಕಂಡುಬರುವುದಿಲ್ಲ.[೧೦೧] ಶಿಕ್ಷಣದಲ್ಲಿಯು ಪುರುಷರಿಗಿಂತ ಹಿಂದುಳಿದಿದ್ದಾರೆ ಎಂದು ಗೆಜೆಟಿಯರ್‌ನಲ್ಲಿ ತಿಳಿಸಿದೆ ಮತ್ತು ಅವರನ್ನು ಶೂದ್ರರು, ಶಿಕ್ಷಿತರಂತೆ ಕಾಣುತ್ತಾರೆ ಎಂದು ಶಿವಮೂರ್ತಿ ಬಿ. ರವರು ಗಮನಿಸಿದ್ದಾರೆ.[೧೦೨] ಆದರೂ ಮಹಿಳೆಯರ ಆರ್ಥಿಕ ಕ್ಷೇತ್ರದ ಈ ಕಾಲದಲ್ಲಿ ಹೊಸ ಉದ್ಯೋಗವಕಾಶಗಳನ್ನು ಒದಗಿಸಿತು. ಉದಾಹರಣೆಗೆ ಶಿಕ್ಷಣ ಹಾಗೂ ವೈದ್ಯಕೀಯ ಕ್ಷೇತ್ರಗಳಲ್ಲಿ ಹಲಕೆಲವು ಮಹಿಳೆಯರು ವೃತ್ತಿನಿರತರಾಗುವುದು ಸಾಧ್ಯವಾಯಿತು. ಆದರೆ ಕಾರ್ಖಾನೆಗಳು, ಗಣಿಗಳಲ್ಲಿ ಇವರ ಸಂಖ್ಯೆ ಹೆಚ್ಚಾಗಿದ್ದು ತೀರಾ ಶೋಚನೀಯ ಹಾಗೂ ಕಷ್ಟದಾಯಕ ಸ್ಥಿತಿಗಳೇ ಆಗಿದ್ದವು. ವಿಶೇಷವಾಗಿ ಪುರುಷರಿಗಿಂತ ಹೆಚ್ಚಾಗಿತ್ತು. ಈ ನಡುವೆ ಅಂದರೆ ವಸಾಹತುಶಾಹಿ ಕಾಲದಲ್ಲೂ ಮಹಿಳೆಯರ ಜನಸಂಖ್ಯೆಯನ್ನು ತಿಳಿಯುವುದು ಅಗತ್ಯವಾಗಿದೆ. ಇದಕ್ಕಾಗಿ ಬಿ.ಎಲ್. ರೈಸ್, ಯು.ಎನ್. ನಾರಾಯಣಸ್ವಾಮಿ, ಪದ್ಮನಾಭರವರ ಜನಗಣತಿ ದಾಖಲೆಗಳು ಈ ಅಧ್ಯಯನಕ್ಕೆ ಸಹಕಾರಿಯಾಗಿವೆ. ಇವರ ದಾಖಲೆಗಳಲ್ಲಿ ಎಲ್ಲ ಜಾತೀಯ ಮಹಿಳೆಯರನ್ನು ಸೇರಿಸಿ ಒಟ್ಟಾಗಿ ತಿಳಿಸಲಾಗಿದೆ ಮತ್ತು ಪುರುಷರೊಂದಿಗೆ ಈ ಜನಸಂಖ್ಯಾ ದಾಖಲಾತಿ ವರದಿಗಳು ಈ ಕೆಳಕಂಡಂತೆ ವಿವರಿಸಲ್ಪಟ್ಟಿದೆ.

ಬಿ.ಎಲ್. ರೈಸ್‌ರ ದಾಖಲಾತಿ ವಿವರ ಹೀಗಿದೆ.[೧೦೩]

೧೮೭೧ ಮತ್ತು ೧೮೮೧ರ ಜನಗಣತಿ

ವರ್ಷ	ಪುರುಷರು	ಮಹಿಳೆಯರು	ಒಟ್ಟು ಜನಸಂಖ್ಯೆ
೧೮೭೧	೩೦೯.೬೩೮	೩೦೯.೨೬೩	೬೧೮.೯೫೪
೧೮೮೧	೨೯೭.೬೫೮	೨೯೩.೩೭೫	೫೯೧.೬೩೦

೧೮೯೧ರ ಜನಗಣತಿ ದಾಖಲಾತಿ ವರದಿಯನ್ನು ಯು.ಎನ್. ನರಸಿಂಹ ಅಯ್ಯಂಗಾರ್‌ಯವರು ಹೀಗೆ ತಿಳಿಸಿದ್ದಾರೆ.[೧೦೪]

ವರ್ಷ	ಲಿಂಗ	ಒಟ್ಟು ಜನಸಂಖ್ಯೆ	ನಗರ ಪ್ರದೇಶ	ಗ್ರಾಮೀಣ ಪ್ರದೇಶ
೧೮೯೧	ಪುರುಷ	೨೯೭.೬೫೫	೨೫.೩೪೩	೨೭೨.೩೦೬
೧೮೯೧	ಮಹಿಳೆ	೨೯೩.೩೭೫	೨೬.೨೬೩	೨೬೭.೧೧೭

೧೯೭೧ರ ಜನಗಣತಿಯ ದಾಖಲಾತಿಯ ಪ್ರಕಾರ ಪದ್ಮನಾಭರವರು ನಗರಪ್ರದೇಶದ ಜನಸಂಖ್ಯೆಯನ್ನು ಹೀಗೆ ತಿಳಿಸಿದ್ದಾರೆ.[೧೦೫]

ವರ್ಷ	ಒಟ್ಟು ಜನಸಂಖ್ಯೆ	ಪುರುಷ	ಮಹಿಳೆಯರು
೧೯೦೧	೧೨೪,೦೮೦	೬೬.೪೦೦	೫೭.೬೮೬
೧೯೧೧	೧೩೧.೪೯೪	೭೦.೬೧೨	೬೦.೮೮೨
೧೯೨೧	೧೪೮.೨೫೫	೭೮.೩೭೮	೬೨.೮೮೧
೧೯೩೧	೧೫೮.೦೯೧	೮೨.೪೨೧	೭೫.೬೭೦
೧೯೪೧	೨೭೧.೫೨೭	೧೧೫.೧೩೬	೧೦೬.೩೯೧
೧೯೫೧	೨೭೩.೧೩೩	೧೪೦.೨೩೬	೧೩೮.೮೯೭

ಈ ಜನಗಣತಿಯ ಪಟ್ಟಿಯನ್ನು ಗಮನಿಸಿದಾಗ ಪ್ರತಿ ವರ್ಷವು ಪುರುಷರ ಜನಸಂಖ್ಯೆಯೇ ಮೇಲುಗೈಯಾಗಿ ಕಂಡುಬರುತ್ತದೆ. ಇದರಿಂದಲೂ ಮಹಿಳೆಯರ ಅಪೇಕ್ಷಣೆ ಎಂಬುದು ಸಮಾಜದಲ್ಲಿ ಕಡಿಮೆ ಇದೆ ಎಂದು ತಿಳಿದುಬರುತ್ತದೆ. ಈ ಹಿನ್ನೆಲೆಯಲ್ಲಿ ಮಹಿಳೆಯರ ಬೇಡಿಕೆಗಳನ್ನು ಕುರಿತು ಪ್ರಮುಖರೆನಿಸಿದ ರಾಷ್ಟ್ರೀಯವಾದಿಗಳು ಪ್ರಾಯಶಃ ನಿರ್ಲಕ್ಷ್ಯ ಮಾಡಿದ್ದರು. ಅವರ ಕಾರಣಗಳು ಮಾತ್ರ ಬೇರೆಯೆದಿತ್ತಷ್ಟೇ. ಸ್ತ್ರೀ ಶಿಕ್ಷಣದ ಬಗೆಗೆ, ಸಾಮಾಜಿಕ ಸಂಸ್ಥೆಗಳನ್ನು ಕಟ್ಟುವ ಬಗ್ಗೆ, ಬೆಂಬಲವಿತ್ತರೂ, ಮಹಿಳೆಯರು ತಾವು ಮುಂದೆ ಎಂತು ಪಿತೃಪ್ರಧಾನ ಸಮಾಜದ ದೋಷಗಳನ್ನು ಕುರಿತು ಮಾತನಾಡತೊಡಗಿದ್ದು, ಅವರಿಗೆ ಪ್ರಿಯವೆನ್ನಿಸಲಿಲ್ಲ. ಈವರೆಗೆ ಮೌನವಹಿಸಿದ್ದ ಮಹಿಳೆಯರು ಸಮಾಜದ ನಿರೀಕ್ಷಿತ ಸ್ಥಿರ ಮಾದರಿಗಳಲ್ಲಿ ತೆಪ್ಪಗೆ ಅಮಾಯಕರಾಗಿ, ಗುಲಾಮರಾಗಿ ನಡೆದುಬಂದಿದ್ದರು ಮತ್ತು ಇಂತಹ ಸ್ಥಿತಿಗಳಲ್ಲಿ ಮಹಿಳೆಯರು ಸ್ವಾತಂತ್ರ್ಯ ಹೋರಾಟದೆಡೆಗೆ ಸಾಗುವುದೆಂದರೆ ಅದು ದುಸ್ತಾರ ಸಂಗತಿ ಎಂದು ಎನಿಸದಿರದು.

II

ಆದರೂ ವಸಾಹತುಶಾಹಿ ಆಡಳಿತ ಮತ್ತು ಮೈಸೂರು ಒಡೆಯರ ಕಾಲದಲ್ಲಿ, ಮುಖ್ಯವಾಗಿ ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಸ್ಥಳೀಯ ಸಂಘಸಂಸ್ಥೆಗಳಾದ ಬೆಂಗಳೂರು ಲೂಟರಿ ಯೂನಿಯನ್, ರಾನಡೆ ಸೊಸೈಟಿ, ವಿಧವಾ ವಿವಾಹ ಸಂಘಗಳು,[೧೦೬] ಥಿಯೋಸಾಫಿಕೆಲ್ ಸೊಸೈಟಿ[೧೦೭], ಜಾತಿ ಆಧಾರಿತ ಸಂಘಗಳು ಮುಂತಾದವುಗಳ ಒತ್ತಡಗಳಿಂದ ಸುಧಾರಣಾ ಚಟುವಟಿಕೆ ನಡೆದವು ಎಂದು ಎಸ್. ಚಂದ್ರಶೇಖರ್, ಶ್ರೀಮತಿ ಹೇಮಲತಾಮಹಿ, ಸಮತಾ ದೇಶಮಾಪಿ, ಎಚ್.ವಿ. ಶ್ರೀನಿವಾಸಮೂರ್ತಿ ಹಾಗೂ ಆರ್. ರಾಮಕೃಷ್ಣನರವರು ಕೃತಿಗಳಿಗಿಂತ ವ್ಯಕ್ತವಾಗುತ್ತದೆ. ಆದರೆ, ಈ ಸುಧಾರಕರ ಸಂಘಟನೆಗಳಿಂದ ಕೋಲಾರ ಪ್ರದಶದ ಮಹಿಳೆಯರಿಗೆ ಅಷ್ಟೇನೆ ಅನುಕೂಲಗಳು ಉಂಡುಮಾಡಿಲ್ಲ ಎಂದು ಕೃತಿಗಳ ಅವಲೋಕನದಲ್ಲಿ ವ್ಯಕ್ತವಾಗುತ್ತದೆ.

೧೮೯೧ರಲ್ಲಿಯೇ ಭಾರತದ ಸರ್ಕಾರ ಏಜ್ ಆಫ್ ಕಂಟೆಂಟ್ (Age of content) ಕಾಯಿದೆ ಜಾರಿಗೆ ತರುವುದರ ಮೂಲಕ ಬಾಲ್ಯ ವಿವಾಹ ಪದ್ಧತಿಯನ್ನು ನಿಷೇಧಿಸಲಾಯಿತು. ಆದರೆ ೧೯೦೦ರವರೆಗೆ

ವಿಧುವಾ ವಿವಾಹವನ್ನು ಜನರ ಮನ್ನಣೆ ಪಡೆಯಲಿಲ್ಲ ಹಾಗೂ ಮಹಿಳಾ ಸ್ಥಿತಿಗತಿಗಳನ್ನು ಬದಲಾಯಿಸಬಲ್ಲ ಸುಧಾರಣೆಗಳನ್ನು ಬಹುತೇಕ ಒಕ್ಕಲಿಗರು ವಿರೋಧಿಸುತ್ತಿದ್ದರು[೧೦೮] ಎಂದು ಎಸ್. ಚಂದ್ರಶೇಖರರವರು ಹೇಳಿದ್ದಾರೆ. ೧೯೩೭ರ ಹೊತ್ತಿಗೆ ಗಾಂಧಿ ಪ್ರವಾಸಗಳು ಹಾಗೂ ಸಮಾಜ ಸುಧಾರಕರ ಒತ್ತಾಯದ ಮೇರೆಗೆ ಸ್ತ್ರೀಯರು ಆಸ್ತಿಯನ್ನು ಹೊಂದುವ ಕಾಯಿದೆ ಜಾರಿಗೆ ತರಲಾಯಿತು[೧೦೯] ಎಂದು ಹೇಮಲತಾ ಮಹಿಷ ಅವರು ಹೇಳುತ್ತಾರೆ. ೧೯೧೯ರಲ್ಲಿಯೇ ದೇವದಾಸಿಯರು ದೇವಾಲಯಗಳಲ್ಲಿ ಗೆಜ್ಜೆಪೂಜೆ ಮಾಡುವ ಪದ್ಧತಿಗಳನ್ನು ನಿಷೇಧಿಸಲಾಯಿತು. ೧೯೩೮ರಲ್ಲಿ ಮೈಸೂರು ಸರ್ಕಾರ ವಿಧವೆಯರ ಪುನರ್ ವಿವಾಹ ಕಾಯಿದೆ ಜಾರಿಗೆ ತಂದಿತು. ಹೀಗೆ ಕೆಲವು ಕಡುಸಂಪ್ರದಾಯಗಳಿಂದ ಮಹಿಳೆಯರು ಮುಕ್ತವಾಗಲು ಕ್ರಮಗಳು ಕೈಗೊಳ್ಳಲಾಯಿತು ಎಂದು ಹೇಳಲಾಗುತ್ತದೆ. ಈ ಸುಧಾರಣೆಗಳು ಸ್ವಾತಂತ್ರ್ಯ ಹೋರಾಟ ಘಟ್ಟದಲ್ಲಿ ಅಷ್ಟಾಗಿ ಪರಿಣಾಮಗೊಂಡಿಲ್ಲ. ಇದಕ್ಕೆ ಹಿಂದು ಜಡತ್ವ ಮತ್ತು ಅನಕ್ಷರತೆಯ ಕಾರಣವಾಗಿದೆ ಎಂದು ಕೃತಿಗಳಲ್ಲಿ ವ್ಯಕ್ತವಾಗುತ್ತದೆ.

III

ಆದರೂ, ಇಂತಹ ಪ್ರಯತ್ನಗಳಿಂದ ಸ್ವಾತಂತ್ರ್ಯ ಹೋರಾಟ ಘಟ್ಟದಲ್ಲಿ ಮಹಿಳೆಯರು ಸ್ಥಿತಿಗತಿಗಳು ಸ್ವಲ್ಪಮಟ್ಟಿಗೆ ಸುಧಾರಣೆಯತ್ತ ಸಾಗಿದಲ್ಲದೆ, ಸ್ವಾತಂತ್ರ್ಯ ಹೋರಾಟದಲ್ಲಿ ಮಹಿಳೆಯರು ಭಾಗಿಗಳಾಗಲು ಕಾರಣವಾಯಿತು. ಪ್ರಾಯಶಃ ಇದರಿಂದಲೇ ಸೂರ್ಯನಾಥ ಕಾಮತರವರು ಮಹಿಳೆಯರು ಮನೆಯ ಆವರಣದಿಂದ ಹೊರಗೆ ಬರಲು ಮತ್ತು ಅವರು ಸಮಾಜದಲ್ಲಿ ಎದ್ದುಕಾಣಲು ಸ್ವಾತಂತ್ರ್ಯ ಚಳುವಳಿಯಂತೆ ಇನ್ನಾವುದು ಪರಿಣಾಮ ಬೀರಲಿಲ್ಲ ಎಂದಿದ್ದಾರೆ.[೧೧೦] ರಾಷ್ಟ್ರೀಯ ಚಳುವಳಿಯಲ್ಲಿ ಮಹಿಳೆಯರ ಪಾತ್ರವೇನು ಎಂಬ ಕತೆಯಾನ ಪ್ರದರ್ಶನದಲ್ಲಿ ಯಾವ ಪಿಕೆಟಿಂಗ್‌ನಲ್ಲಿ ಹೇಗೆಲ್ಲಾ ಭಾಗವಹಿಸಿದರು ಎಂಬ ದೃಶ್ಯಗಳ ರೂಪದಲ್ಲಿ, ಮೊದಲಿಗೆ ಈ ಚಳುವಳಿಯಲ್ಲಿ ತೀರಾ ಅಲ್ಪಸಂಖ್ಯೆಯಲ್ಲೇ ಆದರೂ, ಭಾಗವಹಿಸಿದ ಮಹಿಳೆಯರು ಸಾಮಾನ್ಯ ನಿರೀಕ್ಷೆಗಳನ್ನು ಮೀರಿದ ಮಹತ್ವದ ಪಾತ್ರವಹಿಸಿದರು. ಗಾಂಧೀಜಿಯವರು ಕೋಲಾರ ಪ್ರದೇಶಕ್ಕೆ ಎರಡು ಸಲ ಭೇಟಿ ಕೊಟ್ಟಾಗ ಸಾವಿರಾರು ಮಹಿಳಾ ಸಮುದಾಯಗಳ ಬಗ್ಗೆ ಚರ್ಚಿಸಿರುವುದನ್ನು ಮತ್ತು ಬೆಟ್ಟದಲ್ಲಿ ತಂಗಿದ್ದಾಗ ಹಾಗೂ ಜಿಲ್ಲಾದ್ಯಂತ ಪ್ರವಾಸ ಕೈಗೊಂಡಾಗ ಹಲವಾರು ಮಹಿಳೆಯರಿಗೆ ಸ್ವಾವಲಂಬನೆ, ಧೈರ್ಯಗಳನ್ನು ತುಂಬುತ್ತಾ ರಾಷ್ಟ್ರೀಯ ಚಳುವಳಿಯತ್ತ ಸೆಳೆದರು ಎಂದು ಡಿ. ಲಿಂಗಯ್ಯ, ಎಂ.ಸಿ. ಮಹಾಬಳೇಶ್ವರಪ್ಪ ಸಿದ್ದಪ್ಪನಹಳ್ಳಿ, ಕೃಷ್ಣಮೂರ್ತಿ, ಎಸ್. ಚಂದ್ರಶೇಖರರವರ ಕೃತಿಗಳಿಂದ ವ್ಯಕ್ತವಾಗುತ್ತದೆ.

ಇದರಿಂದ ಪ್ರೇರಣೆಗೊಂಡ ಮಹಿಳೆಯರು ಸಾಧ್ಯವಾದ ಮಟ್ಟಿಗೆ ಸ್ವಾತಂತ್ರ್ಯ ಹೋರಾಟಕ್ಕೆ ಪ್ರೋತ್ಸಾಹ ನೀಡಿದರು ಎಂದು ಹೇಳಲಾಗುತ್ತದೆ. ಅದು ನೇರವಾಗಿಯೂ ಮತ್ತು ಪರೋಕ್ಷವಾಗಿಯೂ ಬೆಂಬಲ ನೀಡಿರುವುದು ಕಂಡುಬರುತ್ತದೆ. ಕೆ. ವೆಂಕಟಕೃಷ್ಣಪ್ಪನವರು ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡಿದ್ದಕ್ಕಾಗಿ ಸರ್ಕಾರ ಅವರ ಮೇಲೆ ಜುಲ್ಮಾನೆ ಹಾಕಿ ಅದರ ವಸೂಲಿಗಾಗಿ ಅವರ ಮನೆಯ ಎಮ್ಮೆಗಳನ್ನು ಹರಾಜು ಹಾಕಿ ಹಣ ವಸೂಲಿ ಮಾಡಿದಾಗ ಅವರ ತಾಯಿ ಎದೆಗುಂದದೆ ಮಗನಾದ ವೆಂಕಟಕೃಷ್ಣಪ್ಪನವರಿಗೆ ಬೆಂಬಲ ಪ್ರೋತ್ಸಾಹ ನೀಡಿದಳು ಎಂದು ಹೇಳಿರುವುದು ಇಲ್ಲಿ ಗಮನಿಸಲಾಗುತ್ತದೆ.[೧೧೧]

ಗೌರಿಬಿದನೂರು ಬಳಿ ಇರುವ ವಿದುರಾಶ್ವತ ಎಂಬ ಪವಿತ್ರ ಕ್ಷೇತ್ರದಲ್ಲಿ ಸ್ವಾತಂತ್ರ್ಯ ಧ್ವಜ ಸತ್ಯಾಗ್ರಹ ಹಮ್ಮಿಕೊಂಡಾಗ ಗೋಲಿಬಾರ್ ನಡೆದು ಮರಳೂರುವ ವೆಂಕಟಾಚಲಯ್ಯನವರ ಧರ್ಮಪತ್ನಿ ಗೌರಮ್ಮ ಪೊಲೀಸರ ಗುಂಡಿಗೆ ಬಲಿಯಾದಳು ಎಂದು ಸ್ವಾಮಿಯಲ್ ಅಪ್ಪಾಜಿರಾವರವರ ಹೇಳಿದ್ದಾರೆ.[೧೨೨] ಇದನ್ನು ಕೆ. ಅಭಿಶಂಕರವರ ಕೋಲಾರ ಜಿಲ್ಲಾ ಗೆಜೆಟಿಯರ್‌ನಲ್ಲಿ ದಾಖಲಿಸಿದೆ ಹಾಗೂ ಡಿ. ಲಿಂಗಯ್ಯ, ಕೆ.ಬಿ. ರಾಮಚಂದ್ರನ, ಎಂ.ಸಿ. ಮಹಾಬಲೇಶ್ವರಪ್ಪನವರು ಹೇಳಿದ್ದಾರೆ. ಎಂ. ಜಮುನಾರವರು ಇದರಿಂದ ಕರ್ನಾಟಕದ ಎಲ್ಲಾ ಮಹಿಳಾ ಸಮುದಾಯಗಳ ಮೇಲೆ ಪ್ರಭಾವ ಬೀರಿತು ಮತ್ತು ಸ್ವಾತಂತ್ರ್ಯ ಚಳುವಳಿಯತ್ತ ಗಮನಿಸುವಂತಾಯಿತು ಎಂದು ಹೇಳಿದ್ದಾರೆ.[೧೨೩]

ಸಾರ್ವಜನಿಕ ಮತ್ತು ವೈಯಕ್ತಿಕ ಪಾತ್ರಗಳು ತಾತ್ವಿಕವಾಗಿ ಹಾಗೂ ದೈಹಿಕವಾಗಿ ತೀಕ್ಷ್ಣ ಭಿನ್ನವಾಗಿರುತ್ತಿದ್ದ ಇಂಥ ಸಂದರ್ಭಗಳಲ್ಲಿ ಮಹಿಳೆಯರ ಚಟುವಟಿಕೆಗಳು ಬ್ರಿಟಿಷ್ ಅಧಿಕಾರಿಗಳ ಕಣ್ಣಿಗೆ ಬೀಳದಂತೆಯೇ ಇರುತ್ತಿದ್ದವು. ಶಸ್ತ್ರಾಸ್ತ್ರಗಳನ್ನು ಮುಚ್ಚಿಡುವುದು, ಕ್ರಾಂತಿವೀರರಿಗೆ ಆಶ್ರಯ ಕೊಡುವುದು, ಅಪರಾಧಗಳೆನಿಸಿ ಕೊಳ್ಳುವ ಕ್ರಾಂತಿಕಾರಿ ಚಟುವಟಿಕೆಗಳಿಗೆ ಗಂಡಸರನ್ನು ಪ್ರೇರೇಪಿಸುವುದೇ ಮೊದಲಾದವಕ್ಕೆ ಮಹಿಳೆಯರು ಮುಂದಾಗುತ್ತಿದ್ದರು.

ಹೀಗೆ ಪರೋಕ್ಷವಾಗಿ ಸ್ವಾತಂತ್ರ್ಯ ಚಳುವಳಿಗೆ ಮಹಿಳೆಯ ಪಾತ್ರ ಪ್ರಾಮುಖ್ಯತೆ ಗಳಿಸಿದರೆ ಇನ್ನು ನೇರವಾಗಿ ಅನೇಕ ಮಹಿಳೆಯರು ಪಾಲುಗೊಂಡಿದ್ದಾರೆ. ಸುಭಾಷ್ ಚಂದ್ರಬೋಸ್‌ರ ಆಪ್ತ ಮಿತ್ರನಾದ ಮದ್ರಾಸಿನ ಚದುಮಲ ರಾಮಚಂದ್ರರವರ ತಂಗಿಯೂ ಮತ್ತು ಕೋಲಾರ ಪ್ರದೇಶದ ಸ್ವಾತಂತ್ರ್ಯ ಹೋರಾಟಗಾರನಾದ ಚಂದ್ರಶೇಖರರವರ ಪತ್ನಿಯಾದ ಸರಸ್ವತಮ್ಮನವರು ಕೋಲಾರ ಪ್ರದೇಶದ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿ ಕಾರಾಗೃಹ ಶಿಕ್ಷೆಗಳನ್ನು ಅನುಭವಿಸಿದ್ದಾರೆ.[೧೨೪] ಇದೇರೀತಿ ಮರಳಿರೂ ವೆಂಕಸ್ವಾಮಿ ಗೌಡರ ತಂಗಿಯಾದ ಸಾಕಮ್ಮನವರು ಸತ್ಯಾಗ್ರಹದಲ್ಲಿ ಭಾಗವಹಿಸಿ ಸೆರೆವಾಸ ಅನುಭವಿಸಿದರು. ಇವರ ಗಂಡ ವಿದುರಾಶ್ವಥದ ಗೋಲಿಬಾರ್‌ನಲ್ಲಿ ಮೃತದಾರರು[೧೨೫] ಮತ್ತು ಲಕ್ಕಮ್ಮ, ವೆಂಕಟಮ್ಮ[೧೨೬] ಚಿಂತಾಮಣಿನವರು ಇದೇ ರೀತಿ ಶಿಕ್ಷೆ ಅನುಭವಿಸಿದರು ಎಂದು ಕೆ. ವೆಂಕಟ ಕೃಷ್ಣನಪ್ಪನವರು ಹೇಳುತ್ತಾರೆ.

ಇವರು ಸಾರಾಯಿ ಅಂಗಡಿಗಳ ಮುಂದೆ, ವಿದೇಶಿ ವಸ್ತುಗಳ ಅಂಗಡಿಗಳ ಮುಂದೆ, ಪಿಕೆಟಿಂಗ್ ಗಡಿ ಮಾಡುವುದು, ಹೋರಾಟಗಾರರಿಗೆ ಬೆಂಬಲ ನೀಡುವುದು. ಸ್ವದೇಶಿ ವಸ್ತುಗಳು ಉತ್ಪಾದನೆಯಲ್ಲಿ ತೊಡಗುವುದು ಸಹಜವಾಗಿ ಕಾಣುಬರುತ್ತದೆ. ಇಷ್ಟೇ ಅಲ್ಲದೆ, ಹಲವಾರು ಮಹಿಳೆಯರು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸುವುದರೊಂದಿಗೆ ಸಮಾಜಕ್ಕೆ ಸುಧಾರಣೆಗಳು ಮಾಡಿ ಪುರುಷರಿಗಿಂತ ಮಿಗಿಲಾದ ಕಾರ್ಯ ದಕ್ಷತೆಯನ್ನು ಮೀರಿಸಿದವರು ಇದ್ದಾರೆ. ಅಂತಹವರಲ್ಲಿ ಕೋಲಾರ ಪ್ರದೇಶದ ಗಂಗ ಸಂದ್ರದ ಗೌರಮ್ಮ ಎಂಬುವಳು ಒಬ್ಬಳು ಎಂದು ಹಕೋರವರು ಹೇಳಿದ್ದಾರೆ.[೧೨೭] ಈ ವಾದವನ್ನು ಎಸ್. ಚಂದ್ರಶೇಖರವರು ಸಹ ಅನುಮೋದಿಸಿದ್ದಾರೆ. ಗಂಗಸಂದ್ರದ ಗೌರಮ್ಮ ಎಂಬುವಳು ಗಾಂಧೀಜಿಯವರ ರಾಷ್ಟ್ರೀಯ ರಚನಾತ್ಮಕ ಕಾರ್ಯಕ್ರಮಗಳಿಂದ ಪ್ರಭಾವಿತಳಾಗಿ ಶಿವಪುರದ ಧ್ವಜ ಸತ್ಯಾಗ್ರಹದದಲ್ಲಿ ಪಾಲ್ಗೊಂಡು, ಬ್ರಿಟಿಷ್‌ರಿಂದ ಬಂದಿತವಾಗಿ ಚಿಕ್ಕಬಳ್ಳಾಪುರದ ಸೆರೆಮನೆವಾಸ ಅನುಭವಿಸಿದಳು. ನಂತರ

ವಿದುರಾಶ್ವತ್ಥ, ಸತ್ಯಗ್ರಹ ಅನಂತರದ ಚಳುವಳಿಗಳಲ್ಲಿ ಭಾಗವಹಿಸಿ ಮಹಿಳಾ ಸಮುದಾಯಗಳಿಗೆ ಪ್ರೇರಣೆ ನೀಡಿದಳು. ಇನ್ನೊಂದು ಮುಖದಲ್ಲಿಯೇ ಇವರು ಗಂಗಸಂದ್ರದ ಊರಿನಲ್ಲಿ ಬಾವಿವೊಂದು ತೋಡಿಸಿ ಅದನ್ನು ಅಸ್ಪೃಶ್ಯರ ಉಪಯೋಗಕ್ಕಾಗಿ ನೀಡಿದಳು. ಇದು ಜಾತಿ ವ್ಯವಸ್ಥೆಯ ಬಿಗಿತದಲ್ಲಿದ್ದ ಅಂದಿನ ಕಾಲದಲ್ಲಿಯೇ ಅದು ಅಸಾಧ್ಯ ಮಾತಾಗಿತ್ತು ಎಂದು ರಾಂಕೋರವರೇ ಹೇಳುತ್ತಾರೆ. ಕಸ್ತೂರಬಾರವರ ಹೆಸರಿನಲ್ಲಿ 'ಹರಿಜನ ವಿದ್ಯಾರ್ಥಿ ನಿಲಯ'ವನ್ನು ಕಟ್ಟಿದರು. ಇದು ಈಗ ಇಡೀ ಹರಿಜನ ಮಹಿಳೆಯರ ಕಲ್ಯಾಣ ಕೇಂದ್ರವಾಗಿ ಕೆಲಸ ಮಾಡಿತ್ತಿದೆ. ಹರಿಜನ ಮಹಿಳೆಯರು ಕೂಲಿ ಕೆಲಸಕ್ಕೆಂದು ಮನೆಯಿಂದ ಹೊರಗಡೆ ಹೋದಾಗ ಅವರ ಹಾಲು ಕುಡಿಯುವ ಎಳೆಯ ಮಕ್ಕಳನ್ನು ನೋಡಿಕೊಳ್ಳಲು 'ಕೃಷ' ಎಂಬ ಕೇಂದ್ರ ತೆರೆದರು. ಇಂತಹ ಕಾರ್ಯನ್ಮುಖಳಾದ ಗಂಗಸುದ್ರದ ಗೌರಮ್ಮಳಿಗೆ ರಾಜ್ಯ ಸರ್ಕಾರ ಎಷ್ಟು ವರ್ಷಗಳಾದ ನಂತರ ದಸರಾ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಿದರು ಎಂದು ರಾಂಕೋರವರ ಹೇಳಿದ್ದಾರೆ.

ಹೀಗೆ ಸ್ವಾತಂತ್ರ್ಯ ಹೋರಾಟ ಘಟ್ಟದಲ್ಲಿ ಮಹಿಳೆಯರ ಸ್ಥಿತಿಗತಿಗಳು ಅವರ ಸುಧಾರಣೆಗಳು ಹಾಗೂ ಅವರು ಸ್ವಾತಂತ್ರ್ಯ ಚಳುವಳಿಯಲ್ಲಿನ ಪಾತ್ರ ಮತ್ತು ಮಹಾತ್ಮ್ಯವಿರುವುದು ಕಂಡುಬರುತ್ತದೆ. ಸ್ವಾತಂತ್ರ್ಯನಂತರ ಅಂದರೆ ಸ್ವಾತಂತ್ರ್ಯ ಭಾರತದಲ್ಲಿ ಅನೇಕ ಮಹಿಳಾ ಸಮುದಾಯಗಳು ಉದಯವಾದವು. ಅವರ ಸುಧಾರಣೆಗಳು ಹೆಚ್ಚಾಗಿ ಕಂಡುಬಂದವು ಮತ್ತು ಅವುಗಳಂತೆ ಅವರ ಸ್ಥಿತಿಗತಿಗಳು ಸಂಕೀರ್ಣಗೊಂಡಿವೆ ಎಂಬುದನ್ನು ಮುಂದಿನ ಅಧ್ಯಯನದಲ್ಲಿ ವಿವರಿಸಲ್ಪಟ್ಟಿದೆ.

೩.೧೨. ರೈತರು ಮತ್ತು ಕಾರ್ಮಿಕರ ಚರಿತ್ರೆ

ಸ್ವಾತಂತ್ರ್ಯ ಹೋರಾಟ ಘಟ್ಟದಲ್ಲಿ ರೈತರು ಮತ್ತು ಕಾರ್ಮಿಕರ ಚರಿತ್ರೆ ಬಹು ವೈಶಿಷ್ಟ್ಯತೆ ಮತ್ತು ಪರಿಣಾಮಕಾರಿ ಪ್ರಭಾವ ಬೀರಿದೆ. ಅದರಂತೆ ಚರಿತ್ರೆ ಲೇಖನಶಾಸ್ತ್ರದ ಹೊಸತನವನ್ನುಂಟು ಮಾಡಿದೆ.

ಈ ರೈತರು, ಕಾರ್ಮಿಕರ ಚರಿತ್ರೆಯನ್ನು ಅಧ್ಯಯನ ಮಾಡುವಾಗ ಆರ್. ಗೋಪಾಲರವರ 'ಕೋಲಾರ ಜಿಲ್ಲಾ ಇತಿಹಾಸ ಮತ್ತು ಪುರಾತತ್ವ', ಸೂರ್ಯನಾಥ ಕಾಮತ್‌ರವರ 'ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು', ಎಸ್. ಚಂದ್ರಶೇಖರರವರ 'ದಕ್ಷಿಣ ಭಾರತ ವಸಾಹತುಶಾಹಿ: ರಾಷ್ಟ್ರೀಯತೆ ಮತ್ತು ಸಂಘರ್ಷ' ಹಾಗೂ 'ಕರ್ನಾಟಕ ಚರಿತ್ರೆ ಸಂಪುಟ ೬ ಮತ್ತು ೭', ಕೆ. ವೆಂಕಟಪ್ಪ ಕೃಷ್ಣಪ್ಪನವರ 'ಕೋಲಾರ ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಾರರು', ಪದ್ಮನಾಭ, ವಿ.ವಿ. ನರಸಿಂಹ ಅಯ್ಯಂಗಾರ್ ಹಾಗೂ ಬಾಲಸುಬ್ರಹ್ಮಣ್ಯಂರವರ 'ಕೋಲಾರ ಪ್ರದೇಶದ ಜನಗಣತಿ' ಮುಂತಾದ ಕೃತಿಗಳು ಈ ಅಧ್ಯಯನಕ್ಕೆ ನೆರವಾಗಿವೆ. ಇಂತಹ ಕೃತಿಗಳ ಅವಲೋಕನದಿಂದ ಕೋಲಾರ ಪ್ರದೇಶದ ರೈತರು, ಕಾರ್ಮಿಕರ ಸ್ಥಿತಿಗತಿಗಳು, ಸ್ವಾತಂತ್ರ್ಯ ಹೋರಾಟದಲ್ಲಿ ಅವರ ಪಾತ್ರ ಹಾಗೂ ಮಹತ್ವಗಳ ಕುರಿತಾಗಿ ಸೈದ್ಧಾಂತಿಕ ದೃಷ್ಟಿಯಲ್ಲಿ ವಿವರಿಸಲು ಕಿರುಪ್ರಯತ್ನ ಮಾಡಲಾಗಿದೆ.

ಸ್ವಾತಂತ್ರ್ಯ ಹೋರಾಟ ಘಟ್ಟದಲ್ಲಿ ರೈತರ ಪಾತ್ರ ಮತ್ತು ಮಹಾತ್ಮ ತಿಳಿಯುವ ಮುನ್ನ ಅವರ ಮೂಲ ಮತ್ತು ಸ್ಥಿತಿಗತಿಗಳು ತಿಳಿಯುವುದು ಅಗತ್ಯವಾಗಿದೆ ಮತ್ತು ಅಧ್ಯಯನ ಸರಾಗವಾಗಿಸುವಲ್ಲಿ ಮೊದಲಿಗೆ ರೈತರ ಚರಿತ್ರೆ ನಂತರ ಕಾರ್ಮಿಕರ ಚರಿತ್ರೆಯನ್ನು ಈ ಮೂಲಕ ವಿವರಿಸಲ್ಪಟ್ಟಿದೆ.

I

ಮೂಲತಃ ಕೋಲಾರ ಪ್ರದೇಶದಲ್ಲಿ ಎಲ್ಲಾ ಕಾಲದಲ್ಲಿ ಹರಿಯುವ ನದಿಗಳು ಇಲ್ಲ. ಆದುದರಿಂದ ಬಹು ಭಾಗದ ಕೃಷಿ ಮಳೆಯನ್ನು ಅವಲಂಬಿಸಿದೆ. ಅಂತೆಯೇ ಕೋಲಾರ ಪ್ರದೇಶದ ಪ್ರಧಾನ ವೃತ್ತಿ ಕೃಷಿ ಎಂದು ಎಸ್. ಜಗನ್ನಾಥ ಪ್ರಕಾಶ್‌ರವರು ಹೇಳಿದ್ದಾರೆ.[೧೯೮] ಉತ್ತಮವಾದ ಭೂಮಿ ಇದ್ದು, ಪೆನ್ನಾರ, ಪಾಪಗ್ನಿ ಪಾಲಾರ, ದಕ್ಷಿಣ ಪಿನಾಕಿನಿ ಮುಂತಾದ ಕೆಲವು ನದಿಗಳು ಕೃಷಿ ಸಾಗುವಳಿಯಲ್ಲಿ ಸಾಧ್ಯವದಷ್ಟು ಅನುಕೂಲಕರವಾಗಿವೆ. ಇಂತಹ ಭೂಪ್ರದೇಶದಲ್ಲಿರುವ ಹಲವು ಕೃಷಿಕರು ಆಂಧ್ರಪ್ರದೇಶ ಮತ್ತು ತಮಿಳುನಾಡು ಪ್ರದೇಶಗಳಿಂದ ಬಂದವರಾಗಿದ್ದಾರೆ ಎಂಬು ಶ್ರೀಮತಿ ಪಿ. ಯಶೋಧ ಅವರ ಲೇಖನ, ಎಂ.ವಿ. ವಸುರವರ ಕೃತಿಗಳಿಂದ ವ್ಯಕ್ತವಾಗುತ್ತದೆ. ಇಂತಹ ರೈತಾಪಿ ವರ್ಗದವರಲ್ಲಿ ಮೊರಸು ಒಕ್ಕಲಿಗರು, ಉಳಿತಿಗಳರು, ಲಿಂಗಾಯಿತರು, ಹಳ್ಳಿಕಾರ, ಕುಂಚಿಟಿಗ, ಕಾಪು, ಕಮ್ಮ, ರೆಡ್ಡಿ, ಗೌಡ ಹಾಗೂ ಶೂದ್ರ ವರ್ಗದವರು ಪ್ರಮುಖರಾಗಿದ್ದಾರೆ.[೧೯೯]

ಮಾರಸು ಒಕ್ಕಲಿಗರು ಮೂಲತಃ ಕನ್ನಡದವರಾಗಿದ್ದು ಬೇಸಾಯ ಮಾಡುವುದರ ಮೂಲಕ ಒಕ್ಕಲಿಗರೆನಿಸಿದ್ದಾರೆ. ಇವರು ಚಿಕ್ಕಬಳ್ಳಾಪುರದ ಪ್ರದೇಶದಲ್ಲಿ ಹೆಚ್ಚಾಗಿ ಕಂಡುಬರುತ್ತಾರೆ. ಹಿಂದೆ ಸೈನಿಕ ಪದ್ಧತಿಯಲ್ಲಿ ಕೆಲಸ ಮಾಡುತ್ತಿದ್ದು, ಕಂದಾಚಾರಿಗಳೆಂದು ಕರೆಸಿಕೊಂಡಿದ್ದಾರೆ. ಶ್ರಮ ಜೀವಿಗಳಾದ ಇವರು ತಮ್ಮ ಆಳುವರ್ಗದವರೊಂದಿಗೆ, ಕೆಲಸ ಮಾಡುವುದಲ್ಲದೆ ಸಮಯ ಬಂದಾಗ ಕೂಲಿಕೆಲಸಕ್ಕೆ ಹೋಗುತ್ತಿದ್ದರು. ಒಟ್ಟಾರೆ ಇವರ ಲಕ್ಷಣಗಳಿಂದ ಮಾರಿಸು ಒಕ್ಕಲಿಗ, ತೆಲುಗು ಮಾರಸು, ಮೊಸರು ಒಕ್ಕಲಿಗರೆಂದಾಗಿ ವಿಂಗಡಿಸಲಾಗಿದೆ. ಎರಡನೇ ಪ್ರಧಾನ ಕೃಷಿಕರಾದ 'ಉಳ್ಳಿತಿಗಳು', ಮೂಲತಃ ತೆಲುಗು ಮೂಲದಿಂದ ಬಂದವರಾಗಿದ್ದಾರೆ. ಪೂರ್ಣ ತೋಟಗಾರಿಕೆಯ ವೃತ್ತಿ ಮಾಡುತ್ತಿದ್ದು, ಬೆಳೆದ ಹಣ್ಣುಹಂಪಲಗಳು ತರಕಾರಿಗಳನ್ನು ದೂರ ದೂರದ ಪಟ್ಟಣ, ಸಂತೆಗಳಿಗೆ ಸಾಗಿಸಿ ಮಾರಾಟ ಮಾಡುತ್ತಾ ಜೀವನ ಸಾಗಿಸುತ್ತಿದ್ದರು. ಇದರಿಂದ ಕೋಲಾರ ಪ್ರದೇಶವು ತೋಟಗಾರಿಕೆಯಲ್ಲಿ ಹಸಿರು ಪಡೆದಿದೆ. ಇವರು ತಮ್ಮ ಮುಖಂಡರನ್ನು ಗೌಡರೆಂದು ಕರೆಯುತ್ತಾರೆ ಎಂದು ಶ್ರೀಮತಿ ಪಿ. ಯಶೋಧರವರು ಹೇಳುತ್ತಾರೆ.[೨೦೦] ಜಿಲ್ಲಾದ್ಯಂತ ಕೃಷಿಗೆ ಲಭ್ಯವಾದ ಭೂಮಿ ೩೮೪೪೪೫ ಹೆಕ್ಟೇರುಗಳು ಇಂತಹ ಭೂಮಿಯಲ್ಲಿ ಸುಮಾರು ೬೭೦೭೯೧ ಜನರು ಕೃಷಿ ಮಾಡುತ್ತಿದ್ದಾರೆ ಎಂದು ನಂಜುಂಡಯ್ಯನವರ ೧೯೫೧ರ ಜನಗಣತಿ ಕೃತಿಯಿಂದ ವ್ಯಕ್ತವಾಗುತ್ತದೆ.[೨೦೧]

II

ಬ್ರಿಟೀಷ್ ಆಡಳಿತ ಬೆಳವಣಿಗೆಯಿಂದ ಹೊಸ ಸಮಾಜವರ್ಗಗಳು ಉದಯಗೊಂಡವು. ಬುದ್ಧಿವಂತರಾದ ಗ್ರಾಮದ ಮುಖಂಡರು, ಪಟೇಲರು, ಶಾನುಭೋಗರು ತಮ್ಮ ಸ್ಥಾನವನ್ನು ಬ್ರಿಟೀಷರ ಅಮೀಷಗಳಲ್ಲಿ

ಬಲಿಯಾಗುವುದರ ಮೂಲಕ ತಮ್ಮ ಅನುಕೂಲಕ್ಕೆ ತಕ್ಕಂತೆ ಪರಿಸ್ಥಿತಿಯನ್ನು ಬದಲಿಸಿಕೊಂಡರು. ಗ್ರಾಮಾಂತರ ಪ್ರದೇಶದಲ್ಲಿ ಶಾಂತಿಯನ್ನು ಕಾಪಾಡಿಕೊಂಡಿದ್ದರಿಂದ ಬ್ರಿಟೀಷರು ಹೆಚ್ಚಾಗಿ ಆ ಕಡೆ ಗಮನಕೊಡಬೇಕಾಗಿರಲಿಲ್ಲ ಎಂದು ಎಸ್. ಚಂದ್ರಶೇಖರ ರವರು ಹೇಳಿದ್ದಾರೆ.[೧೨] ಲಾರ್ಡ್ ವಿಲಿಯಂ ಬೆಂಟಿಂಕ್‌ನಿಂದ 'ರೈತವಾರಿ ಪದ್ಧತಿ' ಜಾರಿಗೊಳಿಸಿದರು, ಸ್ಥಳೀಯವಾಗಿದ್ದ ಜಹಾಗೀರು ಪದ್ಧತಿ, ಜಮೀನ್ದಾರಿ ಪದ್ಧತಿ ಮುಂತಾದವು ಮುಂದುವರೆದಿದ್ದವು. ಇವುಗಳೆಲ್ಲದ ವಿಶೇಷವಾಗಿ ಜೋಡಿದಾರ ಪದ್ಧತಿ, ಜರೂಬಂದಿ, ಇನಾಂ (Inam) ಪದ್ಧತಿಗಳು ಕೋಲಾರ ಪ್ರದೇಶದಲ್ಲಿದ್ದವು ಎಂದು ಗೆಜೆಟೆಯಿರ್‌ಗಳಿಂದ ತಿಳಿದುಬರುತ್ತದೆ.[೧೩] ಇದನ್ನೇ ಬಾಲಸುಬ್ರಹ್ಮಣ್ಯಂ ಪದ್ಮನಾಭ ಮತ್ತು ವಿ.ಎಸ್. ನರಸಿಂಹ ಅಯ್ಯಂಗಾರ್‌ರವರ ಕೋಲಾರ ಪ್ರದೇಶದ ಜನಗಣತಿ ಕೃತಿಗಳಲ್ಲಿ ವ್ಯಕ್ತಪಡಿಸಿದ್ದಾರೆ. ಬ್ರಿಟೀಷರು ತಮ್ಮ ಆಡಳಿತ ದೃಷ್ಟಿಯಿಂದ ಹಲವು ಕಂದಾಯ ಮತ್ತು ತೆರಿಗೆ ಗುಂಪುಗಳಾಗಿ ವಿಂಗಡಿಸಿದ್ದರು. ಅವುಗಳೆಂದರೆ ೯೯೬-೧೫೦೦ (Inam) ಗ್ರಾಮಗಳು, ೫೩ ಸರ್ವಮಾನ್ಯ ಗ್ರಾಮೀಣ ಗುಂಪುಗಳು ೪೦೩ ಜೋಡಿ (Jodi) ಗ್ರಾಮಗಳು, ೧೪೦ ಕಾಯಮ್‌ಘಟ್ಟ (Kayamgatta) ಗ್ರಾಮಗಳಾಗಿ ವಿಂಗಡಿಸಿದ್ದರು. ಈ ಎಲ್ಲಾ ಗುಂಪುಗಳು ಒಂದೇ ತೆರನಾಗಿರದೆ ಬೇರೆ ಬೇರೆಯಾಗಿದ್ದು, ಆಡಳಿತ ಸಮಸ್ಯೆಗಳು ಉಂಟಾಗುತ್ತಿದ್ದವು. ಇದರಿಂದ ಹಂತ ಹಂತವಾಗಿ ಅಂದರೆ ೧೯೧೫, ೧೯೧೬, ೧೯೧೮, ೧೯೨೫, ೧೯೨೮ (ತಿದ್ದುಪಡಿ ಕಾಯ್ದೆ, ೧೭) ಹಾಗೂ ೧೯೩೨ರ ತಿದ್ದುಪಡಿಗಳ ಮೂಲಕ ಸುಧಾರಣಾಕ್ರಮಗಳು ಕೈಗೊಂಡಿದ್ದರು ಎಂದು ಗೆಜೆಟಿಯರ್‌ಗಳಿಂದ ವ್ಯಕ್ತವಾಗುತ್ತದೆ. ಆದರೆ ಈ ಎಲ್ಲ ಸುಧಾರಣೆಗಳಲ್ಲಿಯೂ ಕಂದಾಯ, ತೆರಿಗೆಗಳು ಮಾತ್ರ ಶೇಕಡಾ ೫೦ರ ಆಯ್ಕೆಗೆ ಏರಿದವು ಎಂಬುದು ಗಮನಾರ್ಹ. ಇಂತಹ ಏರಿಕೆ ಕಂದಾಯದಲ್ಲಿ ವಸೂಲಾತಿಯಲ್ಲಿ ವಿಫಲವಾದರೆ ಅದಕ್ಕೆ ಸ್ಥಳೀಯ ಆಡಳಿತಗಾರರ ಹೊಣೆಗಾರರಾಗುತ್ತಿದ್ದರು. (ಪಟೇಲ, ಶಾನುಭೋಗ, ಅಮೀಲ್ದಾರರು, ಫೌಜುದಾರರು ಹಾಗೂ ಶ್ರೀಮಂತ ಅಧಿಕಾರಿಗಳು, ಸಹೋದ್ಯೋಗಿಗಳು) ಇದಲ್ಲದೆ ಕಂದಾಯ ವಸೂಲಾತಿಯಲ್ಲಿ ಲೋಕೋಪಯೋಗ ಪಡೆದುಕೊಳ್ಳುವುದು ಸಹಜವಾಗಿ ಕಂದಾಯ ತೆರಿಗೆಗಳು ಕಟ್ಟಲು, ರೈತರು ಶ್ರೀಮಂತರು, ಶಾನುಭೋಗರ ಬಳಿ ಸಾಲ ಮಾಡುವುದರ ಮೂಲಕ ಬಡತನಕ್ಕೆ ಒಳಗಾದರು ಎಂದು ಕೆ.ಕೆ.ಎಸ್. ಕುರುಪರವರು ಲೇಖನದಲ್ಲಿ ಹೇಳುತ್ತಾರೆ.[೧೪] ಇದನ್ನೆ ಎಸ್. ಚಂದ್ರಶೇಖರ್, ಶಂಕರನಾರಾಯಣರಾವ್, ಸೂರ್ಯನಾಥ ಕಾಮತರು ಹೇಳುತ್ತಾರೆ.

III

ಇಷ್ಟಾದರೂ ಗ್ರಾಮೀಣ ರೈತ ಜನರು ಆಂ ತಾವು ಒಂದು ರಾಜ್ಯ ಅಥವಾ ರಾಜನಿಗೆ ಸೇರಿದ ಪ್ರದೇಶದ ಜನ ಅಲ್ಲಿಯ ಹಲವು ಗುಂಪುಗಳಲ್ಲಿ ತಾವು ಎಂಬ ಭಾವನೆಗೆ ಅಂಟಿಕೊಂಡಿದ್ದರು. ಅವರು ಸುಸಂಸ್ಕೃತರು ಕರ್ಮಯೋಗಿಗಳಾಗಿದ್ದು, ರಾಜಕೀಯದಿಂದ ದೂರವಾಗಿದ್ದರು. ವ್ಯವಸಾಯ ಅವರ ಪಾಲಿಗೆ, ಉದ್ಯೋಗವಲ್ಲದೆ ಪರಂಪರಗತ ಬಂದ ಜೀವನಸರಕರ್ಮವಾಗಿತ್ತು ಎಂದು ಸಿದ್ದವ್ವನಹಳ್ಳಿ ಕೃಷ್ಣಶರ್ಮರವರು ಎಸ್.ಪಿ. ಶಂಕರನಾರಾಯಣರವರ ಹೇಳಿಕೆಯಲ್ಲಿಯೇ ಹೇಳಿದ್ದಾರೆ.[೧೫] ಈ ಸ್ಥಿತಿ ಕಾಲಕ್ರಮೇಣ ಮುಂದುವರೆಯಲಾಗಲಿಲ್ಲ. ಅದು ಪ್ರತಿಭಟನೆಯೆಡೆಗೆ ತಿರುಗಿತು. ಹೊಲದ ಒಡೆಯನಾದ, ರೈತರು ಅಧಿಕಾರಿಗಳ ವಿರುದ್ಧ ಪ್ರತಿಭಟನೆಯೆಡೆಗೆ ತಿರುಗಿತು. ಹೊಲದ ಒಡೆಯನಾದ, ರೈತರು ಅಧಿಕಾರಿಗಳ ವಿರುದ್ಧ ದಂಗೆದ್ದರು. ಇಂತಹ

ದಂಗೆಗಳು ದೇಶದ್ಯಂತ ಕಂಡುಬಂದವುದಾದರು ನಿರ್ಲಿಪ್ತವಾಗಿದ್ದ ಕೋಲಾರ ಪ್ರದೇಶದಲ್ಲಿ ವಿಧಿಯಿಲ್ಲದೆ ಅಂತಹ ಪ್ರವೃತ್ತಿಗೆ ಬರುವಂತಾಯಿತು. ಇಂತಹ ದಂಗೆ ಪ್ರವೃತ್ತಿ, ೧೮೩೦ ಅಕ್ಟೋಬರ್ ೩೦ರಲ್ಲಿಯೇ ಕಂಡುಬಂದಿದೆ, ಬೆಂಗಳೂರು ಫೌಜುದ್ದಾರಗೆ ಕೋಲಾರ ಪ್ರದೇಶವು ಸೇರಿತ್ತು, ಸುಮಾರು ೨೮ ತಾಲ್ಲೂಕುಗಳಲ್ಲಿ ದೇವನಹಳ್ಳಿ, ಚಿಕ್ಕಬಳ್ಳಾಪುರ, ಆನೇಕಲ್ಲು ಮುಂತಾದ ಕಡೆಗಳಲ್ಲಿ ರೈತರ ದಂಗೆಗಳು ನಡೆದು ದಂಗೆಕಾರರನ್ನು ದಸ್ತುಗಿರಿ ಮಾಡಲಾಯಿತು ಎಂದು ರೆಸಿಡೆಂಟ್ ಬರೆದ. ದಸ್ತು ಎನ್.ಡಿ. ನಂ. ೧೯೬ ದಾಖಲಾತಿ ಮಾಹಿತಿ ಮೂಲಕ ಕೆ.ಕೆ.ಎನ್. ಕುರುಪರವರು ಹೇಳಿದ್ದಾರೆ.[೧೨೬] ೧೯೨೭-೧೯೩೬ರಲ್ಲಿ ಗಾಂಧೀಜಿ ಕೋಲಾರ ಪ್ರದೇಶಕ್ಕೆ ಆಗಮನದಿಂದ ರಾಷ್ಟ್ರೀಯ ಹೋರಾಟದೊಂದಿಗೆ ರೈತ ಸಮುದಾಯಗಳು ಸಂಯೋಜನೆಗೊಂಡವು ಮತ್ತು ಪ್ರಬಲ ಹೋರಾಟಗಾರರಲ್ಲಿ ರೈತ ಮತ್ತು ಸಮುದಾಯದವರೆ ಕಂಡುಬರುತ್ತಾರೆ ಎಂಬುದನ್ನು ಸೂರ್ಯನಾಥ ಕಾಮತರವರ 'ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು' ಹಾಗೂ ಕೆ. ವೆಂಕಟಕೃಷ್ಣಪ್ಪನವರ 'ಕೋಲಾರ ಜಿಲ್ಲಾ ಸ್ವಾತಂತ್ರ್ಯ ಹೋರಾಟಗಾರರು' ಮತ್ತು 'ಸ್ವಾತಂತ್ರ್ಯ ಹೋರಾಟದ ನೆನಪುಗಳು' ಎಂಬ ಕೃತಿಗಳ ಅವಲೋಕನದಿಂದ ವ್ಯಕ್ತವಾಗುತ್ತದೆ. ಇದೇ ಅಭಿಪ್ರಾಯ ಎಸ್. ಚಂದ್ರಶೇಖರ್‌ರವರ ಕೃತಿಗಳಿಂದ ವ್ಯಕ್ತವಾಗುತ್ತದೆ. ಇದರಿಂದ ಕೋಲಾರ ಪ್ರದೇಶದ ಸ್ವಾತಂತ್ರ್ಯ ಹೋರಾಟ ಘಟ್ಟದಲ್ಲಿ ಪಾತ್ರವಹಿಸಿದ ಪ್ರಮುಖ ರೈತಾಪಿ ವರ್ಗದವರೆನಿಸದರೆ, ಜಿ. ನಾರಾಯಣಗೌಡ, ಬಿ. ವೆಂಕಟಕೃಷ್ಣಪ್ಪ, ಎಂ. ಮುನಿಯಪ್ಪ, ಟಿ.ಕೆ. ಗಂಗಿರೆಡ್ಡಿ, ಪಿ.ಎನ್. ಲಕ್ಷ್ಮಣ್‌ರಾವ್, ಪಿ. ರಾಮೇಗೌಡ, ಕೆ. ವೆಂಕಟಕೃಷ್ಣಪ್ಪ, ಎಂ.ವಿ. ಕೃಷ್ಣಪ್ಪ, ವಿ. ವೆಂಕಟೇಶತೆಪ್ಪ ಮುಂತಾದವರು.

ಮಹಾತ್ಮಾ ಗಾಂಧೀಜಿಯವರು ಕೋಲಾರ ಪ್ರದೇಶಕ್ಕೆ ಬಂದುಹೋದ ನಂತರ ರಾಷ್ಟ್ರೀಯ ಚಳುವಳಿಯಲ್ಲಿ ರೈತರು ಹೆಚ್ಚಾಗಿ ಪಾಲ್ಗೊಂಡರು. ಇದೇ ಹಿನ್ನೆಲೆಯಲ್ಲಿ ವಿದುರಾಶ್ವತ್ಥದಲ್ಲಿ ನಡೆದ ದುರಂತದಿಂದ ರೈತರ ಆಕ್ರೋಶ ಮುಗಿಲೆದ್ದಿತು. ಇದರಿಂದ ಜಿಲ್ಲಾದ್ಯಂತ ರೈತರೊಂದಿಗೆ ಕಾರ್ಮಿಕರು ಪ್ರತಿಭಟನೆ ಮಾಡಿದರು. ಅಂತೆಯೇ ಸರ್ಕಾರ ಜಾರಿಗೆ ತಂದ ಪ್ರತಿಬಂಧಿಕಾಜ್ಞೆಯ ಹಿನ್ನೆಲೆಯಲ್ಲಿ ಹಲವಾರು ಪ್ರತಿಭಟನೆಕಾರರನ್ನು ಬಂಧಿಸಿದರು. ೧೯೩೯-೪೦ರಲ್ಲಿ ನಡೆದ ಇಂತಹ ಪ್ರತಿಭಟನೆ ಮತ್ತು ಬಂಧಿತರಾದವರ ಸಂಖ್ಯೆಯನ್ನು ಎಚ್.ವಿ. ಶ್ರೀನಿವಾಸಮೂರ್ತಿ ಮತ್ತು ಆರ್. ರಾಮಕೃಷ್ಣರವರು ಅಂದರೆ ತಿಳಿಸಿದ್ದಾರೆ.[೧೨೭]

ಸೆ. ೧೨೪, ಎ ಬಿ ಪಿ ಸಿ ೧, ಸಾರ್ವಜನಿಕ ರಕ್ಷಣಾ ಕಾಯಿದೆ ೪, ಭಾರತದ ರಕ್ಷಣಾ ನಿಲುವುಗಳು ೪, ಮೈಸೂರು ಪೊಲೀಸ್ ಕಾಯಿದೆ ೮೪, ಬಂಧಿತ ಕ್ಷೇಮಾಪಣೆಯ ನಂತರ ೩೮೬ರಷ್ಟು ಬಂಧಿತರಾಗಿದ್ದರು. ಇದನ್ನು ಮೈಸೂರು ಸರ್ಕಾರದ ಗುತ್ತಿ ಕಡತಗಳಲ್ಲಿ ದಾಖಲಾತಿಯಲ್ಲಿ ಕಾಣಲಾಗುತ್ತದೆ. ಇಂತಹದ್ದೇ ರೈತರ ಹೋರಾಟ ಶಿಡ್ಲಘಟ್ಟದ ಟೌನ್‌ಹಾಲ್‌ನಲ್ಲಿ ನಡೆದು ರೈತಾಪಿ ವರ್ಗದವರಾದ ನಾರಾಯಣಪ್ಪ ಮತ್ತು ರಂಗಪ್ಪನವರು ಪೊಲೀಸರು ಗುಂಡಿಗೆ ಬಲಿಯಾದರು. ಅವರ ನೆನಪಿಗಾಗಿ ಅವರ ಊರಾದ ಭಕ್ತರ ಹಳ್ಳಿಗೆ, ದೇಶಭಕ್ತರಹಳ್ಳಿ ಎಂದು, ಶ್ರೀ ಕೆ. ಪಟ್ಟಾಭಿರಾಮನರವರಿಂದ ಹೆಸರಿಸಲಾಯಿತು ಎಂದು ಕೆ. ವೆಂಕಟಕೃಷ್ಣಪ್ಪನವರು ಹೇಳಿದ್ದಾರೆ.[೧೨೮] ಈ ರೀತಿಯಾಗಿ ರೈತಾಪಿ ಜನರು ಸ್ವಾತಂತ್ರ್ಯ ಆಂದೋಲನದ ಬೆನ್ನುಮೂಳೆಯಾಗಿದ್ದು, ಕ್ವಿಟ್ ಇಂಡಿಯಾ ಚಳುವಳಿ ಮೈಸೂರು ಚಲೋ ಆಂದೋಲನಗಳಿಂದ ಸರ್ಕಾರ ಮಣಿಯಲೇಬೇಕಾಯಿತು

ಎಂದೂ ಎಸ್.ಚಂದ್ರಶೇಖರ್‌ರವರು ಹೇಳಿದ್ದಾರೆ.[೧೫] ಹೀಗೆ ಸ್ವಾತಂತ್ರ್ಯ ಹೋರಾಟ ಘಟ್ಟದಲ್ಲಿ ರೈತರ ಚರಿತ್ರೆ ಪ್ರಾಮುಖ್ಯತೆ ಪಡೆದು ವಿಶಿಷ್ಟತೆಯನ್ನು ಗಳಿಸಿದೆ. ಅಲ್ಲದೆ ಕೋಲಾರ ಪ್ರದೇಶದ ಚರಿತ್ರೆ ಲೇಖನಶಾಸ್ತ್ರದಲ್ಲಿ ಹೊಸ ನಿಲುವು ತಾಳುವಂತಾಯಿತು.

೩.೧೩. ಕಾರ್ಮಿಕರ ಚರಿತ್ರೆ

ಸ್ವಾತಂತ್ರ್ಯ ಹೋರಾಟ ಘಟ್ಟದಲ್ಲಿ ಚರಿತ್ರೆ ಲೇಖನಶಾಸ್ತ್ರವು ವಿವಿಧ ಆಯಾಮಗಳಲ್ಲಿ ಅಧ್ಯಯನ ಮಾಡಲಾರಂಭಿಸಿದೆ. ಇದೇ ಹಿನ್ನೆಲೆಯಲ್ಲಿ ರೈತರ ಚರಿತ್ರೆಯ ನಂತರ ಬಹುಮುಖ್ಯವಾಗಿ ಕಾರ್ಮಿಕರ ಚರಿತ್ರೆ ಕಂಡುಬರುತ್ತದೆ. ಇದರಿಂದಾಗಿ ಪ್ರಸ್ತುತ ಅಧ್ಯಯನದಲ್ಲಿ ಕಾರ್ಮಿಕರ ಸ್ಥಿತಿಗತಿಗಳು, ಅವರ ಹೋರಾಟಗಳು ಹಾಗೂ ಸುಧಾರಣೆಗಳ ಕುರಿತಾಗಿ ವಿವಿಧ ಕೃತಿಗಳು, ಲೇಖನಗಳನ್ನು ಅವಲೋಕಿಸುವುದರ ಮೂಲಕ ಸೈದ್ಧಾಂತಿಕವಾಗಿ ವಿವರಿಸಲು ಕಿರು ಪ್ರಯತ್ನವನ್ನು ಮಾಡಲಾಗಿದೆ.

I

ಎಚ್.ಆರ್. ಕೃಷ್ಣಮೂರ್ತಿ, ನೇ.ತಿ. ಸೋಮಶೇಖರ ಮುಂತಾದ ಅರ್ಥಶಾಸ್ತ್ರ ತಜ್ಞರ ಪ್ರಕಾರ ಕೇವಲ ಗೃಹ ಕೈಗಾರಿಕೆಗಳಲ್ಲಿ ದುಡಿಯುತ್ತಿರುವ ಸಂಘಟಿತ, ಅಸಂಘಟಿತ ಕೂಲಿಕೆಲಸಗಾರರನ್ನು ಕಾರ್ಮಿಕರೆಂದು ಕರೆಯುವರು. ವಿಶಾಲ ದೃಷ್ಟಿಯಿಂದ ಗುಡಿಕೈಗಾರಿಕೆಗಳು, ಸಣ್ಣ ಕೈಗಾರಿಕೆಗಳಲ್ಲಿಯೂ ಸಹ ದುಡಿಯುತ್ತಿರುವ ಬಹುಸಂಖ್ಯಾತ ಕೆಲಸಗಾರರನ್ನು ಕಾರ್ಮಿಕರೆಂದು ಕರೆಯಲಾಗಿದೆ. ಇವರನ್ನು ಕೂಲಿಕಾರ್ಮಿಕರೆಂದು, ಕೃಷಿಕಾರ್ಮಿಕರೆಂದು, ಕಾರ್ಮಿಕರೆಂದು ಸಹ ವಿಂಗಡಿಸಲಾಗುತ್ತದೆ. ಆದರೆ ಪ್ರಸ್ತುತ ಅಧ್ಯಯನವು ಈ ಎಲ್ಲಾ ಕಾರ್ಮಿಕರನ್ನು ಒಟ್ಟಾರೆ ಪರಿಗಣಿಸಿ ಅಧ್ಯಯನ ಮಾಡಲಾಗಿದೆ.

ಕೋಲಾರ ಪ್ರದೇಶವು ಒಂದು ಕೃಷಿ ಪ್ರಧಾನ ಪ್ರದೇಶವಾಗಿದೆ. ಆದರೂ ಸಣ್ಣಪುಟ್ಟ ಕೈಗಾರಿಕೆಗಳಿದ್ದವು. ಬ್ರಿಟೀಷ್ ಆಡಳಿತ ಕಾಲದಲ್ಲಿ ಕೋಲಾರದ ಚಿನ್ನದಗಣಿ. ರೈಲ್ವೆ ವಲಯಗಳು ಅಭಿವೃದ್ಧಿಗೊಂಡವು. ಗೌರಿಬಿದನೂರು ಸಕ್ಕರೆ ಕಾರ್ಖಾನೆ ಮುಂತಾದವು ಅಭಿವೃದ್ಧಿಗೊಂಡವು. ಇವುಗಳ ಜತೆಗೆ ರಸ್ತೆ ಅಭಿವೃದ್ಧಿ ಕಾರ್ಯಗಳು, ನಗರ ಪ್ರದೇಶಗಳ ಅಭಿವೃದ್ಧಿಯಿಂದ ಸಣ್ಣ ಸಣ್ಣ ಕೈಗಾರಿಕೆಗಳು ಬೆಳವಣಿಗೆ ಕಂಡವು. ಇದರಿಂದ ಕಾರ್ಮಿಕರ ಸಂಖ್ಯೆ ಹೆಚ್ಚಾಯಿತು ಎಂದು ವಿವಿಧ ಕೃತಿಗಳ ಲೇಖನಿಗಳಿಂದ ವ್ಯಕ್ತವಾಗುತ್ತವೆ. ಈ ಕುರಿತಾಗಿ ಅಧ್ಯಾಯ ಮಾಡಲು ಕೆಲವೇ ಕೃತಿಗಳು ಲಭ್ಯವಾಗಿವೆ. ಕ್ರಿ.ಶ. ೧೮೦೦ ಜುಲೈ ೭ ರಿಂದ ೧೮ರವರೆಗೆ ಕೋಲಾರ ಪ್ರದೇಶದಲ್ಲಿ ಪ್ರವಾಸ ಕೈಗೊಂಡಿದ್ದ 'ಬುಕಾನನ್' ಅವರು ಕೋಲಾರ ಪ್ರದೇಶದ ಕಾರ್ಮಿಕರ ವರ್ಗದವರ ಸಾಮಾಜಿಕ, ಆರ್ಥಿಕ ವಿಷಯಗಳನ್ನು ದಾಖಲಿಸಿದ್ದಾರೆ. ಪಿ.ಎಸ್. ರಾಜಪ್ಪನವರು 'ಮೈಸೂರು ರಾಜ್ಯದಲ್ಲಿ ವಾಣಿಜ್ಯ ಮತ್ತು ಕರಕುಶಲ ಕಲೆಗಳು' ಎಂಬ ವಿಷಯವಾಗಿ ೧೮೦೦-೧೮೮೧ರವರೆಗೆ ಅಧ್ಯಯನ ಮಾಡಿದ್ದು ಕೋಲಾರ ಪ್ರದೇಶದ ಕರಕುಶಲ ಕೈಗಾರಿಕೆಗಳು ಮತ್ತು ಕಾರ್ಮಿಕರ ಬಗ್ಗೆ ವಿವರಿಸಿದ್ದಾರೆ. ಜಾನಕಿ ನಾಯರ್‌ವರು ೧೯೦೦ ರಿಂದ ೧೯೪೭ರವರೆಗೆ ಕೆ.ಜಿ.ಎಫ್.ನ ಚಿನ್ನದ ಗಣಿ ಉದ್ಯಮ ಮತ್ತು ಕಾರ್ಮಿಕರ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ವಿಷಯದ ಉದ್ಯಮ ಮತ್ತು ಕಾರ್ಮಿಕರ

ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ವಿಷಯದ ಬಗ್ಗೆ ಸಂಶೋಧನೆ ಮಾಡಿದ್ದಾರೆ ಎಂದು ಅದರ 'ಮೈನರ್ಸ್ ಅಂಡ್ ಮಿಲ್‌ಹ್ಯಾಂಡ್ಸ್' ಎಂಬ ಪ್ರಬಂಧದಿಂದ ವ್ಯಕ್ತವಾಗುತ್ತದೆ. ಎಂ. ಗೋವಿಂದಪ್ಪನವರು ೧೮೮೧ ರಿಂದ ೧೯೫೬ರವರೆಗೆ ಮೈಸೂರು ಸಂಸ್ಥಾನ ಮತ್ತು ಕೆ.ಜಿ.ಎಫ್.ನ ಹೊಸ ಸುಧಾರಣೆಗಳ ಬಗ್ಗೆ ಸಂಶೋಧನೆ ಮಾಡಿದ್ದಾರೆ. ಷಡಕ್ಷರಯ್ಯನವರು ಮೈಸೂರು ರಾಜ್ಯದಲ್ಲಿ ರೈಲಿನ ಅಭಿವೃದ್ಧಿಯ ಬಗ್ಗೆ ಸಂಶೋಧನೆ ಮಾಡಿದ್ದಾರೆ. ಇದರಿಂದ ಕೋಲಾರ ಪ್ರದೇಶದ ರೈಲ್ವೆ ಬೆಳವಣಿಗೆ ಮತ್ತು ಕಾರ್ಮಿಕರ ಬಗ್ಗೆ ತಿಳಿಯಲು ಸಾಧ್ಯವಾಗಿದೆ.

ಕೋಲಾರ ಪ್ರದೇಶದಾದ್ಯಂತ ಈ ನಡುವೆ ಹಲವಾರು ಕೃಷಿಕಾರ್ಮಿಕರು, ಕೂಲಿಕಾರ್ಮಿಕರು ಕಂಡುಬಂದಿದ್ದು, ಅವರಲ್ಲಿ ಕೆಲವರನ್ನು ತಿಳಿಸಲಾಗುತ್ತದೆ ಮತ್ತು ಈ ಗುಡಿ ಕೈಗಾರಿಕೆಯಲ್ಲಿ ಹೆಚ್ಚಾಗಿ ಕಾರ್ಮಿಕರು ಅವರೆ, ಯಜಮಾನರು ಅವರೆ ಆಗಿರುವುದು ಕಾಣಸಿಗುತ್ತದೆ. ಇಂತಹದರಲ್ಲಿ ತೊಗಡಿಗರು ಪ್ರಮುಖ ನೇಕಾರರಾಗಿದ್ದು ಪಾರಂಪರಿಕ ಉದ್ಯೋಗ ಹೊಂದಿದ್ದಗರು. ಜನರಲ್ಲಿ ಸ್ವಲ್ಪ ಪ್ರಮಾಣದಲ್ಲಿ ಅಕ್ಷರಸ್ಥರಾಗಿದ್ದು, ಸಾಂಪ್ರದಾಯಿಕ ಮುಖ್ಯಸ್ಥನನ್ನು ಹೊಂದಿದ್ದು, ಅವರನ್ನು ಯಜಮಾನನೆಂದು ಕರೆಯುತ್ತಿದ್ದರು.[೧೩೦] ಗುಡಿಕೈಗಾರಿಕೆಗಳಲ್ಲಿ ಉಣ್ಣೆ ಬಟ್ಟೆ ತಯಾರಿಕೆ, ರೇಷ್ಮೆ ತಯಾರಿಕೆ ಮುಂತಾದವು ಪ್ರಮುಖವಾಗಿವೆ. ೧೮೭೭-೭೮ರಲ್ಲಿ ಕೋಲಾರ ಪ್ರದೇಶದಲ್ಲಿದ್ದ ಗುಡಿಕೈಗಾರಿಕೆಯಲ್ಲಿ ಕೆಲವನ್ನು ಈ ರೀತಿ ಪಟ್ಟಿ ಮಾಡಿದ್ದಾರೆ.[೧೩೧]

ಹತ್ತಿ ಮತ್ತು ನಾರು ತಯಾರಿಕೆ, ಉದ್ಯಮ	೩೬೬೨ ಕೆಲಸಗಾರರು
ಉಡುಪುಗಳ ತಯಾರಿಕೆ ಉದ್ಯಮ	೪೬೪೬ ಕೆಲಸಗಾರರು
ಉಣ್ಣೆ ಮತ್ತು ವಸ್ತ್ರಗಳ ಉದ್ಯಮ	೧೪೩೮ ಕೆಲಸಗಾರರು
ರೇಷ್ಮೆ ಉದ್ಯಮ	೧೧೭ ಕೆಲಸಗಾರರು
ಅಂದಿನ ವಸ್ತ್ರಗಳು ಉದ್ಯಮ	೨೦೨ ಕೆಲಸಗಾರರು
ಒಟ್ಟು	೧೦.೦೬೨

ಬಟ್ಟೆ ತಯಾರಿಕೆಗಳಲ್ಲಿ ಅನೇಕ ಜಾತಿಗಳಿದ್ದವು. ಅವುಗಳಲ್ಲಿ ಮುಖ್ಯವಾಗಿ ದೇವಾಂಗಿಯರು, ಪಟ್ಟೆಗಾರರು, ಸಾಲೆಯವರು, ಗ್ರಾಮಂತರದ ಜನಿವಾರರು, ಲೋಹ ತಯಾರಿಕೆದಾರರು, ಮರ ಗೆಲಸಗಾರರು, ಸಂಚಾಲಕರು ಗಾರೆ ಕೆಲಸಗಾರರು, ಕಲ್ಲು ಕುಟುಕರು ಮುಂತಾದವು ಜಿಲ್ಲಾದ್ಯಂತ ಕಂಡುಬರುತ್ತಿದ್ದರು. ಇಂತಹ ಗುಡಿಕೈಗಾರಿಕೆಗಳು, ಸಣ್ಣ ಕೈಗಾರಿಕೆಗಳಲ್ಲಿ, ಸ್ವಾತಂತ್ರ್ಯ ಹೋರಾಟದ ಹೊತ್ತಿಗೆ ೭೧೦೦ ಘಟಕಗಳಿದ್ದು, ಅವುಗಳಲ್ಲಿ ೨೯೭೧ ರಷ್ಟು ಶ್ರಮಿಕರು ಇದ್ದರೆಂದು, ಗೆಜೆಟಿಯರ್‌ನಲ್ಲಿ ತಿಳಿಸಿದೆ. ಇದನ್ನೇ ಎಸ್. ಜಗನ್ನಾಥ ಪ್ರಕಾಶ್‌ರವರು ಹೇಳಿದ್ದಾರೆ.[೧೩೨] ಮಳಿಯಾಳರು, ಪಂಜಾಬಿಯರು, ಮುಸ್ಲಿಂರು ಚಿನ್ನದ ಗಣಿಗಾರಿಕೆಯಲ್ಲಿ ದುಡಿಯುವುದಲ್ಲದೆ, ಕೋಲಾರ ಜಿಲ್ಲಾದ್ಯಂತ ನೆಲೆಗೊಂಡಿದ್ದು ಸಣ್ಣಪುಟ್ಟ ಕೈಗಾರಿಕೆಗಳಲ್ಲಿ ಕಾರ್ಮಿಕರಾಗಿ ದುಡಿಯುತ್ತಿದ್ದರು. ಎಸ್.ಎಂ. ಗೋವಿಂದಪ್ಪನವರು ಈ ಕುರಿತಾಗಿ ೧೯೨೧ರಲ್ಲಿ

ಕೆ.ಜಿ.ಎಫ್.ನಲ್ಲಿದ್ದ ಕಾರ್ಮಿಕರಲ್ಲಿ ಧಾರ್ಮಿಕ ಜನಸಮುದಾಯಗಳ ಪ್ರಮಾಣವನ್ನು ಈ ಕೆಳಕಂಡಂತೆ ವಿವರಿಸಿದ್ದಾರೆ.[೧೩೩]

ಉತ್ತರ ಕರ್ನಾಟಕದ ತಮಿಳುನವರು	-	೨೭.೩೧ %
ಮದ್ರಾಸಿನಿಂದ ಬಂದವರು	-	೧೮.೨೭೧ %
ಸೇಲಂ ಕಡೆಯಿಂದ ಬಂದವರು	-	೫.೬ %
ಮಲಭಾರದಿಂದ ಬಂದವರು	-	೨.೨ %
ಸ್ಥಳೀಯ ಹಾಗೂ ಮೈಸೂರು	-	೯೩.೪ %

ಸ್ವಾತಂತ್ರ್ಯ ಹೋರಾಟದ ಆರಂಭದಲ್ಲಿ ಕಾರ್ಮಿಕ ಸ್ಥಿತಿ ಅಷ್ಟಾಗಿ ಸುಧಾರಣೆಗೊಂಡಿಲ್ಲ. ಬಹಳಷ್ಟು ಕಾರ್ಮಿಕರ ಸಂಪ್ರದಾಯಸ್ಥರು, ಅನಕ್ಷರಸ್ಥರು, ಅಜ್ಞಾನಿಗಳು ಹಾಗೂ ಅಸಂಘಟಿತರಾಗಿದ್ದರು ಎಂಬ ಪಿ.ಸಿ. ರಾಜಪ್ಪನವರು ಹೇಳಿದ್ದಾರೆ.[೧೩೪] ಕೃಷಿಕಾರ್ಮಿಕರು ಕೂಲಿಕಾರ್ಮಿಕರ ಕೋಲಾರ ಪ್ರದೇಶದಾದ್ಯಂತ ಹರಡಿಕೊಂಡಿದ್ದರು. ಭಾಗಶಃ ಗುಡಿಕೈಗಾರಿಕೆಗಳ ಮೂಲಕ ಸ್ವಾವಲಂಬನೆಯನ್ನು ಹೊಂದಿದ್ದರು. ಇವರು ತಮ್ಮ ದಿನನಿತ್ಯ ಬಳಕೆ ವಸ್ತುಗಳ ಜತೆಗೆ ಬೃಹತ್ ಕೈಗಾರಿಕೆಗಳಿಗೆ ಕಚ್ಚಾ ವಸ್ತುಗಳನ್ನು ತಯಾರಿಸಿ ಕೊಡುವುದರ ಮೂಲಕ ಪೂರಕವಾಗಿದ್ದರು.

ಆದರೆ ಇದೇ ಪರಿಸ್ಥಿತಿ ಹೆಚ್ಚು ಕಾಲ ಮುಂದುವರಿಯಲಿಲ್ಲ. ವಸಾಹತುಶಾಹಿಗಳ ಆಡಳಿತ ಬೆಳವಣಿಗೆಯಿಂದ ಯುರೋಪ ಸಂಪ್ರದಾಯಿಕಗಳು ಸಂಸ್ಕೃತಿಗಳು ಅಳವಡಿಸಿಕೊಡುವುದರ ಜತೆಗೆ ಬೃಹತ್ ಮತ್ತು ವೈಜ್ಞಾನಿಕ ಕೈಗಾರಿಕೆಗಳು ಕಾರ್ಖಾನೆಗಳ ಬೆಳವಣಿಗೆಗೊಂಡವು. ಇದರಿಂದಾಗಿ ಸ್ಥಳೀಯ ಕೈಗಾರಿಕೆಗಳು ಗುಡಿಕೈಗಾರಿಕೆಗಳು ತೀವ್ರ ತರವಾದ ಸ್ಪರ್ಧೆಗಳನ್ನು ಎದುರಿಸಬೇಕಾದುದಲ್ಲದೆ, ಕ್ರಮೇಣ ಕಚ್ಚಾ ಸಾಮಗ್ರಿಗಳನ್ನು ಒದಗಿಸುವುದರಲ್ಲಿ ತಲ್ಲೀನವಾದವು. ಗ್ರಾಮೀಣ ಸ್ವಾವಲಂಬನೆ ಎಂಬುದು ಮುರಿಯತು. (Self Sufficient) ವಸಾಹತುಶಾಹಿಗಳ ಮುಖ್ಯ ಗುರಿ ಆರ್ಥಿಕ ಲಾಭ ಗಳಿಸುವುದೇ ಹೊರತು, ದೇಶದ ಕೈಗಾರಿಕಾಭಿವೃದ್ಧಿ ಅಥವಾ ಕಾರ್ಮಿಕರ ಸುಧಾರಣೆಯ ಗುರಿ ಹೊಂದಿರಲಿಲ್ಲ ಎಂದು ಎ.ಆರ್. ದೇಸಾಯಿರವರು ಹೇಳಿದ್ದಾರೆ. ಇದನ್ನೇ ಎಂ. ಗೋವಿಂದಪ್ಪನವರು ಹೇಳಿದ್ದಾರೆ.[೧೩೫]

ಗಣಿಗಾರಿಕೆಯಲ್ಲಿನ ಕಾರ್ಮಿಕರ ಸ್ಥಿತಿಗತಿಗಳು ಅದೋಗತಿಯಲ್ಲಿದ್ದವು. ಅನೇಕ ವೇಳೆ ಅಪಘಾತಗಳುಂಟಾಗುತ್ತಿದ್ದವು. ಜಾನಕಿ ನಾಯರ್, ಎನ್.ಎಂ. ಗೋವಿಂದಪ್ಪನವರು, ಅಂತಹ ಅಪಘಾತಗಳಾದ ವರ್ಷ ಮತ್ತು ಮೃತರಾದವರು ಜನರನ್ನು ಗುರುತಿಸಿದ್ದಾರೆ.[೧೩೬] ಅದರಂತೆ ೧೯೮೯ ರಿಂದ ೧೯೪೭ರವರೆಗಿ ಕಿ.ಜಿ.ಎಫ್.ನಲ್ಲಿ ಅಪಘಾತವಾದವರ ಸಂಖ್ಯೆ ಕೆಳಗಿನಂತಿದೆ.

ವರ್ಷ	ಅಪಘಾತಕ್ಕೆ ಒಳಗಾದವರು
೧೮೯೮ರಲ್ಲಿ	೧೨೫ ಜನರು
೧೯೨೦ರಲ್ಲಿ	೧೪೮,೪ ಜನರು
೧೯೩೦ರಲ್ಲಿ	೧೮೫,೩ ಜನರು
೧೯೪೦-೪೧ರಲ್ಲಿ	೨೦೦ ಜನರು
೧೯೪೭ರಲ್ಲಿ	೧೬೯ ಜನರು

ಕಾರ್ಮಿಕರು ಗಣಿಗಾರಿಕೆಯಲ್ಲಿ ಸರಿಯಾದ ತಂತ್ರಜ್ಞಾನ ಬಳಕೆ ಇಲ್ಲದೆ, ಸುತ್ತ ಸ್ಫೋಟಕಗಳು ಮುಂತಾದವುಗಳಿಂದ ಆಕಸ್ಮಿಕವುಂಟಾದ ಅಪಘಾತಗಳಲ್ಲಿ ಪ್ರಾಣಗಳನ್ನೆ ಕಳಿದುಕೊಳ್ಳುವಂತಾಯಿತು ಎಂದು ಜಾನಕಿನಾಯರ್ ಎಂ. ಗೋವಿಂದಪ್ಪನವರು ಹೇಳಿದ್ದಾರೆ.

ಇವರು ಕೂಲಿ ಮಾಡಿ ದಿನಕ್ಕೆ ೧೫.೦೦ ರೂ.ಗಳಿಸಿದರೂ, ಬಹುತೇಕ ಆದಾಯದ ಭಾಗವನ್ನು ಆಹಾರಕ್ಕಾಗಿ ಉಪಯೋಗಿಸುತ್ತಿದ್ದರು. ಇದು ಅವರ ಜೀವನಕ್ಕೆ ಸಾಕಾಗುತ್ತಿರಲಿಲ್ಲ. ಇದರಿಂದ ಜೀವನ ನಿರ್ವಹಣೆಗೆ ಶ್ರೀಮಂತರು, ಜಮೀನ್ದಾರರು ಹಾಗೂ ಗಣಿಗಾರಿಕೆ ವ್ಯವಸ್ಥಾಪಕರಲ್ಲಿ ಸಾಲ ಪಡೆಯುತ್ತಿದ್ದರು. ಈ ಸಾಲಕ್ಕೆ ೭೫ ರಿಂದ ೧೫೦ರವರೆಗೆ ಬಡ್ಡಿ ಹಾಕಲಾಗುತ್ತಿತ್ತು. ೧೬ ವರ್ಷದ ಹೆಣ್ಣುಮಕ್ಕಳನ್ನು, ಮಹಿಳೆಯರನ್ನು ಕಡಿಮೆ ಕೂಲಿಗಾಗಿ ಗಣಿಗಾರಿಕೆ ಕೆಲಸಗಳಿಗೆ ಸೇರಿಸಿಕೊಳ್ಳುತ್ತಿದ್ದರು. ೧೦ ವರ್ಷದ ವಯಸ್ಸಿನ ಮಕ್ಕಳು ಸುಮಾರು ೩೦೯ರಷ್ಟು ಇದ್ದರು ಮತ್ತು ಅವರು ದಿನಕ್ಕೆ ೧೨ ಗಂಟೆಗಳ ಕಾಲ ಕೆಲಸ ಮಾಡುತ್ತಿದ್ದರು ಎಂದು ಗೋವಿಂದಪ್ಪನವರು ಹೇಳಿದ್ದಾರೆ.[೧೩೭]

II

ರಾಷ್ಟ್ರೀಯ ಚಳುವಳಿ ಬೆಳವಣಿಗೆ ಸಂಘಟನೆಗಳ ಒತ್ತಡಗಳು ಹೆಚ್ಚಾದಂತೆ, ಸುಧಾರಣೆ ಜಾರಿಗೆ ಬಂದವು. ಮುಖ್ಯವಾಗಿ ಸ್ತ್ರೀ ಕಾರ್ಮಿಕರಿಗೆ, ಹೆರಿಗೆ ರಜೆ, ಕಾಯಿಲೆ ರಜೆಗಳು ಒದಗಿಸಲಾಯಿತು.[೧೩೮] ಕೆ.ಜಿ.ಎಫ್.ನ ಗಣಿಗಾರಿಕೆ ಕಾರ್ಮಿಕರಿಗೆ ಪ್ರತ್ಯೇಕ ಕಾಯ್ದೆಗಳನ್ನು ಅಳವಡಿಸಿಕೊಂಡಿದ್ದರು. ೧೯೩೦ರಲ್ಲಿ ನಡೆದ ಮುಷ್ಕರಗಳ ಪರಿಣಾಮವಾಗಿ ಹೊಸ ನಿಯಮಗಳು ಅಳವಡಿಸಲಾಯಿತು. ಇವರ ದಿನಗೂಲಿ ೧೮೯೯ರಲ್ಲಿ ೧೫ ರೂ. ಗಳಿರುವುದು. ೧೯೪೦ರ ಹೊತ್ತಿಗೆ ೩೬.೩೦ ರೂ.ಗಳಷ್ಟಿತ್ತು ಎಂದು ಜಾನಕಿ ನಾಯರ್‌ರವರು ಹೇಳಿದ್ದಾರೆ.[೧೩೯] ಎಂ.ವಿ. ಮುರಗೇಶ್, ಎಂ.ಎಸ್. ಮಧುರೈ ಪಿಳ್ಳೈ, ಪಿ. ಕೊಪ್ಪಲ ಮುಂತಾದವರು ಪ್ರಮುಖ ಕಾರ್ಮಿಕ ನಾಯಕರಾಗಿದ್ದರು. ಆದಿದ್ರಾವಿಡ ಮಹಾಜನ ಸಭಾದ ಅಧ್ಯಕ್ಷರಾದ ಆರ್.ಎ. ರಾಸರವರು ಅಧ್ಯಕ್ಷರಾಗಿದ್ದರು ಎಂದು ಜಾನಕಿ ನಾಯರ್, ಎಂ. ಗೋವಿಂದಪ್ಪ, ಎಸ್. ಚಂದ್ರಶೇಖರ್ ಹಾಗೂ ಸೂರ್ಯನಾಥ ಕಾಮತರು ಹೇಳಿದ್ದಾರೆ.[೧೪೦]

III

ಈ ಹೊತ್ತಿಗಾಗಲೆ ದೇಶಾದ್ಯಂತ ಕಾರ್ಮಿಕ ಸಂಘಟನೆಗಳು ಉದಯವಾದವು. ಕಡಿಮೆ ಕೂಲಿ, ಹೆಚ್ಚಿನ ದುಡಿಮೆ, ಹೀನಾಸ್ಥಿತಿಯಲ್ಲಿರುವ ವಸತಿ, ದಬ್ಬಾಳಿಕೆ, ತಾರತಮ್ಯ ನೀತಿ ಮುಂತಾದವುಗಳಿಂದ ಬೇಸತ್ತು ಅವುಗಳನ್ನು ಪಡೆಯಲು ಸಂಘಟಿತರಾಗಿ ಹೋರಾಡಲು ಮುಂದುವರೆದರು.[೧೪೧] ೧೯೨೬ರಲ್ಲಿ ೧೯೨೩ರ ನಂತರ ಕಮ್ಯುನಿಸ್ಟ್ ತತ್ವ ಪ್ರಚಾರಗೊಂಡು ಕಾರ್ಮಿಕರ ಚಳುವಳಿಗೆ ಹೊಸ ಆಯಮವನ್ನುಂಟುಮಾಡಿತು.[೧೪೨] ಇದರೊಂದಿಗೆ ರಾಷ್ಟ್ರೀಯತೆ ತೀವ್ರವಾಗಿ ಬೆಳೆಯಿತು. ಆದರೆ ೧೯೨೦ರವರೆಗೂ ಜಾತಿ ಮತ್ತು ಭಾಷೆಯ ಆಧಾರದ ಮೇಲೆ ಕಾರ್ಮಿಕರನ್ನು ವಿಂಗಡಿಸುವ ಪದ್ಧತಿ ಮುಂದುವರೆಯಿತು ಎಂದು ಎಸ್. ಚಂದ್ರಶೇಖರರವರು ಹೇಳಿದ್ದಾರೆ. ಮಹಾತ್ಮಾಗಾಂಧೀಜಿಯವರು ಕೋಲಾರ ಜಿಲ್ಲಾದ್ಯಂತ ಪ್ರವಾಸ ಮಾಡಿ ೧೯೩೬ ಕಾರ್ಮಿಕರನ್ನು ರಾಷ್ಟ್ರೀಯತೆಯೆಡೆಗೆ ಸೆಳೆಯಲು ಭಾಗಶಃ ಯಶಸ್ಸುಯಾದರು.[೧೪೩] ಈ ಹಿನ್ನೆಲೆಯಲ್ಲಿ ಕೆ.ಜಿ.ಎಫ್.ನ ಕಾರ್ಮಿಕರು ಜಾಗೃತಗೊಂಡರು. ೧೯೩೦ರಲ್ಲಿ ನಡೆದ ಮುಷ್ಕರದಲ್ಲಿ ೨೦೦೦ ಕಾರ್ಮಿಕರು ಪಾಲ್ಗೊಂಡರು ಎಂದು ಜಾನಕಿ ನಾಯರುರವರು ಹೇಳಿದ್ದಾರೆ. ಇದನ್ನು ಎಂ. ಗೋವಿಂದಪ್ಪನವರು ಹೇಳಿದ್ದಾರೆ.[೧೪೪] ೧೯೩೮ರಲ್ಲಿ ಎಸ್.ಎಸ್. ಚಂಡೂರ, ಎಸ್. ರಂಗಸ್ವಾಮಿ ಮುಂತಾದವರು ಕಾರ್ಮಿಕರ ನಾಯಕತ್ವ ವಹಿಸಿದರು. ಕಾರ್ಖಾನೆಗಳಲ್ಲಿ ನಡೆಯುತ್ತಿರುವ ಅಸಮಾನ ತಾರತಮ್ಯ ನೀತಿಯ ವಿರುದ್ಧ ಪ್ರತಿಭಟಿಸಿದರು.[೧೪೫] ೧೯೪೦ರ ವೇಳೆಗೆ ೩ನೇ ಮಹಾಯುದ್ಧ ಪ್ರಾರಂಭವಾಗಿ ಗಣಿಗಾರಿಕೆ ಕಾರ್ಯಗಳು ತೀವ್ರತೆಗೊಂಡವು. ಆದರೂ ಕಾರ್ಮಿಕ ಪ್ರತಿಭಟನೆ ಮುಂದುವರೆಯುತ್ತಿತ್ತು. ಬೆಂಗಳೂರಿನಲ್ಲಿ ಕೆ.ಟಿ. ಭಾಷಶ್ಯಂ, ಕೆ.ಜಿ.ಎಫ್.ನಲ್ಲಿ ಕೆ.ಸಿ. ರೆಡ್ಡಿಯರ ಜ್ವತೆಗೆ ಎಸ್.ಡಿ. ಶಂಕರ್, ಎಂ.ಎಸ್. ರಾಮಧಾಸ, ಸಿ.ಬಿ. ಮನ್ನಯ್ಯ, ಎಸ್. ರಾಮಸ್ವಾಮಿ ಮುಂತಾದವರು ಕಾರ್ಮಿಕರನ್ನು ಸಂಘಟಿಸುವುದರ ಮೂಲಕ ರಾಷ್ಟ್ರೀಯತೆಯನ್ನು ಗಮನಿಸಿದರು ಎಂದು ಜಾನಕಿ ನಾಯರ್, ಎಂ. ಗೋವಿಂದಪ್ಪ, ಕೆ. ವೆಂಕಟಕೃಷ್ಣಪ್ಪ ಹಾಗೂ ಸೂರ್ಯನಾಥ ಕಾಮತರು ಕೃತಿಗಳಿಂದ ವ್ಯಕ್ತವಾಗುತ್ತದೆ. ಇಷ್ಟಾದರೂ ೧೯೪೨ರ ಹೊತ್ತಿಗೆ ಕಾಂಗ್ರೆಸ್ ಮತ್ತು ಸೋಷಿಯಾಲಿಸ್ಟರ್ ನಡುವೆ ಬಿರುಕು ಉಂಟಾಯಿತು.[೧೪೬] ರೈತ ಸಮಸ್ಯೆಗಳ ರೀತಿಯಲ್ಲಿಯೇ ಕಾರ್ಮಿಕ ಸಮಸ್ಯೆಗಳನ್ನು ಪರಿಗಣಿಸುವಾಗ ಬಲಪಂಥೀಯ ಕಾಂಗ್ರೆಸ್ ನಾಯಕತ್ವವು ದುಡಿಯುವ ವರ್ಗದಿಂದ ಬೇಷರತ್ತಾದ ಬೆಂಬಲವನ್ನು ನಿರೀಕ್ಷಿಸುತ್ತಿತ್ತು. ಆದರೆ ಕಾರ್ಮಿಕರು ಕಾಂಗ್ರೆಸ್ ಎಂದು ಬೆಂಬಲ ನಿರೀಕ್ಷಿಸುವಂತಹ ಸಂದರ್ಭದಲ್ಲಿ ಅದನ್ನು ವಿರೋಧಿಸುವುದಕ್ಕಾಗಿ ವಸಾಹತುಶಾಹಿಗಳ ಜೊತೆ ಶಾಮೀಲಾಗುತ್ತಿತ್ತು. ಕಾರ್ಮಿಕರ ಹಿತಾಸಕ್ತಿಯವನ್ನು ಬೆಂಬಲಿಸುವಂತಹ ಉತ್ಕೃಷ್ಟ ನಾಯಕರಿರಲಿಲ್ಲವೆಂಬುದು ಖೇದ ಸಂಗತಿ. ಮತ್ತು ಕಮ್ಯುನಿಸ್ಟರ ಸಮಾಜವಾದಿಗಳು ಜವಾಬ್ದಾರಿಯನ್ನು ಹೊರಲು ಸಮರ್ಥರಾಗದೆ ಇದ್ದಾಗ ಎಲ್ಲ ವಿಘ್ನಗಳು ವಿರುದ್ಧ ಕಾರ್ಮಿಕರನ್ನು ಸಂಘಟಿಸುವಂಥ ಹೊಣೆಗಾರಿಕೆಯನ್ನು ಕಮ್ಯುನಿಸ್ಟರೇ ಹೊರಬೇಕಾಯಿತು ಎಂದು ಎಸ್.ಚಂದ್ರಶೇಖರ್‌ರವರು ಹೇಳಿದ್ದಾರೆ.[೧೪೭] ಇಂತಹ ಕಮ್ಯುನಿಸ್ಟ್ ನಾಯಕರಲ್ಲಿ ಪ್ರಮುಖರಾದವರು. ಎಸ್.ಡಿ. ಶಂಕರ್, ಕೆ.ಎಸ್. ಕುಮಾರನ್, ಸಿ.ಬಿ. ಮುನ್ನಯ್ಯ, ಎಂ.ಎಸ್. ರಾಮದಾಸ, ಕೆ.ಎಸ್. ಸಿಲಿಪು ಮುಂತಾದವರಾಗಿದ್ದಾರೆ. ೧೯೪೨ರಲ್ಲಿ ನಡೆದ ಕ್ವಿಟ್ ಇಂಡಿಯಾ ಚಳುವಳಿ, ಕೆ.ಜಿ.ಎಫ್. ಕಾರ್ಮಿಕರಲ್ಲಿ

ಹೆಚ್ಚಿನ ಪ್ರತಿಕ್ರಿಯೆ ಉಂಟಾಗಲಿಲ್ಲ. ಚಾಂಪಿಯನ್ ರೀತಿ ಗಣಿ ಪ್ರದೇಶದಲ್ಲಿ ಮಾತ್ರ ಕೆ.ಸಿ. ರೆಡ್ಡಿಯವರ ನೇತೃತ್ವದಲ್ಲಿ ಕಾರ್ಮಿಕರು ಒಂದಾಗಿ ತುಟ್ಟಿ ಭತ್ಯೆಯ ಸಾಲದಂತೆ ಮುಷ್ಕರ ಹೂಡೆದರು ಎಂದು ಜಾನಕಿ ನಾಯರ್ ಎಂ. ಗೋವಿಂದಪ್ಪನವರು ಹೇಳಿದ್ದಾರೆ.[೮೮] ಈ ವೇಳೆಗೆ ಸುಮಾರು ೨೦,೦೦೦ ಕಾರ್ಮಿಕರು ಆ ಪ್ರದೇಶದಲ್ಲಿ ನೆಲೆಗೊಂಡಿದ್ದರು. ೧೯೪೬ರಲ್ಲಿ ೪೭೮ ದಿನಗಳ ಕಾಲ ಮುಷ್ಕರ ನಡೆಯಿತು. ಕೆ.ಜಿ.ಎಫ್‌ನಲ್ಲಿ. ಕಮ್ಯುನಿಸ್ಟ್ ಮತ್ತು ಆದಿದ್ರಾವಿಡ ಸಂಘಗಳ ನಡುವೆ ಘರ್ಷಣೆಗಳು ಉಂಟಾದವು. ಪೊಲೀಸರು ಇದರ ನಿಯಂತ್ರಣೆ ಮಾಡಲು ವಿಫಲತೆ ಕಂಡ ಗೋಲಿಬಾರ ಮಾಡಿದರು. ಇದರಲ್ಲಿ ೫ ಜನ ಸಾವುಗೀಡಾದರು ಎಂದು ಜನಾಕಿ ನಾಯರ್‌ರವರು ಹೇಳಿದ್ದಾರೆ.[೮೯]

ಹೀಗೆ ಸ್ವಾತಂತ್ರ್ಯ ಹೋರಾಟ ಘಟ್ಟದಲ್ಲಿ ಕಾರ್ಮಿಕರ ಚರಿತ್ರೆ ಮುಖ್ಯವಾಗಿದ್ದು ವಿಶೇಷತೆಯನ್ನು ಹೊಂದಿದೆ. ಕಮ್ಯುನಿಸ್ಟ್ ರಾಷ್ಟ್ರೀಯತೆ, ಜಾತಿವಾದಿಗಳ, ಬಂಡವಾಳಶಾಹಿಗಳು ಹಾಗೂ ವಸಾಹತುಶಾಹಿಗಳ ನಡುವೆ ಕಾರ್ಮಿಕರ ಚರಿತ್ರೆ ಬಿಕ್ಕಟ್ಟಿನಲ್ಲಿ ಇರಿಸುವಂತಾಯಿತು. ಅಧ್ಯಾಯದ ವ್ಯಾಪ್ತಿಯ ದೃಷ್ಟಿಯಿಂದ ೧೯೪೭ರವರೆಗೆ ಕಾರ್ಮಿಕರ ಚರಿತ್ರೆಯನ್ನು ಸೈದ್ಧಾಂತಿಕವಾಗಿ ನಿರ್ಮಿಸಲು ಪ್ರಯತ್ನ ಮಾಡಲಾಗಿದೆ. ಅದರ ಮುಂದಿನ ಬೆಳವಣಿಗೆಯನ್ನು ಅಧ್ಯಾಯ ನಾಲ್ಕರಲ್ಲಿ ವಿವರಿಸಲು ಯತ್ನಿಸಲಾಗಿದೆ. ಕೋಲಾರ ಜಿಲ್ಲೆಯ ಚರಿತ್ರೆಯನ್ನು ದೊರೆತ ಲಿಖಿತ ಆಕರಗಳ ಸಹಾಯದಿಂದ ೧೯೪೭ರ ವರೆಗೆ ವಿಶ್ಲೇಷಿಸಲು ಪ್ರಸ್ತುತ ಅಧ್ಯಾಯದಲ್ಲಿ ಯತ್ನಿಸಲಾಗಿದೆ. ಕಾರ್ಮಿಕರ ಚರಿತ್ರೆಯನ್ನು ಕುರಿತು ಇತಿಹಾಸ ಲೇಖನವನ್ನು ಸೈದ್ಧಾಂತಿಕವಾಗಿ ತಿಳಿಯಲು ಪ್ರಯತ್ನಿಸಿದೆ.

* * *

ಕೋಲಾರ ಪ್ರದೇಶ ವಸಾಹತು ಕಾಲದ ಚರಿತ್ರೆಯು ನಾಲ್ಕನೇ ಮೈಸೂರು ಆಂಗ್ಲೋ ಯುದ್ಧದ ಮುಕ್ತಾಯದಿಂದ ಪ್ರಾರಂಭವಾಗುತ್ತದೆ. ಮರಾಠರ ಏಕೋಜಿ, ಅನಂತರದ ಹೈದರಾಲಿ ಹಾಗೂ ಟೀಪ್ಪು ಸುಲ್ತಾನರೊಡನೆ ಹೋರಾಟ ಮಾಡಿದ ಬ್ರಿಟಿಷ್ ಕೊಲ್‌ವುಡ್ ಮತ್ತು ಲಾರ್ಡ್ ಕಾರ್ನ್‌ವಾಲಿಸ್‌ನು ಕೊನೆಗೆ ಕೋಲಾರ ಪ್ರದೇಶವನ್ನು ತಮ್ಮದಾಗಿಸಿಕೊಂಡರು. ೧೮೦೦ರಲ್ಲಿ ಹೀಗೆ ಪಡೆದುಕೊಂಡು ಕೋಲಾರ ಪ್ರದೇಶವನ್ನು ಮೈಸೂರು ಅರಸರೊಂದಿಗೆ ಒಪ್ಪಂದ ಮಾಡಿಕೊಂಡು ದ್ವಿಆಡಳಿತ ಪದ್ಧತಿಯನ್ನು ಮುಂದವರೆಸಿದರು. ಇದರಿಂದ ಕೋಲಾರ ಪ್ರದೇಶವು ಮೈಸೂರು ರಾಜ್ಯದ ಒಂದು ಭಾಗವಾಯಿತು. ನಂತರ ಬಿ.ಎಲ್. ರೈಸ್‌ರು 'ಮೈಸೂರು ಸ್ಟೇಟ್ ಗೆಜೆಟಿಯರ್' ಹಾಗೂ ಕೆ. ಅಭಿಶಂಕರರವರ 'ಕೋಲಾರ ಜಿಲ್ಲಾ ಗೆಜೆಟಿಯರ್'ಗಳಿಂದ ಬ್ರಿಟಿಷ್ ರೆಸಿಡೆನ್ಸಿಗಳು ಹಾಗೂ ದಿವಾನರ ಆಡಳಿತ ಮುಂದುವರೆದು, ಆಡಳಿತ ಸುಧಾರಣೆ ಹಾಗೂ ಆರ್ಥಿಕ ಅಭಿವೃದ್ಧಿ ಚಟುವಟಿಕೆಗಳು ಮಾಡಿದರೆಂದು ವ್ಯಕ್ತವಾಗುತ್ತದೆ. ಸ್ವತಂತ್ರ್ಯ ಹೋರಾಟದ ವಿಷಯದ ಬಗ್ಗೆ ಹೆಚ್ಚಿನ ಮಾಹಿತಿಗಳು ದೊರೆತಿಲ್ಲವಾದರೂ ಸೂರ್ಯನಾಥ ಕಾಮತ್ ಅವರ 'ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು ಸಂಪುಟ ೧' ಹಾಗೂ ಕೆ. ವೆಂಕಟಕೃಷ್ಣಪ್ಪನವರ 'ಕೋಲಾರ ಜಿಲ್ಲಾ ಸ್ವತಂತ್ರ್ಯ ಹೋರಾಟಗಾರರು' ಹಾಗೂ 'ಸ್ವಾತಂತ್ರ್ಯ ಹೋರಾಟದ ನೆನಪುಗಳು', ಬಿ.ಕೆ. ರಾಮಚಂದ್ರರವರ 'ಕರ್ನಾಟಕದ ಜಲಿಯನ್ ವಾಲಾಬಾಗ್'

(ವಿದುರಾಶ್ವತ್ಥ ಸತ್ಯಾಗ್ರಹ) ಹಾಗೂ ತಿರುಮಲೆರವರ 'ಕೋಲಾರ ಪ್ರದೇಶದ ಸ್ವಾತಂತ್ರ್ಯ ಹೋರಾಟ' ಎಂಬ ಲೇಖನಗಳು ಉತ್ತಮ ಮಾಹಿತಿಯನ್ನು ಒದಗಿಸುತ್ತವೆ. ಇದರಿಂದ ಕೋಲಾರ ಪ್ರದೇಶದ ವಸಾಹತುಶಾಹಿ ಮತ್ತು ಸ್ವಾತಂತ್ರ್ಯ ಹೋರಾಟ ಚರಿತ್ರೆಯನ್ನು ವ್ಯಕ್ತಪಡಿಸಲು ಸಾಧ್ಯವಾಗಿದೆ. ಆದರೆ, ಇವೆಲ್ಲವು ಸಮಗ್ರವಾಗಿ ತಿಳಿಸಲು ವಿಫಲಗೊಂಡಿವೆ ಎಂಬುದು ಗಮನಾರ್ಹವಾಗಿದೆ. ಕೋಲಾರ ಪ್ರದೇಶದಲ್ಲಿ ಸ್ವಾತಂತ್ರ್ಯ ಹೋರಾಟದ ಲಕ್ಷಣಗಳು ೧೯೨೦ರ ನಂತರ ಕಂಡುಬಂದು ಅನೇಕರ ಪ್ರಾಣ ತ್ಯಾಗ, ಬಲಿದಾನ ಅಮಿತ ಸಾಹಸ ತೋರ್ಪಡಿಸಿದ್ದಾರೆ. ಇಷ್ಟಾದರೂ ಚರಿತ್ರೆಯ ರಚನೆಯೂ ಈ ಕುರಿತಾಗಿ ನಿರ್ಲಕ್ಷಿತಗೊಂಡಿದೆ ಎಂದೇ ಹೇಳಲಾಗುತ್ತದೆ. ಮಹಾತ್ಮ ಗಾಂಧೀಜಿಯ ಪಾದಾರ್ಪಣೆಯಿಂದ ಮತ್ತು ಅವರ ಮಹಾನ್ ಕಾರ್ಯ ಚಟುವಟಿಕೆಗಳು ಕೋಲಾರದಾದ್ಯಂತ ಈ ಅವಧಿಯಲ್ಲಿ ಕಂಡುಬಂದರು ಚರಿತ್ರೆಯ ದೆಸೆಯಲ್ಲಿ ಒಂದು ಮಿತವಾಗಿ ಪರಿಗಣಿಸಲ್ಪಟ್ಟಿದ್ದಾರೆ.

ಸ್ವಾತಂತ್ರ್ಯ ಹೋರಾಟ ಘಟ್ಟದಲ್ಲಿ ಚರಿತ್ರೆ ಲೇಖನ ಶಾಸ್ತ್ರವು ವಿವಿಧ ಆಯಾಮಗಳಲ್ಲಿ, ವಿವಿಧ ಮಾದರಿಗಳಲ್ಲಿ ಅಧ್ಯಯನ ಮಾಡಲಾಗಿದೆ. ಕೋಲಾರ ಪ್ರದೇಶ ಚರಿತ್ರೆಯಲ್ಲಿ ಈ ಕುರಿತಾಗಿ ಹಲವಾರು ವಿದ್ವಾಂಸರು ಶ್ರಮಿಸಿದ್ದಾರೆ. ಅಂತವರಲ್ಲಿ ಪ್ರಮುಖವಾಗಿ ಕೆ. ಅಭಿಶಂಕರರವರು 'ಕೋಲಾರ ಜಿಲ್ಲಾ ಗೆಜೆಟಿಯರ್', ಬಿ.ಎಲ್. ರೈಸ್‌ರವರ 'ಮೈಸೂರು ಸ್ಟೇಟ್ ಗೆಜೆಟಿಯರ್', ಸೂರ್ಯನಾಥ ಕಾಮತರವರ 'ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು', ಕೆ.ವೆಂಕಟಕೃಷ್ಣಪ್ಪನವರ 'ಕೋಲಾರ ಜಿಲ್ಲಾ ಸ್ವಾತಂತ್ರ್ಯ ಹೋರಾಟಗಾರರು' ಮುಂತಾದವು ಸ್ವಾತಂತ್ರ್ಯ ಹೋರಾಟದ ದೃಷ್ಟಿಕೋನವನ್ನು ಹೊಂದಿದೆ. ಫ್ರಾನ್ಸಿಸ್ ಬುಕಾನನರವರ 'ಪ್ರವಾಸಿ ದಾಖಲೆ ಕೃತಿಗಳು', ಡಿ.ಸಿ. ರಾಜಪ್ಪನವರ 'ಮೈಸೂರು ರಾಜ್ಯದ ವಾಣಿಜ್ಯ ಮತ್ತು ಕರಕುಶಲತೆ' ಎಂಬ ಕೃತಿ. ಎಂ. ಗೋವಿಂದಪ್ಪ, ಜಾನಕಿ ನಾಯರ್ ಅವರ ಕೃತಿಗಳು ಕಾರ್ಮಿಕರ ಕುರಿತಾಗಿ ವ್ಯಕ್ತಪಡಿಸುತ್ತವೆ. ಚಾಂಡಾಳ, ಪ್ರೊ. ಕೃಷ್ಣಪ್ಪ ಮುಂತಾದವ ಕೃತಿಗಳು ದಲಿತ ಚರಿತ್ರೆಯನ್ನು ವ್ಯಕ್ತಪಡಿಸುತ್ತವೆ. ಸುಮತಾ ಬಿ. ದೇಶಮಾನೆ ಮುಂತಾದವರ ಕೃತಿಗಳು ಸ್ತ್ರೀಯರ ಚರಿತ್ರೆಯನ್ನು ತಿಳಿಸುತ್ತವೆ. ಇದರಿಂದಾಗಿ ಈ ಮೇಲ್ಕಂಡ ಅಧ್ಯಯನವನ್ನು ವಿವಿಧ ಆಯಾಮಗಳಲ್ಲಿ ವಿವರಿಸಲು ಸಾಧ್ಯವಾಗಿದೆ.

ಟಿಪ್ಪಣಿಗಳು

೧. ಸಂಪಂಗಿರಾವ್ ಕೆ., **ಕರ್ನಾಟಕ ಪರಂಪರೆ ಸಂಪುಟ-೨**, ಸಾಹಿತ್ಯ, ಸಂಸ್ಕೃತಿ ಅಭಿವೃದ್ಧಿ ಇಲಾಖೆ, ೧೯೭೦, ಸಂ. ಪು. ೩೧೩

೨. ಅಭಿಶಂಕರ ಕೆ., **ಕೋಲಾರ ಜಿಲ್ಲಾ ಗೆಜೆಟಿಯರ**, ೧೯೬೮, ಪು. ೬೬

೩. ನಾಯಕ ಎಚ್.ಎಂ. (ಸಂ.), **ಕನ್ನಡ ವಿಶ್ವಕೋಶ ಸಂಪುಟ-೫**, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ೧೯೭೨, ಪು. ೪೨೯

೪. ಷೇಕಅಲಿ ಬಿ. (ಸಂ.), **ಕರ್ನಾಟಕ ಚರಿತ್ರೆ ಸಂಪುಟ-೫**, (೧೭೦೦-೧೮೦೦), ಕನ್ನಡ ವಿಶ್ವವಿದ್ಯಾಲಯ, ಪ್ರಸಾರಾಂಗ, ೧೯೯೭, ಪು. ೬೦

೫. ಕೃಷ್ಣರಾವ ಎಂ.ವಿ. (ಸಂ.), **ಕರ್ನಾಟಕ ಇತಿಹಾಸ ದರ್ಶನ**, ಕರ್ನಾಟಕ ಸಹಕಾರಿ ಪ್ರಕಾಶನ, ಬೆಂಗಳೂರು, ಪು. ೪೬೯

೬. ಅಭಿಶಂಕರ ಕೆ., **ಕೋಲಾರ ಜಿಲ್ಲಾ ಗೆಜೆಟಿಯರ**, ೧೯೬೮, ಪು. ೬೭

೭. ವಸು ಎಂ.ವಿ. (ಸಂ.), **ದಕ್ಷಿಣ ಕರ್ನಾಟಕ ಅರಸುಮನೆತನಗಳು**, ಕನ್ನಡ ವಿಶ್ವವಿದ್ಯಾಲಯ, ಪ್ರಸಾರಾಂಗ, ೨೦೦೧, ಪು. ೩೪೭, ೩೫೧

೮. ಅದೇ....... ಲೇ. ಗುಮ್ಮನಾಯಕನ ಪಾಳೇಗಾರರು, ಪು.೩೫೧; ಜಾನಕಿ ನಾಯರ್, **ಮಿನರ್ಸ್ ಅಂಡ್ ಮಿಲ್‌ಹ್ಯಾಂಡ್ಸ್**, ಸೇಜ್ ಪಬ್ಲಿಕೇಷನ್ಸ್, ೧೯೯೮, ಪು.೧೫

೯. ಜಗನ್ನಾಥ ಪ್ರಕಾಶ ಎನ್., **ನಂದಿಬೆಟ್ಟ**, ಪೃಥ್ವಿ ಪ್ರಕಾಶನ, ಕೋಲಾರ, ೧೯೯೩, ಪು. ೩

೧೦. ಅಭಿಶಂಕರ ಕೆ., **ಕೋಲಾರ ಜಿಲ್ಲಾ ಗೆಜೆಟಿಯರ**, ೧೯೬೮, ಪು. ೬೭

೧೧. ಸಂಪಂಗಿ ರಾವ್ ಕೆ., **ಕರ್ನಾಟಕ ಪರಂಪರೆ ಸಂಪುಟ-೨**, ೧೯೭೦, ಪು. ೩೫೦

೧೨. ಕೃಷ್ಣರಾವ ಎಂ.ವಿ. (ಸಂ.), **ಕರ್ನಾಟಕ ಇತಿಹಾಸ ದರ್ಶನ**, ೧೯೭೦, ಪು. ೫೮೪

೧೩. ನಾಯಕ ಎಚ್.ಎಂ., **ಕನ್ನಡ ವಿಶ್ವಕೋಶ ಸಂಪುಟ-೫**, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ೧೯೭೪, ಪು. ೩೫೩, ೪೨೯

೧೪. ಜಗನ್ನಾಥ ಪ್ರಕಾಶ ಎನ್., **ಕೋಲಾರ ಸಿರಿಸಂಪುಟ**, ಅಂತರಗಂಗಾ ಪ್ರಕಾಶನ, ೨೦೦೧, ಪು. ೩೨-೩೩

೧೫. ಸಿದ್ದವ್ವನಹಳ್ಳಿ ಕೃಷ್ಣಶರ್ಮ, **ಗಾಂಧಿ ಮತ್ತು ಕರ್ನಾಟಕ**, ಶ್ರೀ ರಾಮಚಂದ್ರ ವಡವಿ ಪ್ರಕಾಶನ, ಬೆಂಗಳೂರು, ೧೯೭೭, ಪು. ೧

೧೬. ಕೃಷ್ಣರಾವ ಎಂ.ವಿ. ಮತ್ತು ಕೇಶವಭಟ್ (ಸಂ.), **ಕರ್ನಾಟಕದ ಇತಿಹಾಸ ದರ್ಶನ**, ಕರ್ನಾಟಕ ಸಹಕಾರಿ ಮುದ್ರಣ, ೧೯೭೦, ಪು. ೫೯೨

೧೭. ಚಂದ್ರಶೇಖರ ಎಸ್., **ದಕ್ಷಿಣ ಭಾರತ, ವಸಾಹತುಶಾಹಿ ರಾಷ್ಟ್ರೀಯತೆ ಮತ್ತು ಸಂಘರ್ಷ**, ಕನ್ನಡ ವಿಶ್ವವಿದ್ಯಾಲಯ, ಪ್ರಸಾರಾಂಗ, ೨೦೦೦, ಪು. ೨೦, ೨೫

೧೮. ಅಭಿಶಂಕರ ಕೆ., **ಕೋಲಾರ ಜಿಲ್ಲಾ ಗೆಜೆಟಿಯರ**, ೧೯೬೮, ಪು. ೬೯

೧೯. ವೀರತಪ್ಪ ಕೆ., **ಮೈಸೂರು ಸಂಸ್ಥಾನದ ಸ್ವತಂತ್ರ್ಯ ಚಳವಳಿ**, ವಿಜಯಕವಿ ಪ್ರಕಾಶನ, ಬೆಂಗಳೂರು, ೧೯೭೭, ಪು. ೨೨

೨೦. ಸೂರ್ಯನಾಥ ಕಾಮತ (ಸಂ.), **ಸ್ವತಂತ್ರ್ಯ ಸಂಗ್ರಾಮದ ಸ್ಮೃತಿಗಳು**, ಸಂಪುಟ ೩, ಗೀತಾ ಬುಕ್‌ಹೌಸ್, ಮೈಸೂರು, ೧೯೭೭, ಪು. ೨೮, ೪೧೭, ೪೨೦, ೪೨೮, ೮೨೪, ೮೩೪

೨೧. ಪ್ರಹ್ಲಾದರಾವ (ಸಂ.), **೫೦ರ ಸ್ವರ್ಣ ಸ್ವತಂತ್ರ್ಯ**, ಕೋಲಾರ ಪತ್ರಿಕೆ, ಪ್ರಕಾಶನ ಕೋಲಾರ, ೧೯೯೨, ಪು. ೨೯

೨೨. ಜಾನಕಿ ನಾಯರ್, ಮಿನರ್ಸ್ ಅಂಡ್ ಮಿಲ್‌ಹ್ಯಾಂಡ್ಸ್, ಸೇಜ್ ಪಬ್ಲಿಕೇಷನ್ಸ್, ನ್ಯೂ ಡೆಲ್ಲಿ, ಪು.೧೨೭, ೧೯೯೮

೨೩. ವೇಮಗಲ್ ಸೋಮಶೇಖರ, **ನಂದಿಗಿರಿಧಾಮದಲ್ಲಿ ಗಾಂಧಿ**, ೧೯೯೮, ಪು. ೧೯

೨೪. ಸಿದ್ದವ್ವನಹಳ್ಳಿ ಕೃಷ್ಣಶರ್ಮ, **ಗಾಂಧಿ ಮತ್ತು ಕರ್ನಾಟಕ**, ಶ್ರೀರಾಮಚಂದ್ರ ತಡವಿ, ಬೆಂಗಳೂರು, ೧೯೭೦, ಪು. ೧೩೧

೨೫. ಅದೇ.... ಪು.೧೫೧

೨೬. ಜಗನ್ನಾಥ ಪ್ರಕಾಶ ಎನ್., **ನಂದಿಬೆಟ್ಟ**, ಪೃಥ್ವಿ ಪ್ರಕಾಶನ, ಕೋಲಾರ, ೧೯೯೩, ಪು. ೧೫

೨೭. ಗೊರೂರು ರಾಮಸ್ವಾಮಿ ಅಯ್ಯಂಗಾರ್, **ಭಾಗ್ಯವಿಧಾತ**, ರಾಜ್ಯಭವನ, ಪಾಟ್ನಾ, ೧೯೫೫, ಪು.೧೬

೨೮. ರೆಡ್ಡಿ ಬಿ.ಎನ್.ಎಸ್., **ಜನಪದ**, ಆಗಸ್ಟ್ ೨೦೦೩, ನಿರ್ದೇಶಕರ ಇಲಾಖೆ, ಬೆಂಗಳೂರು, ಪು. ೧೩

೨೯. ಸಿದ್ದವ್ವನಹಳ್ಳಿ ಕೃಷ್ಣಮೂರ್ತಿ, **ಗಾಂಧಿ ಮತ್ತು ಕರ್ನಾಟಕ**, ಪು. ೧೯, ೨೦೯

೩೦. ವೇಮಗಲ್ ಸೋಮಶೇಖರ, **ಕೋಲಾರ ಜಿಲ್ಲೆಯಲ್ಲಿ ಮಹಾತ್ಮ ಗಾಂಧೀಜಿ**, ವೇಸರ ಸಮೂಹ, ಬೆಂಗಳೂರು, ೨೦೦೪, ಪು. ೨೫

೩೧. ವೇಮಗಲ್ ಸೋಮಶೇಖರ, **ಕೋಲಾರ ಜಿಲ್ಲೆಯಲ್ಲಿ ಮಹಾತ್ಮ ಗಾಂಧೀಜಿ**, ವೇಸರ ಸಮೂಹ, ಬೆಂಗಳೂರು, ೨೦೦೪, ಪು. ೧, ೧೯, ೫೪

೩೨. ಅಭಿಶಂಕರ ಕೆ., **ಕೋಲಾರ ಜಿಲ್ಲಾ ಗೆಜೆಟಿಯರ**, ೧೯೬೮, ಪುಟ. ೬೮, ೭೦

೩೩. ಗೋಪಾಲ್ ಆರ್. (ಸಂ.), **ಕೋಲಾರ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ** ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಹೊಸಪೇಟೆ, ೨೦೦೪, ಪುಟ. ೨೭೩

೩೪. ಲಿಂಗಯ್ಯ ಡಿ., **ಶಿವಪುರ ಸತ್ಯಾಗ್ರಹ**, ಸತ್ಯಾಗ್ರಹ ಸ್ಮಾರಕ ಟ್ರಸ್ಟ್, ಬೆಂಗಳೂರು, ೧೯೭೯, ಪುಟ. ೨೧೨, ೨೧೪, ೨೧೫

೩೫. ಮಹಾಬಳೇಶ್ವರಪ್ಪ ಬಿ.ಸಿ., **ಈ ಸೂರಿನ ವೀರಗಾಥೆ**, ಪ್ರಸಾರಾಂಗ, ಗುಲ್ಬರ್ಗ ವಿಶ್ವವಿದ್ಯಾಲಯ, ೨೦೦೩, ಪುಟ. ೨೬

೩೬. ದೇವರಾಜಯ್ಯ ಬಿ.ಕೆ., ರಾಮಚಂದ್ರನ, **ಸಿರಿನಂದಿ**, ಕೋಲಾರ ನಂದಿ ಉತ್ಸವ, ೧೯೯೯, ಪುಟ. ೮೩

೩೭. ಕೃಷ್ಣರಾವ ಎಂ.ವಿ. ಮತ್ತು ಕೇಶವಭಟ್ಟ ಎಂ., **ಕರ್ನಾಟಕ ಇತಿಹಾಸ ದರ್ಶನ**, ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರ, ಬೆಂಗಳೂರು, ೧೯೭೦, ಪುಟ. ೬೫೭

೩೮. ವೆಂಕಟಕೃಷ್ಣಪ್ಪ ಕೆ., **ಕೋಲಾರ ಜಿಲ್ಲೆ ಸ್ವಾತಂತ್ರ್ಯ ಹೋರಾಟಗಾರರು**, ಚಿಕ್ಕಬಳ್ಳಾಪುರ, ೧೯೯೮, ಪುಟ. ೨

೩೯. ವೀರತಪ್ಪ ಕೆ., **ಮೈಸೂರು ಸಂಸ್ಥಾನದ ಸ್ವಾತಂತ್ರ್ಯ ಚಳುವಳಿ**, ವಿಜಯಕವಿ, ಕವಿ ಪ್ರಕಾಶನ, ಬೆಂಗಳೂರು, ೧೯೭೨, ಪುಟ. ೫೭

೪೦. ಷೇಕ್‌ಅಲಿ ಬಿ., ಚಂದ್ರಶೇಖರ ಎಸ್. (ಸಂ.), **ಕರ್ನಾಟಕ ಚರಿತ್ರೆ ಸಂಪುಟ- ೭**, ಕನ್ನಡ ವಿಶ್ವವಿದ್ಯಾಲಯ, ಪ್ರಸಾರಾಂಗ, ೧೯೯೭, ಪುಟ. ೧೨೫

೪೧. ಅಭಿಶಂಕರ ಕೆ., **ಕೋಲಾರದಲ್ಲಿ ಗೆಜೆಟಿಯರ**, ೧೯೬೮, ಪುಟ. ೭೧

೪೨. ಜಾನಕಿ ನಾಯರ್, **ಮಿನರ್ಸ್ ಅಂಡ್ ಮಿಲ್‌ಹ್ಯಾಂಡ್ಸ್**, ಸೇಜ್ ಪಬ್ಲಿಕೇಷನ್ಸ್, ನ್ಯೂ ಡೆಲ್ಲಿ, ೧೯೯೮, ಪು.೧೨೮

೪೩. ಸೂರ್ಯನಾಥ ಯು.ಕಾಮತ, **ಸ್ವಾತಂತ್ರ್ಯ ಸಂಗ್ರಾಮ ಸ್ಮೃತಿಗಳು**, ಸಂಪುಟ-೩, ಗೀತಾಬುಕ್‌ಹೌಸ್, ೧೯೭೭, ಪು. ೧೨೬

೪೪. ಅದೇ.......ಕೃತಿ, ಸಂದರ್ಶನಕಾರ ಸಿ.ಟಿ. ಲಕ್ಷ್ಮಣ್‌ರವರ ಹೇಳಿಕೆ, ಪು. ೮೨೦-೮೨೧

೪೫. ವೆಂಕಟಕೃಷ್ಣಪ್ಪ ಕೆ., **ಕೋಲಾರ ಜಿಲ್ಲಾ ಸ್ವಾತಂತ್ರ್ಯ ಹೋರಾಟಗಾರರು**, ಚಿಕ್ಕಬಳ್ಳಾಪುರ, ೧೯೯೮, ಪು. ೨-೩

೪೬. ಗೋಪಾಲ್ ಆರ್. (ಸಂ.), **ಕೋಲಾರ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ**, ಹೊಸಪೇಟೆ, ೨೦೦೪, ಪುಟ. ೨೭೭-೨೭೮

೪೭. ಅಭಿಶಂಕರ ಕೆ., **ಕೋಲಾರ ಜಿಲ್ಲಾ ಗೆಜೆಟಿಯರ**, ೧೯೬೮, ಪುಟ. ೭೧

೪೮. ವಿಜಯ್ ತಂಬಂಡ ಪೂಣಚ್ಚ (ಸಂ.), ಜಾನಕಿ ನಾಯರ, ವಿಶ್ವಕೋಶ ಚರಿತ್ರೆ ಸಂಪುಟ-೪, ಕನ್ನಡ ವಿಶ್ವವಿದ್ಯಾಲಯ, ಪು.೮೪೨

೪೯. ಗೋಪಾಲ್ ಆರ್. (ಸಂ.), **ಕೋಲಾರ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ**, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಹೊಸಪೇಟೆ, ೨೦೦೪, ಪುಟ. ೨೭೯

೫೦. ಅಭಿಶಂಕರ ಕೆ., **ಕೋಲಾರ ಜಿಲ್ಲಾ ಗೆಜೆಟಿಯರ**, ೧೯೬೮, ಪುಟ. ೭೧

೫೧. ಸೂರ್ಯನಾಥ ಯು. ಕಾಮತ (ಸಂ.), **ಸ್ವಾತಂತ್ರ್ಯ ಸಂಗ್ರಾಮ ಸ್ಮೃತಿಗಳು**, ಸಂಪುಟ-೩, ಗೀತಾಬುಕ್‌ಹೌಸ್, ೧೯೭೭, ಪು. ೧೨೬

೫೨. ಅದೇ........ಕೃತಿ, ಪು. ೮೩೧

೫೩. ಅದೇ........ಕೃತಿ, ಪು. ೮೩೪

೫೪. ಸೂರ್ಯನಾಥ ಯು. ಕಾಮತ (ಸಂ.), **ಸ್ವಾತಂತ್ರ್ಯ ಸಂಗ್ರಾಮ ಸ್ಮೃತಿಗಳು**, ಕೃಷ್ಣಾಮಚಾರಿ **ಹೇಳಿಕೆ, ಸಂಪುಟ-೩, ಗೀತಾಬುಕ್‌ಹೌಸ್**, ೧೯೬೭, ಪು. ೪೦೫

೫೫. ವೆಂಕಟಕೃಷ್ಣಪ್ಪ ಕೆ., **ಸ್ವಾತಂತ್ರ್ಯ ಹೋರಾಟದ ನೆನಪುಗಳು**, ಚಿಕ್ಕಬಳ್ಳಾಪುರ, ೧೯೯೩, ಪು. ೨೯

೫೬. ವಿಜಯ್ ಟಿ.ಪಿ., ಜಾನಕಿ ನಾಯರ, (ಸಂ) ಕನ್ನಡ ವಿಶ್ವವಿದ್ಯಾಲಯ, **ವಿಶ್ವಕೋಶ ಚರಿತ್ರೆ ಸಂಪುಟ-೪**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಪು.೮೩೯, ೮೪೬

೫೭. ಪ್ರಹ್ಲಾದರಾವ, **೫೦ ಸ್ವರ್ಣ ಸ್ವಾತಂತ್ರ್ಯ**, ಕೋಲಾರ ಪತ್ರಿಕೆ, ಕೋಲಾರ, ೧೯೯೭, ಪು. ೨೯, ೩೦

೫೮. ಶ್ರೀನಿವಾಸಮೂರ್ತಿ ಎಚ್.ವಿ. ಮತ್ತು ರಾಮಕೃಷ್ಣನ್ ಆರ್., **ಸಮಗ್ರ ಕರ್ನಾಟಕ ಚರಿತ್ರೆ**, ಓರಿಯಂಟಲ್ ಲಿಮಿಟೆಡ್, ಬೆಂಗಳೂರು, ೧೯೯೫, ಪು.೪೪೧

೫೯. ಕೃಷ್ಣರಾವ ಎಂ.ವಿ. ಮತ್ತು ಕೇಶವಭಟ್ಟ ಎಂ. (ಸಂ.), **ಕರ್ನಾಟಕ ಇತಿಹಾಸ ದರ್ಶನ**, ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರ, ಬೆಂಗಳೂರು, ೧೯೭೦, ಪು.೬೬೨

೬೦. ಸೂರ್ಯನಾಥ ಯು.ಕಾಮತ, **ಸ್ವಾತಂತ್ರ್ಯ ಸಂಗ್ರಾಮ ಸ್ಮೃತಿಗಳು**, ಸಂಪುಟ-೩, ಗೀತಾಬುಕ್‌ಹೌಸ್, ೧೯೭೭, ಪು. ೪೦೪

೬೧. ವೆಂಕಟಕೃಷ್ಣಪ್ಪ ಕೆ., **ಕೋಲಾರ ಜಿಲ್ಲಾ ಸ್ವಾತಂತ್ರ್ಯ ಹೋರಾಟಗಾರರು**, ಚಿಕ್ಕಬಳ್ಳಾಪುರ, ೧೯೯೮, ಪು. ೩

೬೨. ಗೋಪಾಲ್ ಆರ್. (ಸಂ.), **ಕೋಲಾರ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ**, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಹೊಸಪೇಟೆ, ೨೦೦೪, ಪುಟ. ೨೭೯

೬೩. ಸೂರ್ಯನಾಥ ಯು. ಕಾಮತ (ಸಂ.), **ಸ್ವಾತಂತ್ರ್ಯ ಸಂಗ್ರಾಮ ಸ್ಮೃತಿಗಳು**, ಸಂಪುಟ-೩, ಗೀತಾಬುಕ್‌ಹೌಸ್, ೧೯೭೭, ಪು. ೪೧೧

೬೪. ವೀರತಪ್ಪ ಕೆ., **ಮೈಸೂರು ಸಂಸ್ಥಾನದ ಸ್ವಾತಂತ್ರ್ಯ ಚಳವಳಿ**, ವಿಜಯಕವಿ ಪ್ರಕಾಶನ, ಬೆಂಗಳೂರು, ೧೯೭೭, ಪು. ೧೧೮

೧೫. ಅಭಿಶಂಕರ ಕೆ., **ಕೋಲಾರ ಜಿಲ್ಲಾ ಗೆಜೆಟಿಯರ**, ೧೯೬೮, ಪುಟ. ೨೨

೧೬. ನಾಯಕ ಎಚ್.ಎಂ., **ಕನ್ನಡ ವಿಶ್ವಕೋಶ ಸಂಪುಟ ೫**, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ೧೯೭೨, ಪು.೪೨೯

೧೭. ಗೋವಿಂದಪ್ಪ ಎಂ., **ಹಿಸ್ಟರಿ ಆಫ್ ಮೈನಿಂಗ್ ಇನ್ ಪ್ರಿನ್ಸ್‌ಲೀ ಮೈಸೂರು ವಿತ್ ಸ್ಪೆಷಲ್ ರೆಫರೆನ್ಸ್ ಟು ಕೋಲಾರ ಗೋಲ್ಡ್ ಫೀಲ್ಡ್**, ೧೮೮೧-೧೯೫೬, ಬಿಯುಬಿ ಥೀಸೀಸ್, ೨೦೦೨, ಪು.೭

೧೮. ಗೋಪಾಲ್ ಆರ್. (ಸಂ.), ಲೇ. ತಿರುಮಲೆ ಶ್ರೀರಂಗಚಾರ, **ಕೋಲಾರ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ**, ಹೊಸಪೇಟೆ, ೨೦೦೪, ಪು. ೨೭೩

೧೯. ಕೃಷ್ಣಪ್ಪ ಬಿ., **ಚಳುವಳಿಗಳು ಮತ್ತು ಬರಹಗಳು**, ಬಿ. ಕೃಷ್ಣಪ್ಪ ಟ್ರಸ್ಟ್ (ರಿ), ಬೆಂಗಳೂರು, ೨೦೦೦, ಪು.೧೦

೨೦. ಅರವಿಂದ ಮಾಲಗತ್ತಿ, **ಸಾಹಿತ್ಯ ಸಂಸ್ಕೃತಿ ಮತ್ತು ದಲಿತ ಪ್ರಜ್ಞೆ**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೩, ಪು. ೧೬, ೨೨

೨೧. ಚಂದ್ರಶೇಖರ ಎಸ್., ನಾಗಣ್ಣ ಸಿ. (ಅನು.), **ದಕ್ಷಿಣ ಭಾರತ, ವಸಾಹತುಶಾಹಿ ರಾಷ್ಟ್ರೀಯತೆ ಮತ್ತು ಸಂಘರ್ಷ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦, ಪು.೧೫೦

೨೨. ಮಂಗ್ಳೂಳರ ವಿಜಯ, **ಸಂಘರ್ಷ ಅಂಬೇಡ್ಕರ್ ಜನನ ಸಾಧನೆ**, ಸಂಬುದ್ಧ ಪ್ರಕಾಶನ, ಬೆಂಗಳೂರು, ೨೦೦೩, ಪು.೧

೨೩. ಗೋಪಾಲ ಆರ್. (ಸಂ.), ಶ್ರೀಮತಿ ಯಶೋಧ ಪಿ., **ಕೋಲಾರ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ**, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಹೊಸಪೇಟೆ, ೨೦೦೪, ಪು. ೨೪೯, ೨೫೦

೨೪. ಕೃಷ್ಣರಾವ್ ಎಂ.ವಿ. ಮತ್ತು ಎಂ. ಕೇಶವಭಟ್ಟ (ಸಂ), **ಕರ್ನಾಟಕ ಇತಿಹಾಸ ದರ್ಶನ**, ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರ, ಬೆಂಗಳೂರು, ೧೯೭೦, ಪು.೯೭೦

೨೫. ದಾಸ್ ಬಿ.ಕೆ., **ಸೆನ್ಸಸ್ ಆಫ್ ಇಂಡಿಯಾ**, ೧೯೩೧, ಗೌವರ್ನಮೆಂಟ್ ಪ್ರೆಸ್, ಬೆಂಗಳೂರು, ೧೯೩೧, ಪು. ೩೪೫

೨೬. ರೈಸ್ ಬಿ.ಎಲ್., **ಗೆಜೆಟಿಯರ್ ಆಫ್ ಇಂಡಿಯಾ**, ಗೌವರ್ನಮೆಂಟ್ ಆಫ್ ಕರ್ನಾಟಕ, ಮೈಸೂರು, ಸಂ.೧, ೧೮೭೬, ಪು. ೧೦೯

೨೭. ಪದ್ಮನಾಭ, **ಕೋಲಾರ ಡಿಸ್ಟ್ರಿಕ್ಟ್ ಸೆನ್ಸಸ್ ೧೯೭೧**, ೧೪, ಗೌವರ್ನಮೆಂಟ್ ಪ್ರೆಸ್, ಮೈಸೂರು, ಪು. ೧, ೧೨

೨೮. ನರಸಿಂಹ ಅಯ್ಯಂಗಾರ್ ವಿ.ಎನ್., **ಸೆನ್ಸಸ್ ಆಫ್ ಇಂಡಿಯಾ** ೧೮೯೧, (ಸಂ.), ಮೈಸೂರು, ಭಾಗ ೨, ಸರ್ಕಾರಿ ಮುದ್ರಣಾಲಯ, ೧೮೯೩, ಪು.೨೫೩, ೨೫೪

೭೯. ಚಂದ್ರಶೇಖರ ಎಸ್., ದಕ್ಷಿಣ ಭಾರತ ವಸಾಹತುಶಾಹಿ ರಾಷ್ಟ್ರೀಯತೆ ಮತ್ತು ಸಂಘರ್ಷ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦, ಪು.೧೫೦

೮೦. ಮೈಸೂರು ರಾಜ್ಯ, ನವೆಂಬರ್ ೧೯೫೬, ಮೈಸೂರು ರಾಜ್ಯ ಸರ್ಕಾರ, ವಾರ್ತಾ ಇಲಾಖೆ, ಪ್ರಕಟಣೆ, ಪು.೬೨

೮೧. ಸಮತಾ ಬಿ. ದೇಶಮಾನೆ, ಅಂಬೇಡ್ಕರ ದೃಷ್ಟಿಯಲ್ಲಿ ಕಾರ್ಮಿಕರು ಮತ್ತು ಮಹಿಳೆಯರು, ಬೋಧಿ ಸತ್ವ ಪ್ರಕಾಶನ, ಬೆಂಗಳೂರು, ೨೦೦೩, ಪು.೨೩

೮೨. ಗೋವಿಂದಪ್ಪ ಎಂ., ಹಿಸ್ಟರಿ ಆಫ್ ಮೈನಿಂಗ್ ಇನ್ ಪ್ರಿನ್ಸ್ಲೀ ಮೈಸೂರು ವಿತ್ ಸ್ಪೆಷಲ್ ರೆಫರೆನ್ಸ್ ಕೋಲಾರ್ ಗೋಲ್ಡ್ ಫೀಲ್ಡ್, (೧೮೮೧-೧೯೫೬), ಬಿವಿವಿ ಥೀಸಿಸ್, ೨೦೦೨

೮೩. ಗೋಪಾಲ್ ಆರ್., ಕೋಲಾರ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪು. ೨೪೪

೮೪. ಕೃಷ್ಣರಾವ್ ಎಂ.ವಿ., ಮತ್ತು ಎಂ. ಕೇಶವಭಟ್ಟ, ಕರ್ನಾಟಕ ಇತಿಹಾಸ ದರ್ಶನ, ಪು. ೯೮೯

೮೫. ಮಂಗ್ಳೂಳರ ವಿಜಯ, ಸಂಘರ್ಷ ಅಂಬೇಡ್ಕರ ಜೀವನ ಸಾಧನೆ, ಸಂಬುದ್ಧ ಪ್ರಕಾಶನ, ೨೦೦೨, ಪು.೩

೮೬. ಚಂದ್ರಶೇಖರ ಎಸ್., ದಕ್ಷಿಣ ಭಾರತ ವಸಾಹತುಶಾಹಿ ರಾಷ್ಟ್ರೀಯತೆ ಮತ್ತು ಸಂಘರ್ಷ, ಪು.೧೫೧

೮೭. ನಂಜರಾಜ ಅರಸು ಪಿ.ವಿ., ಮತ್ತು ಎಸ್.ಕೆ. ಚಂದ್ರರಾಜ ಅರಸು, ನಾಲ್ವಡಿ ಕೃಷ್ಣರಾಜ ಒಡೆಯರು ಒಂದು ದರ್ಶನ, ಅಖಿಲ ಕರ್ನಾಟಕ ಅರಸು ಪರಿಷತ್ ರಿ, ಬೆಂಗಳೂರು, ೧೯೯೭, ಪು.೮೬

೮೮. ವೇಮಗಲ್ ಸೋಮಶೇಖರ್, ಕೋಲಾರ ಜಿಲ್ಲೆಯಲ್ಲಿ ಮಹಾತ್ಮ ಗಾಂಧೀಜಿ, ನೇಸರ ಸಮೂಹ ಪ್ರಕಾಶನ, ಬೆಂಗಳೂರು, ೨೦೦೪, ಪು. ೧೨

೮೯. ಸಿದ್ದವ್ವನಹಳ್ಳಿ ಕೃಷ್ಣಶರ್ಮ, ಗಾಂಧಿ ಮತ್ತು ಕರ್ನಾಟಕ, ಗಾಂಧಿ ಶತಮಾನೋತ್ಸವ ಬೆಂಗಳೂರು, ೧೯೬೯, ಪು. ೨೯೦

೯೦. ಮೊಗಳ್ಳಿ ಗಣೇಶ್, ದಲಿತ ಚಿಂತನೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨, ಪು. ೨೫೩, ೨೫೪, ೨೬೦

೯೧. ತೆಂಡೂಲ್ಕರ್ ಡಿ.ಜಿ., ಮಹಾತ್ಮ, ಸಂಪುಟ ೨, ಗಾಂಧಿ ಭವನ, ಮೈಸೂರು, ವಿಶ್ವವಿದ್ಯಾಲಯ, ೧೯೭೭, ಪು. ೩೨೨

೯೨. ಷೇಕ್ ಅಲಿ ಬಿ. (ಸಂ.) ಚಂದ್ರಶೇಖರ್ ಎಸ್., ಕರ್ನಾಟಕ ಚರಿತ್ರೆ ಸಂಪುಟ ೭, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭, ಪು.೧೭೭

೯೩. ಜಾನಕಿ ನಾಯರ್, ಮಿನರ್ಸ್ ಅಂಡ್ ಮಿಲ್‌ಹ್ಯಾಂಡ್ಸ್, ಸೇಜ್ ಪಬ್ಲಿಕೇಷನ್ಸ್, ನ್ಯೂ ಡೆಲ್ಲಿ, ೧೯೯೮, ಪು. ೧೭೧, ೧೭೨, ೧೭೩

೯೪. ಕೃಷ್ಣರಾವ್ ಎಂ.ವಿ., ಮತ್ತು ಕೇಶವಭಟ್ಟ ಎಂ., ಕರ್ನಾಟಕ ಇತಿಹಾಸ ದರ್ಶನ, ಕರ್ನಾಟಕ ಸಹಕಾರಿ ಪ್ರಕಾಶನ, ಮಂದಿರ ಬೆಂಗಳೂರು, ೧೯೭೦, ಪು.೯೯೩

೯೫. ಅದೇ.....ಪು. ೯೪

೯೬. ಸಿದ್ದಪ್ಪನಹಳ್ಳಿ ಕೃಷ್ಣಮೂರ್ತಿ, **ಗಾಂಧಿ ಮತ್ತು ಕರ್ನಾಟಕ**, ಗಾಂಧಿ ಶತಮಾನ ಉತ್ಸವ, ಬೆಂಗಳೂರು ೧೯೬೯, ಪು.೨೯೦

೯೭. ಅದೇ.........ಪು.೨೯೨

೯೮. ಶಂಕರ್ ಎಂ.ಎನ್., (ಸಂ.), **ಯೋಜನಾ ಅಕ್ಟೋಬರ್ ೨೦೦೧**, ಸಮಾಚಾರ ಮತ್ತು ಪ್ರಚಾರ ಸಚಿವಾಲಯ, ಬೆಂಗಳೂರು, ಪು.೬

೯೯. ರಾಜಶೇಖರಯ್ಯ ಎ., (ಸಂ.), **ಡಾ. ಬಾಬಾ ಸಾಹೇಬ ಅಂಬೇಡ್ಕರ ಬರಹಗಳು ಮತ್ತು ಭಾಷಣಗಳು**, ಸಂ.೧, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೯೦, ಪು. ೯೫

೧೦೦. ಪ್ರೀತಿ ಶುಭ ಚಂದ್ರ, **ಮಹಿಳಾ ಅಧ್ಯಯನ ತಾತ್ವಿಕ ನೆಲೆಗಳು ಮತ್ತು ಮಹಿಳಾ ಚಳುವಳಿಗಳು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨, ಪು.೧೩

೧೦೧. ಜೆರಾಲ್ಡಿನ ಪೋರ್ಟ್, **ಆಧುನಿಕ ಭಾರತದಲ್ಲಿ ಮಹಿಳೆ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧, ಪು.೨೩೧

೧೦೨. ಶಿವಮೂರ್ತಿ ಬಿ., **ಮೈಸೂರು ರಾಜ್ಯ, ೧ ನವೆಂಬರ್ ೧೯೫೬**, ಮೈಸೂರು ಸರ್ಕಾರ ವಾರ್ತಾ ಇಲಾಖೆ, ಪು.೨೧೬

೧೦೩. ರೈಸ್ ಬಿ.ಎಲ್., **ಗೆಜೆಟಿಯರ್ ಆಫ್ ಇಂಡಿಯಾ**, ಗೌವರ್ನಮೆಂಟ್ ಆಫ್ ಕರ್ನಾಟಕ, ಸಂ.೧, ೧೮೭೬, ಪು.೧೦೯

೧೦೪. ನರಸಿಂಹ ಅಯ್ಯಂಗಾರ್ ವಿ.ಎನ್., **ಸೆನ್ಸಸ್ ಆಫ್ ಇಂಡಿಯಾ ೧೮೯೧**, (ಸಂ.) ಮೈಸೂರು ಸ್ಟೇಟ್ ಪಾರ್ಟ್ ೨, ಗೌವರ್ನಮೆಂಟ್ ಪ್ರೆಸ್, ಮೈಸೂರು, ೧೮೯೩, ಪು.೨

೧೦೫. ಪದ್ಮನಾಭ, **ಕೋಲಾರ ಜಿಲ್ಲಾ ಜನಗಣತಿ, ೧೯೭೧**, ಶ್ರೇಣಿ ೧೪, ಸರ್ಕಾರಿ ಮುದ್ರಣ, ಮೈಸೂರು, ಪು.೧೨

೧೦೬. ಚಂದ್ರಶೇಖರ ಎಸ್., **ಆಧುನಿಕ ಕರ್ನಾಟಕ ಆಂದೋಲನಗಳು**, ನಮ್ಮ ಪ್ರಕಾಶನ, ತಿಪಟೂರು, ೨೦೦೨, ಪು. ೨೬

೧೦೭. ಶ್ರೀನಿವಾಸಮೂರ್ತಿ ವಿ.ಎಸ್., ಆರ್. ರಾಮಕೃಷ್ಣ, **ಸಮಗ್ರ ಕರ್ನಾಟಕ ಚರಿತ್ರೆ**, ಓರಿಯಂಟಲಾಂಗ ಮನಲಿಮಿಟೆಡ್, ಬೆಂಗಳೂರು, ೧೯೯೫, ಪು.೪೨೩

೧೦೮. ಚಂದ್ರಶೇಖರ ಎಸ್., **ಆಧುನಿಕ ಕರ್ನಾಟಕ ಆಂದೋಲನಗಳು**, ನಮ್ಮ ಪ್ರಕಾಶನ, ತಿಪಟೂರು, ೨೦೦೨, ಪು. ೩೦, ೩೪

೧೦೯. ಹೇಮಲತಾ ಮಹಿಷಿ, **೨೧ನೇ ಶತಮಾನದತ್ತ** ಮಹಿಳೆ, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೯೯, ಪು.೪, ೬, ೭

೧೧೦. ಸೂರ್ಯನಾಥ ಕಾಮತ (ಸಂ.), ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು, ಸಂ.೩, ಗೀತಾ ಬುಕ್ ಹೌಸ್, ೧೯೮೦, ಪು.೪೦

೧೧೧. ವೆಂಕಟಕೃಷ್ಣಪ್ಪ ಕೆ., **ಕೋಲಾರ ಜಿಲ್ಲಾ ಸ್ವಾತಂತ್ರ್ಯ ಹೋರಾಟಗಾರರು**, ವೆಂಕಟಪ್ಪ ಟ್ರಸ್ಟ್, ಚಿಕ್ಕಬಳ್ಳಾಪುರ, ೧೯೯೮, ಪು.೧೯

೧೧೨. ಸ್ಯಾಮಿಯಲ್ ಅಪ್ಪಾಜಿ, **ಫ್ರೀಡಮ್ ಸ್ಟ್ರಗಲ್ ಇನ್ ಕರ್ನಾಟಕ**, ಸಂ. ೩, ಗೌವರ್ನಮೆಂಟ್ ಆಫ್ ಮೈಸೂರು ಪಬ್ಲಿಕೇಷನ್, ಬೆಂಗಳೂರು, ೧೯೭೨, ಪು.೧೩೮

೧೧೩. ಷೇಕ್ ಅಲಿ ಬಿ., ಎಸ್. ಚಂದ್ರಶೇಖರ (ಸಂ.), **ಕರ್ನಾಟಕ ಚರಿತ್ರೆ ಸಂಪುಟ ೭**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭, ಪು.೧೫೫

೧೧೪. ವೆಂಕಟ ಕೃಷ್ಣಪ್ಪ ಕೆ., **ಕೋಲಾರ ಜಿಲ್ಲಾ ಸ್ವಾತಂತ್ರ್ಯ ಹೋರಾಟಗಾರರು**, ವೆಂಕಟ ಕೃಷ್ಣಪ್ಪ ಟ್ರಸ್ಟ್, ಚಿಕ್ಕಬಳ್ಳಾಪುರ, ೧೯೯೮, ಪು.೩೬

೧೧೫. ಅದೇ... ಪು.೨೯, ೩೦

೧೧೬. ಅದೇ... ಪು.೬೦

೧೧೭. ದೇವರಾಜಯ್ಯ (ಸಂ.), **ಸಿರಿನಂದಿ**, ಸ್ಮರಣ ಸಂಚಿಕೆ, ಚಿಕ್ಕಬಳ್ಳಾಪುರ, ೧೯೯೯, ಪು.೧೦೨

೧೧೮. ಜಗನ್ನಾಥ ಪ್ರಕಾಶ ಎನ್., **ಕೋಲಾರ ಸಿರಿಸಂಪುಟ**, ಅಂತರಗಂಗಾ ಪ್ರಕಾಶನ, ಬೆಂಗಳೂರು, ೨೦೦೪, ಪು.೫೪, ೫೬

೧೧೯. ಚಿನ್ನಸ್ವಾಮಿ ಸೋಸಲೆ ಎನ್., **ಸಾಮ್ರಾಜ್ಯ ಮತ್ತು ಸಂಸ್ಥಾನ**, ಪ್ರಸಾರಾಂಗ, ವಿಶ್ವವಿದ್ಯಾಲಯ, ಹಂಪಿ, ೨೦೦೪, ಪು.೨೭೧

೧೨೦. ಗೋಪಾಲ ಆರ್. (ಸಂ.), ಶ್ರೀಮತಿ ಯಶೋಧ ಪಿ., **ಕೋಲಾರ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ**, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ, ನಿರ್ದೇಶನಾಲಯ, ಹೊಸಪೇಟೆ, ೨೦೦೪, ಪು. ೨೪೬, ೨೭೨

೧೨೧. ನಂಜುಂಡಯ್ಯ ಜಿ., **ಸೆನ್ಸಸ್ ಹ್ಯಾಂಡ್‌ಬುಕ್ ಕೋಲಾರ**, ಗೌವರ್ನಮೆಂಟ್ ಪ್ರೆಸ್, ಬೆಂಗಳೂರು, ೧೯೫೧, ಪು.೫೦

೧೨೨. ಚಂದ್ರಶೇಖರ ಎಸ್., **ದಕ್ಷಿಣ ಭಾರತ ವಸಾಹತುಶಾಹಿ ರಾಷ್ಟ್ರೀಯತೆ ಮತ್ತು ಸಂಘರ್ಷ**, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦, ಪು.೨೩

೧೨೩. ಅಭಿಶಂಕರ ಕೆ., **ಕೋಲಾರ ಜಿಲ್ಲಾ ಗೆಜೆಟಿಯರ್**, ಸರ್ಕಾರಿ ಮುದ್ರಣ, ಬೆಂಗಳೂರು, ೧೯೬೮, ಪು.೩೭೭, ೩೨೮

೧೨೪. ಷೇಕ್‌ಅಲಿ ಬಿ., ಸೆಬಾಸ್ಟಿಯನ್ ಜೋಸೆಫ್ (ಪ್ರಾ.ಸಂ.), **ಕರ್ನಾಟಕ ಚರಿತ್ರೆ ಸಂಪುಟ ೬**, ಲೇ. ಕೆ.ಕೆ. ಎನ್. ಖುರೇಷ್, ರೈತರ ಪಾತ್ರ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭, ಪು.೮೨, ೮೩, ೮೪

೧೨೫. ಸಿದ್ದವ್ವನಹಳ್ಳಿ ಕೃಷ್ಣಶರ್ಮ, **ಗಾಂಧಿ ಮತ್ತು ಕರ್ನಾಟಕ**, ಗಾಂಧಿ ಶತಮಾನೋತ್ಸವ, ಬೆಂಗಳೂರು, ೧೯೬೯

೧೨೬. ಷೇಕ್‌ಅಲಿ ಬಿ., ಸೆಬಾಸ್ಟಿಯನ್ (ಪ್ರಾ.ಸಂ.), **ಕರ್ನಾಟಕ ಚರಿತ್ರೆ ಸಂಪುಟ ೬**, ಪೂರ್ವೋಕ್ತ, ಪು.೧೦೧

೧೨೭. ಶ್ರೀನಿವಾಸಮೂರ್ತಿ ಹೆಚ್.ವಿ., ಆರ್. ರಾಮಕೃಷ್ಣ, **ಸಮಗ್ರ ಕರ್ನಾಟಕ ಚರಿತ್ರೆ**, ಓರಿಯಂಟಲ್ ಲಾಂಗಮನ್ ಲಿಮಿಟೆಡ್, ಬೆಂಗಳೂರು, ೧೯೯೫, ಪು.೪೦೭

೧೨೮. ವೆಂಕಟಕೃಷ್ಣ ಕೆ., **ಕೋಲಾರ ಜಿಲ್ಲಾ ಸ್ವಾತಂತ್ರ್ಯ ಹೋರಾಟಗಾರರು**, ವೆಂಕಟಕೃಷ್ಣಪ್ಪ ಟ್ರಸ್ಟ್, ಚಿಕ್ಕಬಳ್ಳಾಪುರ, ೧೯೯೮, ಪು.೩

೧೨೯. ಚಂದ್ರಶೇಖರ ಎಸ್. (ಸಂ.), **ಕರ್ನಾಟಕ ಚರಿತ್ರೆ ಸಂಪುಟ ೭**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭, ಪು.೧೩೮

೧೩೦. ಗೋಪಾಲ್ ಆರ್. (ಪ್ರಾ.ಸಂ.), **ಕೋಲಾರ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ**, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಹೊಸಪೇಟೆ, ೨೦೦೪, ಪು.೨೪೭

೧೩೧. ರಾಜಪ್ಪ ಪಿ.ಸಿ., **ಮೈಸೂರು ರಾಜ್ಯದಲ್ಲಿ ವಾಣಿಜ್ಯ ಮತ್ತು ಕರಕುಶಲ ಕಲೆಗಳು**, ೧೮೦೦-೧೮೮೧, ಅಕ್ಷರ ಪ್ರಕಾಶನ, ಸಾಗರ, ೧೯೯೫, ಪು.೧೬, ೧೮, ೨೦, ೨೩, ೨೪

೧೩೨. ಜಗನ್ನಾಥ ಪ್ರಕಾಶ ಎನ್., **ಕೋಲಾರ ಸಿರಿಸಂಪುಟ**, ಅಂತರಗಂಗಾ ಪ್ರಕಾಶನ, ಬೆಂಗಳೂರು, ೨೦೦೧, ಪು.೬೧, ೬೨

೧೩೩. ಗೋವಿಂದಪ್ಪ ಎಂ., **ಹಿಸ್ಟರಿ ಆಫ್ ಮೈನಿಂಗ್ ಇನ್ ಪ್ರಿನ್ಸ್ ಮೈಸೂರು ವಿತ್ ಸ್ಪೆಷಲ್ ರಿಫಾರ್ಮ್ಸ್ ಟು ಕೆ.ಜಿ.ಎಫ್.** ೧೮೮೧-೧೯೫೬, ಪಿಎಚ್.ಡಿ ಥೀಸ್ಸಿಸ್, ಬಿಯುಬಿ, ೨೦೦೨, ಪು.೨೬

೧೩೪. ರಾಜಪ್ಪ ಪಿ.ಸಿ., ಅದೇ.... ಪು. ೪೦, ೪೨

೧೩೫. ದೇಸಾಯಿ ಎ.ಆರ್., **ಸ್ಪೆಷಲ್ ಬ್ಯಾಕ್‌ಗ್ರೌಂಡ್ ಆಫ್ ಇಂಡಿಯನ್ ನ್ಯಾಷನಲಿಸಮ್ ಪಾಪುಲರ್** ..., ಬಾಂಬೆ, ೧೯೪೮, ಪು.೭೨೮

೧೩೬. ಗೋವಿಂದಪ್ಪ, ಅದೇ..... ಪು. ೧೪೨, ೧೫೪, ೧೫೬

೧೩೭. ಗೋವಿಂದಪ್ಪ, ಅದೇ..... ಪು. ೧೪೨, ೧೫೪, ೧೫೬

೧೩೮. ನಂಜರಾಜ ಅರಸು ಪಿ.ವಿ. ಮತ್ತು ಚಂದ್ರರಾಜ ಅರಸು ಎಸ್.ಕೆ., **ನಾಲ್ವಡಿ ಕೃಷ್ಣರಾಜ ಒಡೆಯರು ಒಂದು ದರ್ಶನ**, ಅಖಿಲ ಕರ್ನಾಟಕ ಅರಸು ಪರಿಷತ್, ಮೈಸುರು, ೧೯೯೬, ಪು.೮೧

೧೩೯. ಜಾನಕಿ ನಾಯರ್, ಅದೇ.... ಪು.೮೮

೧೪೦. ಜಾನಕಿ ನಾಯರ್, ಅದೇ.... ಪು.೯೧

೧೪೧. ಸದಾಶಿವ ಕೆ., **ಭಾರತದ ಇತಿಹಾಸ**, ಪ್ರಿಯದರ್ಶಿನಿ ಪ್ರಕಾಶನ, ಮೈಸೂರು, ೧೯೯೬, ಪು.೫೫೫

೧೪೨. ಚಂದ್ರಶೇಖರ ಎಸ್., ದಕ್ಷಿಣ ಭಾರತ ವಸಾಹತುಶಾಹಿ ರಾಷ್ಟ್ರೀಯತೆ ಮತ್ತು ಸಂಘರ್ಷ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦, ೧೯೫

೧೪೩. ಸಿದ್ದವ್ವನಹಳ್ಳಿ ಕೃಷ್ಣಮೂರ್ತಿ, ಗಾಂಧಿ ಮತ್ತು ಕರ್ನಾಟಕ, ಗಾಂಧಿ ಶತಮಾನೋತ್ಸವ, ಬೆಂಗಳೂರು, ೧೯೬೪, ಪು.೨೯೨

೧೪೪. ಜಾನಕಿ ನಾಯರ್, ಅದೇ.... ಪು.೧೩೩

೧೪೫. ವಿಜಯ್ ಪೂಣಚ್ಚ ತಂಬಂಡ (ಸಂ.), ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ ಚರಿತ್ರೆ ಸಂಪುಟ ೪, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦, ಪು.೨೦೭

೧೪೬. ಅದೇ... ೮೩೯

೧೪೭. ಚಂದ್ರಶೇಖರ ಎಸ್., ದಕ್ಷಿಣ ಭಾರತ ವಸಾಹತುಶಾಹಿ ರಾಷ್ಟ್ರೀಯತೆ ಮತ್ತು ಸಂಘರ್ಷ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦, ೨೦೭

೧೪೮. ಜಾನಕಿ ನಾಯರ್, ಅದೇ.... ಪು.೧೫೬, ೧೫೭, ೧೬೬

೧೪೯. ಅದೇ.... ಪು.೧೭೮

ಅಧ್ಯಾಯ ನಾಲ್ಕು

ವಸಾಹತೋತ್ತರ ಕಾಲದ ಚಾರಿತ್ರಿಕ ಕೃತಿಗಳ ಅವಲೋಕನ

ಅ. ಏಕೀಕರಣದವರೆಗಿನ ಅವಧಿ

ಆ. ಏಕೀಕರಣೋತ್ತರ ಅವಧಿ - ದಮನಿತರ ಹೋರಾಟಗಳು

ಸ್ವತಂತ್ರ ಪಡೆದ ಮೇಲೆ ದೇಶದ ಪ್ರತಿಯೊಂದು ರಾಜ್ಯ, ಪ್ರತಿಯೊಂದು ಜಿಲ್ಲೆಯಲ್ಲಿಯು ತಮ್ಮದೇ ಆದ ಆಂತರಿಕ ಸಮಸ್ಯಗಳು ಉಂಟಾದವು. ಜಿಲ್ಲಾಮಟ್ಟದ ಸ್ಥಳೀಯ ಸರ್ಕಾರಗಳ ಪುನರ್‌ರಚನೆ ಮತ್ತು ಅದರ ಬೆಳವಣಿಗೆ ಒಂದು ಮುಖವಾದರೆ, ಕರ್ನಾಟಕ ಏಕೀಕರಣಕ್ಕೆ ನಡೆಸಿದ ಪ್ರಯತ್ನವು ಇನ್ನೊಂದು ಮುಖವಾಗಿದೆ. ಈ ಏಕೀಕರಣದ ನಂತರವು ಅನೇಕ ಜನವರ್ಗಗಳಾದ ದಲಿತರು, ಮಹಿಳೆಯರು, ರೈತರು, ಕಾರ್ಮಿಕರು ಮುಂತಾದವುದರಲ್ಲಿ ಸಮಸ್ಯೆಗಳು ಹೆಚ್ಚಾಗಿ, ಅವರಲ್ಲಿಯೇ ಮತ್ತಷ್ಟು ಸಂಘಟನೆಗಳು ಉದಯಗೊಂಡು ಹೋರಾಟಗಳ ಮುಖಗಳನ್ನು ಹೊಂದುವುದರ ಮೂಲಕ ಪರಿಹಾರ ಕಂಡುಕೊಳ್ಳಲಾರಂಭಿಸಿದರು.

ಚರಿತ್ರೆಯ ಈ ಮುಖವನ್ನು ತಿಳಿಯಲು ಅನೇಕ ಕೃತಿಗಳು ಮತ್ತು ಸರ್ಕಾರಿ ದಾಖಲೆಗಳು ಲಭ್ಯವಾಗಿವೆ. ಅಂತಹವುಗಳಲ್ಲಿ ಕೆಲವು ಈ ಕೆಳಕಂಡಂತೆ ಹೆಸರಿಸಲಾಗಿದೆ.

ಪ್ರಾಥಮಿಕವಾಗಿ ಕೆ. ಅಭಿಶಂಕರರವರು ಸಂಪಾದಿಸಿರುವ 'ಕೋಲಾರದ ಜಿಲ್ಲಾ ಗೆಜೆಟಿಯರ್' (೧೯೬೮)ನಲ್ಲಿ ಧಾರ್ಮಿಕ, ಆರ್ಥಿಕ, ಸಾಮಾಜಿಕ, ರಾಜಕೀಯ ವಿಷಯ ಚರಿತ್ರೆಯೊಂದಿಗೆ ತಿಳಿಸಿವೆ. ಇದರಿಂದ ಕೋಲಾರದ ಪ್ರದೇಶದ ಚರಿತ್ರೆಯನ್ನು ತಿಳಿಯಲು ಅನುಕೂಲವಾಗಿದೆ. ಆದರೂ ಇದರಲ್ಲಿ ಯಾವುದೇ ವಿಷಯವನ್ನು ಸಮಗ್ರವಾಗಿ ತಿಳಿಸಿಲ್ಲ ಎಂಬುದು ಗಮನಾರ್ಹವಾದ ಸಂಗತಿಯಾಗಿದೆ. ಇದಾದ ನಂತರ ೧೯೮೬ರಲ್ಲಿ ಪ್ರಕಟಣೆಗೊಂಡಿರುವ 'ಮೈಸೂರು ರಾಜ್ಯದ ಗೆಜೆಟಿಯರ್'ನಲ್ಲಿ ಕೋಲಾರ ಜಿಲ್ಲೆಯ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸಲ್ಪಟ್ಟಿದೆ. ಎಂ.ಎಸ್. ನರಸಿಂಹಮೂರ್ತಿಯವರು ಬರೆದಿರುವ 'ಮಾಲೂರು ತಾಲೂಕ ದರ್ಶನ' (೧೯೮೭), ಬಿ. ಜಯದೇವಪ್ಪನವರು ಬರೆದ 'ಚಿಂತಾಮಣಿ ತಾಲೂಕ ದರ್ಶನ' (೧೯೮೬) ಮುಂತಾದ 'ತಾಲ್ಲೂಕು ದರ್ಶನ' ಕೃತಿಗಳು ತಾಲೂಕಿನ ಚರಿತ್ರೆಯೊಂದಿಗೆ ಆರ್ಥಿಕ, ಸಾಮಾಜಿಕ, ರಾಜಕೀಯ ವಿಷಯವನ್ನು ವಿವರಿಸಲ್ಪಟ್ಟಿದೆ. ೧೯೫೧ರಲ್ಲಿ ಎಂ.ಜಿ. ನಂಜುಂಡಯ್ಯನವರು ಸಂಪಾದಿಸಿರುವ 'ಕೋಲಾರ ಜಿಲ್ಲಾ ಜನಗಣತಿ' ಕೃತಿ ೧೯೬೧ರಲ್ಲಿ ಬಾಲಸುಬ್ರಮಣ್ಯರವರು ಸಂಪಾದಿಸಿರುವ 'ಜನಗಣತಿಯ ಕೃತಿ', ೧೯೮೧ರಲ್ಲಿ ಎಸ್.ಆರ್. ರಾಘವೇಂದ್ರರಾವರವರು ಸಂಪಾದಿಸಿರುವ 'ಜನಗಣತಿಯ ಕೃತಿಗಳು', ಕೋಲಾರ ಜಿಲ್ಲೆಯ ಜನಸಂಖ್ಯೆ, ಭೂವಿವರ, ಹಾಗೂ ಆರ್ಥಿಕ ಅಂಶಗಳನ್ನು ತಿಳಿಯಲು ನೆರವಾಗಿದೆ. ಇದೇ ರೀತಿ ೧೯೯೯ರ ಸಿಂಗ್ರಯ್ಯನವರು 'ಕೋಲಾರ ಜಿಲ್ಲೆಯ ಅಂಕಿ-ಅಂಶಗಳು' (೧೯೯೭-೯೮) ಎಂಬ ಕೃತಿಯಲ್ಲಿ ಕೈಗಾರಿಕೆಗಳು, ಜನಸಂಖ್ಯೆ, ಕಾರ್ಮಿಕರ ಸಂಖ್ಯೆ, ದಲಿತರ ಸಂಖ್ಯೆ ಮುಂತಾಗಿ ಗಣನೆಗೆ ತೆಗೆದುಕೊಂಡಿರುವುದು ತಿಳಿದುಬರುತ್ತದೆ. ೨೦೦೧ರಲ್ಲಿ ಎಸ್. ಜಗನ್ನಾಥ ಪ್ರಕಾಶನ ಅವರು ಬರೆದಿರುವ 'ಕೋಲಾರ ಸಿರಿಸಂಪುಟ' ಎಂಬ ಕೃತಿಯಿಂದ ಕೋಲಾರದ ಸಂಕ್ಷಿಪ್ತ ಇತಿಹಾಸದೊಂದಿಗೆ

ವಸಾಹತುಶಾಹಿ ಉತ್ತರ ಕಾಲದ ಪ್ರಮುಖ ಅಭಿವೃದ್ಧಿ ವಿಷಯಗಳ ಮೇಲೆ ಬೆಳಕು ಚೆಲ್ಲುತ್ತದೆ. ಇವುಗಳಲ್ಲದೆ ಎಚ್.ವಿ. ಸೋಮಶೇಖರರವರು ಸಂಪಾದಿಸಿರುವ 'ಕೋಲಾರ ಜಿಲ್ಲೆಯಲ್ಲಿ ಕಮ್ಯುನಿಸ್ಟರು' ಎಂಬ ಕೃತಿಯಲ್ಲಿ ಕೋಲಾರ ಜಿಲ್ಲೆಯ ರೈತಕಾರ್ಮಿಕರ ಹೋರಾಟಗಾರರು ಮತ್ತು ಅವರ ಹೋರಾಟಗಳ ಬಗ್ಗೆ ತಿಳಿಸಲ್ಪಟ್ಟಿದೆ. ೧೯೯೯ರಲ್ಲಿ ದೇವರಾಜಯ್ಯನವರ ಸಂಪಾದಿತ ಸಿರಿನಂದಿ ಎಂಬ ಕೃತಿ ಕೋಲಾರದ ಸಾಹಿತ್ಯ ಬೆಳವಣಿಗೆ, ಸಂಸ್ಕೃತಿ, ಸಮಾಜವನ್ನು ಚಿತ್ರಿಸುವ ಲೇಖನಗಳು. ಶೈಕ್ಷಣಿಕ ಬೆಳವಣಿಗೆ ಮುಂತಾದ ವಿಷಯಗಳನ್ನು ತಿಳಿಸಲ್ಪಟ್ಟಿದೆ. ಕೋಲಾರ ಜಿಲ್ಲಾ ಸಾಹಿತ್ಯ ಪರಿಷತ್‌ನಿಂದ ಪ್ರಕಟಣೆಗೊಂಡಿರುವ ೩, ೭, ೮ನೇ ಸಾಹಿತ್ಯ ಪರಿಷತ್‌ನ ವಾರ್ಷಿಕ ಸಮ್ಮೇಳನಗಳ ನೆನಪಿನ ಕೃತಿಗಳಿಂದ ಕೋಲಾರ ಜಿಲ್ಲೆಯಲ್ಲಿ ವಿವಿಧ ವಿಷಯಗಳ ಮೇಲೆ ಬೆಳಕು ಚೆಲ್ಲುತ್ತವೆ. ಹೀಗೆ ಅನೇಕ ಕೃತಿಗಳು ಏಕದೃಷ್ಟಿಕೋನ ಹೊಂದಿರದೆ, ವಿವಿಧ ದೃಷ್ಟಿಕೋನಗಳಲ್ಲಿ ಪ್ರಕಟಗೊಂಡಿವೆ. ಇದರಿಂದ ಕೋಲಾರ ಚರಿತ್ರೆಯನ್ನು ವಿವಿಧ ಮುಖಗಳಲ್ಲಿ ತಿಳಿಯಲು ಸಾಧ್ಯವಾಗಿದೆ. ಅಲ್ಲದೆ ಚರಿತ್ರೆಯ ಸೈದ್ಧಾಂತಿಕ ನಿಲುವನ್ನು ಕಂಡುಕೊಳ್ಳಲು ಸಾಧ್ಯವಾಗಿದೆ ಮತ್ತು ಇವುಗಳ ಅವಲೋಕನದಿಂದ ಪ್ರಸ್ತುತ ಅಧ್ಯಯನವನ್ನು ಎರಡು ಭಾಗಗಳಾಗಿ ಮಾಡಿದೆ. ಮೊದಲ ಭಾಗದಲ್ಲಿ ಸ್ವಾತಂತ್ರ್ಯ ಹೋರಾಟದ ನಂತರ ಕಂಡುಬಂದ ಆಡಳಿತ ಬೆಳವಣಿಗೆ, ಏಕೀಕರಣದ ಪ್ರಯತ್ನಗಳು ಅಭ್ಯಸಿಸಲಾಗಿದೆ.

ಎರಡನೇ ಭಾಗದಲ್ಲಿ ಕೋಲಾರ ಪ್ರದೇಶದಲ್ಲಿನ ದಲಿತರು ಮಹಿಳೆಯರು, ರೈತರು ಮತ್ತು ಕಾರ್ಮಿಕರ ಪ್ರಶ್ನಾವಳಿ ಹಿನ್ನೆಲೆಯಲ್ಲಿ ಅಧ್ಯಯನ ಮಾಡಿ ಸೈದ್ಧಾಂತಿಕ ನಿಲುವಿನಲ್ಲಿಯೇ ವಿವರಿಸಲು ಕಿರುಪ್ರಯತ್ನವನ್ನು ಮಾಡಲಾಗಿದೆ.

ಅ

ಏಕೀಕರಣದವರೆಗಿನ ಅವಧಿ

ಸ್ವಾತಂತ್ರ್ಯೋತ್ತರ ದಿನಗಳಲ್ಲಿ ಬಹಳ ದೀರ್ಘವಾಗಿ ಚರ್ಚೆಗಳಾದುದು ಭಾಷಾವಾರು ಪ್ರಾಂತ್ಯಗಳು ರಚನೆಯಾಗಬೇಕೆನ್ನುವ ಬೇಡಿಕೆ. ಈ ಕುರಿತು ನಿರ್ದಿಷ್ಟ ಅವಧಿಯಲ್ಲಿ ಅನೇಕ ರಾಜಕಾರಣಿಗಳು, ರಾಜಕೀಯ ಪಕ್ಷಗಳು ಏಕೀಕರಣದ ಪರವಿರೋಧ ಚರ್ಚೆಗಳಲ್ಲಿ ಮುಳುಗಿದ್ದವು. ಈ ಅವಧಿ ಸ್ಥಿತ್ಯಂತರಗಳಿಗೆ ಸಂಬಂಧಿಸಿದಂತೆ ಸಂಕ್ರಮಣ ಕಾಲವಾಗಿದೆ. ಈ ಕಾಲದ ಕೆಲವು ಮುಖ್ಯ ಬೆಳವಣಿಗೆಗಳನ್ನು ಈ ಭಾಗದಲ್ಲಿ ಚರ್ಚಿಸಲು ಪ್ರಯತ್ನ ಮಾಡಲಾಗಿದೆ.

೪.೧. ಆಡಳಿತ ಬೆಳವಣಿಗೆ

೧೯೪೭ರಲ್ಲಿ ಸ್ವತಂತ್ರ್ಯ ಬಂದಾಗ ಮೈಸೂರು ರಾಜ್ಯಕ್ಕೆ ಕೋಲಾರದ ಕೆ.ಸಿ. ರೆಡ್ಡಿಯವರನ್ನು ಪ್ರಧಾನಮಂತ್ರಿಯಾಗಿ ನೇಮಿಸಲಾಯಿತು. ೧೯೪೯ರಲ್ಲಿ ದಿವಾನ್ ಪದವಿಯನ್ನು ರದ್ದುಗೊಳಿಸಲಾಯಿತು.

ಮೈಸೂರು ಸಂಸ್ಥಾನವು ಭಾರತದ ಸಂವಿಧಾನವನ್ನು ಒಪ್ಪಿಕೊಂಡಿತು ಮತ್ತು ರಾಜ ಪ್ರಮುಖರು ಮೈಸೂರಿನಲ್ಲಿ ಜನಪ್ರಿಯ ಸರ್ಕಾರ ಸ್ಥಾಪಿತವಾಯಿತು.[೧] ಇದಾದ ನಂತರ ಮೈಸೂರು ರಾಜ್ಯದ ಸ್ಥಳೀಯ ಸರ್ಕಾರಗಳು ಸಂವಿಧಾನದ ಕಾನೂನುಗಳಿಗೆ ಅನುಗುಣವಾಗಿ ಪುನರ್‌ರಚನೆ ಮಾಡಲು ಪ್ರಯತ್ನಿಸಿದರು. ಪ್ರತಿ ಜಿಲ್ಲಾ ಆಡಳಿತದಲ್ಲೂ ಸುಧಾರಣಾ ಕ್ರಮ ಕೈಗೊಂಡರು. ಇದರಿಂದಾಗಿ ಮಾಂಡಳೀಕ, ಮಹಾಮಾಂಡಳೀಕ, ಸುಭೇದಾರರು, ಫೌಜುದಾರ ಪದ್ಧತಿಗಳು ಬದಲಾಗಿ ಜಿಲ್ಲೆಗಳು, ತಾಲೂಕುಗಳು, ಗ್ರಾಮಪಂಚಾಯಿತಿಗಳು ಅಸ್ತಿತ್ವಕ್ಕೆ ಬಂದು ಅವುಗಳಿಗೆ ಸದಸ್ಯರು, ಅಧ್ಯಕ್ಷರುಗಳ ಆಡಳಿತ ಪದ್ಧತಿಗಳನ್ನು ಅನುಸರಿಸಿದರು ಎಂದು ಗೆಜೆಟಿಯರನಲ್ಲಿ ಮತ್ತು ಎನ್. ಜಗನ್ನಾಥ ಪ್ರಕಾಶರವರ ಕೋಲಾರ ಸಿರಿಸಂಪುಟ, ಎಂಬ ಕೃತಿಯಲ್ಲಿ ಹೇಳಿದ್ದಾರೆ.[೨]

ಈ ಪಂಚಾಯತ ಆಡಳಿತ ಸುಧಾರಣೆಗಳಲ್ಲಿ ಮುಖ್ಯವಾಗಿ ೧೯೫೯ರಲ್ಲಿ ಮೈಸೂರು ಗ್ರಾಮಪಂಚಾಯ್ತಿಗಳು ಮತ್ತು ಸ್ಥಳೀಯ ಸಂಸ್ಥೆಗಳ ಕಾಯ್ದೆ ಜಾರಿಗೆ ಬಂದಿತು. ಮೂರು ಹಂತದ ವ್ಯವಸ್ಥೆಯಾಗಿ ಗ್ರಾಮಪಂಚಾಯ್ತಿ, ತಾಲ್ಲೂಕು ಅಭಿವೃದ್ಧಿ ಮಂಡಳಿ ಹಾಗೂ ಜಿಲ್ಲಾ ಅಭಿವೃದ್ಧಿ ಸಮಿತಿಗಳು ಅಸ್ತಿತ್ವಕ್ಕೆ ಬಂದವು. ಪಂಚಾಯತ್‌ರಾಜ್ಯ ವ್ಯವಸ್ಥೆಯನ್ನು ಸಮರ್ಪಕಗೊಳಿಸಲು ೧೯೮೩ರಲ್ಲಿ ಜಿಲ್ಲಾ ಪರಿಷತ್, ತಾಲ್ಲೂಕು ಪಂಚಾಯ್ತಿಗಳು, ಮಂಡಲ ಪಂಚಾಯತ್‌ಗಳು ಮತ್ತು ನ್ಯಾಯ ಪಂಚಾಯತ್‌ಗಳ ವಿಧೇಯಕವನ್ನು ಕರ್ನಾಟಕದಲ್ಲಿ ಅಂಗೀಕರಿಸಲಾಯಿತು. ಇದರಿಂದ ೧೯೮೭ರಿಂದ ಜಿಲ್ಲಾ ಪರಿಷತ್ ವ್ಯವಸ್ಥೆ ಜಾರಿಗೆ ಬಂತು. ಕರ್ನಾಟಕ ಸರ್ಕಾರ ೧೯೯೩ರ ಏಪ್ರಿಲ್ ೨೦ರಂದು ಕರ್ನಾಟಕ ಪಂಚಾಯತ್‌ರಾಜ್ ಕಾನೂನು ಎಂಬ ಹೊಸ ಶಾಸನ ಅಂಗೀಕರಿಸಿತು. ಆಡಳಿತದ ವಿಕೇಂದ್ರೀಕರಣದ ಮಹತ್ವದ ಆಜ್ಞೆಯಿಂದಾಗಿ ಜಿಲ್ಲಾ ಪಂಚಾಯತ್, ತಾಲೂಕು ಪಂಚಾಯತ್ ಹಾಗೂ ಗ್ರಾಮ ಪಂಚಾಯ್ತಿ ಎಂಬ ಮೂರು ಹಂತಗಳ ಆಡಳಿತದ ವ್ಯವಸ್ಥೆಗೆ ೨೦೦೦ರಲ್ಲಿ ಕೆಲವು ಬದಲಾವಣೆಗಳನ್ನು ತರಲಾಯಿತು. ಅದರಂತೆ, ೨೦೦೦ರಲ್ಲಿ ಚುನಾಯಿತರಾದ ಪ್ರತಿನಿಧಿಗಳು ಆಡಳಿತದ ಕಾರ್ಯಗಳನ್ನು ನಿರ್ವಹಿಸಿದರು.

೧೯೮೭ರಲ್ಲಿ ಪ್ರಥಮ ಬಾರಿಗೆ ಜಿಲ್ಲಾ ಪಂಚಾಯತ್ ರಚನೆಗೊಂಡು, ಚುನಾವಣೆಗಳು ನಡೆದು ಜಿಲ್ಲಾ ಪರಿಷತ್/ಪಂಚಾಯಿತಿಯ ಅಧ್ಯಕ್ಷರು ಬಿ.ಎಂ. ಕೃಷ್ಣಪ್ಪನವರು ಆಯ್ಕೆಗೊಂಡರು. ನಂತರ ಜಿ. ಮಂಗಮ್ಮ ಮುನಿಸ್ವಾಮಿ, ಮುನಿನಾರಾಯಣಪ್ಪ, ದುರ್ಗಮ್ಮ ಶ್ರೀನಿವಾಸಗೌಡ, ಟಿ. ತಿಮ್ಮೇಗೌಡನವರು ಕ್ರಿ.ಶ. ೨೦೦೦ದವರೆಗೆ ಆಡಳಿತದಲ್ಲಿ ಕ್ರಮವಾಗಿ ನಿಯುಕ್ತರಾದರು. ಅದರಂತೆ ಉಪಾಧ್ಯಕ್ಷರಾಗಿ ಮುನಿಯಪ್ಪ, ಮಂಡಿಕಲ್ ವೆಂಕಟೇಶ, ಭಾಗ್ಯಮ್ಮ ಪಿ. ರೆಡ್ಡಿ, ನಾರಾಯಣಸ್ವಾಮಿ, ಸುಶೀಲಮ್ಮ, ಗೋವಿಂದಪ್ಪನವರು ಕ್ರಿ.ಶ. ೨೦೦೦ದವರೆಗೆ ಕ್ರಮವಾಗಿ ನಿಯುಕ್ತರಾಗಿದ್ದಾರೆ.

ಇದೇ ರೀತಿಯಾಗಿ ೧೯೫೨ರ ನಂತರ ಚರಿತ್ರೆಯು ಬಂಡಾಯ ಪ್ರವೃತ್ತಿಯಾಗಿ ಸಾಗಿರುವುದು ಕಂಡುಬರುತ್ತದೆ. ಸಾರ್ವತ್ರಿಕ ಚುನಾವಣೆಗಳು ನಡೆದು, ಅದರಲ್ಲಿ ಸ್ವತಂತ್ರ್ಯ ಹೋರಾಟದಲ್ಲಿ

ಭಾಗವಹಿಸಿದವರು ಜನರ ಮನ್ನಣೆಗೆ ಪಾತ್ರರಾಗಿದ್ದರು, ಕಾಂಗ್ರೆಸ್ ಪಕ್ಷ ಜಿಲ್ಲೆಯಲ್ಲಿ ಹೆಚ್ಚಿನ ಬೆಂಬಲ ದೊರೆಯಿತು. ಆದರೆ ಕಾಲಕ್ರಮೇಣ ಈ ಪ್ರವೃತ್ತಿ ಬದಲಾಯಿತು. ೧೯೫೭ರಲ್ಲಿ ನಡೆದ ಚುನಾವಣೆಯಲ್ಲಿ ಸಂಯುಕ್ತರಂಗವೆಂಬ ವೇದಿಕೆಯಡಿಯಲ್ಲಿ ಪ್ರಬಲವಾಗಿ ಸ್ಪರ್ಧೆಗಿಳಿದವು. ಇದರಿಂದ ಕಾಂಗ್ರೆಸ್ ಜಿಲ್ಲೆಯ ೭ ಕ್ಷೇತ್ರಗಳಲ್ಲಿ ಸೋಲಬೇಕಾಯಿತು. ಆಗಿನಿಂದ ಜಿಲ್ಲೆಯ ರಾಜಕೀಯ ರಂಗದಲ್ಲಿ ಹಾವು ಏಣಿ ಆಟ ನಡೆಯುತ್ತಲೆ ಮುಂದುವರೆಯಿತು. ಅಂದರೆ, ೧೯೬೨ರ ಚುನಾವಣೆಯಲ್ಲಿ ಕಾಂಗ್ರೆಸ್ ಕೈ ಮೇಲಾದರೆ, ೧೯೬೭ರ ಚುನಾವಣೆಗಳಲ್ಲಿ ಸಂಯುಕ್ತ ರಂಗದ ಉಮೇದುವಾರರು ಹೆಚ್ಚಿನ ಕ್ಷೇತ್ರಗಳಲ್ಲಿ ವಿಜಯಿಗಳಾದರು. ಹೀಗೆ ಸ್ವತಂತ್ರ್ಯದ ನಂತರದ ರಾಜಕೀಯ ಬೆಳವಣಿಗೆಯನ್ನು ಕೋಲಾರ ಜಿಲ್ಲೆಯಲ್ಲಿ ಕಂಡುಬರುತ್ತದೆ ಎಂಬುದಾಗಿ ಕೆ.ಅಭಿಶಂಕರ, ಎನ್. ಜಗನ್ನಾಥ ಪ್ರಕಾಶ್‌ರವರು ಹೇಳಿದ್ದಾರೆ.[೬]

೪.೨. ಕರ್ನಾಟಕ ಏಕೀಕರಣ ಘಟ್ಟ

ಕರ್ನಾಟಕದ ಏಕೀಕರಣ ಘಟ್ಟದಲ್ಲಿ ಕೋಲಾರ ಪ್ರದೇಶದಲ್ಲಿನ ಬದಲಾವಣೆ ಮತ್ತು ಅನಂತರ ಚರಿತ್ರೆಯ ಅಧ್ಯಯನಕ್ಕೆ ಸಂಬಂಧಿಸಿದಂತೆ ಎಂ.ವಿ. ಕೃಷ್ಣರಾವ ಅವರ 'ಕರ್ನಾಟಕ ಇತಿಹಾಸ ದರ್ಶನ', ಸೂರ್ಯನಾಥ ಕಾಮತರವರ 'ಕರ್ನಾಟಕ ಗೆಜೆಟಿಯರ ಭಾಗ-೧', ಎಚ್.ಎಸ್. ಗೋಪಾಲರವರ 'ಕರ್ನಾಟಕ ಏಕೀಕರಣ ಇತಿಹಾಸ', ತಂಬಂಡ ವಿಜಯ್ ಪೂಣಚ್ಚರವರ 'ಚರಿತ್ರೆ ವಿಶ್ವಕೋಶ ಸಂಪುಟ-೪' ಮುಂತಾದ ಕೃತಿಗಳು ನೆರವಾಗಿವೆ. ಈ ಕೃತಿಗಳ ಮೂಲಕ ಅಂದಿನ ಜಿಲ್ಲೆಯ ಸನ್ನಿವೇಶ. ಹಾಗೂ ಕೋಲಾರ ಪ್ರದೇಶವು ಕರ್ನಾಟಕದಲ್ಲಿ ಉಳಿದುಕೊಳ್ಳಲು ನಡೆಸಿದ ಪ್ರಯತ್ನಗಳು ಮತ್ತು ಅದಕ್ಕೆ ಇರುವ ಕಾರಣಗಳನ್ನು ವಿಶ್ಲೇಷಿಸಲಾಗಿದೆ.

ಸ್ವತಂತ್ರ್ಯದ ಸನ್ನಿವೇಶದಲ್ಲಿ ಮೈಸೂರಿನ ಪ್ರದೇಶವನ್ನು ಉಳಿದು ಇಂದಿನ ಕರ್ನಾಟಕದ ಕೆಲವಾರು ಉತ್ತರ ಭಾಗಗಳೂ ನಿಜಾಮನ ಕೈಸೇರಿದ್ದು ಇನ್ನೂ ಕೆಲವು ಭಾಗಗಳೂ ಬ್ರಿಟಿಷರ ಹಸ್ತಗತವಾಗಿದ್ದವು. ಸಮಸ್ತ ಕನ್ನಡ ಜನತೆಯನ್ನು ಒಂದೇ ರಾಜ್ಯಭಾರದಲ್ಲಿರಿಸುವ ಯೋಚನೆ ಬ್ರಿಟಿಷರಿಗೆ ಎಂದೂ ಇರಲಿಲ್ಲ. ಕನ್ನಡಿಗರು ಹಲವು ಪ್ರದೇಶಗಳಲ್ಲಿ ಹಂಚಿಹೋಗಿದ್ದರು. ದಕ್ಷಿಣ ಮರಾಠಿ ಸಂಸ್ಥಾನಗಳು ಎಂದು ನಾಮಕರಣವಾದ ಕೆಲವು ಅಚ್ಚಕನ್ನಡ ಪ್ರಾಂತಗಳೂ ಆ ಭಾಗಗಳಲ್ಲಿ ಸೇರಿದ್ದವು. ದೊಡ್ಡ ಪ್ರಾಂತ್ಯಗಳಲ್ಲಿ ಸೇರಿಹೋದ ಕನ್ನಡಿಗರು ಅಲ್ಲಿ ಅಲ್ಪಸಂಖ್ಯಾತರಾದರು ಎಂದು ಎಂ.ವಿ. ಕೃಷ್ಣರಾವ ಮತ್ತು ಎಂ. ಕೇಶವಭಟ್ಟರು ಹೇಳಿದ್ದಾರೆ.[೭] ಇದೇ ರೀತಿ ಕನ್ನಡ ಮಾತನಾಡುವವರಿಗೆ ಏಕೀಕೃತ ಪ್ರದೇಶ ಅವಶ್ಯಕ ಎಂದು ತಿಳಿದು ನೆಹರು ಸಮಿತಿ ಮತ್ತು ನಂತರ ಕರ್ನಾಟಕ ಸಭೆ, ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಯತ್ನಗಳು ನಡೆದವು. ಕರ್ನಾಟಕ ರಾಜಕೀಯ ಸಮ್ಮೇಳನಗಳಲ್ಲಿ ಕನ್ನಡಿಗರ ಏಕೀಕೃತ ಪ್ರದೇಶದ ಬೇಡಿಕೆಗೆ ಬೆಂಬಲಕೊಟ್ಟವು. ಈ ಹಿನ್ನೆಲೆಯಲ್ಲಿ ರಾಷ್ಟ್ರೀಯ ಕಾಂಗ್ರೆಸ್ ರಾಷ್ಟ್ರೀಯ ಹೋರಾಟಕ್ಕೆ ಸಾಂಸ್ಕೃತಿಕ ಹಾಗೂ ಪ್ರಾದೇಶಿಕ ಹಿನ್ನೆಲೆಯ ಅವಶ್ಯಕತೆಯನ್ನು ಗುರುತಿಸಿತು ಎಂದು ಎಚ್.ವಿ. ಶ್ರೀನಿವಾಸಮೂರ್ತಿ ಹಾಗೂ ಆರ್. ರಾಮಕೃಷ್ಣರವರು ಹೇಳಿದ್ದಾರೆ.[೮] ಇದರಂತೆ ಕರ್ನಾಟಕದ ಏಕೀಕರಣ

ತರಲು ಅನೇಕ ಲೇಖಕರು, ಸಾಹಿತ್ಯಗಾರರು, ಪತ್ರಿಕೆಗಾರರು ಹೆಚ್ಚಿನ ಶ್ರಮವಹಿಸಬೇಕಾಯಿತು ಎಂದು ಸೂರ್ಯನಾಥ ಯು. ಕಾಮತರು ಹೇಳುತ್ತಾರೆ.[೬]

ಈ ವಿಷಯವಾಗಿ ಕೋಲಾರ ಪ್ರದೇಶವು ತನ್ನದೆಯಾದ ಹಿನ್ನೆಲೆಯ ಕಾರಣಗಳನ್ನು ಹೊಂದಿದೆ. ಅಂದರೆ ಕೋಲಾರ ಪ್ರದೇಶವು ಪ್ರಾಚೀನ ಕಾಲದ ರಾಜಮನೆತನಗಳಿಂದಲೂ ಕರ್ನಾಟಕ ಪ್ರದೇಶದೊಂದಿಗೆ ಹಂಚಿಕೊಂಡು ಬಂದಿದೆ. ಇದರಿಂದ ಏಕೀಕರಣದ ವೇಳೆಯಲ್ಲಿ ಹೆಚ್ಚಿನ ಸಮಸ್ಯೆಯೇನು ಉದ್ಭವವಾಗಲಿಲ್ಲ. ಇದಕ್ಕೆ ಇನ್ನೂ ಕೆಲವು ಕಾರಣಗಳಿವೆ. ಅವುಗಳೆಂದರೆ, ಹೈದರಾಲಿ ಜನ್ಮಭೂಮಿಯಾಗಿ ಮತ್ತು ಅವನ ರಾಜ್ಯದಲ್ಲಿ ಕೋಲಾರ ಪ್ರದೇಶ ಸೇರಿಕೊಂಡಿತ್ತು. ನಂತರ ಟಿಪ್ಪುವಿನಿಂದ ಬ್ರಿಟಿಷರು ಪಡೆದ ಕೋಲಾರ ಪ್ರದೇಶವು ಕ್ರಮೇಣ ಮೈಸೂರು ಸಂಸ್ಥಾನದಲ್ಲಿ ಒಂದು ಭಾಗವಾಯಿತು. 'ಸ್ವತಂತ್ರ್ಯ ಹೋರಾಟ ಘಟ್ಟ'ವನ್ನು ಇದುವರೆಗೂ ವಿಶ್ಲೇಷಿಸಿರುವುದು ಗಮನಿಸಿದರೆ, ಕೋಲಾರ ಪ್ರದೇಶದ ಪ್ರತಿಯೊಂದು ಹೋರಾಟವು ಮೈಸೂರು ಸಂಸ್ಥಾನದ ಸ್ವತಂತ್ರ್ಯ ಹೋರಾಟ ವಿಭಾಗದ ವ್ಯಾಪ್ತಿಯಲ್ಲಿಯೇ ಕಂಡುಬರುತ್ತದೆ. ಕೋಲಾರದ ಅಭಿವೃದ್ಧಿ ಕ್ಷೇತ್ರ ದೃಷ್ಟಿಯಲ್ಲಿ ನೋಡಿದಾಗ ಕೋಲಾರದವರೇ ಆದ ಮಹಾ ಆರ್ಥಿಕ ತಂತ್ರಜ್ಞಾನಿಯಾದ ಸರ್.ಎಂ.ವಿಶ್ವೇಶ್ವರಯ್ಯನವರು ಮೈಸೂರು ಸಂಸ್ಥಾನದ ದಿವಾನರಾಗಿ ಸೇವೆ ಸಲ್ಲಿಸಿರುವುದು[೭] ಮತ್ತು ಇದೇ ಜಿಲ್ಲೆಯವರಿಂದ ಕೆ.ಸಿ. ರೆಡ್ಡಿಯವರು ಮೈಸೂರು ರಾಜ್ಯಕ್ಕೆ ೧೯೭೪ರಲ್ಲಿ ಪ್ರಥಮ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿರುವುದು ಕಂಡುಬರುತ್ತದೆ. ಕರ್ನಾಟಕದ ಕನ್ನಡ ಭಾಷೆಯನ್ನು ಮಾತನಾಡುವ ಜಿಲ್ಲಾ ಪ್ರದೇಶಗಳು ಕನ್ನಡನಾಡಿನ ಪ್ರಾಂತ್ಯಕ್ಕೆ ಒಳಗಾಗಿದ್ದವು. ಇದರಲ್ಲಿ ಕೋಲಾರವು ಒಂದಾಗಿತ್ತು ಎಂದು ಸಿ.ಆರ್. ಗೋವಿಂದರಾಜುರವರ 'ಕರ್ನಾಟಕ ಏಕೀಕರಣ ಚಳವಳಿ ಮತ್ತು ಕನ್ನಡ ಸಾಹಿತ್ಯ' ಎಂಬ ಕೃತಿಯಿಂದ ತಿಳಿದುಬರುತ್ತದೆ.[೮] ಎನ್.ಚಿನ್ನಸ್ವಾಮಿ ಸೋಸಲೆರವರು ಕೋಲಾರ ಜಿಲ್ಲೆಯ ಭೌಗೋಳಿಕ ಗಡಿರೇಖೆ ಲಕ್ಷಣಗಳನ್ನು ಗ್ರಹಿಸಿ ಇದರ ಪ್ರತಿಯೊಂದು ತಾಲೂಕು ಸಹ ನೆರೆರಾಜ್ಯಗಳ ಗಡಿರೇಖೆಯೊಂದಿಗೆ ಹೊಂದಿಕೊಂಡಿವೆ ಎಂದು ತಿಳಿಸಿದ್ದಾರೆ. ಅಂದರೆ, ಬಾಗೇಪಲ್ಲಿ, ಚಿಂತಾಮಣಿ, ಶ್ರೀನಿವಾಸಪುರು, ಕೋಲಾರ, ಗೌರಿಬಿದನೂರು, ಮುಳಬಾಗಿಲು ತಾಲೂಕ ಪ್ರದೇಶಗಳು ಆಂಧ್ರ ಪ್ರದೇಶ ಮತ್ತು ತಮಿಳುನಾಡಿನ ಗಡಿರೇಖೆಗಳನ್ನು ಹೊಂದಿವೆ. ಒಂದು ರೀತಿ ಹೇಳುವುದಾದರೆ ಆಂಧ್ರಪ್ರದೇಶಕ್ಕೆ ಸೆಗಡಿ ಬಂದರೆ ಕೋಲಾರ ಪ್ರದೇಶಕ್ಕೆ ಸೀನು ಬರುತ್ತದೆ. ಕೆ.ಜಿ.ಎಫ್. ಅಂತು ಚಿಕ್ಕ ತಮಿಳುನಾಡಾಗಿ ಬಿಟ್ಟಿದೆ ಎಂದು ಅದರ ಸಮಸ್ಯೆಗಳನ್ನು ಕುರಿತಾಗಿ ಹೇಳಿದ್ದಾರೆ.[೯] ಇದು ಪ್ರಸ್ತುತ ಸಂದರ್ಭದಲ್ಲಿಯು ಸಹ ಇಂತಹ ಸ್ಥಿತಿ ಕಂಡುಬರುತ್ತದೆ.

ಇಷ್ಟಾದರೂ ಕರ್ನಾಟಕ ಏಕೀಕರಣ ಸಂದರ್ಭದಲ್ಲಿ ಕೋಲಾರವು ಕರ್ನಾಟಕದಲ್ಲಿ ಸೇರ್ಪಡೆಯಾಗಲೂ ೪ ಪ್ರಮುಖ ಅಂಶಗಳನ್ನು ಗಣನೆಗೆ ತೆಗೆದುಕೊಂಡಿದ್ದಾರೆ. ಅವುಗಳೆಂದರೆ

೧. ಕೋಲಾರ ಮತ್ತು ಮೈಸೂರು ರಾಜ್ಯದ ನಡುವೆ ನಿಕಟಸಂಬಂಧ ಇರುವುದು.

೨. ಮೈಸೂರು ಸರ್ಕಾರದಿಂದ ಕೋಲಾರದ ಚಿನ್ನದಗಣಿ ಸ್ಥಾಪನೆ ಮತ್ತು ಅಭಿವೃದ್ಧಿ

ಪಡಿಸಿರುವುದು. ಇದು ಜಾನಕಿನಾಯರ ಅವರ 'ಮೈನರ್ಸ್ ಅಂಡ್ ಮಿಲ್‌ಹ್ಯಾಂಡ್' ಹಾಗೂ ಎಂ. ಗೋವಿಂದಪ್ಪನವರ 'ಹಿಸ್ಟರಿ ಆಫ್ ಮೈನಿಂಗ್ ಇನ್ ಪ್ರಿನ್ಸ್‌ಲೀ ಆಫ್ ಮೈಸೂರು ವಿತ್ ಸ್ಪೆಷಲ್ ರೆಫರೆನ್ಸ್ ಟು ಕೆ.ಜಿ.ಎಫ್.' (೧೮೮೧-೧೯೫೬) ಎಂಬ ಪ್ರಬಂಧದಿಂದ ಸ್ಪಷ್ಟವಾಗುತ್ತದೆ.

೩. ಚಿನ್ನದ ಗಣಿಗೆ ಮೈಸೂರು ಸರ್ಕಾರ ಕಡಿಮೆ ದರದಲ್ಲಿ ವಿದ್ಯುತ್‌ಶಕ್ತಿ ಸಂಪರ್ಕ ಕಲ್ಪಿಸಿರುವುದು.

೪. ಕೋಲಾರವು ಕರ್ನಾಟಕದ ರಾಜಧಾನಿಯಾದ ಬೆಂಗಳೂರು ನಗರಕ್ಕೆ ಬಹಳ ಹತ್ತಿರವಾಗಿರುವುದು ಎಂಬುದಾಗಿ ಚಿನ್ನಸ್ವಾಮಿ ಸೊಸಲೆಯವರು ಹೇಳಿದ್ದಾರೆ.

ಈ ನಡುವೆ ಜೆ.ವಿ.ಪಿ. ಸಮಿತಿ (೧೯೪೯), ರಾಜ್ಯ ಪುನರ್‌ವಿಂಗಡಣ ಆಯೋಗ, (ಫಜಲ್‌ಅಲಿ ಆಯೋಗ)ಗಳ ಪ್ರಯತ್ನಗಳು ನಡೆಯುತ್ತಲೇ ಇದ್ದವು. ಇವರ ಪ್ರಯತ್ನದಿಂದಾಗಿ ಮೈಸೂರು ರಾಜ್ಯಕ್ಕೆ ೧೯ ಜಿಲ್ಲೆಗಳು ಸೇರಿಸಲಾಯಿತು. ಅದರಲ್ಲಿ ಕೋಲಾರವು ಸೇರಿಕೊಂಡು ಮೈಸೂರು ರಾಜ್ಯ ಸರ್ಕಾರದ ನೀತಿ ನಿಯಮಗಳನ್ನು ಪಾಲಿಸಿತು. ಆದರೆ ಕೋಲಾರದ ಗಡಿ ಭಾಗ ಪ್ರದೇಶಗಳಾದ ಆದೋನಿ, ಆಲೂರು, ಬಾಗೇಪಲ್ಲಿಯ ಗುಮ್ಮನಪಾಳೆಯ ಕೆಲವು ಹಳ್ಳಿಗಳು, ರಾಜಪೇಟೆ, ಶ್ರೀನಿವಾಸಪುರ, ರಾಯಲ್ಪಾಡು ಆಂಧ್ರಪ್ರದೇಶಕ್ಕೆ ಸೇರಿಕೊಂಡವು ಎಂದು ಸೂರ್ಯನಾಥ ಕಾಮತರವರ ಸ್ವಾತಂತ್ರ ಸಂಗ್ರಾಮ ಸ್ಮೃತಿಗಳು ಸಂಪುಟ ೨ ರಿಂದ ತಿಳಿದುಬರುತ್ತದೆ.[೧೦] ಮತ್ತು ತಮಿಳುನಾಡಿಗೆ ಮಾಲೂರು ಮತ್ತು ಬಂಗಾರಪೇಟೆಯ ಕೆಲವು ಹಳ್ಳಿ ಪ್ರದೇಶಗಳು ಸೇರಿಕೊಂಡವು. ಈ ಹಿನ್ನೆಲೆಯಲ್ಲಿ ಕಮ್ಯುನಿಸ್ಟರು ರೈತ ಸಂಘಗಳು ಅವುಗಳನ್ನು ಉಳಿಸಿಕೊಳ್ಳಲು ಯತ್ನಿಸಿದರೂ ಸಾಧ್ಯವಾಗಲಿಲ್ಲ. ಆದರೂ ಸಹ ತಮಿಳುನಾಡಿನ ಗಡಿಸಮಸ್ಯೆ ಹೆಚ್ಚಾಗಿ ಕಂಡುಬರಲಿಲ್ಲ ಎಂದು ಕೃತಿಗಳ ಅವಲೋಕನದಿಂದ ತಿಳಿದುಬರುತ್ತದೆ.

ಆ

ಏಕೀಕರಣೋತ್ತರ ಅವಧಿ - ದಮನಿತರ ಹೋರಾಟ

ಕೋಲಾರ ಪ್ರದೇಶದ ಚರಿತ್ರೆ ಲೇಖನಶಾಸ್ತ್ರವು ಏಕೀಕರಣದ ನಂತರ ವಿವಿಧ ಮುಖಗಳನ್ನು ಹೊಂದಿದೆ. ಪ್ರಜಾಪ್ರಭುತ್ವ ಸರ್ಕಾರ ಆಡಳಿತ ಮುಂದುವರೆದು ಯಾವುದೇ ರಾಜವಂಶಗಳು, ಚರಿತ್ರೆಯು ಈ ಅವಧಿಯಲ್ಲಿ ಕಂಡುಬರುವುದಿಲ್ಲ. ಇದರ ಬದಲಾಗಿ ಜನರ ಚರಿತ್ರೆ ಕಂಡುಬರುತ್ತದೆ. ಸಾಹಿತ್ಯವು ಅಭಿವೃದ್ಧಿಯಾಗಿ ಕೊಲಾರ ಪ್ರದೇಶದ ಪರಿಸರ ಚರಿತ್ರೆ, ಸಮಾಜದ ಚರಿತ್ರೆ, ಶೈಕ್ಷಣಿಕ ಚರಿತ್ರೆ, ಆರ್ಥಿಕ ಚರಿತ್ರೆಗಳು ಕಂಡುಬರುತ್ತವೆ. ಅಲ್ಲದೆ ಜನಸಮುದಾಯಗಳಲ್ಲಿ ಸಂಘಟನೆಗಳು ಹುಟ್ಟಿಕೊಂಡು ಅವುಗಳದೇ ಆದ ವ್ಯಾಪ್ತಿಯಲ್ಲಿ ಕೃತಿಗಳು ರಚನೆಗೊಂಡಿವೆ. ಅವುಗಳಲ್ಲಿ ಮುಖ್ಯವಾಗಿ ಕೋಲಾರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ದಲಿತರ ಸಂಘಟನೆ, ಮಹಿಳೆಯರ ಸಂಘಟನೆ, ಕಾರ್ಮಿಕರ ಸಂಘಟನೆ, ರೈತರ ಸಂಘಟನೆಗಳು ಈ ಚರಿತ್ರೆಯಲ್ಲಿ ಕಂಡುಬರುತ್ತವೆ. ಈ ಪರಧಿಯಲ್ಲೆ ಎಸ್. ಚಂದ್ರಶೇಖರರವರ

'ದಕ್ಷಿಣ ಭಾರತದ ವಸಾಹತುಶಾಹಿ ರಾಷ್ಟ್ರೀಯತೆ ಹಾಗೂ ಸಂಘರ್ಷ', ಕರ್ನಾಟಕ ಚರಿತ್ರೆ ಸಂಪುಟ-೭, ಕನ್ನಡ ವಿಶ್ವವಿದ್ಯಾಲಯದ ಚರಿತ್ರೆ ವಿಶ್ವಕೋಶ ಸಂಪುಟ ೪, ಎಚ್.ವಿ. ಸೋಮಶೇಖರರವರ 'ಕೋಲಾರ ಜಿಲ್ಲೆಯ ಕಮ್ಯುನಿಸ್ಟರು' ಎಂಬ ಕೃತಿಗಳು, ಕೆ. ಪ್ರಹ್ಲಾದ್‌ರಾವ್‌ರವರು '೫೦ರ ಸ್ವರ್ಣ ಸ್ವಾತಂತ್ರ್ಯ', ದೇವರಾಜಯ್ಯನವರ ಸಂಪಾದನ ಕೃತಿಯಾದ 'ಸಿರಿನಂದಿ' ಮುಂತಾದವು ಕಂಡುಬರುತ್ತವೆ. ಈ ಎಲ್ಲ ಕೃತಿಗಳು ಒಂದೇ ದೃಷ್ಟಿಕೋನ ಒಂದೇ ವಿಷಯವಲ್ಲದೆ ಅವು ಬೇರೆ ಬೇರೆ ವಿಷಯಗಳು ಒಳಗೊಂಡ ಕೃತಿಗಳಾಗಿವೆ. ಅಂದರೆ ಚರಿತ್ರೆ ಲೇಖನಶಾಸ್ತ್ರವು ಬೇರೆ ಬೇರೆ ದೃಷ್ಟಿಕೋನಗಳಲ್ಲಿ ಬೆಳವಣಿಗೆ ಹೊಂದಿದೆ ಎಂದು ಹೇಳಲಾಗುತ್ತದೆ ಈ ಕೃತಿಗಳಿಂದ.

ಏಕೀಕರಣದ ನಂತರ ಪ್ರಮುಖವಾಗಿ ೨ ಅಂಶಗಳು ಗಣನೆಗೆ ತೆಗೆದುಕೊಳ್ಳಲಾಗುತ್ತದೆ.

೧. ಕೋಲಾರದಲ್ಲಿ ಇಂದಿರಾಗಾಂಧಿಯವರ ಏಮರ್ಜೆನ್ಸಿ ಕಾರ್ಯಕ್ರಮದ ವಿರುದ್ಧ ಪ್ರತಿಭಟನೆಗಳು

೨. ಕಮ್ಯುನಿಸ್ಟರ ಚರಿತ್ರೆ ಬೆಳವಣಿಗೆ

೧೯೭೫ರಲ್ಲಿ ಕೋಲಾರದಲ್ಲಿ ಏಮರ್ಜೆನ್ಸಿ ಒಂದು ಮುಖ ಕಂಡುಬರುತ್ತದೆ. ಅಂದಿನ ಭಾರತದ ಪ್ರಧಾನಮಂತ್ರಿಯಾದ ಶ್ರೀಮತಿ ಇಂದಿರಾಗಾಂಧಿಯವರು ದೇಶದ ಆಂತರಿಕ ಸಮಸ್ಯೆಯಿಂದಾಗಿ ತುರ್ತು ಪರಿಸ್ಥಿತಿಯನ್ನು ಜಾರಿಗೆ ತಂದರು. ಇದರಿಂದ ಕೆಲವು ಕಮ್ಯುನಿಸ್ಟರನ್ನು ಮತ್ತು ಪ್ರತಿಭಟನಾಕಾರರನ್ನು ಬಂಧಿಸಲಾಯಿತು. ಇದನ್ನು ಪ್ರತಿಭಟಿಸಿ ಕೋಲಾರ ಪ್ರದೇಶದಲ್ಲಿ ಭೂಗತ ಚಟುವಟಿಕೆಗಳು, ಗಲಭೆಗಳು ನಡೆದವು ಎಂದು ಕೋಲಾರ ಪತ್ರಿಕೆ ಸಂಪಾದಕರಾದ ಕೆ. ಪ್ರಹ್ಲಾದರಾವರವರು ೧೯೭೮ ವಾರ್ಷಿಕ ವಿಶೇಷ ಪ್ರತಿಯಾದ ೫೦ರ ಸ್ವರ್ಣ ಸ್ವತಂತ್ರ್ಯ ಎಂಬ ಕೃತಿಯಲ್ಲಿ ಮತ್ತು ಹೆಚ್.ವಿ. ಸೋಮಶೇಖರ್‌ರವರು ಬರೆದಿರುವ 'ಕೋಲಾರ ಜಿಲ್ಲೆಯಲ್ಲಿ ಕಮ್ಯುನಿಸ್ಟರು' ಎಂಬ ಕೃತಿಯಲ್ಲಿ ತಿಳಿಸಿದ್ದಾರೆ.[೧೧] ಇದರ ನಾಯಕ ಜೆ.ಎಸ್. ಪಾರ್ಥಸಾರಥಿ ಮತ್ತು ಅವರ ಸಿಬ್ಬಂದಿಗರಾದಶಂಕರನಾರಾಯಣ, ಪಾಂಡುರಂಗ ನಾಯ್ಡು, ಡಿ.ಎನ್. ಹನುಮಯ್ಯ ಮುಂತಾದವರು ಪ್ರಮುಖರಾಗಿದ್ದಾರೆ. ೧೯೭೫ ಜುಲೈ ೪ರಂದು ರಾಷ್ಟ್ರೀಯ ಸ್ವಯಂಸೇವಕ ಸಂಘವನ್ನು ನಿಷೇಧಿಸಲಾಯಿತು ಮತ್ತು ಕರ್ನಾಟಕದಲ್ಲಿ ಬಂದ್ ಆಚರಣೆಗೆ ಸಿದ್ಧತೆಯನ್ನು ನಡೆಸಲಾಯಿತು. ಕೋಲಾರ ಜಿಲ್ಲೆಯಲ್ಲಿ ಪ್ರತಿಭಟನಾ ಕಾರ್ಯಚರಣೆಯ ಕೇಂದ್ರವಾದ ಕೇಶವ ನಿಲಯಕ್ಕೆ ಬೀಗ ಮುದ್ರೆಯಾಯಿತು. ಇಡೀ ದೇಶದಲ್ಲಿ ಕೋಲಾರದ ಶಾಖೆಯಲ್ಲಿ ಮಾತ್ರವೇ ಕಾಡತೂಸುಗಳು ಸಿಕ್ಕಿದ್ದು, ಇದಕ್ಕೂ ಪರವಾನಿಗಿ ಇದ್ದಿತು ಎಂಬುದು ಮುಖ್ಯವಾಗುತ್ತದೆ. ಇದರಿಂದ ಇಂದಿರಾಗಾಂಧಿಯವರ ನೀತಿಯ ವಿರುದ್ಧ ಪ್ರತಿಪಕ್ಷ ಸಂಘಟನೆಗಾರರು ಕೋಲಾರ ಪ್ರದೇಶದಲ್ಲಿ ಪ್ರತಿಭಟನೆ ಮಾಡಿದರು ಎಂದು ತಿಳಿದುಬರುತ್ತದೆ.

ಎರಡನೆಯದಾಗಿ ಕೋಲಾರ ಜಿಲ್ಲೆಯಲ್ಲಿ ಕಮ್ಯುನಿಸ್ಟರ ಚರಿತ್ರೆ ಏಕೀಕರಣ ನಂತರ ಪ್ರಬಲವಾಗಿ ಕಂಡುಬರುತ್ತದೆ. ಇವರ ಮುಖ್ಯ ಉದ್ದೇಶ ಸರ್ಕಾರದಿಂದ ರೈತರು ಮತ್ತು ಕಾರ್ಮಿಕರ ಸುಧಾರಣೆಗಳು ಕೈಗೊಳ್ಳುವುದು. ಇದರ ಪ್ರಮುಖ ಹೋರಾಟಗಾರರು ಎಸ್. ಲಕ್ಷ್ಮಯ್ಯ, ಎಚ್.ಎಸ್. ರಾಮರಾವ

ಮುಂತಾದವರು ಎಂಬುದಾಗಿ ಎಚ್.ವಿ. ಸೋಮಶೇಖರರವರ ಕೃತಿಯಾದ 'ಕೋಲಾರದ ಕಮ್ಯುನಿಸ್ಟರು' ಎಂಬ ಕೃತಿಯಿಂದ ತಿಳಿದುಬರುತ್ತದೆ. ಪ್ರಸ್ತುತ ಅಧ್ಯಯನ ವ್ಯಾಪ್ತಿಯು ಅಧ್ಯಯನ ದೃಷ್ಟಿಯಿಂದ ಕೋಲಾರ ರಾಜಕೀಯ ಚರಿತ್ರೆ ಬಳವಣಿಗೆಯ ವಿವರಣೆಯನ್ನು ಇಲ್ಲಿಗೆ ಮುಕ್ತಾಯ ಮಾಡಲಾಗಿದೆ ಮತ್ತು ೧೯೫೬ರಿಂದ ೨೦೦೪ರವರೆಗೆ ಕೋಲಾರ ಪ್ರದೇಶದ ಚರಿತ್ರೆಯಲ್ಲಿನ ವಿವಿಧ ಆಯಾಮಗಳ ಹಿನ್ನೆಲೆಯಲ್ಲಿ ಕಂಡುಬರುವ ದಮನಿತರ ಹೋರಾಟ ಚರಿತ್ರೆ ಬೆಳವಣಿಗೆಯನ್ನು ಸೈದ್ಧಾಂತಿಕವಾಗಿ ಮುಂದಿನ ಅಧ್ಯಯದಲ್ಲಿ ವಿವರಿಸಲು ಪ್ರಯತ್ನಿಸಲಾಗಿದೆ.

* * *

೧೯೫೬ರ ಹೊತ್ತಿಗೆ ೨೫ ರಾಜ್ಯಗಳು ಸೃಷ್ಟಿಯಾದವು ನಿರ್ಮಾಣಗೊಂಡವು. ಇದರಲ್ಲಿ ಕರ್ನಾಟಕ ರಾಜ್ಯ ಒಂದಾಗಿದ್ದು ಅದಕ್ಕೆ ಪ್ರಾಥಮಿಕವಾಗಿ ಮೈಸೂರು ರಾಜ್ಯ ಎಂದಲೇ ಕರೆಯುತ್ತಿದ್ದರು. ಈ ರಾಜ್ಯದಲ್ಲಿ ೨೭ ಜಿಲ್ಲೆಗಳಿದ್ದು, ಅದರಲ್ಲಿ ಕೋಲಾರ ಜಿಲ್ಲೆಯು ಒಂದಾಗಿತ್ತು.[೧೬] ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳ ಕಾಯ್ದೆಯ ಅನುಗುಣವಾಗಿ ಜಿಲ್ಲಾ ಪಂಚಾಯಿತಿ ಜಿಲ್ಲಾ ಪರಿಷತ್ ನಗರಸಭೆಗಳು, ಪೌರಸಭೆಗಳು, ತಾಲ್ಲೂಕು ಪಂಚಾಯಿತಿಗಳು ಹಾಗೂ ಗ್ರಾಮಪಂಚಾಯಿತಿಗಳನ್ನು ನವೀಕರಿಸಲ್ಪಟ್ಟವು. ಪ್ರಜಾಪ್ರಭುತ್ವ ತತ್ವದ ಅನ್ವಯದಂತೆ ಪ್ರಜೆಗಳು ಆಯಾ ಕಾಲಕ್ಕೆ ತಮಗೆ ಒಪ್ಪುವ ನಾಯಕರನ್ನು ಚುನಾವಣೆಗಳಲ್ಲಿ ಚುನಾಯಿಸುವುದರ ಮೂಲಕ ಆಡಳಿತಾಂಗದ ಮೇಲೆ ಹಿಡಿತ ಸಾಧಿಸುತ್ತ ಬಂದಿದ್ದಾರೆ. ಇದು ಕೋಲಾರ ಪ್ರದೇಶದ ರಾಜಕೀಯ ಚರಿತ್ರೆಯ ಬೆಳವಣಿಗೆಯಲ್ಲಿ ಸೈದ್ಧಾಂತಿಕ ಸ್ವರೂಪದ ಒಂದಂಶ ಎಂದು ಹೇಳಲಾಗುತ್ತದೆ.

ಕರ್ನಾಟಕ ಏಕೀಕರಣೋತ್ತರ ಘಟ್ಟದಲ್ಲಿ ಚರಿತ್ರೆ ರಚನೆಯ ಸ್ವರೂಪ ಬದಲಾಯಿತು. ವಸಾಹತು ಕಾಲದಲ್ಲಿ ಮೊಳಕೆಯೋಪಾದಿಯ ರೂಪದಲ್ಲಿದ್ದ ಸಾಮಾಜಿಕ ಜ್ಞಾನ ಶಾಖೆಗಳು ಈ ಅವಧಿಯಲ್ಲಿ ವಿಶಾಲವಾಗಿ ಬೆಳೆದವು. ತಾಂತ್ರಿಕ ಯುಗದ ಅಡಿಯಲ್ಲಿ ಅವುಗಳ ವಿಮರ್ಶೆಯಾತ್ಮಕ ಕ್ರಿಯೆ ಹೆಚ್ಚಾಯಿತು ಮತ್ತು ಪ್ರಜಾಪ್ರಭುತ್ವದ ಅಡಿಯಲ್ಲಿಯೇ ಸಮಾಜವಾದ, ಸಮಾತವಾದ, ಕಮ್ಯುನಿಸಂ, ಕೋಮುವಾದಗಳೊಂದಿಗೆ ಬಂಡಾಯ ಸಾಹಿತ್ಯ, ಮಹಿಳಾ ಸಾಹಿತ್ಯಗಳು ಬೆಳವಣಿಗೆಯಲ್ಲಿ ಕಂಡುಬಂದವು. ಅಲ್ಲದೆ ಇವುಗಳಿಗೆ ಪ್ರೇರಕವಾಗಿ ಸಮಾಜದ ಸಾಮ್ರಾಜ್ಯಗಳು ಉದ್ಭವವಾದಂತೆ ಜನಸಮುದಾಯದ ನಡುವೆ ಅನೇಕ ಗುಂಪುಗಳು ಸಂಘಟನೆಗಳು ಉದ್ಭವಗೊಂಡು ತೀವ್ರತರ ಹೋರಾಟಗಳು ಅನಿವಾರ್ಯತೆಗಳನ್ನು ನಡೆದುಹೋದವು. ಇದರಿಂದಾಗಿ ಚರಿತ್ರೆಯ ಸ್ವರೂಪವೇ ಬದಲಾಯಿತು. ಈ ಬದಲಾವಣೆಯಲ್ಲಿ ದಲಿತರು, ಕೆಳವರ್ಗದ ಚರಿತ್ರೆ, ಮಹಿಳಾ ಚರಿತ್ರೆ ಹಾಗೂ ರೈತರು ಕಾರ್ಮಿಕ ಚರಿತ್ರೆಗಳು ಮುಂತಾದವು ಕಂಡುಬಂದವು. ಇವು ೨೧ನೇ ಶತಮಾನದ ಚರಿತ್ರೆಯಲ್ಲಿ ಪ್ರಾಮುಖ್ಯತೆ ಮತ್ತು ವಿಶೇಷತೆ ಹೊಂದಿದಲ್ಲದೆ ಸಂಘರ್ಷ, ಮಾನನೀಯತೆ, ಆಧುನಿಕತೆ, ವಿಮರ್ಶಾತ್ಮಕತೆಯ ಲಕ್ಷಣಗಳು ಹೊಂದಿದ್ದವು. ವಸಾಹತು ಕಾಲದಲ್ಲಿಯಲ್ಲಿಯೇ ಇವುಗಳ ಬಗ್ಗೆ ವಿವರಿಸಿದರೂ ಕೊಡು ಪ್ರಸ್ತುತದ ಅಧ್ಯಾಯನದಲ್ಲಿ (ಕರ್ನಾಟಕ ಏಕೀಕರಣದ ನಂತರದಲ್ಲಿ)

ಇಂತಹ ಚರಿತ್ರೆಗಳ ಮುಂದಿನ ಬೆಳವಣಿಗೆ ಮತ್ತು ಅವುಗಳ ಪ್ರಾಮುಖ್ಯತೆಗಳ ಕುರಿತಾಗಿ ವಿವಿಧ ಕೃತಿಗಳು, ಲೇಖನಿಗಳು ಹಾಗೂ ಚರಿತ್ರೆ ಅರ್ಹ ದಾಖಲೆಗಳನ್ನು ಅವಲೋಕಿಸುವುದರ ಮೂಲಕ ಸೈದ್ಧಾಂತಿಕವಾಗಿ ವಿವರಿಸಲು ಮತ್ತು ಚರಿತ್ರೆಯಲ್ಲಿ ಈ ಚರಿತ್ರೆಗಳು ಹೆಚ್ಚಾಗಿ ಚರ್ಚಾ ವಿಷಯವಾಗಿರುವುದರಿಂದ ಅಂತಹದೇ ರೀತಿಯಲ್ಲಿ ವಿವರಿಸಲು ಕಿರು ಪ್ರಯತ್ನವನ್ನು ಮಾಡಲಾಗಿದೆ.

೫.೧. ದಲಿತರ ಪ್ರಶ್ನೆಗಳು

ಕರ್ನಾಟಕ ಏಕೀಕರಣೋತ್ತರ ಕಾಲವನ್ನು ಆಧುನಿಕ ಕಾಲ, ತಾಂತ್ರಿಕ ಕಾಲ, ಜಾಗತಿಕ ಕಾಲ ಕಂಪ್ಯೂಟರ್ ಕಾಲ ಮುಂತಾಗಿ ಕರೆಯುತ್ತಾರೆ. ಇಂತಹ ಕಾಲದಲ್ಲಿಯೂ ದಲಿತ ಜನರ ಸ್ಥಿತಿಗತಿಗಳು ಮತ್ತು ಅವರ ಹೋರಾಟದ ಕೂಗು ಮೂಗಿಲು ಮುಟ್ಟಿದೆ ಎಂದರೆ ಆಶ್ಚರ್ಯವೇನಿಲ್ಲ. ಪ್ರಜಾಪ್ರಭುತ್ವದಲ್ಲಿ ಇದೆಲ್ಲ ಸಹಜವೆಂದುವುದಾದರೂ ಮಾನವೀಯತೆಯ ಹಿನ್ನೆಲೆಯಲ್ಲಿ ಮತ್ತು ಆರ್ಥಿಕ ಅಸಮಾನತೆಯಲ್ಲಿ ಅದೊಂದು ಗಣನೀಯ ವಿಷಯವಾಗಿದೆ. ೭೦ರ ದಶಕದ ನಂತರ ಈ ಜನ ಸಂಘಟನೆಗಳ ಹೋರಾಟಗಳ ತೀವ್ರತೆಯ ಹಿನ್ನೆಲೆಯಲ್ಲಿ ಅವುಗಳ ಚರಿತ್ರೆ ರಚನೆಯು ವಿಶಾಲಗೊಂಡಿದೆ.

ಕೋಲಾರ ಪ್ರದೇಶದಲ್ಲಿ ನಡೆದಂತ ದಲಿತರ ಹೋರಾಟಗಳು ಹಾಗೂ ಅವುಗಳ ಪರಿಣಾಮದಿಂದಾಗಿ ದೊಡ್ಡ ದಲಿತ ಬಂಡಾಯ ಸಾಹಿತ್ಯವೇ ಬೆಳೆದು ಕರ್ನಾಟಕ ಚರಿತ್ರೆಯಲ್ಲಿ ವಿಶೇಷತೆಯನ್ನು ಗಳಿಸಿದೆ ಮತ್ತು ಮೊದಲೇ ಹಿಂದುಳಿದ ಪ್ರದೇಶವಾದ ಕೋಲಾರ ಪ್ರದೇಶದಲ್ಲಿ ಹೆಚ್ಚು ದಲಿತ ಜನಾಂಗದವರು ಹೊಂದಿದ್ದು ಅಲ್ಲದೆ, ಅವರ ಸಮಸ್ಯೆಗಳು ಸಾಮಾಜಿಕ ಹಿನ್ನೆಲೆಯಲ್ಲಿ, ಪ್ರಜ್ವಲಗೊಂಡಿರುವುದು ಇದಕ್ಕೆ ಕಾರಣವಾಗಿದೆ. ಹೀಗಾಗಿ ಇವರ ಚರಿತ್ರೆ ಮೇಲ್ವರ್ಗಗಳ ಚರಿತ್ರೆಯಗಿಂತ ಭಿನ್ನವಾಗಿ ಕಂಡುಬಂದು, ವಿದ್ವಾಂಸರಲ್ಲಿ ಈ ಕುರಿತು ಆಕರ್ಷಣೆಯನ್ನುಂಟುಮಾಡಿದೆ. ಇದರಿಂದ ಗಂಗಾರಾಂ ಚಾಂಡಾಳ ಹಾಗೂ ಎಚ್.ಎಂ. ರಾಮಚಂದ್ರಪ್ಪ ಮುಂತಾದವರು ಕೋಲಾರ ಜಿಲ್ಲೆಯ ದಲಿತರ ಚರಿತ್ರೆಯನ್ನು ಚರಿತ್ರೆ ದೆಸೆಗೆ ಎಳೆಯಲು ಶ್ರಮಿಸಿದ್ದು ಪ್ರಸ್ತುತದ ಅಧ್ಯಯನಕ್ಕೆ ಆಧಾರವಾಗಿದೆ.

I

ದಲಿತರ ಚರಿತ್ರೆ ಗ್ರಹಿಸುವ ಮೊದಲು ಸಮಾಜದ ರಚನೆಯಲ್ಲಿ ದಲಿತರು ತಮ್ಮ ಕುಲಕಸುಬುಗಳಿಂದ ನಾಗರಿಕ ಸೌಲಭ್ಯಗಳಿಂದ ವಂಚಿತರಾಗಿರುವುದು ಚರಿತ್ರೆ ರಚನೆಯಿಂದ ನಿರ್ಲಕ್ಷರಾಗಿರುವುದು ಗಮನಿಸುವಂತದಾಗಿದೆ.[೧೩] ಮಧ್ಯಕಾಲದಿಂದಲೂ ಮತ್ತು ಅನಂತರ ಕಾಲದಲ್ಲಿ ಇದ್ದಂತೆ ಇವರ ಚರಿತ್ರೆಯಲ್ಲದ್ದುಕ್ಕೂ ಕಂಡುಬರುವ ಮುಖ್ಯವಾದ ಅಂಶವೇನೆಂದರೆ ಈಗಲೂ ವಾಸ್ತವದಲ್ಲಿರುವ ಜೀತ ಪದ್ಧತಿ. ಗೌಡರ ಗಿತ್ತಿಯಿಂದ ಶೋಷಣೆ, ಮೇಲ್ವರ್ಗದವರಿಂದ ತುಳಿತಗಳೇ ಹೆಚ್ಚಾಗಿ ಏಕೀರಣದ ನಂತರ ಕಾಲದಲ್ಲಿ ಕಂಡುಬರುತ್ತವೆ ಎಂದು ಬಿ. ರಾಮಕೃಷ್ಣ, ಗಂಗಾಧರಮೂರ್ತಿ, ಎ. ಮುನಿವೆಂಕಟಪ್ಪನವರ ಕೃತಿಗಳಿಂದ ವ್ಯಕ್ತವಾಗುತ್ತದೆ.[೧೪] ಹೊಲೆಯ ಮಾದಿಗರೆಂದು ದಲಿತರನ್ನು ಉಳಿದವರು ಏಕ ವಚನದಲ್ಲಿ

ಕರೆಯುತ್ತಿದ್ದರು. ಅಲ್ಲದೆ ಗುಡಿಮಂದಿರಗಳ ಪ್ರವೇಶಕ್ಕೆ ನಿರ್ಬಂಧವಿದ್ದಿತು. ಕುಡಿಯುವ ನೀರಿನ ಬಾವಿಗಳಲ್ಲಿ ನಿರ್ಬಂಧ, ಹೋಟೆಲ್‌ಗಳಲ್ಲಿ ನಿರ್ಬಂಧಗಳಿರುವುದನ್ನು ೧೯೫೬ರಲ್ಲಿ ಸಂದರ್ಭದಲ್ಲಿ ನೋಡಬಹುದು. ಬ್ರಾಹ್ಮಣರಿಂದ ತಾರತಮ್ಯ ನೀತಿ, ಮೇಲ್ವರ್ಗದವರಿಂದ ಶೋಷಣೆಗೆ ಒಳಗಾದ ದಲಿತರು ಎದುರಿದರೆ ಗ್ರಾಮ ಬಹಿಷ್ಕಾರಕ್ಕೆ ಒಳಗಾಗುತ್ತಿದ್ದರು. ಬಹುತೇಕ ದಲಿತರು ಭೂಹೀನರಾಗಿ ಕೃಷಿಕಾರ್ಮಿಕರಾಗಿ ವಸತಿಹೀನರಾಗಿ, ಊರಹೊರಗೆ ಕೊಳಚೆ ಪ್ರದೇಶಗಳಲ್ಲಿ ಗುಡಿಸಲುಗಳನ್ನು ಮಾಡಿಕೊಂಡು ಅನಕ್ಷರಸ್ಥರಾಗಿ, ಮೂಢನಂಬಿಕೆಗಳಲ್ಲಿಯೇ ಜೀವನ ಸಾಗುತ್ತಿದ್ದರು.[೧೫] ೧೯೫೬ರಲ್ಲಿ ಕೋಲಾರ ಪ್ರದೇಶದಲ್ಲಿ ೨೮೨,೫೮ ರಷ್ಟು ದಲಿತ ಜನಸಂಖ್ಯೆಯನ್ನು ಹೊಂದಿದ್ದು, ೧೪೨,೭೨ ರಷ್ಟು ಗಂಡಸರು ೨೮೨,೫೮ರಷಶ್ಟು ಹೆಂಗಸರು ಹಾಗೂ ಗಿರಿಜನರಲ್ಲಿ ೧೬೦ ಜನ ಇದ್ದರೆಂದು ಬಿ. ಶಿವಮೂರ್ತಿಶಾಸ್ತ್ರಿರವರ ಕೃತಿಯಿಂದ ವ್ಯಕ್ತವಾಗುತ್ತದೆ.[೧೬] ೧೯೭೧ರ ಜನಗಣತಿ ಪ್ರಕಾರ ಪರಿಶಿಷ್ಟಜಾತಿಯವರು ೨೧೫೩೨೪ರಷ್ಟು ಇದ್ದು ಅದರಲ್ಲಿ ೧೧೦೮೧೬ರಷ್ಟು ಗಂಡಸರು ೧೦೭.೫೦೮ರಷ್ಟು ಹೆಂಗಸರು ಹಾಗೂ ಗಿರಿಜನರಲ್ಲಿ ೧೫೪ ರಷ್ಟು ಇದ್ದರು.[೧೭] ೧೯೯೧ರ ಅಂಕಿಅಂಶಗಳ ಪ್ರಕಾರ ಪರಿಶಿಷ್ಟ ಜಾತಿಯವರು ೫೭೦೪೮೦ರಷ್ಟು. ಪರಿಶಿಷ್ಟ ಪಂಗಡದವರು ೧೫೩೦ರಷ್ಟು ಇದ್ದರು.[೧೮] ಇದರಲ್ಲಿ ೬೧೩೮೪ ಗಂಡಸರು ಮತ್ತು ೨೬೭೬೭೩ ಹೆಂಗಸರು ಕೆಲಸಗಾರರಾಗಿದ್ದರು.[೧೯]

ದಲಿತರಲ್ಲಿ ಹೊಲೆಯ ಮಾದಿಗರೊಂದಿಗೆ ಲಂಬಾಣಿಗಾರರು, ಕಲ್ಲು ಕುಟುಕರು, ವಡ್ಡರು, ಹಕ್ಕಿಪಿಕ್ಕಿಗಳು, ಹಾವಾಡಿಗರು, ಜೋಗಿಗಳು, ಹಗಲುವೇಷಗಾರರು, ಡೊಂಬರು ಕೋಲಾರದಲ್ಲಿ ಬಹಳ ಮಟ್ಟಿಗೆ ಕಾಣಿಸಿಕೊಳ್ಳುತ್ತಾರೆ. ಇವರು ಅಲಕ್ಷಿತರಾಗಿರುವುದು ಮಾತ್ರವಲ್ಲದೆ ಆರ್ಥಿಕವಾಗಿ ಹಿಂದುಳಿದವರು. ಸಾಮಾಜಿಕವಾಗಿ ದಲಿತರಂತೆ ಇವರೆಲ್ಲಾ ಪ್ರತ್ಯೇಕಿಸಲ್ಪಟ್ಟವರಾಗಿದ್ದಾರೆ. ಕೋಲಾರ ಪ್ರದೇಶದ ವಿವಿಧ ಭಾಗಗಳಲ್ಲಿ ನೆಲೆ ನಿಂತ ಇವರು ಅವರದೇ ಆದ ಸಂಸ್ಕೃತಿ, ಸಂಪ್ರದಾಯಗಳು ಹಾಗೂ ವೃತ್ತಿ ಜೀವನಗಳನ್ನು ಹೊಂದಿದ್ದಾರೆ. ಲಂಬಾಣಿಗರಂತೂ, ಗುಡಿಬಂಡೆ, ಗೌರಿಬಿದನೂರು, ಬಾಗೇಪಲ್ಲಿ ತಾಲ್ಲೂಕುಗಳಲ್ಲಿ ಹೆಚ್ಚಾಗಿದ್ದು, ನಗರ ಮತ್ತು ಊರುಗಳ ಹೊರಗೆ ಗುಡಿಸಲುಗಳನ್ನು ಕಟ್ಟಿಕೊಂಡು ವರ್ಷಕ್ಕೆ ಒಮ್ಮೆ ಭಿಕ್ಷೆ ಬೇಡುವುದರ ಮೂಲಕ ಹೋಳಿ ಹಬ್ಬವನ್ನು ಆಚರಿಸುತ್ತಾರೆ.[೨೦] ಈ ಸಮುದಾಯಗಳಿಗೆ ಸೇರಿದ ಅನೇಕ ವಿವರಗಳನ್ನು ವಿದ್ವಾಂಸರು ಕಲೆ ಹಾಕಿದ್ದಾರೆ. ಅವುಗಳ ಸ್ಥೂಲ ನೋಟ ಹೀಗಿದೆ.

ವಡ್ಡರು : ಇವರು ತೆಲುಗು ನಾಡಿನಿಂದ ಬಂದವರಾಗಿದ್ದು, ಕೋಲಾರ, ಚಿಂತಾಮಣಿ, ಬಾಗೇಪಲ್ಲಿ, ಚಿಕ್ಕಬಳ್ಳಾಪುರ, ಮುಳಬಾಗಿಲು ಮುಂತಾದ ಕಡೆಗಳಲ್ಲಿ ನೆಲೆಸಿದ್ದಾರೆ. ಕೆರೆ ಕಾಲುವೆಗಳನ್ನು ಕಟ್ಟುವುದು, ಕಲ್ಲುಗಳನ್ನು ಒಡೆಯುವುದು, ಬಾವಿಗಳನ್ನು ತೋಡುವುದು, ರಸ್ತೆಗಳನ್ನು ನಿರ್ಮಾಣ ಮಾಡುವುದು, ಇವರ ವೃತ್ತಿಗಳಾಗಿದ್ದವು. ಭಾಗಶಃ ಶ್ರೀಮಂತರು, ಜಮೀನುದಾರರ ಮನೆಗಳಲ್ಲಿ ಜೀತವಾಗಿ ಉಳಿದಿದ್ದರು. ಇಂದಿಗೂ ಈ ಜನ ಬಿಸಿಲುದಗೆ ಎನ್ನದೆ ಕಲ್ಲುಬಂಡೆಗಳನ್ನು ಒಡೆದು, ಮನೆಗಳಿಗೆ, ನಾಲೆಗಳಿಗೆ, ರಸ್ತೆಗಳಿಗೆ ಕಲ್ಲುಗಳನ್ನು ಒದಗಿಸುವುದರ ಮೂಲಕ ದೊರೆತ ಅಲ್ಪ ಆದಾಯದಲ್ಲಿಯೇ ಜೀವನ ಸಾಗಿಸುತ್ತವೆ. ಇವರದು ಒಂದು ಜೀತಗಾರಿಕೆ ಸ್ವರೂಪ ವೃತ್ತಿ ಎಂದಾಗಿದೆ.[೨೧]

ಪಾಕನಾಟೆ ಜೋಗಿಗಳು : ಇವರು ಕೋಲಾರ ಪ್ರದೇಶದಾದ್ಯಂತ ನೆಲೆಸಿದ್ದು ಗಿಡಮೂಲಿಕೆಗಳ, ವೈದ್ಯವನ್ನು ಮಾಡುತ್ತ ಜೀವನ ಸಾಗಿಸುವುದಾಗಿದ್ದಾರೆ. ಅತ್ಯಂತ ಬಡವರಾಗಿದ್ದು ಕಾಡುಗಳಲ್ಲಿ ಅಲೆದು ಕಾಡಿನ ಗಿಡಮೂಲಿಕೆಗಳನ್ನು ನಗರ ಪಟ್ಟಣಗಳಿಗೆ ತಂದು ವ್ಯಾಪಾರ ಮಾಡಿ ಜೀವನ ನಡೆಸುತ್ತಿದ್ದರು.

ಹಾವಾಡಿಗರು : ಬಾಗೇಪಲ್ಲಿ ಚಿಂತಾಮಣಿಗಳಲ್ಲಿ ಹೆಚ್ಚಾಗಿದ್ದು ಹಾವು ಮುಂಗಿಸಿಯನ್ನು ಆಟವಾಡಿಸುವುದರ ಮೂಲಕ ಭಿಕ್ಷೆ ಬೇಡಿ ಜೀವನ ಸಾಗಿಸುತ್ತಾರೆ. ಹಾವಿನ ವಿಷಕ್ಕೆ ಮದ್ದು ತಯಾರಿಸಿ ಮಾರಾಟ ಮಾಡುವುದರಲ್ಲಿ ಜನರಿಗೆ ನೆರವಾಗಿದ್ದಾರೆ.

ಹಗಲುವೇಷಗಾರರು : ರಾಮಾಯಣ, ಮಹಾಭಾರತವ ಪಾತ್ರಗಳ ವೇಷ ಹಾಕಿಕೊಂದು ಊರುಊರು ಅಲೆದು ಭಿಕ್ಷೆ ಬೇಡಿ ಜೀವನ ಸಾಗಿಸುತ್ತಾರೆ. ಒಮ್ಮೆ ಒಂಬು ಊರಿನಲ್ಲಿ ಒಂದು ಡೇರ ಹಾಕಿದರೆ ಮೂರು ತಿಂಗಳಲ್ಲಿ ವಾಸ, ಮೂವತ್ತೂರು ವೇಷ ಹಾಕುತ್ತಾರೆ ಎಂದು ರಂಗಾರೆಡ್ಡಿ ಕೋಡಿರಾಮಂಪುರ, ಜಿ. ನಾಗರಾಜುರವರು ಹೇಳುತ್ತಾರೆ.

ಡೊಂಬರು : ಪ್ರದರ್ಶನಗಳ ಮೂಲಕ ಅಂದರೆ ತಂತಿ ಅಥವಾ ಹಗ್ಗದ ಮೇಲೆ ನಡೆಯುವುದು. ಎದೆಯ ಮೇಲೆ ಕಲ್ಲು ಚಪ್ಪಡಿ ಇಟ್ಟು ಸುತ್ತಿಗೆಯಿಂದ ಹೊಡೆಯುವುದು ಮುಂತಾದ ಪ್ರದರ್ಶನಗಳಿಂದ ಭಿಕ್ಷೆ ಬೇಡಿ ಜೀವನ ಸಾಗಿಸುತ್ತಾರೆ.[೨೨] ಇದೇ ರೀತಿ ಕೊರವಂಜಿಗರು, ಡಿಕಾಂಬರು, ದಾಸಯ್ಯ, ಜೋಗಿಗಳು, ಮೋಡಿ ವೀರರು, ಬುಡಬುಡಿಕೆಯವರು ಮುಂತಾದವರು ಬಹುತೇಕವಾಗಿ ಊರೂರು ಅಲೆದಾಡಿ ಭಿಕ್ಷೆ ಬೇಡುವುದರ ಮೂಲಕ ಜೀವನ ಸಾಗಿಸುತ್ತಾರೆ. ಭಿಕ್ಷಾಟನೆ ಪದ್ಧತಿಯನ್ನು ಉಲ್ಲಂಘಿಸಿದರೆ ಕುಲಗೋತ್ರಕ್ಕೆ ಅಪಚಾರವೆಸಗಿದಂತೆ ಎಂದು ನಂಬಿಕೆಯನ್ನು ಇಟ್ಟುಕೊಂಡಿದ್ದರು. ಆದರೂ ಕಾಲ ಬದಲಾದಂತೆ, ಕೆಲವರು ತಮ್ಮ ಸ್ವಾಭಿಮಾನದಿಂದ ಕಾರ್ಮಿಕರಾಗಿ, ಕೃಷಿಕಾರ್ಮಿಕರಾಗಿ ದುಡಿಯುವುದರಲ್ಲಿ ನಿರತರಾಗಿದ್ದರು ಮತ್ತು ಸ್ವಯಂಗೃಹ ಉತ್ಪನ್ನಗಳಾದ ಚಾಪೆ, ಬುಟ್ಟಿ ಹೆಣೆಯುವುದು, ಬಿದಿರು ಕೋಲಿನಿಂದ, ಬಾಚಣಿಕೆ ತಯಾರಿಕೆ ಮುಂತಾದವು ಮಾಡಿ ಆದಾಯ ಗಳಿಸುವುದು ಇತ್ತೀಚೆಗೆ ಹೆಚ್ಚಾಗಿದೆ.[೨೩] ನಗರ ಪ್ರದೇಶಗಳಂತೂ ಬಹುತೇಕ ವ್ಯಾಪಾರ ಇವರದೆ ಆಗಿತ್ತು. ಕೂಲಿ ಕೆಲಸಕ್ಕಾಗಿ ಇತರೆ ದಲಿತರೊಂದಿಗೆ ಕಾರ್ಮಿಕರೊಂದಿಗೆ ಸೇರಿಕೊಳ್ಳುವ ಸರಿ ಹೊಂದಿದ್ದಾರೆ ಎಂದು ಜಿ. ನಾಗರಾಜ, ರಂಗಾರೆಡ್ಡಿ ಕೋಡಿರಾಂಪುರ ಹಾಗೂ ಜಗನ್ನಾಥ ಪ್ರಕಾಶನ ಅವರು ಹೇಳಿದ್ದಾರೆ.

೧೯೭೦ರ ನಂತರ ಬಹುತೇಕವಾಗಿ ದಲಿತ ಸಂಘಟನೆಗಳು ಹಾಗೂ ಕಮ್ಯುನಿಸ್ಟರ ಘಟನೆಗಾರರು ಕಾಳಜಿ ವಹಿಸಿದ್ದರು. ಅವರು ಅವರ ಸಮಸ್ಯೆಗಳಿಗೆ ಸ್ಪಂದಿಸಿ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಪ್ರಯತ್ನಿಸದರಲ್ಲದೆ ಆಡಳಿತ ವರ್ಗದವರ ಶೋಷಣೆಯನ್ನು ಖಂಡಿಸಿದರು ಎಂಬುದು ಕೆ. ಪ್ರಹ್ಲಾದರಾವ್ ಹೆಚ್.ವಿ. ಸೋಮಶೇಖರ ಮತ್ತು ಕೆ.ಎಂ. ಕೋಮಣ್ಣ ಮುಂತಾದವರುಗಳ ಕೃತಿಗಳಿಂದ ವ್ಯಕ್ತವಾಗುತ್ತದೆ. ೧೯೭೮ರಲ್ಲಿ ಚಿಕ್ಕಬಳ್ಳಾಪುರದ ಪುರಸಭೆಯವರು ಕೊಳಗೇರಿ ಪ್ರದೇಶದಲ್ಲಿದ್ದ ಕೆಳವರ್ಗದ ಜನರ ಗುಡಿಸಲುಗಳನ್ನು ಕೆಡಿಸಿದರು. ನಿರ್ಗತಿಕರಾದ ಕೆಳವರ್ಗದವರನ್ನು ಕಾಮ್ರೇಡ್ ಎಸ್. ಲಕ್ಷ್ಮಯ್ಯ

ಮುಂತಾದವರು ಸಂಘಟಿಸಿ ಹೋರಾಟ ಮಾಡುವುದರ ಮೂಲಕ, ದರ್ಗ ಮೊಹಲ್ಲಾ ಪಿಎಸ್‌ಪಿ ಆಸ್ಪತ್ರೆಯ ಮತ್ತಿತರ ಕಡೆ ನಿವೇಶನಗಳನ್ನು ಒದಗಿಸುವಲ್ಲಿ ಯಶಸ್ಸು ಕಂಡರು. ಇದು ದಲಿತ ಜನರ ಚರಿತ್ರೆಗೆ ಒಂದು ಹೊಸ ಆಯಾಮ ಒದಗಿಸಿದೆ ಎಂದು ಹೆಚ್.ವಿ. ಸೋಮಶೇಖರ್‌ರವರು ಹೇಳಿದ್ದಾರೆ.[೨೪] ಇದೇ ರೀತಿಯಾಗಿ ಶಿಡ್ಲಘಟ್ಟ ತಾಲ್ಲೂಕಿನಲ್ಲಿ ಟಿ.ಎಸ್. ಮಣಿ, ದ್ವಾರಸ್ವಾಮಿ ಕಮ್ಯುನಿಸ್ಟ್‌ನಾಯಕರವರ ನಾಯಕತ್ವದಲ್ಲಿ ಹೋರಾಟ ನಡೆಸುವುದರ ಮೂಲಕ ಪ್ರವಾಸಿಮಂದಿರಕ್ಕೆ ಉತ್ತರ ದಕ್ಕಿನ ಸರ್ಕಾರಿ ಜಮೀನಿನಲ್ಲಿ ಸುಮಾರು ೨೦೦ ಗುಡಿಸಲುಗಳಿಗೆ ನಿವೇಶನ ಒದಗಿಸಿತು. ಮತ್ತು ಆರ್. ವೆಂಕಟರಾಮಯ್ಯನವರ ನೇತೃತ್ವದಲ್ಲಿ ಮುಳಬಾಗಿಲಿನ ಮೊಗಲುಬಂಡೆ ಪ್ರದೇಶದಲ್ಲಿ ೫೦೦ ಮನೆಗಳಿಗೆ ಆಗುವಷ್ಟು ಪ್ರದೇಶದಲ್ಲಿ ಒಂದು ಕಾಲೋನಿಯನ್ನು ನಿರ್ಮಿಸಿದ್ದರು ಎಂದು ಕೆ. ಪ್ರಹ್ಲಾದರಾವ್‌ರವರು ಹೇಳಿದ್ದಾರೆ.[೨೫]

೧೯೮೨ರಲ್ಲಿ ಭಾಷಾ ಆಧಾರದ ಮೇರಿಗೆ ಮತ್ತು ನಕ್ಸಲ್‌ರ ನೆಪವೊಡ್ಡಿ ಕೆ.ಜಿ.ಎಫ್. ದಲಿತ ಕಾರ್ಮಿಕರ ಮೇಲೆ ಪೊಲೀಸ್ ಕಾರ್ಯಾಚರಣೆಗೆ ಆಜ್ಞಾಪಿಸಿತು. ಇದರಿಂದ ಪೊಲೀಸರು ಗೋಲಿಬಾರ್ ನಡೆಸಿದರು. ಈ ಕಾರ್ಯಾಚರಣೆಯಲ್ಲಿ ನೂರಾರು ಕೆಳವರ್ಗ ಜನರು ಸಾವಿಗೀಡಾದರೆ ಅವರ ಅನೇಕ ಗುಡಿಸಲುಗಳು ನಾಶವಾದವು ಎಂದು ಕೆ.ಎಂ. ಕೋಮಣ್ಣನವರು ಹೇಳಿದ್ದಾರೆ.[೨೬] ಇದನ್ನು ದಲಿತ ಸಂಘಟನೆಗಾರರು ಪ್ರತಿಭಟಿಸಿ ಹೋರಾಟ ನಡೆಸಿದರೂ ಯಾವುದೇ ಯಶಸ್ಸು ಕಾಣಲಿಲ್ಲ.

II

ಹೀಗೆ ಸಮಸ್ಯೆಗಳು ಹೆಚ್ಚಾದಂತೆಲ್ಲ ದಲಿತರು ಅನಿವಾರ್ಯತೆಯಲ್ಲಿ ಬಲಿಷ್ಠ ವರ್ಗಗಳ ವಿರುದ್ಧ ಮತ್ತು ಸರ್ಕಾರದಲ್ಲಿ ಬೇಡಿಕೆಗಳು ಪಡೆಯಲು ಸಂಘಸಂಸ್ಥೆಗಳು ಕಟ್ಟಿಕೊಳ್ಳಲೇಬೇಕಾಯಿತು. ರಾಜಕೀಯ ವಿಚಾರಗಳಿಗೆ ಸಂಬಂಧಿಸಿದಂತೆ ಮೊದಲ ತಲೆಮಾರಿನ ಅಕ್ಷರಸ್ಥ ದಲಿತರು ಹೋರಾಟ ನಡೆಸಲು ಪ್ರಾರಂಭಿಸಿದರು. ದೇವರಾಜ ಅರಸು ಆಳ್ವಿಕೆಯಲ್ಲಿಯೆ ಅದಕ್ಕೆ ಹೊಸ ಆಯಾಮ ಬಂತು. ಅವರ ಭೂಸುಧಾರಣೆಗಳು, ದಲಿತರಿಗೆ ಮೀಸಲಾತಿ ಸೌಲಭ್ಯಗಳು ಮುಂತಾದವುಗಳಿಂದ ದಲಿತರಲ್ಲಿ ಸ್ವಲ್ಪಮಟ್ಟಿಗೆ ಸುಧಾರಣೆಗಳು ಕಂಡುಬಂದವು. ಆದರೂ ಅವೆಲ್ಲ ಮೇಲ್ವರ್ಗದವರ ಪ್ರಭಾವದಿಂದ ಮರೀಚಿಕೆಯಂತಾದವು. ಇದರಿಂದ ಸಂಘಟನೆ ಬೆಳವಣಿಗೆಗೆ ಕಾರಣವಾಯಿತು. ಈ ಹಿಂದೆ ಕೆ.ಜಿ.ಎಫ್. ಗಡಿಪ್ರದೇಶದಲ್ಲಿ ಇಂತಹ ಸಂಘಟನೆ ಹುಟ್ಟುಕೊಂಡಿತು. ಆದರೆ, ಅದು ಆಂತರಿಕ ಸಮಸ್ಯೆಗಳಲ್ಲಿ ನಿಸ್ಸೀಮಗೊಂಡಿತು. ಮುಂದೆ ಅಂತಹ ಸಂಘಟನೆ ೧೯೭೪-೭೫ರವರೆಗೆ ಕಾಯಬೇಕಾಯಿತು.[೨೭] ಈ ಸಂಘಟನೆಗಳು ಪ್ರಾಥಮಿಕವಾಗಿ ಭೂಸಮಸ್ಯೆಗಳಿಗೆ ಆದ್ಯತೆ ನೀಡಿತು. ನಂತರ ಮೂಲಭೂತ ಸೌಲಭ್ಯಗಳು ಹಾಗೂ ನಾಗರಿಕ ಹಕ್ಕುಗಳಿಗಾಗಿ ಪರಿತಪಿಸಿತು. ಸಂಘಟನೆಕಾರರು ಶೋಷಣೆ ನಡೆದ ಕಡೆಗಳಲ್ಲಿ ಹೋಗಿ, ಅದನ್ನು ನಾನಾರೀತಿಯಲ್ಲಿ ವಿರೋಧಿಸತೊಡಗಿದರು. ಅಂದರೆ, ಕರಪತ್ರಗಳ ಮೂಲಕ ನ್ಯಾಯ ಬೇಡಿಕೆ, ಸರ್ಕಾರಿ ಕಛೇರಿಗಳಲ್ಲಿ ಮುಂದೆ ಧರಣಿ, ಸತ್ಯಾಗ್ರಹ ಮಾಡುವಿಕೆ, ಅಧಿಕಾರಿಗಳ ಘರಾವು ಮಾಡುವುದು ಮುಂತಾದ ರೂಪದಲ್ಲಿ ನಡೆಸಿದರು. ಇದು ನಂತರ ಶಿಕ್ಷಣದ ಸೌಲಭ್ಯಕ್ಕಾಗಿ ಹಾಸ್ಟೆಲ್ ಸೌಲಭ್ಯಕ್ಕಾಗಿ ನಿವೇಶನ ಭೂಮಿಗಾಗಿ ಹೋರಾಟಗಳು ನಡೆದವು.

ಹಾಗೆಯೇ ದೌರ್ಜನ್ಯ, ಆಕ್ರಮಣ, ಅತ್ಯಾಚಾರ, ಕೊಲೆ ಮುಂತಾದವುಗಳ ವಿರುದ್ಧ ಸಾರ್ವಜನಿಕ ಭಾಷಣ ಮಾಡುವುದು, ವಿಚಾರ ಸಂಕಿರಣ ನಡೆಸುವುದು, ಬಾಯಿಗೆ ಬಟ್ಟೆ ಕಟ್ಟಿಕೊಂಡು ಮೆರವಣಿಗೆ ಮಾಡುವುದು ಕಪ್ಪು ಭಾವುಟ ಪ್ರದರ್ಶನ ಮಾಡುವುದು ಮುಂತಾದ ವಿಧಾನಗಳಲ್ಲಿ ದಲಿತ ಸಂಘಟನೆಗಾರರು ಪ್ರತಿಭಟಿಸುತ್ತಿದ್ದರು ಎಂದು ಬಿ. ರಾಮಕೃಷ್ಣನವರು ಹೇಳಿದ್ದಾರೆ.[೫೮] ಇದರಿಂದ ಕೋಲಾರ ಪ್ರದೇಶ ದಲಿತರಿಗೆ ಧೈರ್ಯ ತುಂಬುತ್ತಲ್ಲದೆ, ಸ್ವಾಭಿಮಾನ ಮೂಡಿತು. ಅಂತೆಯೇ ರಾಜ್ಯಮಟ್ಟದಲ್ಲಿ ಕೋಲಾರ ಪ್ರದೇಶದ ದಲಿತ ಸಂಘಟನೆಗಳಲ್ಲಿ ಸುಮಾರು ೪೦,೦೦೦ ಕ್ಕೂ ಹೆಚ್ಚು ಸದಸ್ಯರು ಹೊಂದಿದ್ದು, ಸಾಂದರ್ಭಿಕವಾಗಿ ಜನಸಮುದಾಯಗಳ ಸಮಸ್ಯೆಗಳಿಗೆ ಸ್ಪಂದಿಸುತ್ತಾ ಹೋರಾಟ ನಡೆಸುವುದರ ಮೂಲಕ ಚರಿತ್ರೆಯಲ್ಲಿ ವಿಶೇಷತೆ ಗಳಿಸಿದ್ದಾರೆ ಹಾಗೂ ಇಂತಹ ದಲಿತ ಸಂಘಟನೆಗಳಲ್ಲಿ ಸುಮಾರು ೧೩ ಸಂಘಟನೆಗಳು ಹೊಂದಿದ್ದು ಅವುಗಳಲ್ಲಿ ಕರ್ನಾಟಕ ಜನಾಂದೋಲನ ಸಂಘಟನೆ ಸಮಿತಿ, ದಲಿತ ಸಂಘರ್ಷ ಸಮಿತಿ (ಸಂ), ವಿದ್ಯಾರ್ಥಿ ಸಂಘಟನೆ ಸಮಿತಿ ಮುಂತಾದವು ಪ್ರಮುಖವಾಗಿವೆ.[೫೯]

III

ಹೀಗೆ ದಲಿತರ ಸಂಘಟನೆ ಮತ್ತು ಅವುಗಳ ಲಕ್ಷಣಗಳು ಒಂದಾದರೆ ಮತ್ತೊಂದೆಡೆ ೭೦ರ ದಶಕದ ನಂತರ ನಾನಾ ಕಾರಣಗಳಿಂದ ತೀವ್ರತರವಾದ ಘಟನೆಗಳು ಹೋರಾಟಗಳು ನಡೆದವು. ಅಂತಹವುಗಳಲ್ಲಿ ಕೆಲವೊಂದು ತಿಳಿಯುವುದು ಅಗತ್ಯವಾಗಿರುವುದರಿಂದ ಈ ಕೆಳಕಂಡಂತೆ ಸಂಕ್ಷಿಪ್ತವಾಗಿ ವಿವರಿಸಲು ಪ್ರಯತ್ನಿಸಿದೆ.

೧೯೭೨ರಲ್ಲಿ ಕೋಲಾರ ತಾಲ್ಲೂಕು ಪ್ರದೇಶದ ದಲಿತ ಮಹಿಳೆಯ ಅತ್ಯಾಚಾರ ಮತ್ತು ೧೯೭೪-೭೫ರಲ್ಲಿ ದಲಿತ ವಿದ್ಯಾರ್ಥಿ ಮುನಿವೆಂಕಟಪ್ಪನ ಕೊಲೆಯಿಂದ ದಲಿತ ವಿದ್ಯಾರ್ಥಿ ಸಂಘಟನೆ ಮತ್ತು ದಲಿತ ಸಂಘಟನೆ ಸಮಿತಿ ಡಿಎಸ್‌ಎಸ್ ಪ್ರಾರಂಭವಾಯಿತು.[೬೦] ಚಿಂತಾಮಣಿ ತಾಲ್ಲೂಕಿನ ನಾಗಮ್ಮ ಎಂಬ ದಲಿತರು ಮಹಿಳೆ ಮತ್ತು ಆಕೆಯ ಗಂಡನ ಮೇಲೆ ಒಬ್ಬ ಬ್ರಾಹ್ಮಣ, ಐದು ಜನ ಒಕ್ಕಲಿಗರ ಅತ್ಯಾಚಾರವೆಸಗಿದ ಪ್ರಕಟಣದಿಂದ ಡಿ.ಎಸ್.ಎಸ್. ಸಮಿತಿಯ ಸದಸ್ಯರಾದ ಎನ್. ಶಿವಣ್ಣ, ಗಡ್ಡಂ ವೆಂಕಟೇಶರ ನೇತೃತ್ವದಲ್ಲಿ ತೀವ್ರತರ ದಂಡಿಸಲಾಯಿತು.[೬೧] ೧೯೭೮ರಲ್ಲಿ ಮಾಲೂರು ತಾಲ್ಲೂಕಿನ ಹುಣಸೆ ಕೋಟೆಯ ಪಾಳೇಗಾರರ ಕೃಷ್ಣಗೌಡ ಮತ್ತು ಆತನ ಸಹಚರರದಿಂದ ದಲಿತ ಮಹಿಳೆಯ ಅನುಸೂಯಮ್ಮ ಮತ್ತು ಆಕೆಯ ತಂದೆ ಶೇಷಗಿರಿಯಪ್ಪನ ಕೊಲೆಯಿಂದ ರಾಜ್ಯವೇ ತಲ್ಲಿನಗೊಂಡಿತು. ಅಲ್ಲದೆ ದಲಿತ ಮಹಿಳಾ ಸಂಘಟನೆ ಪ್ರಾರಂಭವಾಯಿತು.[೬೨] ಇದೇ ಕಾಲದಲ್ಲಿ ಚುನಾವಣೆಗಳು ನಡೆದು ದಲಿತ ಅಭ್ಯರ್ಥಿಯಾಗಿ ಎನ್.ಶಿವಣ್ಣನವರು ಚುನಾವಣೆಯಲ್ಲಿ ಸ್ಪರ್ಧಿಸಿದ್ದರಿಂದ ಮೇಲ್ಜಾತಿಯ ಗುಂಪುಗಳಿಂದ ದಲಿತ ಕಾಲೋನಿಗಳು ಧ್ವಂಸವಾದವು ಎಂದು ಓ. ಶ್ರೀಧರ ಮತ್ತು ಆರ್. ಮುನಿಯಪ್ಪನವರು ಹೇಳಿದ್ದಾರೆ. ಇದಾದ ನಂತರ ಕೋಲಾರ ಜಿಲ್ಲೆಯಲ್ಲಿಯ ಬೃಹತ್ ಐತಿಹಾಸಿಕ ಘಟನೆಗಳು ನಡೆದುಹೋದವು. ಅವುಗಳಲ್ಲಿ ಗೌರಿಬಿದನೂರು ತಾಲ್ಲೂಕಿನ ಹೆಚ್. ನಾಗಸಂದ್ರದ ಭೂ ಹೋರಾಟ ಒಂದಾಗಿದೆ.

ಸೌಲಭ್ಯಗಳು ವಂಚಿತರಾಗಿ ವಂಶ ಪರಂಪರಗತ ಜೀತಗಳಾಗಿ, ಕೃಷಿ ಕಾರ್ಮಿಕರಾಗಿ ಕೂಲಿಕಾರ್ಮಿಕ ರಾಗಿದ್ದಲ್ಲದೆ ಇತರ ಗುಂಪುಗಳಿಗಿಂತ ಹೆಚ್ಚಿನವರಾಗಿದ್ದಾರೆ.[೩೩] ಜೀತ ಪದ್ಧತಿ ನಿಷೇದ ಕಾನೂನು ಜಾರಿಗೆಯಲ್ಲಿದ್ದಿತು. ಆದರೂ ೧೯೮೮ರಲ್ಲಿ ಸುಮಾರು ೪೯ ಮಂದಿ ಜೀತಗಾರರು ಹೆಚ್. ನಾಗಸಂದ್ರದಲ್ಲಿದ್ದ ಜೀತಗಾರಿಕೆ ಮುಂದುವರೆಯುತ್ತಿತ್ತು.[೩೪] ಇವರಲ್ಲಿ ಪ್ರಮುಖವಾಗಿ ಗಂಗಪ್ಪ, ಕೃಷ್ಣಪ್ಪ, ಕದಿರಪ್ಪ, ನರಸಿಂಹಪ್ಪ, ರಾಮಾಂಜಿನಪ್ಪ ಮುಂತಾದವರಾಗಿದ್ದರು. ಹೀಗಾಗಿ ದಲಿತ ಸಂಘಟನೆ ಸಮಿತಿ ಇದನ್ನು ವಿರೋಧಿಸಿ ಅಲ್ಲಿ 'ರೈತ ಕೂಲಿಸಂಘ' ಎಂಬ ಹೆಸರಿನಲ್ಲಿ ದಲಿತರನ್ನು ಸಂಘಟಿಸಿತು.[೩೫]

ಮೇಲ್ವರ್ಗದವರು ದಲಿತರ ಗ್ರಾಮ ಬಹಿಷ್ಕಾರಕ್ಕೆ ಒಳಗಾದರು. ಅದರೂ ಸಂಘಟನೆಕಾರರು ಪ್ರತಿಭಟನೆಯನ್ನು ತೀವ್ರಗೊಳಿಸಿದರು. ಈ ಹೋರಾಟದ ವರದಿಗಳು 'ಕನ್ನಡಪ್ರಭ', 'ಲಂಕೇಶ ಪತ್ರಿಕೆ', 'ಮುಂಗಾರು' ಪತ್ರಿಕೆ ಮುಂತಾದವುಗಳಲ್ಲಿ ಪ್ರಕಟನವಾಗುತ್ತಿದ್ದವು. ರಾಜ್ಯ ಸರ್ಕಾರ ಈ ಕುರಿತು ಕ್ರಮ ಕೈಗೊಳ್ಳಲೇಬೇಕಾಯಿತು. ಇದರಿಂದ ೮೪ ಜೀತ ಪ್ರಕರಣಗಳು ಈ ಅವಧಿಯಲ್ಲಿ ಕಂಡುಬಂದಿದಲ್ಲದೆ, ಸಮಸ್ಯೆ ತೀವ್ರಗತವಾಗಿದೆ ಎಂದು ಮನಗಂಡಿತು. ಆದರೆ ಹೋರಾಟಗಾರರು ಅನೇಕರು ಜೈಲು ಶಿಕ್ಷೆಯನ್ನು ಮೇಲ್ವರ್ಗದ ಬಲದಿಂದ ಅನುಭವಿಸಿದರು. ಕೊನೆಗೆ ಅಪರ ಎಡಬಿಡದ ಹೋರಾಟಗಳ ಪ್ರಯತ್ನಗಳಿಂದ ಜಯ ಲಭಿಸಿತಲ್ಲದೆ, ಅನೇಕ ದಲಿತ ಜೀತಗಾರರು, ಜೀತಗಾರಿಕೆಯಿಂದ ಮುಕ್ತರಾದರು. ಪುನರ್‌ವಸತಿಗ್ರಾಮ ರಚನೆಗೊಂಡು ಶಂಬೂಕನಗರ ಎಂಬ ದಲಿತರ ಊರು ನಿರ್ಮಾಣವಾಯಿತು. ಸುಮಾರು ೮೦೦ ಎಕರೆಸರ್ಕಾರಿ ಕಾಯ್ದಿಟ್ಟ ಭೂಮಿಯಲ್ಲಿ ೬೦೦ ಎಕರೆ ದಲಿತರ ಜೀವನ ಸಾಗಾಟನೆಗೆ ಕಾನೂನು ಕ್ರಮದಂತೆ ನಿಯೋಗಗೊಂಡಿತು.[೩೬] ಇದರಿಂದ ಕೋಲಾರ ಜಿಲ್ಲೆಯಲ್ಲಿ ದಲಿತ ಸಂಘಟನೆ ಬಲವನ್ನುಂಟು ಮಾಡಿದಲ್ಲದೆ ದಲಿತರಲ್ಲಿ ಚೇತನವನ್ನುಂಟು ಮಾಡಿದೆ.

ಇದೇ ರೀತಿ ಶ್ರೀನಿವಾಸಪುರ ತಾಲ್ಲೂಕಿನ ಮರಸನಪಲ್ಲಿ ಎಂಬ ಗ್ರಾಮದಲ್ಲಿ ೧೯೮೨ರಲ್ಲಿ ದಲಿತರು ಅನಿವಾರ್ಯವಾಗಿ ಹೋರಾಟ ಮಾಡುವುದರ ಮೂಲಕ ತಮ್ಮ ಸ್ವಾಭಿಮಾನದ ಹಕ್ಕು ಸೌಲಭ್ಯಗಳನ್ನು ಉಳಿಸಿಕೊಳ್ಳಲೇಬೇಕಾಯಿತು. ಈ ಮರಸನಪಲ್ಲಿಯಲ್ಲಿ ರಾಮೂರ್ತಿ, ಜಿ. ವೆಂಕಟರಾಯಪ್ಪನೆಂಬ ಇಬ್ಬರು ಇಡೀ ಹಳ್ಳಿಯ ಮೇಲೆ ಓಡಿತ ಹೊಂದಿದಲ್ಲಿದೆ. ಬೃಹತ್ ಭೂಪ್ರದೇಶ ಆಸ್ತಿಪಾಸ್ತಿ ಹೊಂದಿದರು. ಅಲ್ಲದೆ ಸರ್ಕಾರದಿಂದ ಬರುವ ಪ್ರತಿ ಯೋಜನೆಗಳು, ಅಂಚೆ ಕಾರ್ಯದ ಸಮೇತ ಇವರ ಸೌಮ್ಯತೆಗೆ ಒಳಗಾಗಿತ್ತು. ಇವರಿಗೆ ಅನಕ್ಷರಸ್ಥರಾದ, ಅಜ್ಞಾನಿಗಳಾದ, ಭೂಹೀನರಾದ ಸುಮಾರು ೬೮ ಜೀತಗಾರರು ಇದ್ದು ಉಳಿದ ೩೦೦ ಜನ ದಲಿತರು ಅವರ ಹೊಲಗದ್ದೆಗಳಲ್ಲಿ ಕೂಲಿ ಮಾಡಿ ಜೀವನ ಸಾಗುತ್ತಿದ್ದರು. ಇವರಲ್ಲಿ ಇಬ್ಬರಿಗೆ ಭೂಮಿ ಇದ್ದು ಉಳಿದವರಿಗೆ ಇರಲಿಲ್ಲ.[೩೭] ಸುಮಾರು ೩೦ ವರ್ಷಗಳಿಂದ ಇದೇ ರೀತಿ ಮುಂದುವರೆಯುತ್ತಾ ಬಂದು ೧೯೮೨ರಲ್ಲಿ ದಲಿತ ಸಂಘಟನ ಸಮಿತಿ ಮುಖಂಡರಾದ ಶಿವಣ್ಣ, ಮುನಿಸ್ವಾಮಿ, ನಾಗರಾಜು ಮುಂತಾದವರ ನೇತೃತ್ವದಲ್ಲಿ ಸುಮಾರು ಮೂರು ದಿನಗಳ ಕಾಲ ಅಲ್ಲಿನ ದಲಿತರನ್ನು ಸಂಘಟಿಸಿ, ಕೋಲಾರ ಜಿಲ್ಲಾ ಪಂಚಾಯ್ತಿ ಎದುರಿಗೆ ಧರಣಿ ನಡೆಸಲು ಜಾಥ ನಡೆಸಿದರು.[೩೮] ತೀವ್ರತರ ಹೋರಾಟದ ಫಲವಾಗಿ

ಸರ್ಕಾರ ಜೀತ ಮುಕ್ತತೆ ಮಾಡುವುದರೊಂದಿಗೆ ೧೨ ಜನರಿಗೆ ತಲಾ ಎರಡು ಎಕರೆಯಂತೆ ಹೊಸಹುದ್ಯ ಗೋಮಾಳ ಸರ್ವೇ ನಂ. ೧೩೩ರಲ್ಲಿ ಭೂಮಿ ಸರ್ವೇ ಸಂ. ೧೭೫, ೧೭೬, ೧೭೭ರ ಪ್ರಕಾರ ೫೭ ಎಕರೆ ದಲಿತರಿಗೆ ಬಿಟ್ಟುಕೊಡಲಾಯಿತು.[೬೯]

ಹೀಗೆ ಭೂಮಿಗಾಗಿ ಮತ್ತು ಜೀತ ಮುಕ್ತಿಗಾಗಿ ಒಂಪಡೆ ಹೋರಾಟವಾದರೆ, ಜಾತಿ ವೈಶಮ್ಯದಿಂದ ಇನ್ನಷ್ಟು ಭೀಕರ ಘಟನೆಗಳು ನಡೆದಿರುವುದು ಕೋಲಾರ ಪ್ರದೇಶದ ದಲಿತರ ಚರಿತ್ರೆಯಲ್ಲಿ ಕಂಡುಬರುತ್ತದೆ ಮತ್ತು ಜಾಗತೀಕರಣದ ಯುಗದಲ್ಲಿ ಇಂತಹ ಘಟನೆಗಳಿಂದ ಇಡೀ ಮಾನವ ಕುಲ ಮಾನವೀಯತೆಗಳಿಂದ ತಲೆತಗ್ಗಿಸುವಂತಾಗಿದೆ. ಪ್ರಾಯಶಃ ಈ ಘಟನೆಗಳು ಇಂದಿನ ಚಲನಚಿತ್ರಗಳಲ್ಲಿ ನಾಟಕೀಯದಂತೆ ಕಂಡರು. ವಸ್ತುಸ್ಥಿತಿಯಲ್ಲಿ ಅವು ನಿಜವಾಗಿರುವುದು ಗಂಭೀರವಾದ ವಿಷಯವಾಗಿದೆ. ಇದಕ್ಕೆ ೧೯೯೭ರಲ್ಲಿ ನಡೆದ ಬಲ್ಲಾಂಡ್ಲಹಳ್ಳಿಯ ಸಂಘರ್ಷ ಮತ್ತು ೨೦೦೦ ಇಸವಿಯಲ್ಲಿ ನಡೆದ ಕಂಬಾಲಪಲ್ಲಿ ದಲಿತರ ಸಜೀವದಹನದ ಘಟನೆಗಳು ಸಾಕ್ಷಿಗಳಾಗಿವೆ. ಅಂದರೆ ಚಿಂತಾಮಣಿ ತಾಲ್ಲೂಕಿ ಬಿಲ್ಲಾಂಡಹಳ್ಳಿಯಲ್ಲಿ ಸು. ೨೦೦ ಒಕ್ಕಲಿಗರ ಕುಟುಂಬಗಳಿದ್ದು, ೭೫ ದಲಿತ ಕುಟುಂಬಗಳಿದ್ದವು. ಮೊದಲನಿಂದಲೂ ಈ ಎರಡು ಗುಂಪುಗಳ ನಡುವೆ ವೈಶಮ್ಯ ಇತ್ತು. ೧೯೯೭ರಲ್ಲಿ ಈ ಎರಡು ಗುಂಪುಗಳಲ್ಲಿ ಏಕಕಾಲದಲ್ಲಿ ಸಂಘಟನೆಗಳು ಸ್ಥಾಪಿಸುವಂತಾಗಿತ್ತು. ಗಂಭೀರವಾಗಿರುವುದು ಪೊಲೀಸರು ಸ್ಥಳಕ್ಕೆ ಧಾವಿಸಿದರು. ನಡೆದ ಘರ್ಷಣೆಯಲ್ಲಿ ಮೂರು ಜನ ಪೊಲೀಸರು ಮತ್ತು ಒಕ್ಕಲಿಗನಾದ ಸುಧಾಕರ ರೆಡ್ಡಿ ಸಾವಿಗೀಡಾದರು. ಇದರಲ್ಲಿ ದಲಿತರಿಗೆ ಅನ್ಯಾಯ ಕಂಡುಬಂದು ದಲಿತ ಸಂಘಟನ ಸಮಿತಿಯ ಸಂಚಾಲಕರಾದ ಜಯಣ್ಣನವರ ನೇತೃತ್ವದಲ್ಲಿ ಧರಣಿ ನಡೆಸಿದರು. ಆದರೂ ಫಲವೇನ್ನುಂಟು ಮಾಡಲಿಲ್ಲ.[೭೦] ಇದೇ ರೀತಿ ಮಾರ್ಚ್ ೨೦೦೦ರಂದು ಅದೇ ತಾಲೂಕಿನ ಕಂಬಾಲಪಲ್ಲಿಯಲ್ಲಿ ಎರಡು ಗುಂಪುಗಳ ನಡುವೆ ವೈಶಮ್ಯದಿಂದ ಘರ್ಷಣೆ ಉಂಟಾಯಿತು. ಒಕ್ಕಲಿಗರ ಗುಂಪುನವರು ದಲಿತರ ಮನೆಗಳಿಗೆ ಬೆಂಕಿ ಹಚ್ಚಿದರು. ಇದರಲ್ಲಿ ಮೂರು ದಲಿತ ಮನೆಗಳು ಭಸ್ಮವಾಗುವುದರೊಂದಿಗೆ ಶ್ರೀರಾಮಪ್ಪ, ಅಂಜಿನಪ್ಪ, ರಾಮಕ್ಕ, ಸುಬ್ಬಕ್ಕ, ಪಾಪಮ್ಮ, ನರಸಿಂಹಯ್ಯ, ಚಿಕ್ಕ ಪಾಪಣ್ಣ ಎಂಬ ದಲಿತ ಜನರು ಸುಟ್ಟು ಕರಗಿದರು.[೭೧] ಇದರಿಂದ ರಾಜ್ಯವಲ್ಲದೆ, ಇಡೀ ದೇಶವೇ ಕೋಲಾರ ಜಿಲ್ಲೆಯ ದಲಿತರ ಬಗ್ಗೆ ಚಿಂತಿಸುವಂತಾಯಿತು. ಅಂದಿನ ಲೋಕಸಭಾ ವಿರೋಧ ಪಕ್ಷದ ನಾಯಕಿ ಶ್ರೀಮತಿ ಸೋನಿಯಾಗಾಂಧಿ ಸ್ಥಳಕ್ಕೆ ಭೇಟಿ ಕೊಟ್ಟದಲ್ಲದೆ, ರಾಜ್ಯದ ಮುಖ್ಯಮಂತ್ರಿ ಎಸ್.ಎಂ. ಕೃಷ್ಣರವರು ಇದಕ್ಕೆ ನೈತಿಕವಾಗಿ ಕಾರಣರಾಗಿದ್ದಾರೆಂದು ದಲಿತ ಸಂಘಟನೆಕಾರರು ಅವರ ಪದವಿ ವಿಸರ್ಜನೆಗೆ ಪ್ರತಿಭಟನೆಗಳು ನಡೆಸಿದರು. ಒಕ್ಕಲಿಗರ ಬರ್ಬರ ಕೃತ್ಯದ ವಿರುದ್ಧ ಎನ್. ಶಿವಣ್ಣ, ಶ್ರೀಧರ, ಕಲವೀರ, ಎಂ. ವಿರೂಪಾಕ್ಷಿ, ಎಂ. ದೇವದಾಸ ಮುಂತಾದವರು ರಾಜ್ಯಾದ್ಯಂತ ಪ್ರತಿಭಟನೆಗಳು, ರ್‍ಯಾಲಿ, ಧರಣಿಗಳು, ನಡೆಸಿದರು. ಇದರಿಂದ ಅಲ್ಲಿನ ದಲಿತರಿಗೆ ಸೂಕ್ತ ಸಂಹಾರ ಒದಗಿಸುವಂತಾಯಿತು. ಅಲ್ಲದೆ ದಲಿತರ ಚರಿತ್ರೆಯಲ್ಲಿ ಹಾಗೂ ಸಾಮಾಜಿಕ ಹಿನ್ನೆಲೆಯ ಐತಿಹಾಸಿಕ ವಿಷಯವಾಗಿ ಪರಿಗಣಿಸಲಾಯಿತು.[೭೨] ಇದರಿಂದ ದಲಿತರು ತಮ್ಮ ಸಮಸ್ಯೆಗಳ ನಿವಾರಣೆಗೆ ಸಂಘಟನೆಗಳನ್ನು ಕಟ್ಟಿಕೊಂಡು ಹೋರಾಟ ನಡೆಸಿರುವುದು ಅನಿವಾರ್ಯ ಕಂಡಿದ್ದಲ್ಲದೆ, ದಲಿತ ಚರಿತ್ರೆ ರಚನೆಗೆ ಪ್ರೇರಣೆಯನ್ನುಂಟು ಮಾಡಿತು ಎಂದು ವ್ಯಕ್ತವಾಗುತ್ತದೆ.

ಇದು ದಲಿತರ ಹೋರಾಟದ ಸ್ವರೂಪ ಒಂದಾದರೆ ಮತ್ತೊಂದು ಕಡೆ ಸರ್ಕಾರ ಸಂವಿಧಾನದ ಕಾಯ್ದೆಗಳ ಅನುಗುಣವಾಗಿ ಹಲವಾರು ದಲಿತ ಸುಧಾರಣೆಗಳು ಜಾರಿಗೆ ತಂದಿರುವುದು ಕಂಡುಬರುತ್ತದೆ. ಹೀಗಾಗಿ ಸ್ವಾತಂತ್ರ್ಯದ ನಂತರ ದಲಿತರಲ್ಲಿ ನವೀನತೆ, ಜಾಗೃತಿ ಹಾಗೂ ನಾಗರಿಕತೆ ಲಕ್ಷಣಗಳು ಹಿಂದಿನ ಕಾಲಕ್ಕಿಂತ ಸ್ವಲ್ಪ ಸುಧಾರಣೆಯ ಹಾದಿಯಲ್ಲಿ ಕಂಡುಬಂದಿವೆ ಎಂದರೆ ತಪ್ಪಾಗಲಾರದು. ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಸಾಮಾಜಿಕ ಕಲ್ಯಾಣ ಇಲಾಖೆ ಸ್ಥಾಪನಗೊಂಡು ದಲಿತರು, ಕೆಳವರ್ಗ ಜನರ ಅಭಿವೃದ್ಧಿಗಾಗಿ ಹಲವಾರು ಸುಧಾರಣೆಗಳು ಮಾಡುತ್ತಾ ಬಂದಿದೆ. ಅಂತಹವುಗಳಲ್ಲಿ ೧೯೯೯ರ ಹೊತ್ತಿಗೆ ೨೫ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳು ೨೭ ಮೆಟ್ರಿಕ್ ದಲಿತರ ವಿದ್ಯಾರ್ಥಿನಿಲಯಗಳು ೪ ಆಶ್ರಯ ವಸತಿ ಶಾಲೆಗಳು ೩ ಅನುದಾನಿತ ವಿದ್ಯಾರ್ಥಿ ನಿಲಯಗಳು ೬, ಮಹಿಳಾ ಹೊಲಿಗೆ ತರಬೇತಿ ಕೇಂದ್ರಗಳನ್ನು ಸ್ಥಾಪಿಸಿದರು. ಮಹಿಳೆಯರಿಗೆ ಉಚಿತ ಹಾಸ್ಟೆಲ್ ವಸತಿ ಹಾಗೂ ಪ್ರೋತ್ಸಾಹಧನ ಒದಗಿಸುತ್ತದೆ. ಕಾನೂನು ಪದವಿಧಾರರಿಗೆ ಪ್ರೋತ್ಸಾಹಧನ ನೀಡುತ್ತಿದೆ. ಸ್ವಯಂ ಉದ್ಯೋಗ ಯೋಜನೆ ಅಡಿಯಲ್ಲಿ ೫೦೦೦ರವರಿಗೆ ಸಾಲ ಸೌಲಭ್ಯಗಳು, ಐ.ಎಸ್.ಬಿ. ಯೋಜನೆ ಅಡಿಯಲ್ಲಿ ವಿದ್ಯಾವಂತ ನಿರುದ್ಯೋಗಿಗಳಿಗೆ ನೆರವು, ಭೂ ಒಡೆತನ ಯೋಜನೆ ಅಡಿಯಲ್ಲಿ ಭೂರಹಿತ ದಲಿತರು ಕೆಳವರ್ಗ ಜನರಿಗೆ ಭೂಮಿ ಒದಗಿಸುವಿಕೆ, ಗಂಗಾ ಕಲ್ಯಾಣ ಯೋಜನೆ ಅಡಿಯಲ್ಲಿ ಉಚಿತ ನೀರಾವರಿ ಸೌಲಭ್ಯ ಒದಗಿಸಿದೆ ಎಂದು ಅಂಬೇಡ್ಕರ ವಿಶೇಷ ಸಂಚಿಕೆಯಿಂದ ವ್ಯಕ್ತವಾಗುತ್ತದೆ.[೪೩]

ಆದರೂ ಈ ಅಭಿವೃದ್ಧಿ ಸಾಕಷ್ಟು ಕಂಡಿಲ್ಲ. ಮತ್ತು/ಪ್ರಬಲ ವರ್ಗದವರ ದಮನಿಯ ನೀತಿಯಿಂದ ಇಂದಿಗೂ ಹಳ್ಳಿಗಾಡಿನಲ್ಲಿ ದಲಿತರ ಶೋಷಣೆ ಹಾಗೂ ಊಳಿಗಮಾನ್ಯ ಸ್ವರೂಪದಿಂದ ಮುಕ್ತವಾಗಿಲ್ಲ, ಒಂದು ಸಂಪ್ರದಾಯ ಅಡಿಯಲ್ಲಿಯೇ ಇದ್ದು, ಶೋಷಣೆಯಲ್ಲಿಯೇ ಕಮರಿ ಕೊಂಡಿದ್ದಾರೆ. ಇದರ ಜೊತೆಗೆ ದಲಿತ ಸಂಘಟನೆಗಳಲ್ಲಿಯೇ ಹಲವಾರು ಒಡಕುಗಳು ಉಂಟಾಗಿ ವಿಭಜನೆಗೊಂಡು ಅವರ ಅಭಿವೃದ್ಧಿ ಹಿಂದುಳಿಯುವಿಕೆಗೆ ಅವರೇ ಕಾರಣರಾಗಿದ್ದಾರೆ. ಲಕ್ಷ್ಮಣ್ ತೆಲಗಾವಿರವರು ಬರೆದಿರುವ ಲೇಖನಿಗಳಿಂದಲೇ ವ್ಯಕ್ತವಾಗುತ್ತದೆ.[೪೪] ಅಲ್ಲದೆ ಸರ್ಕಾರದಿಂದ ಬಹುತೇಕ ಸೌಲಭ್ಯಗಳು ಪ್ರಬಲ ವರ್ಗಗಳ ಮತ್ತು ಸರ್ಕಾರಿ ಇಲಾಖೆಗಳಲ್ಲಿಯೇ ಅವ್ಯವಹಾರಗಳು ನಡೆಯುತ್ತಾ ಬಂದು ದಲಿತರು ನಿರಂತರವಾಗಿ ಸೌಲಭ್ಯಗಳಿಗಾಗಿ ಮತ್ತು ಸಾಮಾಜಿಕ ನ್ಯಾಯಕ್ಕಾಗಿ ಹೋರಾಟ ಮಾಡುತ್ತಲೇ ಇದ್ದಾರೆ ಎಂದು ಇತ್ತೀಚಿನ ವೃತ್ತ ಪತ್ರಿಕೆಗಳಿಂದಲೆ ವ್ಯಕ್ತವಾಗುತ್ತದೆ.[೪೫] ಈ ಪ್ರಯತ್ನದಲ್ಲಿ ಅವು ಇನ್ನಷ್ಟು ಬಿಗಡಗೊಂಡಿವೆ ಎಂದು ಇದರಿಂದಲೇ ವ್ಯಕ್ತವಾಗುತ್ತದೆ.

* * *

ಇಂತಹ ಘರ್ಷಣಾತ್ಮಕ ಚರಿತ್ರೆಯನ್ನು ಹೊಂದಿದ್ದರು. ಈ ಕುರಿತು ಚರಿತ್ರೆಯಲ್ಲಿ ಹೆಚ್ಚಿನ ಅಧ್ಯಯನಗಳು ನಡೆದಿಲ್ಲ ಮತ್ತು ಕೆಲವು ದಲಿತ ಸಾಹಿತ್ಯಗಳು ಉಳಿದು ಬೇರೆಯವರು ನಿರ್ಲಕ್ಷಿಸಿದ್ದಾರೆ ಎಂದೇ ಹೇಳಲಾಗುತ್ತದೆ. ಆದರೂ ಕೋಲಾರ ಪ್ರದೇಶದ ದಲಿತರು ಮತ್ತು ಕೆಳವರ್ಗ ಜನರ ಚರಿತ್ರೆ

ಕೋಲಾರ ಜಿಲ್ಲೆಯ ಚರಿತ್ರೆಯಲ್ಲಿ ಅಲ್ಲದೆ ಕರ್ನಾಟಕ ಚರಿತ್ರೆಯಲ್ಲಿ ವಿಶೇಷ ಗಳಿಸಿದೆ ಎಂಬುದು ಲಕ್ಷ್ಮೀಪತಿಯವರ ಮರಸನದಲ್ಲಿ ದಲಿತರ ಹೋರಾಟ, ಗಂಗಾಧರಮೂರ್ತಿರವರ 'ಹೆಚ್. ನಾಗಸಂದ್ರ ಭೂ ಆಕ್ರಮಣದ ಹೋರಾಟ', ಹೆಚ್.ಎಂ. ರಾಮಚಂದ್ರಪ್ಪನವರು ಸಂಪಾದನೆ ಕೃತಿಯಾದ 'ನಾಲ್ಕನೇ ದಲಿತ ಸಮ್ಮೇಳನ ಸ್ಮರಣ ಸಂಚಿಕೆ', ಓ ಶ್ರೀಧರನ ಮತ್ತು ಎಂ. ಮುನಿಯಪ್ಪನವರ 'ಕಂಬಾಲಪಲ್ಲಿ ದಲಿತರ ಸಂಜೀವ ದಹನ' ಮುಂತಾದ ಕೃತಿಗಳಿಂದ ವ್ಯಕ್ತವಾಗುತ್ತದೆ.

೬.೨. ಮಹಿಳೆ ಪ್ರಶ್ನೆಗಳು

ವಸಾಹತು ಕಾಲದಲ್ಲಿಯೇ ಸಮಾಜ ಸುಧಾರಕರು, ವಸಾಹತುಶಾಹಿಗಳು ಮಹಿಳೆಯರ ಸ್ಥಿತಿಗತಿಗಳಲ್ಲಿ ಸುಧಾರಣೆಗಳನ್ನು ಮಾಡಿದರು. ಆದರೆ ಜಡತ್ವ ಹೊಂದಿ ಹಿಂದೂ ಸಮಾಜದಲ್ಲಿ ಅಂತಹ ಪ್ರಯತ್ನಗಳು ಆಮೆ ಹೆಜ್ಜೆಯಲ್ಲಿ ಮುಂದುವರಿದವು. ಸ್ವತಂತ್ರ್ಯದ ನಂತರ ಅಂದರೆ, ೧೯೭೦ರಲ್ಲಿ ವಿಶ್ವಸಂಸ್ಥೆ ಮಹಿಳೆಯರ ಬಗೆಗೆ ಹೊಸ ಅಧ್ಯಯನ ಕಾರ್ಯಕ್ರಮ ಕೈಗೊಂಡಿತು. ಇದರಂತೆ ಭಾರತ ಹಾಗೂ ಇತರೆ ದೇಶಗಳಲ್ಲಿಯೂ ಮಹಿಳೆಯರ ಸ್ಥಿತಿಗತಿ ತಿಳಿಯಲು ಆಯೋಗಗಳು ರಚಿಸಿದವು. ವಿಶ್ವಸಂಸ್ಥೆ ೧೯೭೫ನ್ನು ಅಂತರರಾಷ್ಟ್ರೀಯ ಮಹಿಳಾ ವರ್ಷವೆಂದು ಕರೆಯಿತು. ಇದರಿಂದ ಸಮಾಜದ ಎಲ್ಲ ವಿದ್ವಾಂಸರು ಮಹಿಳೆಯರ ಕುರಿತು ಅಧ್ಯಯನ ಮಾಡಲು ವಿಶೇಷವಾಗಿ ಕಾಳಜಿವಹಿಸಿದರು. ಈವರೆಗಿನ ರಾಜಕೀಯ ಮಹತ್ವದ ಘಟನೆಗಳನ್ನು ದಾಖಲಿಸುವಾಗ ಮಹಿಳೆಯರ ಪ್ರಸ್ತಾಪವನ್ನೇ ಮಾಡಿಲ್ಲವೆಂಬ ಸ್ಪಷ್ಟ ಗೋಚರ ಸಂಗತಿಯನ್ನು ಮೊದಲಿಗೆ ಗಮನಿಸತೊಡಗಿದ್ದು, ಈ ವಲಯದ ಇತಿಹಾಸಕಾರರ ಗುಂಪುದಾಗಿದೆ. ಜಾತಿಯ ಅಧ್ಯಯನ ಮುಂದುವರೆದಂತೆ ವಿವಿಧ ಕ್ಷೇತ್ರಗಳಲ್ಲಿ ಮಹಿಳಾ ಸಂಬಂಧಿ ಸಂಗತಿಗಳ ಮಹತ್ವಗಳೂ ವೈಶಿಷ್ಟ್ಯಗಳು ಗಮನಕ್ಕೆ ಬರತೊಡಗಿದವು. ಇದರಿಂದ ಚರಿತ್ರೆಯ ರಚನೆಯಲ್ಲಿ ಹೊಸ ಅಧ್ಯಾಯಗಳು ಪ್ರಾರಂಭವಾದವು.[೪೬]

I

ಕೋಲಾರ ಪ್ರದೇಶದ ಚರಿತ್ರೆಯಲ್ಲಿ ಮಹಿಳೆಯರ ಚರಿತ್ರೆಯನ್ನು ಅವಲೋಕಿಸುವಾಗ ಮುಖ್ಯವಾಗಿ ಮೇಲ್ವರ್ಗದ ಮಹಿಳೆಯರು, ಕೆಳವರ್ಗದ ಮಹಿಳೆಯರು ದೃಷ್ಟಿಯನ್ನು ಕಾಣಲಾಗುತ್ತದೆ. ಮೇಲ್ವರ್ಗದ ಮಹಿಳೆಯರು ಮನೆಯ ಒಳಗೆ ಹೆಚ್ಚಾಗಿ ದುಡಿಯುವರಾಗಿದ್ದು, ಕೆಳವರ್ಗದ ಮಹಿಳೆಯರು ಮನೆಯ ಹೊರಗೆ ಮಳೆ ಬಿಸಿಲು ಎನ್ನದೆ ದುಡಿಯುವರಾಗಿದ್ದಾರೆ ಮತ್ತು ಹೆಚ್ಚು ಶೋಷಣೆಗೆ ಒಳಪಟ್ಟಿರುವವರಾಗಿದ್ದಾರೆ ಎಂದು ಹೆಚ್.ಎಂ. ರಾಮಚಂದ್ರಪ್ಪನವರ ಸಂಪಾದಿತ ಕೃತಿಯಾದ ಕೋಲಾರ ಜಿಲ್ಲೆಯ ೬ನೇ ದಂತ ಸಮ್ಮೇಳನ ಎಂಬ ಸ್ಮರಣ ಕೃತಿಯಿಂದ ವ್ಯಕ್ತವಾಗುತ್ತದೆ. ೧೯೫೧ರಲ್ಲಿ ೫೫೬೧೭೮ರಷ್ಟು ಎಂಬ ಸ್ಮರಣ ಕೃತಿಯಿಂದ ವ್ಯಕ್ತವಾಗುತ್ತದೆ. ೧೯೫೧ರಲ್ಲಿ ೫೫೭೧೭೮ರಷ್ಟು ಹೆಂಗಸರು ಇದ್ದು, ಇದರಲ್ಲಿ ೧.೬೦೯೫೬ ಪರಿಶಿಷ್ಟ ಜಾತಿ ಮಹಿಳೆಯರು ಇದ್ದು, ೩೯೩ ಉಧ್ಯಾಯನಿಯರು ಹಾಗೂ ೨೦.೭೫೮ ವಿದ್ಯಾರ್ಥಿನಿಯರು ಇರುವುದು ಪ್ರಾಥಮಿಕ ಹಂತದಲ್ಲಿ ಕಂಡುಬರುತ್ತಾರೆ.[೪೭] ಅಂತರಜಾತಿ ವಿವಾಹಗಳಿಗೆ ಮೇಲ್ವರ್ಗಗಳ ಜನರಲ್ಲಿ

ಅವಕಾಶವಿರಲಿಲ್ಲ. ಬ್ರಾಹ್ಮಣರಲ್ಲಿ ಕನ್ಯಾಧಾನ ಪದ್ಧತಿ ಹೆಚ್ಚಾಗಿತ್ತು. ವರದಕ್ಷಿಣೆ ಪದ್ಧತಿ ೭೦ರ ದಶಕದವರೆಗೂ ಪ್ರಚಲಿತದಲ್ಲಿತ್ತು ಮತ್ತು ಇಂದಿಗೂ ತೆರೆಮರೆಯಲ್ಲಿ ಮುಂದುವರೆಯುತ್ತಿದೆ. ವಿದುವಾ ವಿವಾಹ ಪದ್ಧತಿ ಸಾಮಾನ್ಯವಾಗಿ ಅನುಸರಿಸುತ್ತಿರಲಿಲ್ಲವೆಂದು ಗೆಜೆಟಿಯರುಗಳಿಂದ ತಿಳಿದುಬರುತ್ತದೆ.[೪೮] ಆದರೆ ಇತ್ತೀಚೆಗೆ ಸರ್ಕಾರದ ಸುಧಾರಣೆ ಹಾಗೂ ನಾಗರೀಕರಣದ ಪ್ರಭಾವದಿಂದ ಇದು ಸ್ವಲ್ಪ ಸುಧಾರಣೆಗೊಂಡಿದೆ. ಈ ಅವಧಿಯಲ್ಲಿ ಸುಮಾರು ೭೪.೩೩೫೫೩ ಹೆಂಗಸರು ಇದ್ದು, ಅದರಲ್ಲಿ ೯೫೧೧೮ ಕೆಲಸಗಾರರು ಹಾಗೂ ೬೪೮೨೩೫ ಅರೆಕೆಲಸ ಮಾಡುವ ಹೆಂಗಸರು ಇದ್ದರು ಎಂದು ಜನಗಣತಿ ಕೃತಿಯಿಂದ ವ್ಯಕ್ತವಾಗುತ್ತದೆ.[೪೯] ೧೯೯೧ರ ಜನಗಣತಿ ಪ್ರಕಾರ ೧೦.೮೮೫೭೩ ಹೆಂಗಸರು ಇದ್ದು, ೨೬೪೭೩೧ ಪುರುಷರಿಗೆ ಪರಿಶಿಷ್ಟ ಜಾತಿಯಲ್ಲಿ ೨೮೨೦೩೪ ಪರಿಶಿಷ್ಟ ಪಂಗಡದಲ್ಲಿ ೧೫೩೦೧೯ ಜನರಾಗಿ ಹಂಚಿಕೆಗೊಂಡಿದ್ದಾರೆ. ಆದರೆ ಜಿಲ್ಲೆಯ ಪುರುಷರು ಪ್ರಧಾನವಾಗಿ ಕಂಡುಬರುವುದಲ್ಲದೆ ಎಲ್ಲಾ ಆರ್ಥಿಕ ವಲಯದಲ್ಲಿ ಅವರದೇ ಮೇಲಗೈ ಎನಿಸಿದೆ ಎಂಬುದು ಇದರಿಂದ ವ್ಯಕ್ತವಾಗುತ್ತದೆ. ಇದೇರೀತಿ ೨೦೦೧ರ ಜನಗಣತಿಯಲ್ಲಿ ಒಟ್ಟು ೨೮೭೮೧೪ ಪುರುಷರಿಗೆ ೧೬೮೭೦೦ ಹೆಂಗಸರು ಇದ್ದು, ಕೃಷಿ ಸಾಗುವಳಿಯನ್ನು ಹೊಂದಿದ್ದಾರೆ. ಮತ್ತು ಕೃಷಿ ಕಾರ್ಮಿಕರಾಗಿ ೧೪೯೭೭೭ ಪುರುಷರಿಗೆ ೧೩೫೮೭೬ ಹೆಂಗಸರು ಇದ್ದಾರೆ ಎಂದು ತಿಳಿದುಬರುತ್ತದೆ.[೫೦] ಈ ಮೇಲಿನ ಲಕ್ಷಣಗಳಲ್ಲಿ ೧೯೫೬ರಿಂದ ೨೦೦೨ರವರೆಗೂ ಒಂದೇ ತರನಾಗಿ ಪುರುಷ ಪ್ರಧಾನತೆಯನ್ನು ವ್ಯಕ್ತಪಡಿಸುತ್ತದಲ್ಲದೆ ಮಹಿಳೆಯರ ಸ್ಥಾನ ಕೆಳಮುಖಿಗೊಂಡಿದೆ ಎಂದು ವ್ಯಕ್ತವಾಗುತ್ತವೆ.

II

ಸ್ವಾತಂತ್ರ್ಯದ ನಂತರ ಮಹಿಳಾ ಅಭಿವೃದ್ಧಿಗೆ ಸರ್ಕಾರ ಅನೇಕ ಸುಧಾರಣೆಗಳು ಪಂಚ ವಾರ್ಷಿಕ ಯೋಜನೆಗಳಲ್ಲಿ ಜಾರಿಗೆ ಗೊಳಿಸಿದೆ. ಶಿಶು ಮತ್ತು ಮಹಿಳಾ ಅಭಿವೃದ್ಧಿ ಕಲ್ಯಾಣ ಇಲಾಖೆ, ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಮಹಿಳೆಯರ ಸ್ವಾವಲಂಬನೆ ತರಲು ಹೊಲಿಗೆ ತರಬೇತಿ ಕೇಂದ್ರಗಳು, ಉದ್ಯೋಗ ತರಬೇತಿ ಕೇಂದ್ರಗಳು ತೆರಿದಿದೆ. ಶಿಕ್ಷಣದಲ್ಲಿ ಮೀಸಲಾತಿ, ಉದ್ಯೋಗದಲ್ಲಿ ಮೀಸಲಾತಿ ಒದಗಿಸಲಾಗಿದೆ. ೧೯೯೧ರ ವೇಳೆಗೆ ಈ ಪ್ರಯತ್ನದಿಂದ ೩೭.೭೫೧ ಸಾಕ್ಷರತೆ ಪ್ರಮಾಣ ಹೊಂದಿದ್ದಾರೆ.[೫೧] ಅಲ್ಲದೇ ವಿದ್ಯಾರ್ಥಿವೀಯರಿಗೆ ವಿದ್ಯಾರ್ಥಿ ನಿಲಯಗಳು, ಉಚಿತ ಶಿಕ್ಷಣ ಹಾಗೂ ಪ್ರೋತ್ಸಾಹ ನೀಡಲಾಗಿದೆ ಎಂದು ಸಮಾಜ ಕಲ್ಯಾಣ ಇಲಾಖೆಯ ದಾಖಲಾತಿಗಳಿಂದ ವ್ಯಕ್ತವಾಗುತ್ತದೆ.[೫೨]

ಇತ್ತೀಚಿಗೆ ಸ್ವಸಹಾಯ ಗುಂಪುಗಳು, ಸ್ತ್ರಿ ಶಕ್ತಿ ಗುಂಪುಗಳು ದಲಿತ ಮಹಿಳಾ ಸಂಘಟನೆಗಳು ಹಾಗೂ ಇತರೆ ಮಹಿಳಾ ಸಂಘಟನೆಗಳು ರಚನೆಗೊಂಡು ಮಹಿಳೆಯರಲ್ಲಿ ಜಾಗೃತಿ ಮತ್ತು ತಿಳುವಳಿಕೆ ಮೂಡಿಸುತ್ತಾ ಮಹಿಳೆಯರಲ್ಲಿ ಸ್ವಾವಲಂಬನೆ ಹಾಗೂ ನಾಗರಿಕತೆಯನ್ನುಂಟು ಮಾಡುತ್ತಿವೆ. ಈ ಸಂಘಸಂಸ್ಥೆಗಳು ಮಹಿಳೆಯರ ಅಭಿಪ್ರಾಯಗಳನ್ನು ಅಭಿವ್ಯಕ್ತಿಸುವ ಮಾಧ್ಯಮಗಳಾಗಿವೆ. ಕಾಲಕ್ರಮೇಣ ರಾಜಕೀಯ ಹಾಗೂ ಸಾಮಾಜಿಕ ಸಂಸ್ಥೆಗಳನ್ನು ನಡೆಸಿಕೊಂಡು ಹೋಗುವ ಮಹಿಳಾ ಮುಂದಾಳುಗಳಿಗೆ ಸೂಕ್ತ ತರಬೇತಿಯನ್ನು ಕೊಡುವ ಆಧಾರಗಳೂ ಆದವು. ಮಕ್ಕಳು ಮತ್ತು ಮಹಿಳಾ ಅಭಿವೃದ್ಧಿ ಇಲಾಖೆಯ ಯೋಜನಾ ಕೃತಿಗಳು

ಹಾಗೂ ಜಿಲ್ಲಾ ದಲಿತ ಸಮ್ಮೇಳನ ಕೃತಿಗಳಿಂದ ವ್ಯಕ್ತವಾಗುತ್ತದೆ. ಇದಲ್ಲದೆ ಸರ್ಕಾರ ಆಡಳಿತ ವಿಭಾಗದಲ್ಲಿ ಮಹಿಳೆಯಂಗೆ ಮೀಸಲಾತಿ ಒದಗಿಸಿದ್ದು, ಅನಸೂಯ್ಯನ್ನು, ಸುಶೀಲಮ್ಮ, ವಿ. ಭಾಗ್ಯಮ್ಮ, ಪಾರ್ವತಮ್ಮ ಮುಂತಾದವು ವಿಧಾನಪರಿಷತ್‌ನ ಸದಸ್ಯರಾಗಿ ಜಿಲ್ಲಾ ಪಂಚಾಯ್ತಿ, ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿಯ ಅಧ್ಯಕ್ಷರು ಹಾಗೂ ಸದಸ್ಯರಾಗಿ ದುಡಿಯುತ್ತಾ ಬಂದರು. ರಾಜಕೀಯ ಕ್ಷೇತ್ರದಲ್ಲಿ ಮಹಿಳೆಯರಿಗೆ ಇರುವ ಸೌಲಭ್ಯ ಅಲ್ಪಪ್ರಮಾಣ ಎಂದು ಎನ್. ಜಗನ್ನಾಥ ಪ್ರಕಾಶ್‌ರವರ ಕೃತಿಯಿಂದ ವ್ಯಕ್ತವಾಗುತ್ತದೆ ಮತ್ತು ಸರ್ಕಾರಿ ದಾಖಲಾತಿಗಳಿಂದ ವ್ಯಕ್ತವಾಗುತ್ತದೆ.[೪೬] ಸಾಮಾಜಿಕ ಮಹಿಳೆಯರಿಗೆ ಕಾರ್ಖಾನೆಗಳಲ್ಲಿ ಕಡಿಮೆ ದುಡಿತ, ಹೆರಿಗೆ ಸೌಲಭ್ಯ, ಕಿರುಕುಳ ಅತ್ಯಾಚಾರಗಳ ವಿರುದ್ಧ ಕಾನೂನು ನೆರವು, ಮಹಿಳಾ ಸಂಘಟನೆಗಳಿಗೆ ಆದ್ಯತೆ ಮತ್ತು ತರಬೇತಿ ನೀಡಿಕೆ, ಮಹಿಳಾ ಶಿಕ್ಷಣ ತರಬೇತಿ ಹಾಗೂ ಅಧ್ಯಯನಾಂಗಗಳನ್ನು ಪ್ರಾರಂಭಿಸುವುದು ಮುಂತಾದ ಸವಲತ್ತುಗಳನ್ನು ಸ್ವತಂತ್ರ್ಯನಂತರ ಸರ್ಕಾರ ಹೆಚ್ಚಿಸಿದೆ.

III

ಹೀಗಿದ್ದರೂ ಕೋಲಾರ ಪ್ರದೇಶದ ಮಹಿಳೆಯರು ಇತರೆ ಪ್ರದೇಶದವರಂತೆ ಅನೇಕ ಸಮಸ್ಯೆಗಳು ಎದುರಿಸುತ್ತಾ ಬಂದಿದ್ದಾರೆ. ಪುರುಷ ಪ್ರಧಾನತೆಯಿಂದ ಅತ್ಯಾಚಾರ, ಕೊಲೆ, ಲೈಂಗಿಕ ಕಿರುಕುಳ, ದೌರ್ಜನ್ಯಗಳಲ್ಲಿ ಶೋಷಣೆ ಮಾಡುವುದಲ್ಲದೆ ಸಣ್ಣ ಕುಟುಂಬದಿಂದ ಹಿಡಿದ ಶ್ರೀಮಂತ ಕುಟುಂಬದವರ ಆಸ್ತಿಪಾಸ್ತಿಗಳ ಮೇಲೆ ವ್ಯವಹಾರಗಳಲ್ಲಿ ಅಷ್ಟಾಗಿ ಹಕ್ಕುಬಾದ್ಯತೆ ನೀಡಿಲ್ಲವೆಂದು ಕೆಳಗಿನ ಕೆಲವೊಂದು ಚಾರಿತ್ರಿಕ ಘಟನೆಗಳು ಸುತ್ತು ಹೋರಾಟಗಳಿಂದ ವ್ಯಕ್ತವಾಗುತ್ತದೆ.

೧೯೭೨ರಲ್ಲಿ ಕೋಲಾರ ತಾಲ್ಲೂಕಿನ ದಲಿತ ವಿದ್ಯಾರ್ಥಿನಿಯೊಬ್ಬಳು ಮೇಲ್ವರ್ಗದ ವ್ಯಕ್ತಿಯೊಬ್ಬನಿಂದ ಮಾನಭಂಗಕ್ಕೆ ಒಳಗಾದಾಗ ಕೆಲವು ಯುವ ವಿದ್ಯಾರ್ಥಿಗಳು, ಎನ್.ಸಿ.ಸಿ. ಸಮವಸ್ತ್ರಗಳೊಂದಿಗೆ ಸ್ಥಳಕ್ಕೆ ಧಾವಿಸಿ ತೀವ್ರತರ ಪ್ರತಿಭಟನೆ ಮಾಡಿದರು. ದಲಿತ ಸಂಘಟನೆ ಸಮಿತಿಯ ಸದಸ್ಯರಾದ ಎನ್. ಶಿವಣ್ಣ, ವಿ. ನಾಗರಾಜ ಮುಂತಾದವರ ನೇತೃತ್ವದಲ್ಲಿ ರಕ್ತದ ಬರಹಗಳಿಂದ ನ್ಯಾಯಕ್ಕಾಗಿ ಪ್ರಧಾನ ಇಂದಿರಾಗಾಂಧಿಗೆ ಮನವಿ ಸಲ್ಲಿಸಿದರು. ಅಲ್ಲದೆ, ಅಂದೇ ವಿದ್ಯಾರ್ಥಿ ಸಂಘಟನ ಸಮಿತಿ ಪ್ರಾರಂಭವಾಗಿ ವಿದ್ಯಾರ್ಥಿನಿಯರ ಸಮಸ್ಯಗಳತ್ತ ಸ್ಪಂದಿಸಿದರು ಎಂದು ಗಂಗಾಂಬಿಕೆ ಚಂಡಾಳರವರ ಕೃತಿಯಿಂದ ವ್ಯಕ್ತವಾಗುತ್ತದೆ.[೪೭]

೧೯೭೯ರಂದು ಕೋಲಾರ ಜಿಲ್ಲೆಯ ಚಿಕ್ಕಬಳ್ಳಾಪುರದ ಜಾಡಗಾನಹಳ್ಳಿಯ ನರಸಮ್ಮಳ ಮೇಲೆ, ಆ ಊರಿನ ಛೇರ್ಮನ್ ಮಗನಾದ ಭೈರಪ್ಪ ಎಂಬುವನು ಬಲತ್ಕಾರ ಸಂಬಂಧ ಬಯಲು ಮಾಡುತ್ತಾಳೆ ಎಂಬ ಕಾರಣಕ್ಕಾಗಿ ಭೀಕರವಾಗಿ ಕೊಲೆಮಾಡಿ ಅಧಿಕಾರಿಗಳ ಬಲದಿಂದ ಬಚಾವಾದ. ಈ ನಿರ್ಲಕ್ಷ್ಯತೆಯಿಂದ ಮಹಿಳೆಯರ ಮೇಲೆ ಅತ್ಯಾಚಾರ, ಮಾನಭಂಗ ಜಿಲ್ಲಾದ್ಯಂತ ಹೆಚ್ಚಾಗಿ ಕಂಡುಬರುತ್ತವೆ ಎಂದು ಗಂಗಾರಾಂ ಚಾಂಬಾಳರು ಹೇಳಿದ್ದಾರೆ.[೪೮] ಇದೇ ರೀತಿ ೧೯೭೯, ಆಗಸ್ಟ್ ೬ರಂದು ಕೋಲಾರ ಜಿಲ್ಲೆಯ ಮಾಲೂರು ತಾಲೂಕಿಗೆ ಸೇರಿದ ಹುಣಸೇಕೋಟೆಯ ಬಡ ಕುಟುಂಬದ ಶೇಷಗಿರಿಯಪ್ಪನ ಮಗಳಾದ ವಿಧವೆ ಅನುಸೂಯಮ್ಮಳ ಮೇಲೆ ಅದೇ ಗ್ರಾಮದ ಕೃಷ್ಣೇಗೌಡನ ತಮ್ಮನಾದ ವೆಂಕಟೇಶಪ್ಪ, ನಂಜುಂಡಪ್ಪ

ಮುಂತಾದವರು ಸೇರಿ ಅತ್ಯಾಚಾರವೆಸಗಿದ್ದಲ್ಲದೆ, ಅವಳ ತಂದೆಯನ್ನು ಕೊಲೆ ಮಾಡಿದರು. ಇದರಿಂದ ದಲಿತ ಸಂಘಟ ಸಮಿತಿ ನೇರವಾಗಿ ವಿಧಾನಸೌಧದವರೆಗೆ ನ್ಯಾಯಕ್ಕಾಗಿ ಜಾಥ ಹೂಡಿದ್ದಲ್ಲದೆ, ಈ ಬಗ್ಗೆ ವಿವಿಧ ರೀತಿಯ ಪ್ರತಿಭಟನಾ ಕಾರ್ಯಕ್ರಮಗಳನ್ನು ಜಿಲ್ಲಾ ಮತ್ತು ರಾಜ್ಯಾದ್ಯಾಂತ ನಡೆಸಲಾಯಿತು. ಹಾಗೂ ದಲಿತ ಮಹಿಳಾ ಸಂಘಟನೆ ಪ್ರಾರಂಭವಾಗಿ ಅನುಸೂಯಮ್ಮಳೇ ಅದರ ಅಧ್ಯಕ್ಷತೆಯನ್ನು ವಹಿಸಿ ದಲಿತ ಮಹಿಳೆಯರಿಗೆ ಧೈರ್ಯ ತುಂಬಿದಳು ಎಂದು ಕೆ.ಎಂ. ಕೊಮ್ಮಣ್ಣನವರು ಹೇಳಿದ್ದಾರೆ.[೫೭]

ಜಮೀನಿನ ಪ್ರಕರಣವಾಗಿ ಮೇಲುವರ್ಗದ ನಾರಾಯಣಪ್ಪ ಗೌಡರು ಮತ್ತು ಅವರ ಸಹಚರರು ಇದರಂತೆ ೧೯೭೯ ಅಕ್ಟೋಬರ್ ೨೪ರಂದು ಬಾಗೇಪಲ್ಲಿ ತಾಲ್ಲೂಕಿನ ಚರುಪಲ್ಲಿ ಗ್ರಾಮದ ಸಂಜೀವಮ್ಮ ಎಂಬ ದಲಿತ ಮಹಿಳೆಯನ್ನು ಕೆ.ಇ.ಬಿ. ಲೈಟು ಕಂಬಕ್ಕೆ ಕಟ್ಟಿ ಹಿಂಸಿಸಿದರು. ೧೯೮೦ರಲ್ಲಿ ಚಿಂತಾಮಣಿಯ ತಾಲ್ಲೂಕಿನ ಕನ್ನಂಪಲ್ಲಿಯ ನಾಗಮ್ಮ ಸೌದೆ ತರಲು ಹೋಗಿದ್ದಾಗ ಸದರಿ ಗ್ರಾಮದ ಮೇಲ್ವರ್ಗಗಳ ಯುವಕರು ಆಕೆಯ ಗಂಡನನ್ನು ಮರಕ್ಕೆ ಕಟ್ಟಿ ಆತನ ಎದುರಿನಲ್ಲಿಯೇ ಆತನ ಪತ್ನಿಯ ಮೇಲೆ ಅತ್ಯಾಚಾರ ಎಸಗಿದರು. ಇದನ್ನು ದಲಿತ ಸಂಘಟನಾ ಸಮಿತಿ, ತೀವ್ರವಾಗಿ ಕಂಡಿಸಿ ಪ್ರತಿಭಟನೆ ಮಾಡಿದರು. ಇದಲ್ಲದೆ ಶ್ರೀನಿವಾಸ ತಾಲ್ಲೂಕಿನ ಮರಸನಪಲ್ಲಿಯ ಮೇಲ್ವರ್ಗದ ರಾಮಮೂರ್ತಿ ಮೇ ೧೦, ೧೯೮೩ ರಿಂದ ಲಕ್ಕಮ್ಮ ಎಂಬ ಮಹಿಳೆಯನ್ನು ಮಹಾಭಾರತದ ದ್ರೌಪದಿಯಂತೆ ಬೆತ್ತಲೆಗೊಳಿಸಿ ಮಾನಭಂಗ ಮಾಡಿ ನಾಗರಿಕ ಸಮಾಜ ಅಪಮಾನಗೊಳಿಸಿದನು ಎಂದು ಕೆ.ಎಂ. ಕೊಮ್ಮಣ್ಣನವರು ೪ನೇ ಜಿಲ್ಲಾ ದಲಿತ ಸಮ್ಮೇಳನ ಸ್ಮರಣ ಕೃತಿಯಲ್ಲಿ ಹೇಳಿದ್ದಾನೆ. ಇದನ್ನೇ ಲಕ್ಷ್ಮೀಪತಿ, ಹೆಚ್.ಎಂ. ರಾಮಚಂದ್ರಪ್ಪ ಮುಂತಾದವರು ಹೇಳಿದ್ದಾರೆ.[೫೮]

ಇದೇ ರೀತಿ ಕೋಲಾರದ ಯಶೋಧಮ್ಮಳನ್ನು ತನ್ನದೇ ಆದ ಜಮೀನಿನ ವಿಚಾರದಲ್ಲಿ ನಿರ್ಧಾರ ಕೈಗೊಳ್ಳುವ ಸ್ವಾತಂತ್ರ್ಯ ಪ್ರಕಟಿಸಿದ ಕಾರಣಕ್ಕೆ ಭೀಕರವಾಗಿ ಎರಡು ಮಕ್ಕಳನ್ನು ಸೇರಿ ಕೊಲೆ ಮಾಡಲಾಯಿತು. ಅಲ್ಲಿನ ಪೊಲೀಸ್ ಇಲಾಖೆ ಕಣ್ಣೆದುರೇ ನಡದ ಈ ಗೂಂಡಾಗಿರಿಯ ಮೂಕ ಪ್ರೇಕವಾಗಿಯೇ ಉಳಿಯಿತು.[೫೯] ಇದು ಜಾತೀಯ ವೈಶಮ್ಯ ಹಾಗೂ ಭೂಮಿ ವ್ಯಾಮೋಹಗಳಿಂದ ಮಹಿಳೆಯರ ಮೇಲೆ ಒಂದು ಬಗೆಯ ದೌರ್ಜನ್ಯಗಳಾದರೆ ನಾಗರಿಕತೆ ಹೊಂದಿದ ಈ ಯುಗದಲ್ಲಿ ಶಿಕ್ಷಣ ಪಡೆದ ಮಹಿಳೆ ಉತ್ಪಾದನಾ ಉತ್ಯಮಗಳಲ್ಲಿ ಹಾಗೂ ಹಲವು ಸಂಸ್ಥೆಗಳಲ್ಲಿ ಉದ್ಯೋಗ ಪಡೆದು ಸ್ವಾವಲಂಬನೆ ಪಡೆಯುತ್ತಿರುವ ವೇಳೆಯಲ್ಲಿ ಪುರುಷನ ದೌರ್ಜನ್ಯ ಅಲ್ಲಿಯು ಕಂಡುಬಂದಿತು. ಇದಕ್ಕೆ ಜುಲೈ ೨೦೦೦ರಂದು ಚಿಕ್ಕಬಳ್ಳಾಪುರದ ಇಂಡಸ್ಟ್ರಿಯಲ್ ಕಂಪನಿಯಲ್ಲಿ ದುಡಿಯುತ್ತಿದ್ದ ೩೫ ಮಂದಿ ಯುವತಿಯರಿಗೆ ಕಂಪನಿಯವರು ಸರಿಯಾಗಿ ಸಂಬಳ ನೀಡದೆ ದೌರ್ಜನ್ಯ ಎಸಗಿದನು. ಇದರಿಂದ ಮಹಿಳಾ ಸಂಘಟನೆ ಅನಿವಾರ್ಯವಾಗಿ ಚಳುವಳಿ ನಡೆಸಿ ನ್ಯಾಯ ಪಡೆಯುವಂತಾಯಿತು ಎಂದು ಹೆಚ್.ವಿ. ಸೋಮಶೇಖರರವರು ಹೇಳಿದ್ದಾರೆ.[೬೦] ಇದೇ ರೀತಿ ಕೋಲಾರ ಜಿಲ್ಲಾದ್ಯಂತ ೧೯೯೯ರಿಂದ ೨೦೦೧ರವರೆಗೆ ಕೊದ್ದೂರಿ ನರಸಿಂಹನವರು ಮಹಿಳೆ ಮೇಲೆ ನಡೆದ ದೌರ್ಜನ್ಯ ಮತ್ತು ಅತ್ಯಾಚಾರಗಳನ್ನು ಕೆಳಕಂಡಂತೆ ಈ ರೀತಿ ಪಟ್ಟೀಕರಿಸಿದ್ದಾರೆ.

ವರ್ಷ	ವಿಷಯ	ಒಟ್ಟು ಜನ	ವಿಷಯ	ಒಟ್ಟು ಜನ	ವಿಷಯ	ಒಟ್ಟು ಜನ
೧೯೯೯	ಬಲಾತ್ಕಾರ	೧೪	ಅಪಹರಣ	೨೯	ವರದಕ್ಷಿಣೆ ಕೊಲೆ	೧೧
೨೦೦೦		೧೬		೦		೧೯
೨೦೦೧		೧೫		೧೯		೧೯

ಈ ಕಾರಣಗಳಿಂದ ಮಹಿಳಾ ಜಾಗೃತಿ ವೇದಿಕೆ ಸ್ಥಾಪನೆಗೊಂಡು ಪ್ರತಿಯೊಂದು ತಾಲ್ಲೂಕಿನಲ್ಲಿ ಪೊಲೀಸ್ ಇಲಾಖೆಯಿಂದ ಹಾಗೂ ಮಹಿಳಾ ಸಂಘಟನೆಗಳಿಂದ ಸೂಕ್ತವಾದ ತರಬೇತಿ ಹಾಗೂ ಸಲಹೆಗಳನ್ನು ಒದಗಿಸುತ್ತವೆ ಎಂದು ಕೊದ್ದರಿ ನರಸಿಂಹನವರು ಹೇಳಿದ್ದಾರೆ.

೧೯೮೦ ಮತ್ತು ೯೦ರ ದಶಕದಿಂದ ನಡೆದ ಮಹಿಳೆಯರು ಮೇಲಿನ ದೌರ್ಜನ್ಯಗಳಿಂದ ಅನೇಕ ಮಹಿಳಾ ಸಂಘಟನೆಗಳು ರಚನೆಗೊಂಡು ದೌರ್ಜನ್ಯ, ಕೊಲೆ, ಅತ್ಯಾಚಾರ ಮುಂತಾದವುಗಳ ವಿರುದ್ಧ ಹೋರಾಟ ನಡೆಸುವುದಲ್ಲದೆ, ಸಮಾಜಿಕ ಘಾತುಕಗಳಾದ ಸಾರಾಯಿ ಮಾರಾಟ ವಿರುದ್ಧ, ಮಹಿಳಾ ಆಸ್ತಿಪಾಸ್ತಿ ಅನ್ಯಾಯದ ವಿರುದ್ಧ, ಶಿಕ್ಷಣ ಸೌಲಭ್ಯ ವಂಚಿತಗಳ ವಿರುದ್ಧ ಹೆಚ್ಚು ಹೋರಾಟಗಳು ನಡೆಸುತ್ತಿವೆ ಎಂಬುದು ಪತ್ರಿಕಾ ವರದಿಗಳಿಂದಲೇ ವ್ಯಕ್ತವಾಗುತ್ತದೆ.[೮೧]

* * *

ಈ ರೀತಿಯಾಗಿ ಕೋಲಾರ ಪ್ರದೇಶದ ಮಹಿಳಾ ಚರಿತ್ರೆ ಹೆಚ್ಚು ಶೋಷಣಾತ್ಮಕವಾಗಿ, ಸಂಘರ್ಷಾತ್ಮಕವಾಗಿ ಕಂಡುಬರುತ್ತವೆ. ಅಲ್ಲದೆ ಹೆಚ್ಚು ಅನಕ್ಷರಸ್ಥೆ ಹೊಂದಿದ ಮಹಿಳೆಯರು ಇನ್ನೂ ನಾಗರಿಕತೆಯನ್ನು ಹೊಂದಿ, ಮತ್ತಷ್ಟು ಉದ್ಯೋಗಸ್ಥರಾಗಿ ಸ್ವಾವಲಂಬನೆ ಸಾಧಿಸಲು ಹೆಚ್ಚುಕಾಲ ಬೇಕಾಗಿದೆ. ಅಲ್ಲದೆ ಚರಿತ್ರೆ ರಚನೆಯಲ್ಲಿ ಈ ಕುರಿತು ಯಾರು ಹೆಚ್ಚಿನ ಶ್ರಮವಹಿಸಿಲ್ಲ. ಇದರಿದ ಕೋಲಾರ ಪ್ರದೇಶದ ಮಹಿಳಾ ಚರಿತ್ರೆ ಇನ್ನೂ ಅಜ್ಞಾನಮೂಡುವಿನಲ್ಲಿಯೇ ಇದೆ. ಆದರೂ, ದೇವರಾಜಯ್ಯನವರು 'ಸಿರಿನಂದಿ' ಎಸ್. ಜಗನ್ನಾಥ ಪ್ರಕಾಶನ್‌ರವರ 'ಕೋಲಾರ ಸಿರಿ ಸಂಪುಟ' ಮುಂತಾದ ಕೃತಿಗಳಲ್ಲಿ ಮಹಿಳೆಯರು ಕ್ರೀಡಾಪಟು ಹಾಗೂ ಸಾಹಿತ್ಯ ಕ್ಷೇತ್ರದಲ್ಲಿ ಮುಂದುವರಿವುದರ ವಿಷಯಗಳನ್ನು ತಿಳಿಸಿರುವುದು, ನಿರ್ಲಕ್ಷಿಸುವಂತಿಲ್ಲದಾಗಿದೆ ಮತ್ತು ಇತ್ತೀಚಿನ ದಲಿತ ಸಾಹಿತಿಗಳು ಹಾಗೂ ವೃತ್ತ ಪತ್ರಿಕೆಗಳು ಮಹಿಳೆಯ ವಿಷಯವಾಗಿ ಹೆಚ್ಚು ವಿಷತೆಗಳನ್ನು ಒದಗಿಸುತ್ತಿವೆ. ಇದರಿಂದ ಮಹಿಳೆಯರು ಜಾಗೃತರಾಗಿ ಸಮಾಜದಲ್ಲಿ ತಮ್ಮ ಸ್ವಾತಂತ್ರ್ಯತೆ, ಸ್ವಾವಲಂಬನೆ ಪಡೆಯುವಂತಾಗಿದೆ ಹಾಗೂ ಸಮಾಜದ ಘಾತುಕ ಪದ್ಧತಿಗಳ ವಿರುದ್ಧ ಸಂಘಟನೆಗಳನ್ನು ಹೊಂದುವುದರ ಮೂಲಕ ಹೋರಾಟ ಮಾಡುವಂತಾಗಿದೆ.

೪.೩. ರೈತರ ಪ್ರಶ್ನೆಗಳು

ಕರ್ನಾಟಕ ಏಕೀಕರಣದ ನಂತರ ಚರಿತ್ರೆಯಲ್ಲಿ ಹೊಸ ಆಯಾಮಗಳು ಕಂಡು ಅವುಗಳಲ್ಲಿ ರೈತರು ಮತ್ತು ಕಾರ್ಮಿಕರ ಚರಿತ್ರೆ ಪ್ರಾಮುಖ್ಯತೆ ಪಡೆದು ವಿಶೇಷತೆಯನ್ನು ಹೊಂದಿದೆ. ಈ ಕುರಿತು ಕೋಲಾರ

ಪ್ರದೇಶದ ಚರಿತ್ರೆ ಲೇಖನ ಶಾಸ್ತ್ರಕ್ಕೆ ದೊರೆತ ಕೃತಿಗಳು ಲೇಖನಿಗಳು ಹಾಗೂ ಚರಿತ್ರೆ ದಾಖಲಾತಿಗಳ ಅವಲೋಕನದಿಂದ ಸೈದ್ಧಾಂತಿಕವಾಗಿ ವಿವರಿಸಲು ಕಿರುಪ್ರಯತ್ನವನ್ನು ಮಾಡಲಾಗಿದೆ ಮತ್ತು ಅಧ್ಯಯನ ಸರಾಗಗೊಳಿಸುವ ಸಲುವಾಗಿ ಪ್ರಥಮವಾಗಿ ರೈತರು ಚರಿತ್ರೆ ಮತ್ತು ದ್ವಿತೀಯವಾಗಿ ಕಾರ್ಮಿಕರ ಚರಿತ್ರೆ ಎಂಬುದಾಗಿ ವಿವರಿಸಲು ಯತ್ನಿಸಲಾಗಿದೆ.

I

ಕರ್ನಾಟಕ ಏಕೀಕರಣದ ನಂತರ ಚರಿತ್ರೆಯ ರಚನೆಯಲ್ಲಿ ರೈತರ ಸ್ಥಿತಿಗತಿಗಳು, ಹೋರಾಟಗಳು ಹಾಗೂ ಸುಧಾರಣೆಗಳ ಬಗ್ಗೆ ಚಿಂತಿಸಲು ಮತ್ತು ಬರೆಯಲು ಹಲವಾರು ಸಾಮಾಜಿಕ ಹಾಗೂ ಚರಿತ್ರೆಯ ವಿದ್ವಾಂಸರು ಶ್ರಮಿಸಿದರು. ಈ ಹಿನ್ನೆಲೆಯಲ್ಲಿ ಹಿ.ಚಿ. ಬೋರಲಿಂಗಯ್ಯ, ಎನ್. ಹುಚ್ಚಪ್ಪ ಮಾಸ್ತರರವರ ಕೃತಿಯಾದ ಕಾಗೋಡು ಚಳುವಳಿ, ಟಿ.ಪಿ.ವಿಜಯ್‌ರವರ ರೈತ ಚಳುವಳಿಗಳು, ಎಸ್. ಚಂದ್ರಶೇಖರ ಅವರ ರೈತ ವರ್ಗ ಮತ್ತು ರಾಷ್ಟ್ರೀಯ ಚಳುವಳಿ ಮುಂತಾದವು ಪ್ರಕಟನೆಗೊಂಡು ಚರಿತ್ರೆ ರಚನೆಯಲ್ಲಿ ಹೊಸ ಆಯಾಮವನ್ನುಂಟುಮಾಡಿದ್ದಾರೆ. ಅದರಂತೆ ಕೋಲಾರ ಪ್ರದೇಶದ ರೈತರ ಚರಿತ್ರೆಯನ್ನು ವಿವರಿಸಲು ಹೆಚ್ಚಿನ ಅಧ್ಯಯನಗಳು ನಡೆದಿಲ್ಲವಾದರು ಕೆಲವೇ ಸರ್ಕಾರಿ ದಾಖಲೆಗಳು, ವೃತ್ತ ಪತ್ರಿಕೆಗಳು ಸಾಹಿತ್ಯ ಸಮ್ಮೇಳನ ಕೃತಿಗಳು ಹಾಗೂ ಸ್ಮರಣ ಸಂಚಿಕೆಗಳ ಅವಲೋಕನದಿಂದ ಈ ಕೆಳಕಂಡಂತೆ ವಿವರಿಸಲು ಕಿರುಪ್ರಯತ್ನವನ್ನು ಮಾಡಲಾಗಿದೆ.

ಹೆಚ್ಚು ರೈತರನ್ನು ಹೊಂದಿರುವ ಕೋಲಾರ ಪ್ರದೇಶದಲ್ಲಿ ಸದಾ ಹರಿಯುವ ನದಿನಾಲೆಗಳು ಇಲ್ಲದಿದ್ದರೂ ಮಳೆಯಿಂದಲೆ ರೈತರು ಭತ್ತ, ರಾಗಿ, ಜೋಳ ಮುಂತಾದ ಬೆಳೆಗಳನ್ನು ಬೆಳೆಯುತ್ತಾರೆ. ವಾಣಿಜ್ಯ ಬೆಳೆಗಳಾದ ರೇಷ್ಮೆ, ಹೈನುಗಾರಿಕೆ ಹಾಗೂ ಪಾಳುಪಾಲೆಯಲ್ಲಿ ಹಾಲು ಉತ್ಪಾದನೆ ಮುಂತಾವುಗಳಿಂದ ರಾಜ್ಯಮಟ್ಟದಲ್ಲಿ ಹೆಸರು ಗಳಿಸಿದ್ದಾರೆ. ೧೯೫೧ರ ವೇಳೆಗೆ ಬೇಸಾಯದಲ್ಲಿ ೬೯೨೩.೨೮ ೬೧.೩೧೭ ರಷ್ಟು ಜನರಿದ್ದು, ೩೮೯೦ ೩.೪೧ ರಷ್ಟು ಗೇಣಿದಾರರು, ೫೬೮೩೫ ೫೦ ರಷ್ಟು ಕೃಷಿ ಕೂಲಿಗಾರರು ಇದ್ದರು ಮತ್ತು ೨೯೫೪೫ ೩೦ರಷ್ಟು ಭೂಮಾಲಿಕರಿದ್ದರು.[೬೨] ೨೦೦೧ರ ವೇಳೆಗೆ ಕೃಷಿಯಲ್ಲಿ ೪೫೬೧೪ ಜನರು ಸಾಗುವಳಿದಾರರಾಗಿದ್ದು ೩೩೫೬೫೩ರಷ್ಟು ಕೃಷಿ ಕಾರ್ಮಿಕರು ಇದ್ದರು ಎಂದು ಜಿಲ್ಲಾ ಅಂಕಿಅಂಶಗಳ ನೋಟದಿಂದ ವ್ಯಕ್ತವಾಗುತ್ತದೆ.[೬೩] ವಸಾಹತುಕಾಲದಿಂದಲೂ ಇನಾಂತಿದಾರರು, ಸುಮಾರು ೬೬೦ ಜೋಡಿ, ಖಾಯಂ ಗುತ್ತಾ ಪದ್ಧತಿಗಳು, ರೈತವಾರಿ ಪದ್ಧತಿಗಳು, ರೂಢಿಗತವಾಗಿದ್ದವು ಎಂದು ಆರ್. ವೆಂಕಟರಾಮಯ್ಯ, ಕೆ. ಅಭಿಶಂಕರ, ಬಾಲಸುಬ್ರಮಣ್ಯಂ ಮುಂತಾದವರು ಹೇಳಿದ್ದಾರೆ.[೬೪] ಬಹುತೇಕವಾಗಿ ಸಣ್ಣ ರೈತರು, ಭೂಹೀನ ಕೃಷಿಕರು, ಕೂಲಿಗಳು ಜಿಲ್ಲೆಯಲ್ಲಿ ಇದ್ದು, ಇವರ ಹಿತಾಸಕ್ತಿಯನ್ನು ಕಾಯುವ ಯಾವುದೇ ಕಾನೂನು ಇರಲಿಲ್ಲ. ಕಾರ್ಮಿಕರಾಗಿ ಉತ್ಪಾದಕರಾಗಿ, ಮಾರಾಟಗಾರರಾಗಿ ಹಾಗೂ ಗ್ರಾಹಕರಾಗಿ ರೈತರು ಉತ್ತಮ ಸ್ಥಿತಿಯಲ್ಲಿ ಇರಲಿಲ್ಲ. ಬಹಳಷ್ಟು ರೈತರು ಹೊಲಗದ್ದೆಗಳಲ್ಲಿ ದುಡಿಯುವ ದೈಹಿಕ ಶ್ರಮ ಜೀವಿಗಳಾಗಿದ್ದರು. ಹೆಚ್ಚಾಗಿ ಜೀತಗಾರಿಕೆಯು ಇದ್ದಿತು. ಶ್ರೀಮಂತರು, ಭೂಮಾಲಿಕರು, ಶಾನುಭೋಗರು

ಹಾಗೂ ಆಡಳಿತ ವರ್ಗದವರು ಮಾತ್ರ ಪ್ರಬಲರಾಗಿದ್ದರು. ಬಡ ಕೂಲಿಕಾರ್ಮಿಕರು, ಸಣ್ಣ ರೈತರು ಸ್ಥಿತಿ ಉತ್ತಮವಾಗಿರಲಿಲ್ಲ.

II

ಇಂತಹ ಸ್ಥಿತಿಯಲ್ಲಿ ಕಮ್ಯುನಿಸ್ಟರು ಹಾಗೂ ದಲಿತ ಸಂಘಟನೆಗಳ ಬೆಳವಣಿಗೆಯಿಂದ ಈ ಒಂದು ಚರಿತ್ರೆ ಲೇಖನವು ವಿಸ್ತಾರವಾಯಿತು ಎಂಬುದು ಆರ್. ವೆಂಕಟರಾಮಯ್ಯರವರ ಲೇಖನ ಮತ್ತು ಹೆಚ್.ವಿ. ಸೋಮಶೇಖರರವರ ಕೃತಿಯಿಂದ ವ್ಯಕ್ತವಾಗುತ್ತದೆ. ಆಂಧ್ರಪ್ರದೇಶದ ತೆಲಂಗಾಣ ರೈತರು ಹೋರಾಟದ ಪ್ರಭಾವದಿಂದ ೧೯೫೩ ಕೋಲಾರ ಪ್ರದೇಶದಲ್ಲಿ ರೈತರ ಸಂಘಟನೆ ಪ್ರಾರಂಭವಾಯಿತು. ಇದರ ಪ್ರಾಥಮಿಕ ಸಮ್ಮೇಳನ ಚಿಂತಾಮಣಿ ತಾಲೂಕ್‌ನಲ್ಲಿ ನಡೆದು ಕಮ್ಯುನಿಸ್ಟ್ ನಾಯಕರಾದ ರಾಮ್‌ರಾವ್ ಟಿ.ಕೆ. ಗಂಗಿರೆಡ್ಡಿ ಅಪ್ಪಾ ಸ್ವಾಮಿ, ಕೆ.ಜಿ.ಎಫ್. ಕಾರ್ಮಿಕ ಮುಖಂಡರಾದ ವಾಸನ, ಸದರಿದಾಸ ಮುಂತಾದವರು ಸರಿಕೊಂಡರು. ಇವರು ಇನಾಮ್ದಾರಿ ಪದ್ಧತಿಯನ್ನು ರದ್ದುಗೊಳಿಸಬೇಕೆಂದು ಮೈಸೂರು ರಾಜ್ಯದ ಮೇಲೆ ಒತ್ತಾಯಿಸಿದಲ್ಲದೆ, ಕ್ಷಾಮದಿಂದ ಪರಿಹಾರಕ್ಕಾಗಿ ಜಿಲ್ಲಾದ್ಯಂತ [illegible]ಜಿಕೇಂದ್ರಗಳು ತರೆದರು. ನಂತರ ಸಂಯುಕ್ತ ರಂಗ ಯುನೈಟ್ರಟ್ ಫ್ರಿಂಟ್ ಪ್ರಾರಂಭಗೊಂಡು ಅಧಿಕಾರ ರೂಢಿಯಲ್ಲಿದ್ದ ಕಾಂಗ್ರೆಸ್ ಪಕ್ಷಕ್ಕೆ ಸವಾಲೆಸಗಿತು ಎಂದು ಆರ್. ವೆಂಕಟರಾಮಯ್ಯ, ಹೆಚ್.ವಿ. ಸೋಮಶೇಖರರವರು ಹೇಳಿದ್ದಾರೆ.[೬೫]

೧೯೫೭ರಲ್ಲಿ ಬಾಗೇಪಲ್ಲಿ ತಾಲ್ಲೂಕಿನಲ್ಲಿ ರೈತ ಸಂಘಟನೆ ಶಾಖೆ ಪ್ರಾರಂಭವಾಗಿ ಇಡೀ ಜಿಲ್ಲೆಯಲ್ಲಿ ರೈತರನ್ನು ಬಲವಾಗಿ ಜಾಗೃತಗೊಳಿಸಿದರು. ರಾಮದಾಸರವರು ರೈತ ಸಂಘಟನ ಕಾರ್ಯಗಳ ಕುರಿತಾಗಿ 'ಛಡಿ' ಎಂಬ ವೃತ್ತ ಪತ್ರಿಕೆ ಹೊರತಂದರು. ೧೯೬೬-೬೭ರಲ್ಲಿ ಭೀಕರವಾದ ಕ್ಷಾಮ ಉಂಟಾಗಿದಲ್ಲದೆ ಕಂದಾಯ ದರ ಹೆಚ್ಚಾಗಿತ್ತು. ಇದರಿಂದ ಕಮ್ಯುನಿಸ್ಟ್ ಪಕ್ಷದ ಹೋರಾಟಗಾರರಿಂದ ಮುಳ್ಳೂರು ಪಾಪಣ್ಣ ಎಸ್. ಲಕ್ಷ್ಮಯ್ಯ ಮುಂತಾದವರು ಸುಮಾರು ೬೦ ದಿನ ಕಾಲುನಡಿಗೆಯಲ್ಲಿ ಊರೂರು ಸುತ್ತಿ ಹೋರಾಟ ಮಾಡುವುದರ ಮೂಲಕ ಕಂದಾಯ ವಸೂಲಾತಿಯನ್ನು ಸಂಪೂರ್ಣವಾಗಿ ರದ್ದುಗೊಳಿಸುವಲ್ಲಿ ಯಶಸ್ಸು ಕಂಡರು.[೬೬] ಜಿಲ್ಲೆಯದಾದ್ಯಂತ ವಿಶಾಲವಾದ ಬಂಜರು ಭೂಮಿ ಗೋಮಾಳ, ಅರಣ್ಯ ಪ್ರದೇಶ ಗ್ರಾಮೀಣ ಅರಣ್ಯಗಳು ಇದ್ದರು. ಉಳುವವನಿಗೆ ಮಾತ್ರ ಭೂಮಿ ಇರಲಿಲ್ಲ. ಇದರಿಂದ ೧೯೭೨ರಲ್ಲಿ ರೈತ ಸಂಘಟನಾಕಾರರು ಬೃಹತ್ ಹೋರಾಟ ನಡೆಸಿದರು. ಇದರಲ್ಲಿ ಹಲವಾರು ಹೋರಾಟಗಾರರು ಜೈಲುಶಿಕ್ಷೆ ಅನುಭವಿಸಿದರು. ಆದರೂ ಅವರ ಎಡಬಿಡದ ಹೋರಾಟದಿಂದ ಸರ್ಕಾರ ನೂರಾರು ರೈತರಿಗೆ ಭೂಮಿಯನ್ನು ಜಿಲ್ಲಾದ್ಯಂತ ಸಕ್ರಿಯಗೊಳಿಸುವಂತಹ ಕಾನೂನು ಜಾರಿಗೆ ತಂದಿತು. ಇದೇ ರೀತಿ ೧೯೭೨-೭೩ರಲ್ಲಿ ಬೆಳ್ಳಂಬರಿಯಲ್ಲಿ ರೈತರು ಜೋಡಿದಾರರ ವಿರುದ್ಧ ಹೋರಾಟ ನಡೆಸಿದರು. ಶಿಡ್ಲಘಟ್ಟ, ಚಿಕ್ಕಬಳ್ಳಾಪುರ ಮುಂತಾದ ಕಡೇ ಇದೇ ರೀತಿ ಹೋರಾಟಗಳು ನಡೆದು ಗೋಲಿಬಾರ್ ಪ್ರಕರಣಗಳು ಕೊಂಡುಬಂದವು. ಆದರೆ ೧೯೮೦ರಿಂದ ೧೯೯೦ರವರೆಗೆ ಅಷ್ಟಾಗಿ ಹೋರಾಟಗಳಲ್ಲದೆ ನಂತರ ರೈತರ ಹೋರಾಟದ ಪ್ರಕ್ರಿಯೆಯ ಬರಲಾಯಿತು. ಅಂದರೆ ಸರಿಯಾದ ಧೋರಣೆ, ವಿದ್ಯುತ್ ಪೂರೈಕೆಗಾಗಿ, ಹೋರಾಟ ನಡೆಸುವಂತಾಯಿತು

ಎಂದು ಹೆಚ್.ವಿ. ಸೋಮಶೇಖರವರು ಹೇಳಿದ್ದಾರೆ. ೧೯೬೨ ಮತ್ತು ೧೯೬೪ರಲ್ಲಿ ರೇಷ್ಮೆ ಸಂಘಟನೆಗಾರರು ಚೀನದಿಂದ ಬರುತ್ತಿದ್ದ ರೇಷ್ಮೆಯ ಆಮದಿನ ವಿರುದ್ಧ ಹೋರಾಟ ಮಾಡಿದರೆ, ಹಾಲು ಉತ್ಪಾದನಾ ಸಂಘಟನಾಕಾರರು, ಹಾಲಿನ ಬೆಲೆ ಏರಿಕೆ ಹಾಗೂ ಹಾಲು ಶೇಖರಣಾ ರಜೆಯ ವಿರುದ್ಧ ತೀವ್ರವಾಗಿ ಜಿಲ್ಲಾ ಕಛೇರಿಗಳ ಮುಂದೆ ಧರಣಿ ನಡೆಸಿದರು.[೬೮] ಸುಮಾರು ೮೦೦ ಹಾಲು ಸೊಸೈಟಿಗಾರರು ನಡೆಸಿದ ಹೋರಾಟಕ್ಕೆ ಪ್ರತಿಫಲವಾಗಿ ಹಾಲಿನ ಬೆಲೆ ದೊರೆಯುತ್ತಾದರೂ ಇದರಲ್ಲಿ ಪಾಲುಗೊಂಡ ಚಂದ್ರಪ್ಪ, ಮಾಡಿದೇರಯ್ಯನವರು ಪೊಲೀಸ್ ಗುಂಡಿನ ದಾಳಿಯಿಂದ ಸಂಪೂರ್ಣ ಅಂಗವಿಕಲಾದರು ಎಂದು ಆರ್. ವೆಂಕಟರಾಮಯ್ಯನವರು ಹೇಳುತ್ತಾರೆ. ಅದು ಇತ್ತೀಚೆಗೆ ರೈತರ ಪರವಾಗಿ ದಲಿತ ಸಂಘಟನೆಗಳು ಸೇರಿ ಹೋರಾಟಗಳನ್ನು ನಡೆಸುವುದು ಹೆಚ್ಚಾಗಿದೆ ಎಂದು ಸಿ.ಎಂ. ಮುನಿಯಪ್ಪನವರ ಸಂಪಾದನೆಯ ಸಂಚಿಕೆ, ವಿಶೇಷಾಂಕ ಪತ್ರಿಕೆಗಳಿಂದ ವ್ಯಕ್ತವಾಗುತ್ತದೆ.[೬೯]

ಬರಪೀಡಿತ ಪ್ರದೇಶವಾದ ಜಿಲ್ಲೆಯಲ್ಲಿ ಸದಾ ಹರಿಯುವ ನದಿನಾಲೆಗಳಿಲ್ಲದೆ ಮಳೆಯನ್ನೇ ಅವಲಂಬಿಸಬೇಕಾಗಿದೆ. ಆದರೆ ಮಳೆ ಜೂಜಾಟದಂತೆ ಇದೆ, ವಿದ್ಯುತ್ ಸಮಸ್ಯೆ, ಉತ್ತಮ ಬೀಜ ಬಿತ್ತನೆಗಳು ಇಲ್ಲದೆ, ಇತ್ತಮ ಉತ್ಪಾದನ ತಂತ್ರಜ್ಞಾನದ ಕೊರತೆಗಳಿಂದ ರೈತರು ಸದಾ ಒದ್ದಾಡುವಂತಾಗಿದೆ. ಅನಿವಾರ್ಯವಾಗಿ ಹೋರಾಟಗಳು ನಡೆಸಿ ಸರ್ಕಾರ ಸಂಸ್ಥೆಗಳ ಮೂಲಕ ಪರಿಹಾರಕ್ಕೆ ಮತ್ತು ಸಾಲಕ್ಕಾಗಿ ಒತ್ತಾಯಿಸುವಂತಾಗಿದೆ ಎಂದು ವೃತ್ತ ಪತ್ರಿಕೆಗಳಿಂದಲೇ ವ್ಯಕ್ತವಾಗುತ್ತದೆ.[೭೦]

III

ಈ ನಡುವೆ ಸೈದ್ಧಾಂತಿಕವಾಗಿ ರೈತರ ಅಭಿವೃದ್ಧಿ ಮತ್ತು ಸರ್ಕಾರ ಆಡಳಿತ ಸಂಸ್ಥೆಗಳಿಂದ ರೈತ ಸುಧಾರಣೆಗಳನ್ನು ಗಮನಿಸಿದಾಗ ಕರ್ನಾಟಕ ಏಕೀಕರಣದ ನಂತರ ಪಂಚವಾರ್ಷಿಕ ಯೋಜನೆಗಳು ಅಲ್ಲಲ್ಲಿ ಜಾರಿಯಾಗಿರುವುದು ಕಂಡುಬಂದಿತು. ೧೯೮೧ರಲ್ಲಿ ರೈತರ ಅಭಿವೃದ್ಧಿ ಸಂಘ ಹಾಗೂ ಕೃಷಿ ಇಲಾಖೆಗಳು ಜಿಲ್ಲೆಯಲ್ಲಿ ಪ್ರಾರಂಭಗೊಂಡು ನೀರಾವರಿ, ರೈತಸಾಲ ಸೌಲಭ್ಯಗಳು ಒದಗಿಸುವುದರ ಮೂಲಕ ರೈತರಿಗೆ ತಂತ್ರಾಂಶ ತರಬೇತಿ, ಉತ್ತಮ ಬೀಜ, ಗೊಬ್ಬರ ಒದಗಿಸಲು ಪ್ರಾರಂಭಿಸಿತು.[೭೧] ಅಲ್ಲದೆ ಕೃಷಿ ಇಲಾಖೆ ವತಿಯಿಂದ ರೈತರನ್ನು ಸಂಪರ್ಕಿಸಿ ನೈಜ ಮೂಲಕ ತಿಳುವಳಿಕೆ ಒದಗಿಸುತ್ತಿದೆ.[೭೨] ಅಲ್ಲದೆ ಸಮಾಜಕಲ್ಯಾಣ ಇಲಾಖೆ, ಪಂಚಾಯ್ತಿ ಇಲಾಖೆಗಳಿಂದ ಸಾಲಸೌಲಭ್ಯಗಳು ಒದಗಿಸುತ್ತವೆ. ಸರ್ಕಾರ ವತಿಯಂದ ರೈತರಿಗಾಗಿ ಕೃಷಿ ಮಾರುಕಟ್ಟೆ ಅಭಿವೃದ್ಧಿ ಸಾರಿಗೆ ಸೌಲಭ್ಯಗಳು ಒದಗಿಸುತ್ತಾ ಬಂದಿದೆ ಎಂದು ಆರ್. ಚೌಡರೆಡ್ಡಿ ಅವರ ಲೇಖನದಿಂದ ತಿಳಿದುಬರುತ್ತದೆ.[೭೩] ಭೂಸುಧಾರಣೆಗಳುಂಟಾಗಿವೆ ಎಂದು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ.

ಇಷ್ಟಾದರೂ ಇವೆಲ್ಲ ಶ್ರೀಮಂತರ ರೈತರು ಹೆಚ್ಚು ಅನುಕೂಲಗಳು ಪಡೆಯುತ್ತಿದ್ದರೆ ಬಡರೈತರ ಬಡವರಾಗಿಯೇ ಉಳಿದಿದ್ದಾರೆ. ಸರ್ಕಾರದ ವತಿಯಿಂದ ಬರುವ ಸೌಲಭ್ಯಗಳು ಪಡೆಯಲು ನಿಸ್ಸೀಮರಾಗಿದ್ದಾರೆ.

ಅವರ ಅಸಮರ್ಥ್ಯತೆಯಿಂದ, ಹೀನ ತಿಳುವಳಿಕೆಯಿಂದ ಹಾಗೂ ಆಡಳಿತ ಸಂಘಗಳ ತಾರತಮ್ಯ ನೀತಿಯಿಂದ ಅವರ ಅಭಿವೃದ್ಧಿಯಲ್ಲಿ ಅಂತರ ಕಂಡುತ್ತಾ ಬಂದಿದೆ. ಅಲ್ಲದೆ ಜಾಗತೀಕರಣ, ಮೇಲ್ವರ್ಗಗಳ ದಮನ ನೀತಿಗಳಿಂದ ರೈತರು ತೀವ್ರತರವಾದ ಸಮಸ್ಯೆಗಳು ಎದುರಿಸುತ್ತಲೇ ಇದ್ದಾರೆ ಎಂಬುದು ರಮಜಾನ್ ದರ್ಗಾರವರ ಲೇಖನದಿಂದ ತಿಳಿದುಬರುತ್ತದೆ.[೬]

* * *

ಕೋಲಾರದ ರೈತರ ಚರಿತ್ರೆಯ ಕುರಿತಾಗಿ ಚರಿತ್ರೆ ಬರವಣಿಗೆಗಳಲ್ಲಿ ವಿವರಗಳು ಕಡಿಮೆ. ಆದರೂ ಹೆಚ್.ವಿ. ಸೋಮಶೇಖರ ಅವರ 'ಕೋಲಾರ ಜಿಲ್ಲೆಯಲ್ಲಿ ಕಮ್ಯುನಿಸ್ಟರು', ಕೆ. ಪ್ರಹ್ಲಾದರಾವ್ ಅವರ '೫೦ರ ಸ್ವಾತಂತ್ರ್ಯ' ಮುಂತಾದವುಗಳಲ್ಲಿ ರೈತರ ಕೆಲವು ಹೋರಾಟಗಳು ಹಾಗೂ ಸಂಘಟನೆಗಳ ಬಗ್ಗೆ ವಿವರಗಳು ತಿಳಿಯುತ್ತವೆ.

೪.೪. ಕಾರ್ಮಿಕರ ಪ್ರಶ್ನೆಗಳು

ರೈತರ ಚರಿತ್ರೆಯಂತೆ ಕರ್ನಾಟಕ ಏಕೀಕರಣದ ನಂತರ ಚರಿತ್ರೆ ಲೇಖನಶಾಸ್ತ್ರದಲ್ಲಿ ಪ್ರಾಮುಖ್ಯತೆಗೊಂಡು ವಿಸ್ತಾರಗೊಂಡಿದೆ. ಪಂಚವಾರ್ಷಿಕ ಯೋಜನೆಗಳ ಮೂಲಕ ಕೈಗಾರಿಕಾ ಅಭಿವೃದ್ಧಿಯ ಹಿನ್ನೆಲೆಯಲ್ಲಿ ಬೃಹತ್ ಉದ್ಯಮಗಳ ಜತೆಗೆ ಹಲವಾರು ಗುಡಿಕೈಗಾರಿಕೆಗಳು ಬೆಳವಣಿಗೆಗೊಂಡರು. ಅವುಗಳಲ್ಲಿ ದುಡಿಯುವ ವೈದ್ಯ ಕಾರ್ಮಿಕರ ಹಾಗೂ ಕೃಷಿಕಾರ್ಮಿಕರು, ಕೂಲಿ ಕಾರ್ಮಿಕರ ಸ್ಥಿತಿಗತಿಗಳು ಹೆಚ್ಚಾಗಿ ಸಮಾಜಶಾಸ್ತ್ರಜ್ಞರು ಅರ್ಥಶಾಸ್ತ್ರಜ್ಞರು ಹಾಗೂ ಚರಿತ್ರೆಕಾರರ ಈ ಕುರಿತು ಚಿಂತಿಸಿ ಬರೆಯಲಾರಂಭಿಸಿದರು. ಅಲ್ಲದೆ ಕಮ್ಯುನಿಸ್ಟ್ ಸಂಘಟನೆಗಳು, ಕಾರ್ಮಿಕ ಸಂಘಟನೆಗಳು ಬೆಳವಣಿಗೆಯ ಹಿನ್ನೆಲೆಯಲ್ಲಿ ಚರಿತ್ರೆ ಲೇಖನಸಾಸ್ತ್ರ ವಿಸ್ತಾರವಾಯಿತು. ಈ ಹಿನ್ನಲೆಯಲ್ಲಿ ಕೋಲಾರ ಪ್ರದೇಶದ ಕಾರ್ಮಿಕರ ಚರಿತ್ರೆಯನ್ನು ವಿವರಿಸುವಾಗ ಅಧ್ಯಯನ ನಡೆದಿರುವುದು ಅಲ್ಪವಾಗಿ ಕಂಡುಬರುತ್ತದೆ. ಆದರೂ ೧೯೮೧ರ ಕೆ.ಜಿ.ಎಫ್.ನ ಜನಗಣತಿ ದಾಖಲಾತಿ ಕೃತಿ. '೧೯೯೧ ಹಾಗೂ ೨೦೦೧ರ ಜಿಲ್ಲಾ ಅಂಕಿಅಂಶಗಳ ನೋಟ' ಎಂಬ ದಾಖಲಾತಿ ಕೃತಿ. 'ಕೋಲಾರ ಜಿಲ್ಲೆಯಲ್ಲಿ ಕಮ್ಯುನಿಸ್ಟರು', "The Impact of Globalisations on the Mining Community of Kolar Gold field. labour In India; Socia-Economic condition of worker in KGF, Ignoras Recording Classers or Revieval of KGF Report" ಮುಂತಾದವು ಪ್ರಮುಖವಾಗಿವೆ. ಇವುಗಳಿಂದ ಪ್ರಸ್ತುತ ಅಧ್ಯಯನದಲ್ಲಿ ಕಾರ್ಮಿಕರ ಪರಿಸ್ಥಿತಿಗಳು ಹಾಗೂ ಹೋರಾಟಗಳ ಕುರಿತು ಕಿರುಪ್ರಯತ್ನದಲ್ಲಿ ಈ ಕೆಳಕಂಡಂತೆ ವಿವರಿಸಲು ಯತ್ನಿಸಲಾಗಿದೆ.

I

ಕೋಲಾರ ಪ್ರದೇಶದಲ್ಲಿ ಕೋಲಾರದ ಚಿನ್ನ ಮತ್ತು ಗಣಿ ಕೆಲವು ಯಂತ್ರೋಪಕರಣಗಳ ಕೈಗಾರಿಕೆಗಳು ಬಿಟ್ಟರೆ ಹೆಚ್ಚಿಗೆ ಬೃಹತ್ ಕೈಗಾರಿಕೆಗಳು ಇಲ್ಲ. ಆದರೂ ೧೯೫೬ರ ನಂತರ ಪಂಚವಾರ್ಷಿಕ ಯೋಜನೆಗಳು

ಹಾಗೂ ಜನರ ವೈಯಕ್ತಿಕ ಬಂಡವಾಳದಿಂದ ಹಲವಾರು ಗುಡಿಕೈಗಾರಿಕೆಗಳು ಕೋಲಾರ, ಕೆ.ಜಿ.ಎಫ್. ಚಿಕ್ಕಬಳ್ಳಾಪುರ, ಗೌರಿಬಿದನೂರು, ಶಿಡ್ಲಘಟ್ಟ, ಚಿಂತಾಮಣಿ ಮುಂತಾದ ಕಡೆ ಹೆಚ್ಚಾಗಿ ಬೆಳೆದುಕೊಂಡಿದ್ದವು.[೭೫] ಈ ಕೈಗಾರಿಕೆಗಳಲ್ಲಿ ಕೆಲಸ ಮಾಡುವ ಕಾರ್ಮಿಕದಲ್ಲಿದೆ ಇನ್ನು ಬೇರೆ ಬೇರೆ ಬಿಡಿ ಭಾಗಗಳಲ್ಲಿ ಮಾಡುವ ಕಾರ್ಮಿಕರು ಕೂಲಿಕಾರ್ಮಿಕರು ಜಿಲ್ಲಾದ್ಯಂತ ಹೆಚ್ಚಾಗಿದ್ದಾರೆ ಎಂದು ಜನಗಣತಿ ಕೃತಿಗಳಿಂದ ಮತ್ತು 'ಕೋಲಾರ ಜಿಲ್ಲಾ ಕಮ್ಯುನಿಸ್ಟರು' ಎಂಬ ಕೃತಿಗಳಿಂದ ವ್ಯಕ್ತವಾಗುತ್ತದೆ.

೧೯೭೧ರಲ್ಲಿ ಕೋಲಾರ ಜಿಲ್ಲಾದ್ಯಂತ ಶೇಕಡಾ ೬೪ರಷ್ಟು ಕಾರ್ಮಿಕರು ಇದ್ದು, ಸಣ್ಣ ಮತ್ತು ಬೃಹತ್ ಕೈಗಾರಿಕೆಗಳಲ್ಲಿ ದುಡಿಯುತ್ತಿದ್ದರು.[೭೬] ನಂತರ ಕಾರ್ಮಿಕರ ಜನಗಣತಿ ಅಸ್ಪೃಶ್ಯತೆಯಾಗಿ ಕಂಡುಬರುತ್ತದೆ. ಕೆ.ಜಿ.ಫ್.ನಲ್ಲಿ ೧೯೬೦ರಲ್ಲಿ ೧೯೩೦೦ ಕಾರ್ಮಿಕರಿದ್ದು, ೧೯೮೦ರಲ್ಲಿ ಆರಂಭದ ಹೊತ್ತಿಗೆ ೧೩೧೬೬ಕ್ಕೆ ಇಳಿದರು. ಇದಕ್ಕೆ ಅಲ್ಲಿನ ಸ್ಥಿತಿಗತಿಗಳೇ ಕಾರಣವಾಗಿವೆ ಎಂದು ಹೆಚ್. ಚಂದ್ರಶೇಖರರವರು ಹೇಳಿದ್ದಾರೆ.[೭೭] ೧೯೮೧ರಲ್ಲಿ ಕೋಲಾರದ ಚಿನ್ನದಗಣಿ ಉದ್ಯಮಗಾರರಲ್ಲಿ ೨೮೭೧೬ ಜನರು ಇತರೆ ಕೈಗಾರಿಕೆಗಳು ೫೨೭ ಕಾರ್ಮಿಕರಿದ್ದರು ಎಂದು ರಾಘವೇಂದ್ರರವರು ಹೇಳಿದ್ದಾರೆ.[೭೮] ನಂತರ ೧೯೯೧ರಲ್ಲಿ ನಡೆದ ಜನಗಣತಿ ಪ್ರಕಾರ ೯೬೨೫೮೭ ಕಾರ್ಮಿಕರು ಇದ್ದು ಜಿಲ್ಲಾದ್ಯಂತ ವಿವಿಧ ಕೈಗಾರಿಕಾ ಉದ್ಯಮದಲ್ಲಿ ದುಡಿಯುತ್ತಿದ್ದರು ಎಂದು ತಿಳಿದುಬರುತ್ತದೆ.[೭೯] ಈ ಪ್ರಮಾಣ ೨೦೦೧ರ ಹೊತಿಗೆ ೩೩೫೫೫೩ ಏರಿ ೪೯೦೫೬ ಗೃಹ ಕೈಗಾರಿಕೆಗಳಲ್ಲಿ ಮತ್ತು ಬೃಹತ್ ಕೈಗಾರಿಕೆಗಳಲ್ಲಿ ಹಂಚಿಕೊಂಡಿದ್ದರು ಎಂದು ಶ್ರೀ ಸಿಂಗ್ರಯ್ಯನವರು ಹೇಳುತ್ತಾರೆ.[೮೦] ಇವರಲ್ಲದೆ ಹಳ್ಳಿ ಪ್ರದೇಶಗಳಲ್ಲಿ ಕೂಲಿಕಾರ್ಮಿಕರು ಹೆಚ್ಚಾಗಿದ್ದರೆ, ನಗರ ಪ್ರದೇಶಗಳಲ್ಲಿ ಕೂಲಿಕಾರ್ಮಿಕರು ಹೆಚ್ಚಾಗಿದ್ದರು. ಇವರು ಮುನ್ಸಿಪಾಲಿಟಿಗಳಲ್ಲಿ, ಮಾರುಕಟ್ಟೆಗಳಲ್ಲಿ, ಗ್ಯಾರೆಜ್‌ಗಳಲ್ಲಿ ಹೆಚ್ಚಾಗಿದ್ದರು. ಇವರ ಪ್ರಮಾಣ ದಿನ ದಿನೆ ಹೆಚ್ಚಾಗುತ್ತಿದೆ ಎಂದು ಈ ಮೇಲಿನ ಅಂಕಿಅಂಶಗಳಿಂದಲೆ ವ್ಯಕ್ತವಾಗುತ್ತದೆ. ಏಕೀಕರಣ ಕಾಲದಲ್ಲಿ ಇವರ ಕೂಲಿ ಪ್ರಮಾಣ ಬಹಳಷ್ಟು ಕಡಿಮೆ ಇದ್ದು ಸರ್ಕಾರಿ ಕಾನೂನುಗಳಲ್ಲಿ 'ಕನಿಷ್ಠ ಕೂಲಿ ಪದ್ಧತಿ' ಜಾರಿಗೆ ಬಂದಾಗ ಸ್ವಲ್ಪ ಹೆಚ್ಚಾಯಿತು ಎಂದು ಗೆಜೆಟಿಯರ್ ಮತ್ತು ಎನ್.ಪಿ. ಸ್ವಾಮ್ಯರ 'ಕೆ.ಜಿ.ಎಫ್.ನ ಕಾರ್ಮಿಕರ ಸಂಘಟನ' ವಿವರ ಕೃತಿಯಿಂದ ವ್ಯಕ್ತವಾಗುತ್ತದೆ.[೮೧]

II

ಸ್ವಾತಂತ್ರ್ಯದ ನಂತರ ಕೇಂದ್ರಸರ್ಕಾರ ಹಾಗೂ ರಾಜ್ಯಸರ್ಕಾರಗಳು ಕೈಗೊಂಡ ಪಂಚವಾರ್ಷಿಕ ಯೋಜನೆಗಳ ಅಡಿಯಲ್ಲಿ ಅನೇಕ ಗುಡಿಕೈಗಾರಿಕೆಗಳು ಬೃಹತ್ ಕೈಗಾರಿಕೆಗಳೊಂದಿಗೆ ಬೆಳವಣಿಗೆಗೊಂಡವು. ಅಂತೆಯೇ ಕಾರ್ಮಿಕರ ಸಂಖ್ಯೆ ಹೆಚ್ಚಾಯಿತು. ಆದರೆ, ವಿವಿಧ ಕಾರಣಗಳಿಂದ ಕಾಲಕ್ರಮೇಣ ಕಾರ್ಮಿಕರ ಸಮಸ್ಯೆಗಳು ಹೆಚ್ಚಾದಂತೆ ಅವುಗಳ ನಿವಾರಣೆಗಾಗಿ, ಸಂಘಟನೆಗಳು ಬೆಳವಣಿಗೆಗೊಂಡು, ಹೋರಾಟಗಳು ಪ್ರಾರಂಭಿಸಿದವು. ಈ ಪ್ರಕ್ರಿಯೆ ವಸಾಹತುಶಾಹಿ ಆಡಳಿತ ಕಾಲದಲ್ಲಿಯೇ ಕೋಲಾರ ಪ್ರದೇಶದ ಚಿನ್ನದ ಗಣಿ ಉದ್ಯಮದ ಕಾರ್ಮಿಕರಲ್ಲಿ ಕಂಡುಬಂದರು. ಕೋಲಾರ ಜಿಲ್ಲಾದ್ಯಾಂತ ಅಂತಹ ಲಕ್ಷಣ ಕಂಡುಬಂದಿದ್ದು ಕರ್ನಾಟಕ ಏಕೀಕರಣದ ನಂತರವೇ ಅದು ಕಮ್ಯುನಿಸ್ಟರ ಪ್ರಭಾವದಿಂದಾಗಿದೆ ಎಂದು ಈ ಕೆಳಕಂಡ ಕೆಲವು ಕಾರ್ಮಿಕರ ಹೋರಾಟ ಘಟನೆಗಳಿಂದ ವ್ಯಕ್ತವಾಗುತ್ತದೆ.

